ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



2050ರ ವೇಳೆಗೆ ಶೇ 80ರಷ್ಟು ಸವಕಳಿ: ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ವಿಭಾಗದ ಎಚ್ಚರಿಕೆ

ಬರಡಾಗುತ್ತಿದೆ ರಾಜ್ಯದ ಭೂಮಿ



• ಎ.ಎಂ. ಸುರೇಶ

ಒಳನೋಟ

ಬೆಂಗಳೂರು: ರಾಜ್ಯದಲ್ಲಿ ಶೇಕಡ 36.29ರಷ್ಟು (69.6 ಲಕ್ಷ ಹೆಕ್ಟೇರ್) ಭೂಮಿಯಲ್ಲಿ ಮಣ್ಣಿನ ಫಲವತ್ತತೆ ನಾಶವಾಗಿದ್ದು ಬರಡು ಭೂಮಿಯ ಪ್ರಮಾಣ ದಿನೇ ದಿನೇ ಹೆಚ್ಚಾಗುತ್ತಿದೆ. ನೀರಾವರಿ ಪ್ರದೇಶದಲ್ಲಿ ಅಷ್ಟೇ ಅಲ್ಲದೆ ಜಲಾನಯನ ಪ್ರದೇಶದಲ್ಲೂ ಕಳೆದ ಒಂದು ದಶಕದಿಂದ ಮಣ್ಣಿನ ಫಲವತ್ತತೆ ನಿರಂತರವಾಗಿ ಕುಸಿಯುತ್ತಿದೆ. ಕೃಷಿ ಉತ್ಪಾದನೆಯ ದೃಷ್ಟಿಯಲ್ಲಿ ಇದು ಆತಂಕಕಾರಿ ಬೆಳವಣಿಗೆ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ.

ಈ ಪ್ರಕ್ರಿಯೆ ಕೇವಲ ರಾಜ್ಯಕ್ಕೆ ಸೀಮಿತವಾಗಿಲ್ಲ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ವಿಭಾಗ ನಡೆಸಿದ ಮಣ್ಣಿನ ಫಲವತ್ತತೆ ಕುರಿತ ಜಾಗತಿಕ ಸಮೀಕ್ಷಾ ವರದಿ ಪ್ರಕಾರ ಜಗತ್ತಿನ ಶೇ 33ರಷ್ಟು ಭೂಮಿ ಫಲವತ್ತತೆ ಕಳೆದುಕೊಂಡಿದೆ.

ಅತಿಯಾದ ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಬಳಕೆ, ಸಕಾಲದಲ್ಲಿ ಸಾವಯವ ಗೊಬ್ಬರ ನೀಡದೆ ಇರುವುದರಿಂದ ಅತಿ ಹೆಚ್ಚಿನ ಪ್ರಮಾಣದಲ್ಲಿ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತಿದೆ. ಅಲ್ಲದೆ ಭಾರಿ ಮಳೆ ಮತ್ತು ದಿಢೀರ್ ಪ್ರವಾಹದಿಂದಾಗಿ ಫಲವತ್ತಾದ ಮಣ್ಣು ಕೊಚ್ಚಿ ಹೋಗಿ ಭೂಮಿ ಸವಕಳಾಗುತ್ತಿರುವುದು ಇಸ್ರೊದ ಸ್ಪೇಸ್ ಅಪ್ಲಿಕೇಷನ್ ಸೆಂಟರ್ ನಡೆಸಿದ ಅಧ್ಯಯನದಿಂದ ಗೊತ್ತಾಗಿದೆ.

ಭೂಮಿಯ ಆರು ಇಂಚು ದಪ್ಪದ ಮೇಲ್ಮಣ್ಣು ಅತ್ಯಂತ ಫಲವತ್ತತೆ ಹೊಂದಿದ್ದು, ಬೆಳೆಗೆ ಬೇಕಾದ ಎಲ್ಲ ಪೋಷಕಾಂಶಗಳನ್ನು ಹೊಂದಿರುತ್ತದೆ. ಆದರೆ, ನಿರಂತರವಾಗಿ ನೀರು ನಿಲ್ಲಿಸುವುದು, ಯಾವಾಗಲೂ ಒಂದೇ ಬೆಳೆಯನ್ನೇ ಬೆಳೆಯುವುದು, ಸರಿಯಾದ ವಿಧಾನದಲ್ಲಿ ಉಳುಮೆ ಮಾಡದಿರುವುದು ಇತ್ಯಾದಿಗ ಳಿಂದಾಗಿ ಮಣ್ಣಿನ ಸವಕಳಿ ಉಂಟಾಗುತ್ತಿದೆ. ಈಗಾಗಲೇ ಭೂಮಿಯ ಮೂರನೇ ಒಂದರಷ್ಟು ಪ್ರದೇಶ ಸವಕಳಿಯಾಗಿದ್ದು, 2050ರ ವೇಳೆಗೆ ಈ ಪ್ರಮಾಣ ಶೇ 80ಕ್ಕೆ ತಲುಪಬಹುದು ಎಂಬ ಆಘಾತಕಾರಿ ಮಾಹಿತಿಯನ್ನು ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ವಿಭಾಗ ಬಹಿರಂಗಪಡಿಸಿದೆ.

6 ನೇ ಪುಟ ನೋಡಿ

'ರೈತರಿಗೆ ಸಮಸ್ಯೆಯ ಅರಿವಿಲ್ಲ'

ಕೃಷಿಯಲ್ಲಿ ಸಾರಜನಕ, ರಂಜಕ, ಪೊಟ್ಯಾಶ್ ಅನ್ನು 4:2:1 ಅನುಪಾತದಲ್ಲಿ ಬಳಸಬೇಕು. ಆದರೆ, 8:2:0.9ರಷ್ಟು ಬಳಸಲಾಗುತ್ತಿದೆ. ಸರ್ಕಾರವು ರಸಗೊಬ್ಬರಕ್ಕೆ ಹೆಚ್ಚು ಸಹಾಯಧನ ನೀಡುತ್ತಿದೆ. ಇದು ಮಣ್ಣಿನ ಸವಕಳಿಗೆ ಎಡೆ ಮಾಡಿಕೊಟ್ಟಿದೆ ಎಂದು ಧಾರವಾಡದ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ)ಯ ಸಲಹೆಗಾರ ಡಾ.ವಿ.ಐ. ಬೆಣಗಿ ಅಭಿಪ್ರಾಯಪಟ್ಟರು.

ಮಣ್ಣಿನಲ್ಲಿ ಸಾವಯವ ಇಂಗಾಲ ಪ್ರಮಾಣ ಕಡಿಮೆಯಾಗುತ್ತಿರುವುದು ಮಣ್ಣಿನ ಫಲವತ್ತತೆ ಕ್ಷೀಣಿಸಲು ಕಾರಣವಾಗಿದೆ. ಮಣ್ಣಿನಲ್ಲಿ ಇದರ ಪ್ರಮಾಣ ಕನಿಷ್ಠ ಶೇ 1ರಷ್ಟು ಇರಬೇಕು. ಆದರೆ, ಈಗ ಸರಾಸರಿ ಶೇ 0.3ರಷ್ಟು ಮಾತ್ರ ಇದೆ. ಮಣ್ಣು ಸಂರಕ್ಷಣೆ ಕಾರ್ಯಕ್ರಮಗಳು ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಿಲ್ಲ. ಮಣ್ಣಿನ ಸಂರಕ್ಷಣೆ ಬಗ್ಗೆ ಸಮಗ್ರ ಆಂದೋಲನ ಆಗಬೇಕು ಎಂದರು.

ತಿಪ್ಪೆ ಗೊಬ್ಬರ ಯಾಕೆ ಹಾಕಬೇಕು ಎಂಬುದನ್ನು ರೈತರಿಗೆ ತಿಳಿಸಬೇಕು. ಮಣ್ಣಿನ ಪರೀಕ್ಷೆ ಬಗ್ಗೆ ರೈತರಿಗೆ ನಿರಾಸಕ್ತಿ ಇದೆ. ನೀರಾವರಿ ಪ್ರದೇಶದವರು ಪ್ರತಿ ವರ್ಷ ಹಾಗೂ ಒಣ ಭೂಮಿ ಹೊಂದಿರುವ ರೈತರು ಕನಿಷ್ಠ ಮೂರು ವರ್ಷಕ್ಕೊಮ್ಮೆ ಯಾದರೂ ಮಣ್ಣು ಪರೀಕ್ಷೆ ಮಾಡಿಸಬೇಕು ಎಂದು ಸಲಹೆ ನೀಡಿದರು.

ನವವರ್ಣ
9ಬಿ ಮತ್ತು 9ಡಿ ಪುಟಗಳನ್ನು ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ನೌಕರರ ತುಟ್ಟಿಭತ್ಯೆ ಶೇ 3.75ರಷ್ಟು ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ತುಟ್ಟಿಭತ್ಯೆಯನ್ನು ಶೇ 3.75ರಷ್ಟು ಹೆಚ್ಚಿಸಲಾಗಿದೆ.

ನೌಕರ ಪಡೆಯುತ್ತಿರುವ ಮೂಲವೇತನಕ್ಕೆ ಈ ಪ್ರಮಾಣದಲ್ಲಿ ತುಟ್ಟಿಭತ್ಯೆ ಹೆಚ್ಚಳವಾಗಲಿದ್ದು, ಜುಲೈ 1ರಿಂದಲೇ ಪೂರ್ವಾನ್ವಯವಾಗಲಿದೆ. ಅಕ್ಟೋಬರ್ ವೇತನದಲ್ಲಿ ಪರಿಷ್ಕೃತ ತುಟ್ಟಿಭತ್ಯೆ ಸಿಗಲಿದೆ. ಮೂರು ತಿಂಗಳ ಹಿಂಬಾಕಿಯನ್ನು ವೇತನದ ಜೊತೆ ಪಾವತಿಸಲಾಗುವುದು ಎಂದು ಸರ್ಕಾರದ ಆದೇಶದಲ್ಲಿ ಹೇಳಲಾಗಿದೆ.

ಇಲ್ಲಿಯವರೆಗೆ ನೌಕರರು ತಮ್ಮ ಮೂಲ ವೇತನಕ್ಕೆ ಶೇ 35ರಷ್ಟು ತುಟ್ಟಿಭತ್ಯೆ ಪಡೆಯುತ್ತಿದ್ದರು. ಇನ್ನು ಮುಂದೆ ಶೇ 38.75ರಷ್ಟು ಸಿಗಲಿದೆ. ಇದರಿಂದಾಗಿ, ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ ₹1,109 ಕೋಟಿ ಹೆಚ್ಚುವರಿ ವೆಚ್ಚವಾಗಲಿದೆ.

ಕೇಂದ್ರ ಸರ್ಕಾರವು ತನ್ನ ನೌಕರರ ತುಟ್ಟಿಭತ್ಯೆಯನ್ನು ಶೇ 4ರಷ್ಟು ಹೆಚ್ಚಳ ಮಾಡಿತ್ತು.



ಗಗನಯಾನ: ಮೊದಲ ಪರೀಕ್ಷೆ ಯಶಸ್ವಿ

ಚೆನ್ನೈ/ ಶ್ರೀಹರಿಕೋಟ (ಆಂಧ್ರಪ್ರದೇಶ) (ಪಿಟಿಐ): ಆರಂಭದಲ್ಲಿ ಕಂಡುಬಂದ ಕೆಲ ತಾಂತ್ರಿಕ ತೊಂದರೆಗಳನ್ನು ಸಮರ್ಥವಾಗಿ ನಿವಾರಿಸಿದ ಇಸ್ರೊ, ಮಾನವ ಸಹಿತ ಗಗನಯಾನಕ್ಕೆ ಪೂರ್ವಭಾವಿಯಾಗಿ ಕೈಗೊಳ್ಳುವ ಸರಣಿ ಪರೀಕ್ಷೆಗಳ ಪೈಕಿ ಮೊದಲ ಪರೀಕ್ಷಾ ಉಡಾವಣೆಯನ್ನು ಶನಿವಾರ ಯಶಸ್ವಿಯಾಗಿ ನಡೆಸಿತು.

9

ಮತದಾರರ ನಕಲಿ ಗುರುತಿನ ಚೀಟಿ: ಮೂವರು ವಶಕ್ಕೆ

ಬೆಂಗಳೂರು: ಚುನಾವಣಾ ಗುರುತಿನ ಚೀಟಿ, ಆಧಾರ್, ಪಡಿತರ ಚೀಟಿ ಹಾಗೂ ಇತರೆ ಸರ್ಕಾರಿ ದಾಖಲೆಗಳನ್ನು ನಕಲಿಯಾಗಿ ಸೃಷ್ಟಿಸಿ ಮಾರುತ್ತಿದ್ದ ಆರೋಪದಡಿ ಮೂವರನ್ನು ಹೆಬ್ಬಾಳ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

7

ಪೊಲೀಸ್ ಗುಂಪು ವಿಮೆ ಮೊತ್ತ ₹ 50 ಲಕ್ಷಕ್ಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹುತಾತ್ಮ ಪೊಲೀಸ್ ಸಿಬ್ಬಂದಿಯ ಗುಂಪು ವಿಮಾ ಮೊತ್ತವನ್ನು ₹20 ಲಕ್ಷದಿಂದ ₹50 ಲಕ್ಷಕ್ಕೆ ಹೆಚ್ಚಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರ ಸಶಸ್ತ್ರ ಮೀಸಲು ಪೊಲೀಸ್ ಪಡೆಯ (ಸಿಎಆರ್) ಮೈದಾನದಲ್ಲಿರುವ ಹುತಾತ್ಮರ ಉದ್ಯಾನದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಪೊಲೀಸ್ ಸಂಸ್ಮರಣಾ ದಿನಾಚರಣೆ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'2022ರ ಸೆಪ್ಟೆಂಬರ್‌ನಿಂದ 2023ರ ಆಗಸ್ಟ್‌ವರೆಗೆ ರಾಜ್ಯದಲ್ಲಿ 16 ಮಂದಿ ಹಾಗೂ ದೇಶದಲ್ಲಿ 180 ರಕ್ಷಣಾ ಸಿಬ್ಬಂದಿ ಹುತಾತ್ಮರಾಗಿದ್ದಾರೆ' ಎಂದು ಹೇಳಿದರು.

'ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಆರೋಗ್ಯ ಭಾಗ್ಯಕ್ಕಾಗಿ ₹100 ಕೋಟಿ ಒದಗಿಸಲಾಗಿದೆ. ನಿವೃತ್ತರ ಆರೋಗ್ಯ ಸೇವೆಗಾಗಿ ನಿಶ್ಚಿತ ಠೇವಣಿ ಇರಿಸಲಾಗಿದೆ. ಪೊಲೀಸರ ಮಕ್ಕಳ ಶಿಕ್ಷಣಕ್ಕಾಗಿ ರಾಜ್ಯದ 7 ಜಿಲ್ಲೆಗಳಲ್ಲಿ 7 ಪೊಲೀಸ್ ಪಬ್ಲಿಕ್ ಶಾಲೆಗಳನ್ನು ಆರಂಭಿಸಲಾಗುತ್ತಿದೆ' ಎಂದು ತಿಳಿಸಿದರು.

ಖರೀದಿಗೆ ಗ್ರಾಹಕರ ದೌಡು • ಕೆ.ಆರ್. ಮಾರುಕಟ್ಟೆ ಸುತ್ತಮುತ್ತ ಸಂಚಾರ ದಟ್ಟಣೆ • ಹಣ್ಣು, ತರಕಾರಿ ವ್ಯಾಪಾರ ಜೋರು

ದಸರಾ ಹಬ್ಬ: ಗಗನಕ್ಕೇರಿದ ಹೂವಿನ ದರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುಧ ಪೂಜೆ ಮತ್ತು ವಿಜಯದಶಮಿ ಹಬ್ಬವನ್ನು ಸಂಭ್ರಮ–ಸಡಗರದಿಂದ ಆಚರಿಸಲು ನಗರದ ಜನತೆ ಸಿದ್ಧವಾಗಿದ್ದು, ಶನಿವಾರ ಹೂವು ಮತ್ತು ಹಣ್ಣಿನ ಖರೀದಿ ಜೋರಾಗಿತ್ತು.

ನವರಾತ್ರಿ ಆಚರಣೆಯ ವೇಳೆ ಪ್ರತಿ ವರ್ಷ ಹೂವುಗಳ ದರ ಏರಿಕೆಯಾಗುತ್ತದೆ. ಆದರೆ, ಕೆಲ ದಿನಗಳ ಹಿಂದೆ ಹೂವಿನ ದರ ಕುಸಿದಿತ್ತು. ಹಬ್ಬದ ವೇಳೆಗೆ ಮತ್ತೆ ಹೂವಿನ ದರಗಳು ಹೆಚ್ಚಾಗಿದೆ. ಎರಡು ವಾರಗಳವರೆಗೆ ಧಾರ್ಮಿಕ ಆಚರಣೆಗಳು ನಡೆಯುವುದರಿಂದ ಈ ಸಮಯದಲ್ಲಿ ಹೂವಿಗೆ ಹೆಚ್ಚಿನ ಬೇಡಿಕೆ ಇರುತ್ತದೆ ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವ್ಯಾಪಾರಿಗಳು ತಿಳಿಸಿದರು.

‘ದಸರಾ ಹಬ್ಬದಲ್ಲಿ ಸೇವಂತಿಗೆ, ಕನಕಾಂಬರ, ಗುಲಾಬಿ ಹೂವುಗಳಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಆಯುಧ ಪೂಜೆ ದಿನ ವಾಹನಗಳು, ಕಚೇರಿ, ಮನೆಯಲ್ಲಿರುವ ವಸ್ತುಗಳನ್ನು ಅಲಂಕರಿಸಿ ಪೂಜೆ ಮಾಡಲಾಗುತ್ತದೆ. ವಾಹನಗಳ ಅಲಂಕಾರಕ್ಕೆ ಹೂವು ಹೆಚ್ಚಾಗಿ ಮಾರಾಟವಾಗುತ್ತದೆ. ಗುಣಮಟ್ಟದ ಹೂವಿಗೆ ಗ್ರಾಹಕರಿಂದ ಬೇಡಿಕೆ ಹೆಚ್ಚು. ಆಗ ಬೆಲೆಯೂ ಏರಿಕೆಯಾಗುವುದು ಸಾಮಾನ್ಯ’ ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವರ್ತಕ ಮಹಮ್ಮದ್ ಕೈಫ್, ಗಂಗಾ ಮಾಹಿತಿ ನೀಡಿದರು.

‘ಪ್ರತಿ ಕೆ.ಜಿ. ಕನಕಾಂಬರ ₹1,200, ಮಲ್ಲಿಗೆ ₹1,600, ಗುಲಾಬಿ ₹300 ರಂತೆ ಮಾರಾಟವಾಗುತ್ತಿದೆ. ಭಾನುವಾರ ಹೂವಿನ ದರಗಳು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ’ ಎಂದು ತಿಳಿಸಿದರು.

ಆಯುಧ ಪೂಜೆಯ ದಿನ ಮನೆ, ವಾಹನ, ಅಂಗಡಿ, ಕಾರ್ಖಾನೆ ಬಳಿ ಒಡೆಯುವ ಬೂದುಗುಂಬಳ ಕೆ.ಜಿಗೆ ₹50ರಂತೆ ಮತ್ತು ಗಾತ್ರದ ಆಧಾರದ ಮೇಲೆ ಒಂದಕ್ಕೆ ₹100–₹200ರಂತೆ ಮಾರಾಟವಾಗಿದೆ.

ನಗರದ ಕೆ.ಆರ್. ಮಾರುಕಟ್ಟೆ, ಯಶವಂತಪುರ, ಬಸವನಗುಡಿ ಮಾರುಕಟ್ಟೆ ಪ್ರದೇಶಗಳು ಜನಜಂಗುಳಿಯಿಂದ ಕೂಡಿದ್ದವು. ತರಕಾರಿ, ದಿನಸಿ, ಅಲಂಕಾರಿಕ ವಸ್ತುಗಳು ಮತ್ತು ಪೂಜೆಗೆ ಬೇಕಾಗುವ ಬೂದುಗುಂಬಳ, ಬಾಳೆಕಂದು, ಎಲೆ, ತೆಂಗಿನಕಾಯಿ ಖರೀದಿ ಜೋರಾಗಿತ್ತು.

‘ಪ್ರತಿ ಕೆ.ಜಿ ಬಟಾಣಿ ₹160, ಶುಂಠಿ ₹200, ಬೀನ್ಸ್ ₹80, ಕ್ಯಾರೆಟ್ ₹40, ಹೀರೇಕಾಯಿ ₹60, ಕ್ಯಾಪ್ಸಿಕಮ್ ಮತ್ತು ಬೀಟ್‌ರೂಟ್ ₹40ರಂತೆ ಮಾರಾಟ ಮಾಡಲಾಗುತ್ತಿದೆ. ಮೆಣಸಿನಕಾಯಿ ಪ್ರತಿ ಕೆ.ಜಿಗೆ ₹80 ಮಾರಾಟವಾಗುತ್ತಿದೆ’ ಎಂದು ಕೆ.ಆರ್. ಮಾರುಕಟ್ಟೆಯ ತರಕಾರಿ ವ್ಯಾಪಾರಿಗಳಾದ ಅಕ್ರಂ, ವೆಂಕಟೇಶ್ ಅವರು ಮಾಹಿತಿ ನೀಡಿದರು.



ಆಯುಧಪೂಜೆ ಮತ್ತು ವಿಜಯದಶಮಿ ಅಂಗವಾಗಿ ನಗರದ ಕೆ.ಆರ್ ಮಾರುಕಟ್ಟೆಯಲ್ಲಿ ಶನಿವಾರ ಹೂವು ಹಾಗೂ ಹಣ್ಣು ಖರೀದಿಗೆ ಹರಿದುಬಂದ ಜನಸಾಗರ –ಪ್ರಜಾವಾಣಿ ಚಿತ್ರ/ ರಂಜು ಪಿ.

ಕೆ.ಆರ್. ಮಾರುಕಟ್ಟೆಯಲ್ಲಿ ಹೂವು, ಹಣ್ಣು, ತರಕಾರಿ ಪ್ರತಿ ಕೆ.ಜಿಗೆ ದರ (₹ಗಳಲ್ಲಿ)

ಹೂವುಗಳು	ಕಳೆದ ವಾರ	ಈ ವಾರ
ಮಲ್ಲಿಗೆ	400	1,600
ಕನಕಾಂಬರ	400	1,200
ಗುಲಾಬಿ	150	300
ಸೇವಂತಿಗೆ	100	150
ಸುಗಂಧರಾಜ	100	250
ಹಣ್ಣುಗಳ ದರ		
ದ್ರಾಕ್ಷಿ	200	240
ಸೇಬು	100	120
ದಾಳಿಂಬೆ	80	100
ಸಪೋಟ	80	60
ಏಲಕ್ಕಿ ಬಾಳೆ	120	70
ಸೀತಾಫಲ	80	160
ಕಿತ್ತಳೆ	50	80
ಬಾಳೆ	30	40

ತರಕಾರಿ ದರ		
ಬಟಾಣಿ	100	160
ಕ್ಯಾರೆಟ್	50	40
ಕ್ಯಾಪ್ಸಿಕಮ್	50	60
ಈರುಳ್ಳಿ	30	40
ಬೀನ್ಸ್	60	80
ಟೊಮೆಟೊ	15	10
ಆಲೂಗಡ್ಡೆ	20	20
ಹೀರೇಕಾಯಿ	40	60
ಸೌತೆಕಾಯಿ	20	30
ಹಾಗಲಕಾಯಿ	40	40
ಬದನೆಕಾಯಿ	50	40
ಮೆಣಸಿನಕಾಯಿ	100	80
ಸೋರೆಕಾಯಿ	60	40
ಬೀಟ್‌ರೂಟ್	30	40
ಮೂಲಂಗಿ	50	80

ಬೆಳ್ಳುಳ್ಳಿ	140	160
ಶುಂಠಿ	120	200
ಪ್ರತಿ ಕಟ್ಟಿಗೆ		
ಕೊತ್ತಂಬರಿ	20	30
ಪುದೀನಾ	10	10
ಪಾಲಾಕ್	10	20
ಸಬ್ಬಕ್ಕಿ	15	20
ಮೆಂತೆ	10	20
ಹಬ್ಬದ ವಿಶೇಷ		
ಬಾಳೆಕಂದು ಜೋಡಿಗೆ		50
ಮಾವಿನ ತೋರಣ		20
100 ವೀಳ್ಯದೆಲೆಗೆ		80
5 ತೆಂಗಿನಕಾಯಿಗೆ		100
ಗರಿಕೆ		30
ಬಿಲ್ಲಪತ್ರೆ		20

ವಿವಿಧೆಡೆ ಆಯುಧಪೂಜೆ

ಬೆಂಗಳೂರು: ನಗರದ ಹಲವು ಕಚೇರಿಗಳಲ್ಲಿ ಶನಿವಾರವೇ ಆಯುಧಪೂಜೆ ಆಚರಿಸಲಾಯಿತು.

ಭಾನುವಾರ, ಸೋಮವಾರ (ಆಯುಧಪೂಜೆ), ಮಂಗಳವಾರ (ವಿಜಯದಶಮಿ) ರಜೆ ಇರುವುದರಿಂದ ಬಹುತೇಕ ಕಚೇರಿಗಳಲ್ಲಿ ಶನಿವಾರ ಪೂಜಾ ಕಾರ್ಯಗಳು ನಡೆದವು. ಮೂರು ದಿನ ಸರಣಿ ರಜೆ ಸಿಕ್ಕಿರುವುದರಿಂದ ಸೋಮವಾರದ ಆಯುಧಪೂಜೆಗೆ ಕಾಯದೆ ಶನಿವಾರವೇ ಕಚೇರಿ ಪೂಜೆ ಮುಗಿಸಿದರು. ಮಧ್ಯಾಹ್ನದ ನಂತರ ಬಹುತೇಕ ಕಚೇರಿಗಳು ಸಿಬ್ಬಂದಿಯಿಲ್ಲದೆ ಖಾಲಿಯಾಗಿದ್ದವು.

ಸರ್ಕಾರಿ ಕಚೇರಿಗಳಲ್ಲಿ ಶನಿವಾರವೇ ಪೂಜೆ ಮುಗಿಯಿತು. ವಿಧಾನಸೌಧ, ವಿಕಾಸಸೌಧ ಸೇರಿದಂತೆ ಎಲ್ಲ ಇಲಾಖೆಗಳಲ್ಲೂ ಕಚೇರಿ ಪೂಜೆ ನಡೆಯಿತು. ರಾಜ್ಯ ಸರ್ಕಾರದ ಎಲ್ಲ ಕಚೇರಿಗಳಲ್ಲಿ ಹೊಸ ಬಟ್ಟೆ ತೊಟ್ಟು ನೌಕರರು ಸಂಭ್ರಮಿಸಿದರು. ಸ್ಥಳೀಯ ಸಂಸ್ಥೆಗಳಲ್ಲಿಯೂ ಸಂಭ್ರಮದಿಂದ ಪೂಜೆ ನೆರವೇರಿಸಲಾಯಿತು.

ಬಿಬಿಎಂಪಿ ಕೇಂದ್ರ ಕಚೇರಿಯ ಸಾರ್ವಜನಿಕರ ಸಂಪರ್ಕ, ಎಂ.ಪಿ.ಇ.ಡಿ, ನಗರ ಯೋಜನೆ, ಅರಣ್ಯ ಘಟಕ, ಕೌನ್ಸಿಲ್ ಕಾರ್ಯಾಲಯ, ಹಣಕಾಸು ವಿಭಾಗದಲ್ಲಿ ಪೂಜಾ ಸಮಾರಂಭ ಏರ್ಪಡಿಸಲಾಗಿತ್ತು. ವಾಹನಗಳನ್ನು ಅಲಂಕರಿಸಿ ಪೂಜಿಸಲಾಯಿತು.

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಬಹುತೇಕ ಎಲ್ಲ ವಿಭಾಗಗಳ ಕಚೇರಿಗೆ ತೆರಳಿ ಪೂಜೆ ಸಲ್ಲಿಸಿದರು. ಅಧಿಕಾರಿ ಮತ್ತು ಸಿಬ್ಬಂದಿಗೆ ದಸರಾ ಹಬ್ಬದ ಶುಭಾಶಯ ಕೋರಿದರು. ಬಿಬಿಎಂಪಿ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಕೇಂದ್ರ ಕಚೇರಿ ಹಾಗೂ ವಲಯ ಕಚೇರಿಗಳಲ್ಲಿ ಅಧ್ಯಕ್ಷ ಅಮೃತ್ ರಾಜ್ ನೇತೃತ್ವದಲ್ಲಿ ಪೂಜೆ ಸಲ್ಲಿಸಲಾಯಿತು.

ಬಿಡಿಎ ಅಧಿಕಾರಿಗಳು ತಮ್ಮ ಕಚೇರಿಯಲ್ಲಿ ಕುಂಬಳಕಾಯಿ ಒಡೆದು, ಕುಂಕುಮ ಹಚ್ಚಿ, ಆರತಿ ಎತ್ತಿ ಆಯುಧ ಪೂಜೆ ನಡೆಸಿದರು.

ಬಹುತೇಕ ಖಾಸಗಿ ಫ್ಯಾಕ್ಟರಿ, ಕಾರ್ಖಾನೆ, ಕಂಪನಿಗಳಲ್ಲಿ ಶುಕ್ರವಾರವೇ ಆಯುಧ ಪೂಜೆ ನಡೆಯಿತು. ಪೂಜೆ ಮುಗಿಸಿ ಹಲವು ಉದ್ಯೋಗಿಗಳು ಊರು ಅಥವಾ ಪ್ರವಾಸಕ್ಕೆ ತೆರಳಿದರು.

ಪಾಲಿಕೆಯ ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದ ಕೊಠಡಿ ಕಳೆಗುಂದಿತ್ತು. ಆಗಸ್ಟ್‌ನಲ್ಲಿ ಸಂಭವಿಸಿದ ಬೆಂಕಿ ಅವಘಡದಿಂದ ಮುಖ್ಯ ಎಂಜಿನಿಯರ್ ಶಿವಕುಮಾರ್ ಮೃತಪಟ್ಟಿದ್ದರು. ಇನ್ನೂ ಎಂಟು ಸಿಬ್ಬಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೊಸದಾಗಿ ಈ ವಿಭಾಗಕ್ಕೆ ವರ್ಗಾವಣೆ ಆಗಿರುವ ಮುಖ್ಯ ಎಂಜಿನಿಯರ್, ಕಾರ್ಯಪಾಲಕ ಎಂಜಿನಿಯರ್ ಇನ್ನೂ ಕಾರ್ಯ ನಿರ್ವಹಿಸುತ್ತಿಲ್ಲ.



ಎಂಎಸ್ ಬಿಲ್ಡಿಂಗ್‌ನಲ್ಲಿರುವ ಸರ್ಕಾರಿ ಕಚೇರಿಗಳ ಕಾರುಗಳಿಗೆ ಶನಿವಾರ ಪೂಜೆ ಸಲ್ಲಿಸಲಾಯಿತು –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಸ್ಥಿರಾಸ್ತಿ ಡಿಜಿಟಲೀಕರಣಕ್ಕೆ ಬಿಬಿಎಂಪಿಗೆ ನಿರ್ದೇಶನ

ಬೆಂಗಳೂರು: ‘ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ಎಲ್ಲಾ ಹಳೆಯ ದಾಖಲೆಗಳನ್ನು ಡಿಜಿಟಲ್ ವ್ಯವಸ್ಥೆಗೆ ಅಳವಡಿಸಬೇಕು’ ಎಂದು ಹೈಕೋರ್ಟ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಆದೇಶಿಸಿದೆ.

‘ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಯೋಜನೆಗೆ ಮಂಜೂರಾತಿ ಸಲ್ಲಿಸಿಲ್ಲ. ಹೀಗಾಗಿ, ನಿಮ್ಮ ಕಟ್ಟಡ ನಿರ್ಮಾಣ ಅಕ್ರಮ’ ಎಂಬ ಬಿಬಿಎಂಪಿ ಆದೇಶ ಪ್ರಶ್ನಿಸಿ, ಪದ್ಮಾನಗರದ ಅಸ್ಲಂ ಪಾಷಾ ಸಲ್ಲಿಸಿದ್ದ ರಿಟ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಇಂತಹ ಡಿಜಿಲೀಕರಣ ವ್ಯವಸ್ಥೆಯಿಂದ ಯಾವುದೇ ನಿರ್ದಿಷ್ಟ ಆಸ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ವಿದ್ಯುನ್ಮಾನ ಮಾಧ್ಯಮ ರೂಪದಲ್ಲಿ ಸುಲಭವಾಗಿ ಲಭ್ಯವಾಗಲಿವೆ. ಇದರಿಂದ ನಕಲಿಗಳ ಹಾವಳಿಯೂ ತಪ್ಪಲಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಅನುಮೋದಿತ ಯೋಜನೆಗಳು, ಖಾತೆ ಪತ್ರಗಳು, ತೆರಿಗೆ ಪಾವತಿಸಿದ ರಸೀದಿಗಳು, ಸ್ವ ಮೌಲ್ಯಮಾಪನ ನಮೂನೆ ಅರ್ಜಿ ಸೇರಿದಂತೆ ಅಗತ್ಯ ದಸ್ತಾವೇಜುಗಳ ಡಿಜಿಟಲೀಕರಣ ಮಾಡಬೇಕು. ಈ ಸಂಬಂಧ ಇ-ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ ಜೊತೆ ಬಿಬಿಎಂಪಿ ಮುಖ್ಯ ಆಯುಕ್ತರು ಸಮನ್ವಯ ಸಾಧಿಸಬೇಕು’ ಎಂದು ನ್ಯಾಯಪೀಠ ನಿರ್ದೇಶಿಸಿದೆ.

‘ನಗರಾಭಿವೃದ್ಧಿ, ಹಣಕಾಸು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಬೆಸ್ಕಾಂ, ಬೆಂಗಳೂರು ಜಲಮಂಡಳಿ ಸೇರಿದಂತೆ ವಿವಿಧ ಇಲಾಖೆಗಳ ಅಗತ್ಯ ಸಹಕಾರ ಪಡೆಯಬೇಕು. ನಿರ್ದಿಷ್ಟ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಮ್ಯಾಪ್ ಮಾಡಿ, ಟ್ಯಾಗ್ ಮಾಡಬೇಕು’ ಎಂದು ಸೂಚಿಸಿದೆ. ‘ಬಿಬಿಎಂಪಿಯ ಮುಖ್ಯ ಆಯುಕ್ತರು ಇ-ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ ಜೊತೆಗೂಡಿ ಈ ನಿಟ್ಟಿನಲ್ಲಿ ಸೂಕ್ತ ಯೋಜನೆಯೊಂದನ್ನು ರೂಪಿಸಬೇಕು’ ಎಂದು ನ್ಯಾಯಪೀಠ ನಿರ್ದೇಶಿಸಿದೆ.



‘ರಾಜ್ಯೋತ್ಸವ ಪ್ರಶಸ್ತಿ: ನಾಮನಿರ್ದೇಶನ ಸರಿಯಲ್ಲ’

ಬೆಂಗಳೂರು: ‘ರಾಜ್ಯ ಸರ್ಕಾರ ನೀಡುವ ರಾಜ್ಯೋತ್ಸವ ಪ್ರಶಸ್ತಿಗೆ ಜನರಿಂದ ನಾಮನಿರ್ದೇಶನ ಆಹ್ವಾನ ಮಾಡುವುದು ಸರಿಯಾದ ಕ್ರಮವಲ್ಲ. ಸಲಹಾ ಸಮಿತಿಯೇ ಸಾಧಕರನ್ನು ಗುರುತಿಸಿ, ಪ್ರಶಸ್ತಿಗೆ ಆಯ್ಕೆ ಮಾಡಬೇಕು’ ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಆಗ್ರಹಿಸಿದ್ದಾರೆ.

‘ಈ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಗೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅಧ್ಯಕ್ಷತೆಯಲ್ಲಿ 30 ಸದಸ್ಯರನ್ನೊಳಗೊಂಡ ಸಲಹಾ ಸಮಿತಿಯನ್ನು ಸರ್ಕಾರ ರಚಿಸಿದೆ. ಈ ಸಮಿತಿಯಲ್ಲಿನ ಕೆಲ ಸದಸ್ಯರು ಸೂಕ್ತ ಪರಿಣತಿ ಹೊಂದಿಲ್ಲ. ಇದು ಅವರಿಗೂ ಇರಿಸು ಮುರಿಸು ಉಂಟಾಗುವಂತೆ ಮಾಡಿದೆ. ಸಾಧಕರ ಆಯ್ಕೆಗೆ ಸಂಬಂಧಿಸಿದಂತೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ನಾಮನಿರ್ದೇಶನ ಆಹ್ವಾನ ಮಾಡಿರುವುದು ವಿಪರ್ಯಾಸ. ಆಯ್ಕೆ ಸಮಿತಿಯಲ್ಲಿ ಇರುವ ತಜ್ಞರು ಆಯಾ ಕ್ಷೇತ್ರದ ಸಾಧಕರ ಮಾಹಿತಿ ಹೊಂದಿರುತ್ತಾರೆ. ಆದ್ದರಿಂದ ಪ್ರಶಸ್ತಿಗೆ ಅರ್ಹರು ಯಾರೆಂಬ ಮಾಹಿತಿಯನ್ನು ಅವರಿಂದಲೇ ಪಡೆಯುವುದು ಸೂಕ್ತ’ ಎಂದು ಹೇಳಿದ್ದಾರೆ.

ಪ್ರಭಾವಿಗಳ ಕಟ್ಟಡ ತೆರವಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಆದೇಶವನ್ನು ಮೀರಿ ತಿಪ್ಪಗೊಂಡನಹಳ್ಳಿ ಜಲಾಶಯದ ಸುತ್ತಮುತ್ತ ನಿರ್ಮಿಸಿರುವ ಪ್ರಭಾವಿಗಳ ಕಟ್ಟಡಗಳನ್ನು ತೆರವುಗೊಳಿಸುವಂತೆ ಕಾಂಗ್ರೆಸ್ ನಾಯಕ ಬಿ.ಕೆ. ಚಂದ್ರಶೇಖರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

‘1992ರಲ್ಲಿ ಅಂದಿನ ಸರ್ಕಾರ ಅರ್ಕಾವತಿ ನದಿಯ ಸಮೀಪದಲ್ಲಿಯೇ ಟೌನ್‌ಶಿಪ್ ನಿರ್ಮಿಸಲು ದೆಹಲಿಯ ಡಿಎಲ್‌ಎಫ್ ಸಂಸ್ಥೆಗೆ ಅನುಮತಿ ನೀಡಿದ್ದನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದೆವು. ಟೌನ್‌ಶಿಪ್ ನಿರ್ಮಾಣಗೊಂಡರೆ ಅರ್ಕಾವತಿ ನದಿ ಮತ್ತು ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ನೀರಿನ ಕೊರತೆ ಉಂಟಾಗಲಿದೆ. ತ್ಯಾಜ್ಯ ನೀರು ನದಿ ಮತ್ತು ಜಲಾಶಯಕ್ಕೆ ಸೇರಲಿದೆ ಎಂಬುದನ್ನು ಹೈಕೋರ್ಟ್ ಮನಗಂಡು ನಮ್ಮ ದಾವೆಯನ್ನು ಪುರಸ್ಕರಿಸಿತ್ತು. ನದಿ ತೀರದ ಸುತ್ತಮುತ್ತ ಕೃಷಿಯೇತರ ಅಭಿವೃದ್ಧಿಯನ್ನು ನಿಷೇಧಿಸಿ ಆದೇಶ ನೀಡಿತ್ತು’ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

2019ರಲ್ಲಿ ಈ ಆದೇಶವನ್ನು ಉಲ್ಲಂಘಿಸಿ ಬಡಾವಣೆ ನಿರ್ಮಿಸಲು ಅನುಮತಿ ನೀಡಿತ್ತು. ಇಂದಿನ ಸರ್ಕಾರ ಈ ಅನುಮತಿಯನ್ನು ಹಿಂಪಡೆಯಬೇಕು. ಎಲ್ಲ ಕಟ್ಟಡಗಳನ್ನು ತೆರವುಗೊಳಿಸಿ ಜನರ ಹಿತಾಸಕ್ತಿಯನ್ನು ರಕ್ಷಿಸಬೇಕು ಎಂದು ಆಗ್ರಹಿಸಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಅರಣ್ಯ, ಜೀವ ವಿಜ್ಞಾನ ಹಾಗೂ ಪರಿಸರ ಸಚಿವ ಈಶ್ವರ ಖಂಡ್ರೆ ಅವರಿಗೂ ಪತ್ರದ ಪ್ರತಿ ಕಳುಹಿಸಿದ್ದಾರೆ.

ವೀರಾಂಜನೇಯ ಸ್ವಾಮಿ ಹೆಬ್ಬಾಗಿಲು ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಬೋನ್ ಮಿಲ್ ಬಸ್ ನಿಲ್ದಾಣ ಬಳಿಯ ಚಿಕ್ಕಸಂದ್ರ ಗ್ರಾಮದ ವೀರಾಂಜನೇಯ ಸ್ವಾಮಿ ಹೆಬ್ಬಾಗಿಲನ್ನು ಶಾಸಕ ಎಸ್. ಮುನಿರಾಜು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಹಿಂದಿನ ಕಾಲದಿಂದಲೂ ನಮ್ಮ ಪೂರ್ವಜರು ಊರಿಗೊಂದು ಹೆಬ್ಬಾಗಿಲು ನಿರ್ಮಿಸುತ್ತಿದ್ದರು. ಹಾಗೆಯೇ ಪುಣ್ಯ ಕ್ಷೇತ್ರಗಳಿಗೆ ಹೆಬ್ಬಾಗಿಲು ನಿರ್ಮಿಸಿ ಅದರಲ್ಲಿ ದೇವರುಗಳನ್ನು ಚಿತ್ರಿಸುತ್ತಿದ್ದರು. ಗ್ರಾಮದ ಊರ ಹಬ್ಬಗಳಲ್ಲಿ ವಿಜೃಂಭಣೆಯಿಂದ ಜಾತ್ರೆಯನ್ನು ಮಾಡುತ್ತಿದ್ದರು. ಆ ಪದ್ಧತಿ ಈಗಲೂ ನಡೆದುಕೊಂಡು ಬಂದಿದೆ ಎಂದರು.

ಚಿಕ್ಕಸಂದ್ರ ಹಿಂದೆ ಒಂದು ಸಣ್ಣ ಗ್ರಾಮ, ಈಗ ಬಿಬಿಎಂಪಿಯ ವಾರ್ಡ್ ಆಗಿದೆ. ಈ ಗ್ರಾಮದೊಳಗೆ ವೀರಾಂಜನೇಯ ಸ್ವಾಮಿ ದೇವಸ್ಥಾನವಿದ್ದು ನೂರಾರು ದಾನಿಗಳಿಂದ ಊರಿಗೆ ಹೆಬ್ಬಾಗಿಲು ನಿರ್ಮಿಸಲಾಗಿದೆ. ಆ ದೇವ ಆಂಜನೇಯ ಎಲ್ಲರಿಗೂ ಒಳ್ಳೆಯದು ಮಾಡಲಿ ಎಂದರು.

ಶೆಟ್ಟಿಹಳ್ಳಿ ವಾರ್ಡ್ ಬಿಜೆಪಿ ಅಧ್ಯಕ್ಷ ಬಿ. ಸುರೇಶ್, ಬಿಜೆಪಿ ಮುಖಂಡ ಸಿ.ಎನ್. ದಯಾನಂದ್, ಗ್ರಾಮದ ಮುಖ್ಯಸ್ಥರಾದ ಕೃಷ್ಣಪ್ಪ, ರಾಜಣ್ಣ, ಬೈರೇಗೌಡ, ಮೋಹನ್ ಇದ್ದರು.

‘ಮಾನಸಿಕ ಆರೋಗ್ಯ: ನಿರ್ಲಕ್ಷ್ಯ ಬೇಡ’

ಬೆಂಗಳೂರು: ‘ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚಿನವರು ನಿರ್ಲಕ್ಷ್ಯ ವಹಿಸುತ್ತಾರೆ. ಈ ಸಮಸ್ಯೆಯ ಗುರುತಿಸುವುದರ ಜತೆಗೆ ನಾಗರಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಕೆಲಸವಾಗಬೇಕು’ ಎಂದು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಉಪ ಕಾರ್ಯದರ್ಶಿ ರಾಘವೇಂದ್ರ ಶೆಟ್ಟಿಗಾರ್ ತಿಳಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾನಸಿಕ ಆರೋಗ್ಯ ವಿಭಾಗ ಹಾಗೂ ಆರ್‌ವಿ ಕಾಲೇಜ್ ಆಫ್ ನರ್ಸಿಂಗ್ ಸಹಯೋಗದಲ್ಲಿ ನಡೆದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯಲ್ಲಿ ಅವರು ‘ಮಾನಸಿಕ ಆರೋಗ್ಯ ಹಾಗೂ ಖಿನ್ನತೆ’ ವಿಷಯದ ಕುರಿತು ಮಾತನಾಡಿದರು.

ನಗರದಲ್ಲಿ ಇಂದು

ಬೆಂಗಳೂರು ವಿಶ್ವವಿದ್ಯಾಲಯದ ಅಂತರ ಕಾಲೇಜು ಟೆಕ್ವಾಂಡೊ ಚಾಂಪಿಯನ್‌ಶಿಪ್: ಉದ್ಘಾಟನೆ: ಸಿ.ಜಿ. ಶಶಿವರ್ಧನ್, ಅತಿಥಿ: ಪಿ.ಸಿ. ಕೃಷ್ಣಸ್ವಾಮಿ, ಅಧ್ಯಕ್ಷತೆ: ವೈ. ವೆಂಕಟೇಶಪ್ಪ, ಉಪಸ್ಥಿತಿ: ಕೆ.ಜಿ. ಈಶ್ವರ ನಾಯ್ಕ್, ಶ್ರೀನಿವಾಸ ಟಿ., ಆಯೋಜನೆ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸ್ಥಳ: ಕಂಠೀರವ ಒಳಾಂಗಣ ಕ್ರೀಡಾಂಗಣ, ಬೆಳಿಗ್ಗೆ 9

ಗಾಯನ, ಹಾಸ್ಯ, ರಸಪ್ರಶ್ನೆ ಮತ್ತು ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿ: ವಿ. ಮಲ್ಲಿಕಾರ್ಜುನಯ್ಯ, ಉಪಸ್ಥಿತಿ: ಎಸ್. ಮೋಹನ್ ಕುಮಾರ್, ಆಯೋಜನೆ: ಸಹಮತ, ಸ್ಥಳ: ಹೇಮ ಸದನ, ಸಹಕಾರ ನಗರ, ಬೆಳಿಗ್ಗೆ 10

ಕವಿಗೋಷ್ಠಿ, ಗೀತಗಾಯನ, ರಸಪ್ರಶ್ನೆ: ಅಧ್ಯಕ್ಷತೆ: ಟಿ.ಎ. ನೀಲಕಂಠ ಅಡಿಗ, ಅತಿಥಿ: ರಾಣಿ ಗೋವಿಂದರಾಜ್, ಉಪಸ್ಥಿತಿ: ಬಿ. ಶಾಂತಕುಮಾರ್, ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ದಸರಾ ಕವಿಗೋಷ್ಠಿ, ಗೀತ–ಗಾಯನ, ಸಾಂಸ್ಕೃತಿಕ ಸ್ಪಂದನ, ಪ್ರಶಸ್ತಿ ಪ್ರದಾನ: ಎಂ. ಪ್ರಕಾಶಮೂರ್ತಿ, ಅಧ್ಯಕ್ಷತೆ: ಬಿ. ಶೃಂಗೇಶ್ವರ್, ಉದ್ಘಾಟನೆ: ವಿ. ರೇಣುಕಾಪ್ರಸನ್ನ, ಅತಿಥಿಗಳು: ಕೆ.ಎಂ. ರೇವಣ್ಣ, ಆರ್. ಅಂಬುಜಾಕ್ಷಿ ಬೀರೇಶ್, ಪ್ರಶಸ್ತಿ ಪುರಸ್ಕೃತರು: ಇಂದಿರಾ ಚರಣ್ ಜಮ್ಮಲದಿನ್ನಿ, ಕಗ್ಗೆರೆ ಪ್ರಕಾಶ್, ಎಚ್. ತುಕಾರಮ್, ಆಯೋಜನೆ: ಸಮ್ಮಿಲನ ಗುರೂಜಿ ಮನೆ, ಸ್ಥಳ: ಗುರೂಜಿ ರಾಜಲಕ್ಷ್ಮಮ್ಮರ ಮನೆ, ವಿಜಯಾನಂದನಗರ, ಬೆಳಿಗ್ಗೆ 10.30

> ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
> **nagaradalli_indu@prajavani.co.in**

ಅಷ್ಟಾವಧಾನ: ರಾಮಕೃಷ್ಣ ಪೆಜತ್ತಾಯ, ಸೂರ್ಯ ಹೆಬ್ಬಾರ್, ರವಿಶಂಕರ ಭಟ್ ಕೆ.ಎಸ್., ಶಶಿಕಿರಣ ಬಿ.ಎನ್., ಅರ್ಜುನ್ ಭಾರದ್ವಾಜ್, ರಾಘವೇಂದ್ರ ಹೆಬ್ಬಳಲು, ಸೋಮಶೇಖರ ಶರ್ಮಾ, ಶತಾವಧಾನಿ ಆರ್. ಗಣೇಶ್, ಶ್ರೀಲಕ್ಷ್ಮಿ ಪಿ., ಆಯೋಜನೆ: ರಾಗವಲ್ಲಿ, ಸ್ಥಳ: ಕೋರ್ಟ್‌ಯಾರ್ಡ್ ಕೂಟ, ಗುಡ್‌ಅರ್ಥ್ ಮಲ್ಹಾರ್, ಕೆಂಗೇರಿ, ಬೆಳಿಗ್ಗೆ 10.30

ಕುಣಿಯೋಣು ಬಾರ ಕನ್ನಡ ಕೋಲಾಟ: ಆಯೋಜನೆ: ದಸರಾ ಬೆಂಗಳೂರು, ಸ್ಥಳ: ಬನ್ನಪ್ಪ ಪಾರ್ಕ್, ಸಂಜೆ 4ರಿಂದ

ಸುಮತಿ ಕೃಷ್ಣಮೂರ್ತಿ ಅವರ ‘ಹೆಣ್ಣಾಲದ ಮರ’ ಪುಸ್ತಕ ಬಿಡುಗಡೆ: ಎಚ್.ಎಸ್. ವೆಂಕಟೇಶಮೂರ್ತಿ, ಅತಿಥಿಗಳು: ಕೆ. ರಾಜಕುಮಾರ್, ಸತ್ಯೇಶ್ ಎನ್. ಬೆಳ್ಳೂರ್, ಗೋಪಾಲ್ ತ್ರಾಸಿ, ಸ್ಥಳ: ನಾಣಿ ಸಭಾಂಗಣ, ಸುಚಿತ್ರ ಫಿಲಂ ಸೊಸೈಟಿ, ಬನಶಂಕರಿ 2ನೇ ಹಂತ, ಸಂಜೆ 4



ಎಚ್.ಎಸ್. ವೆಂಕಟೇಶ ಮೂರ್ತಿ

‘ವೀಣಾ ಸಹಸ್ರಬುದ್ಧೆ ಪುರಸ್ಕಾರ ಪ್ರದಾನ: ಪ್ರಶಸ್ತಿ ಪುರಸ್ಕೃತರು: ವೆಂಕಟೇಶ ಕುಮಾರ್, ಗಾಯನ: ಮೌನ ರಾಮಚಂದ್ರ, ತಬಲಾ: ಕೇಶವ್ ಜೋಶಿ, ಹಾರ್ಮೋನಿಯಂ: ಸತೀಶ್ ಭಟ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 4.45

ಗಿರೀಶ್ ಕಾರ್ನಾಡ ಅವರ ‘ತಲೆದಂಡ’ ನಾಟಕ ಪ್ರದರ್ಶನ: ನಿರ್ದೇಶನ: ಶಿವು ಹೊನ್ನಿಗಾನಹಳ್ಳಿ, ಆಯೋಜನೆ: ಬಿಂಕ ಬಿನ್ನಾಣರು ರಂಗ ತಂಡ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ನವರಾತ್ರಿ ವಿಶೇಷ

ದುರ್ಗಾ ದೇವಿ, ಚೆರ್ರಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ಮಹೇಶ್ವರಿ ದೇವಸ್ಥಾನ ಟ್ರಸ್ಟ್, ಮಲ್ಲೇಶ್ವರ, ಬೆಳಿಗ್ಗೆ 7ರಿಂದ

ಶರನ್ನವರಾತ್ರಿ ಮಹೋತ್ಸವ: ಶತಚಂಡಿ ಹೋಮ, ದ್ವಾರಪೂಜೆ, ಚಂಡೀ ನವಾವರಣ ಪೂಜೆ, ದುರ್ಗಾ ಸಪ್ತಶತೀ ಅಧ್ಯಾಯ ಹೋಮ, ಕನ್ಯಕಾ ಪೂಜೆ, ಸುವಾಸಿನಿ ಪೂಜೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ವೇದ ವಿಜ್ಞಾನ ಮಹಾವಿದ್ಯಾಪೀಠ, ಕನಕಪುರ ಮುಖ್ಯರಸ್ತೆ, ಬೆಳಿಗ್ಗೆ 7ರಿಂದ

ಮಹಾಗೌರಿ ಆವಾಹನೆ, ಮಹಾಗೌರಿ ಹೋಮ, ಕುಂಕುಮಾರ್ಚನೆ, ಪುಷ್ಪಾರ್ಚನೆ, 108 ಜಪ ಪಾರಾಯಣ, ಚಂಡಿ ಪಾರಾಯಣ, ಮಹಾ ಮಂಗಳಾರತಿ, ಆಯೋಜನೆ: ತ್ರಿಕೋನ ಶಕ್ತಿ ಪೀಠ, ಸ್ಥಳ: ಸಾತನೂರು, ಯಲಹಂಕ, ಬೆಳಿಗ್ಗೆ 9ರಿಂದ

ದೇವಿಗೆ ಮಹಾಭಿಷೇಕ, ಶ್ರೀಗಂಧ ಅಲಂಕಾರ: ಸಾಮೂಹಿಕ ಲಲಿತ ಸಹಸ್ರ ಪಾರಾಯಣ ಮಧ್ಯಾಹ್ನ 1.30ಕ್ಕೆ, ‘ದೇವಿ ಮಹಾತ್ಮೆ’ ಹರಿಕಥೆ: ಮುನಿಕೋಟೆ ಹರಿಕಥಾ ದಾಸರು, ಸಂಜೆ 6.30ಕ್ಕೆ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ

ದೇವಿ ಸ್ತೋತ್ರ ಪಠಣ: ರಂಗಸಂಪದ ತಂಡದ ಸಂಭ್ರಮ: ಉಮಾಶ್ರೀ, ಎನ್. ಕೆ. ರಾಮಕೃಷ್ಣ, ಗುಂಡಣ್ಣ, ‘ಲೋಕದ ಒಳ ಹೊರಗೆ’ ನಾಟಕದ ಸಂವಾದ: ಚಡ್ಡಿ ನಾಗೇಶ್, ಅಕ್ಷರ ಬೆಳಿಗ್ಗೆ 10.30ಕ್ಕೆ, ದೇವಿ ಸ್ತೋತ್ರ ಪಠಣ ಸಂಜೆ 4ಕ್ಕೆ, ಸಂಗೀತಾಮೃತ ಸಂಜೆ: ಗಾಯನ: ವಿಜಯ್ ಹಾವನೂರು, ಗಣೇಶ ದೇಸಾಯಿ, ದಿವಾಕರ ಕಶ್ಯಪ್, ನರಸಿಂಹ ಹರೀಶ್, ಶ್ರೀದೇವಿ ಗರ್ತಿಕೆರೆ, ಚಾಂದಿನಿ ಗರ್ತಿಕೆರೆ, ಕಿ–ಬೋರ್ಡ್: ದುಶ್ಯಂತ್, ಕೊಳಲು: ಶಿವಲಿಂಗು, ತಬಲ: ಪ್ರೀತಂ ಹಳಬಂಡಿ, ರಿದಂ ಪ್ಯಾಡ್: ಶಶಿಧರ್ ಸಂಜೆ 5ಕ್ಕೆ, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ

ದೇವಿಗೆ ಸರಸ್ವತಿ ಅಲಂಕಾರ: ಅನ್ನದಾಸೋಹ ಬೆಳಿಗ್ಗೆ 11, ಸಂಗೀತ ಕಾರ್ಯಕ್ರಮ: ಶಂಕರ್ ಭಾರತೀಪುರ ಸಂಜೆ 7ಕ್ಕೆ, ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಕೆ.ಆರ್. ಪುರ

ವಚನ ನವರಾತ್ರಿ: ಆಶಯ ನುಡಿ: ಎಚ್.ಬಿ. ದಿವಾಕರ್, ‘ಯೋಗಶೀಲೆ ಮೋಳಿಗೆ ಮಹಾದೇವಿ’ ಕುರಿತು ಉಪನ್ಯಾಸ: ಕಲ್ಪನಾ ಮುದ್ದಣ್ಣ, ಅತಿಥಿಗಳು: ಚಿತ್ಕಲ ರವಿ, ಅಂಬಿಕ ಚಂದ್ರಶೇಖರ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ದೇವಿಗೆ ಶೃಂಗೇರಿ ಮಹಿಷಾಸುರ ಮರ್ದಿನಿ ಅಲಂಕಾರ: ಭಜನೆ, ಸಂಗೀತ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಮಾತಾ ಅನ್ನಪೂರ್ಣೇಶ್ವರಿ ದೇವಾಲಯ, ಬ್ಯಾಂಕ್ ಕಾಲೊನಿ, ಕೋಣನಕುಂಟೆ, ಸಂಜೆ 5.30ರಿಂದ

ದೇವಿಗೆ ಅಭಿಷೇಕ, ಚಾಮುಂಡೇಶ್ವರಿ ಅಲಂಕಾರ: ಲಲಿತಾ ಸಹಸ್ರನಾಮ ಪಾರಾಯಣ: ಆಯೋಜನೆ ಮತ್ತು ಸ್ಥಳ: ಬಂಡೆ ಮಹಾಕಾಳಿ ದೇವಾಲಯ ವಿಶ್ವಸ್ಥ ಮಂಡಳಿ, ಗುಟ್ಟಹಳ್ಳಿ, ಸಂಜೆ 6

ದುರ್ಗಾ ದೇವಿಗೆ ‘ಮಹಾಗೌರಿ ಅಲಂಕಾರ’: ನೃತ್ಯ ಸಂಭ್ರಮ: ಪುಷ್ಪಾಂಜಲಿ ಕಲಾ ಅಕಾಡೆಮಿ ತಂಡ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣಾ ರಾಜಪುರ, ಸಂಜೆ 6

ದೇವಿಗೆ ದುರ್ಗಾಷ್ಟಮಿ ಅಲಂಕಾರ: ಮಹಾ ನೀರಾಜನ, ತೀರ್ಥಪ್ರಸಾದ ವಿನಿಯೋಗ, ಲಲಿತ ಸಹಸ್ರನಾಮ ಪಾರಾಯಣ, ದೇವಿ ಸ್ತೋತ್ರ ಮಾಲೆ: ಲಕ್ಷ್ಮಿಭಾಸ್ಕರ್, ಆಯೋಜನೆ: ಸನಾತನ ಭಕ್ತ ಮಂಡಲಿ ಟ್ರಸ್ಟ್, ಸ್ಥಳ: ಕೋದಂಡ ರಾಮ ದೇವಸ್ಥಾನ, ವಿಜಯನಗರ, ಸಂಜೆ 6

ನವರಾತ್ರಿ ಸಾಂಸ್ಕೃತಿಕ ಸಿಂಚನ: ವೀಣಾ ವಾದನ: ಪ್ರಪಂಚಂ ರಂಗರಾವ್, ಆಯೋಜನೆ: ಬ್ರಾಹ್ಮಣ ಸಭಾ, ಸ್ಥಳ: ಗಾಯತ್ರಿ ಮಂದಿರ, ಕೆಂಗೇರಿ ಉಪನಗರ, ಸಂಜೆ 6ರಿಂದ

ದೇವಿಗೆ ಚಾಮುಂಡೇಶ್ವರಿ, ಪಂಚರಂಗಿ ಅಲಂಕಾರ: ನವಾಕ್ಷರಿ ಹೋಮ, ಆಯೋಜನೆ ಮತ್ತು ಸ್ಥಳ: ಮಾರಮ್ಮ ಆಂಜನೇಯಸ್ವಾಮಿ ಸೇವಾ ಟ್ರಸ್ಟ್, ಚಿನ್ನಯ್ಯನಪಾಳ್ಯ, ಸಂಜೆ 6

ಯಲ್ಲಮ್ಮ ದೇವಿಗೆ ತರಕಾರಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6.30

ದೇವಿಗೆ ಸಿಂಹವಾಹಿನಿ (ದುರ್ಗಾಷ್ಟಮಿ) ಅಲಂಕಾರ: ದುರ್ಗಾ ಹೋಮ, ಗಾಯನ: ಪವನ್ ರಂಗಾಚಾರ್, ಆಯೋಜನೆ ಮತ್ತು ಸ್ಥಳ: ಶೃಂಗೇರಿ ಶಂಕರಮಠ ಶಂಕರಪುರ, ಸಂಜೆ 7

50ನೇ ದಿನದತ್ತ ಕಾವೇರಿ ಹೋರಾಟ

ಪ್ರಜಾವಾಣಿ ವಾರ್ತೆ

ಮಂಡ್ಯ: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಚಳವಳಿ 50ನೇ ದಿನದತ್ತ ಸಾಗುತ್ತಿದೆ. ರಾಜ್ಯವನ್ನು ಕಾಡುತ್ತಿರುವ ಬರ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಬಿಡಬಾರದು ಎಂದು ರೈತರು ಒತ್ತಾಯಿಸುತ್ತಿದ್ದಾರೆ. ಆದರೆ, ರೈತರ ವಿರೋಧದ ನಡುವೆಯೂ ನಿತ್ಯ ತಮಿಳುನಾಡಿಗೆ ನೀರು ಹರಿದು ಹೋಗುತ್ತಿದೆ.

ಆ.31ರಂದು ನಿರಂತರ ಹೋರಾಟ ಆರಂಭಿಸಿದ ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯು ಎಲ್ಲಾ ಸಂಘಟನೆಗಳು ಒಂದೇ ವೇದಿಕೆಯಲ್ಲಿ ಒಗ್ಗಟ್ಟಿನ ಹೋರಾಟ ನಡೆಸುವಂತೆ ಕರೆ ನೀಡಿತು. ನಗರದ ಸರ್.ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ಆರಂಭಗೊಂಡ ಅನಿರ್ದಿಷ್ಟಾವಧಿ ಧರಣಿ ಶನಿವಾರಕ್ಕೆ 48 ದಿನ ಪೂರೈಸಿದ್ದು 50ನೇ ದಿನದತ್ತ ಸಾಗುತ್ತಿದೆ.

‘ಹೋರಾಟದ ಫಲವಾಗಿ ತಮಿಳುನಾಡಿಗೆ ನೀರು ಹರಿಸುತ್ತಿರುವ ಪ್ರಮಾಣ 3 ಸಾವಿರ ಕ್ಯೂಸೆಕ್‌ಗೆ ಇಳಿದಿದೆ. ಇಲ್ಲದಿದ್ದರೆ 5- 10 ಸಾವಿರ ಕ್ಯೂಸೆಕ್ ಹರಿಸುವ ಅನಿವಾರ್ಯತೆ ಬರುತ್ತಿತ್ತು’ ಎಂದು ಸಮಿತಿಯ ನಾಯಕಿ ಸುನಂದಾ ಜಯರಾಂ ಹೇಳಿದರು.

ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ ನಾಲ್ಕು ತಿಂಗಳು ಮೆಟ್ರೊ ಕಾಮಗಾರಿ

ಮೇಲ್ಸೇತುವೆ ಭಾಗಶಃ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ನೀಲಿ ಮಾರ್ಗದ ಕಾಮಗಾರಿಗಾಗಿ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್ ಮೇಲ್ಸೇತುವೆಯನ್ನು (ಮಡಿವಾಳ ಬದಿ) ಭಾಗಶಃ ಬಂದ್ ಮಾಡಲಾಗಿದೆ.

ಶನಿವಾರದಿಂದ ನಾಲ್ಕು ತಿಂಗಳು ಕಾಮಗಾರಿ ನಡೆಯಲಿದ್ದು, ರಸ್ತೆಯ ಅರ್ಧ ಭಾಗ ಮುಚ್ಚಲಾಗಿದೆ. ಇದರಿಂದ ವಾಹನದಟ್ಟಣೆ ಹೆಚ್ಚಾಗುವ ಸಾಧ್ಯತೆ ಇದೆ.

ಸಿಲ್ಕ್‌ಬೋರ್ಡ್‌ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗಿನ ನಮ್ಮ ಮೆಟ್ರೊ (ನೀಲಿ ಮಾರ್ಗ) 2026ರ ಒಳಗೆ ಪೂರ್ಣಗೊಳಿಸಬೇಕು. ಹೀಗಾಗಿ, ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್ ಮೇಲ್ಸೇತುವೆಯ ಕ್ಯಾರೇಜ್ ವೇ ಲೂಪ್‌ಗಳು ಮತ್ತು ಮೇಲೆ ಮತ್ತು ಕೆಳಗೆ ರ‍್ಯಾಂಪ್ ರ‍್ಯಾಂಪ್ ಮೇಲ್ಸೇತುವೆ ಸ್ಟೇಜಿಂಗ್ ಕಾಮಗಾರಿಯನ್ನು ಬಿಎಂಆರ್‌ಸಿಎಲ್ ಕೈಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಮೇಲ್ಸೇತುವೆಯಲ್ಲಿ 2.5 ಮೀಟರ್‌ನಷ್ಟು ರಸ್ತೆಗೆ ಶನಿವಾರ ಬ್ಯಾರಿಕೇಡ್ ಅಳವಡಿಸಿದೆ. ಮುಂದಿನ ನಾಲ್ಕು ತಿಂಗಳಲ್ಲಿ ಈ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ವಾಹನಗಳ ಸಂಚಾರ ಹೆಚ್ಚಿರುವ ಈ ಮಾರ್ಗದಲ್ಲಿ ಮೆಟ್ರೊ ಕಾಮಗಾರಿಯಿಂದ ವಾಹನದಟ್ಟಣೆ ಇನ್ನಷ್ಟು ಹೆಚ್ಚಲಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಈ ಕಾಮಗಾರಿಯಿಂದ ಸಾರ್ವಜನಿಕರಿಗೆ ಉಂಟಾಗುವ ಅನನುಕೂಲಕ್ಕೆ ಬಿಎಂಆರ್‌ಸಿಎಲ್ ವಿಷಾದ ವ್ಯಕ್ತಪಡಿಸಿದ್ದು, ಸಾರ್ವಜನಿಕರ ಸಹಕಾರ ಕೋರಿದೆ.



ಮೆಟ್ರೊ ಕಾಮಗಾರಿಗಾಗಿ ಬೆಂಗಳೂರು ಸಿಲ್ಕ್ ಬೋರ್ಡ್ ಜಂಕ್ಷನ್ ಮೇಲ್ಸೇತುವೆಯನ್ನು ಶನಿವಾರ ಭಾಗಶಃ ಬಂದ್ ಮಾಡಲಾಗಿತ್ತು –ಪ್ರಜಾವಾಣಿ ಚಿತ್ರ

ವನ್ಯಜೀವಿ ಛಾಯಾಚಿತ್ರ ಸ್ಪರ್ಧೆ: ವಿಹಾನ್‌ಗೆ ಪ್ರಶಸ್ತಿ


ಮೇಗನ್ ಮೆಕ್‌ಕಬ್ಬಿನ್ ಅವರಿಂದ ಪ್ರಶಸ್ತಿ ಪಡೆದ ವಿಹಾನ್ ತಾಳ್ಯ

ಬೆಂಗಳೂರು: ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂ ಲಂಡನ್‌ನಲ್ಲಿ ಆಯೋಜಿಸಿದ್ದ ವನ್ಯಜೀವಿ ವರ್ಷದ ಛಾಯಾಚಿತ್ರ ಸ್ಪರ್ಧೆಯಲ್ಲಿ, ಬೆಂಗಳೂರಿನ ಬಾಲಕ ವಿಹಾನ್ ತಾಳ್ಯ ವಿಜೇತರಾಗಿದ್ದಾರೆ.

10 ವರ್ಷ ಹಾಗೂ ಅದಕ್ಕಿಂತ ಕಡಿಮೆ ವರ್ಷದವರಿಗೆ ಹಮ್ಮಿಕೊಂಡಿದ್ದ ‘ವಾಲ್ ಆಫ್ ವಂಡರ್’ ವಿಭಾಗದಲ್ಲಿ ವಿಹಾನ್ ಈ ಸಾಧನೆ ಮಾಡಿದ್ದು, ವನ್ಯಜೀವಿ ಟಿವಿ ನಿರೂಪಕಿ ಹಾಗೂ ಪ್ರಾಣಿಶಾಸ್ತ್ರಜ್ಞೆ ಮೇಗನ್ ಮೆಕ್‌ಕಬ್ಬಿನ್ ಅವರು ಪ್ರಶಸ್ತಿ ಪ್ರದಾನ ಮಾಡಿದರು. ನಲ್ಲೂರು ಕೋಟೆಯ ಮೇಲಿನ ಕಲಾಕೃತಿಯ ಛಾಯಾಚಿತ್ರವನ್ನು ಸ್ಪರ್ಧೆಗೆ ಇರಿಸಲಾಗಿತ್ತು.

ರಾಜಾಜಿನಗರ ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಶಶಿಕುಮಾರ್

ಪ್ರಜಾವಾಣಿ ವಾರ್ತೆ


ಶಶಿಕುಮಾರ್

ಬೆಂಗಳೂರು: ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಧ್ಯಕ್ಷರಾಗಿ ಎಂ.ಆರ್. ಶಶಿಕುಮಾರ್ ಅವರು ನೇಮಕಗೊಂಡಿದ್ದಾರೆ. ಕ್ಷೇತ್ರದಲ್ಲಿ ಪಕ್ಷದ ಸಂಘಟನೆ ಹಾಗೂ ಬಲವರ್ಧನೆಗೆ ಶ್ರಮಿಸಬೇಕು ಎಂದು ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್‌ಗೌಡ ಆದೇಶದಲ್ಲಿ ತಿಳಿಸಿದ್ದಾರೆ.

24ಕ್ಕೆ ‘ಬನ್ನಿ ಬಂಗಾರ ಹಬ್ಬ’

ಬೆಂಗಳೂರು: ಉತ್ತರ ಕರ್ನಾಟಕ ನಾಗರಿಕರ ಅಭಿವೃದ್ಧಿ ಸಂಘವು ಇದೇ 24ರಂದು ಸಂಜೆ 6 ಗಂಟೆಗೆ ರಾಜಾಜಿನಗರದ ಬಸವೇಶ್ವರ ಪ್ರೌಢಶಾಲೆ ಆವರಣದಲ್ಲಿ ಉತ್ತರ ಕರ್ನಾಟಕದ ಸಂಸ್ಕೃತಿ ಮತ್ತು ಪರಂಪರೆ ಬಿಂಬಿಸುವ ‘ಬನ್ನಿ ಬಂಗಾರ ಹಬ್ಬ’ ಹಮ್ಮಿಕೊಂಡಿದೆ.

‘ವಿಜಯ ದಶಮಿ ನಿಮಿತ್ತ ಉತ್ತರ ಕರ್ನಾಟಕ ಭಾಗದಲ್ಲಿ ಒಬ್ಬರಿಗೊಬ್ಬರು ಆತ್ಮೀಯತೆ ಹಾಗೂ ಸೌಹಾರ್ದದ ಸಂಕೇತವಾಗಿ ಈ ಹಬ್ಬ ಆಚರಿಸುತ್ತಾರೆ. ಇಲ್ಲಿರುವ ಉತ್ತರ ಕರ್ನಾಟಕ ಭಾಗದ ಜನರೂ ಈ ಹಬ್ಬವನ್ನು ಆಚರಿಸುತ್ತಾ ಬಂದಿದ್ದಾರೆ. ರಾಜಾಜಿನಗರದ ಶಾಸಕ ಎಸ್. ಸುರೇಶಕುಮಾರ್ ಕಾರ್ಯಕ್ರಮ ಉದ್ಘಾಟಿಸುತ್ತಾರೆ’ ಎಂದು ಸಂಘದ ಅಧ್ಯಕ್ಷ ಮುರುಗೇಶ ಜವಳಿ ತಿಳಿಸಿದ್ದಾರೆ. ‘ರವಿ ಸಂತು ತಂಡದಿಂದ ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮ ಇರಲಿದೆ.

ಅಕ್ರಮ ವಿಲೇವಾರಿ ಮೇಲೆ ತೀವ್ರ ನಿಗಾ: ಬಿಬಿಎಂಪಿ ಅಭಿಯಾನ

ಕಟ್ಟಡ ತ್ಯಾಜ್ಯ: 575 ವಾಹನ ಜಪ್ತಿ

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ ಖಾಲಿ ನಿವೇಶನ, ಕೆರೆ ಪ್ರದೇಶ ಹಾಗೂ ಹೊರವಲಯದ ರಸ್ತೆಗಳ ಬದಿಯಲ್ಲಿ ಅಕ್ರಮವಾಗಿ ಕಟ್ಟಡ ತ್ಯಾಜ್ಯ ಸುರಿಯುತ್ತಿದ್ದ 575 ವಾಹನಗಳನ್ನು ಒಂದೇ ತಿಂಗಳಲ್ಲಿ ಬಿಬಿಎಂಪಿ ಜಪ್ತಿ ಮಾಡಿದೆ.

ಕಟ್ಟಡ ತ್ಯಾಜ್ಯವನ್ನು (ಸಿ ಆ್ಯಂಡ್ ಡಿ) ಸುರಿಯುತ್ತಿದ್ದ ವಾಹನಗಳ ಮೇಲೆ ಸೆಪ್ಟೆಂಬರ್‌ನಲ್ಲಿ ಕಠಿಣ ಕ್ರಮ ಕೈಗೊಂಡಿದ್ದ ಘನತ್ಯಾಜ್ಯ ನಿರ್ವಹಣೆ ವಿಭಾಗ, ₹4 ಲಕ್ಷಕ್ಕೂ ಹೆಚ್ಚು ದಂಡವನ್ನೂ ವಸೂಲಿ ಮಾಡಿತ್ತು. ಹೊರವಲಯದ ರಸ್ತೆಗಳ ಬದಿಯಲ್ಲಿ ಕಟ್ಟಡ ತ್ಯಾಜ್ಯವನ್ನು ಅಕ್ರಮವಾಗಿ ಸುರಿಯುತ್ತಿರುವವರ ಮೇಲೆ ಕ್ರಮ ಕೈಗೊಳ್ಳಲು ಬಿಬಿಎಂಪಿ ಅಭಿಯಾನ ಆರಂಭಿಸಿದೆ.

ಕಟ್ಟಡ ತ್ಯಾಜ್ಯ ಅಕ್ರಮ ವಿಲೇವಾರಿಗಾಗಿ ಸಂಚರಿಸುವ ಎಲ್ಲಾ ವಾಹನಗಳನ್ನು ಪಾಲಿಕೆಯ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಮಾರ್ಷಲ್ಸ್, ಮಾರ್ಷಲ್ ಸೂಪರವೈಸರ್ ತಪಾಸಣೆ ಮಾಡಬೇಕು. ನಿಯಮಾನುಸಾರ ದಂಡ ವಿಧಿಸಿ, ವಾಹನಗಳನ್ನು ವಶಪಡಿಸಿಕೊಂಡು ಹತ್ತಿರದ ಪೊಲೀಸ್ ಠಾಣೆಯ ಸುಪರ್ದಿಗೆ ನೀಡಬೇಕು ಎಂದು ಘನತ್ಯಾಜ್ಯ ನಿರ್ವಹಣೆ ವಿಭಾಗದ ಜಂಟಿ ಆಯುಕ್ತರು ಸೂಚಿಸಿದ್ದಾರೆ.

ನಗರದಲ್ಲಿ ಹಲವೆಡೆ ಕಾಮಗಾರಿಗಳು ನಡೆಯುತ್ತಿದ್ದು, ಸಾವಿರಾರು ಟನ್ 'ಸಿ ಆ್ಯಂಡ್ ಡಿ' ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಆದರೆ ಅದನ್ನು ಸಂಸ್ಕರಣೆ ಘಟಕಕ್ಕೆ ಕಳುಹಿಸುತ್ತಿಲ್ಲ. ಚಿಕ್ಕಜಾಲದಲ್ಲಿ ಪ್ರತಿ ದಿನ 1 ಸಾವಿರ ಮೆಟ್ರಿಕ್ ಟನ್ ಹಾಗೂ ಬಾಗಲೂರು ಬಳಿಯ ಕಣ್ಣೂರಿನಲ್ಲಿ 750 ಮೆಟ್ರಿಕ್ ಟನ್ ಸಾಮರ್ಥ್ಯದ ಸಂಸ್ಕರಣಾ ಘಟಕವಿದೆ. ಇವೆರಡು ಘಟಕಗಳಿಗೆ ದಿನಕ್ಕೆ ತಲಾ 100 ಮೆಟ್ರಿಕ್ ಟನ್ 'ಸಿ ಆ್ಯಂಡ್ ಡಿ' ತ್ಯಾಜ್ಯ ಮಾತ್ರ ಸೇರುತ್ತಿತ್ತು. ವಾಹನಗಳ ಜಪ್ತಿ ಹಾಗೂ ನಿಗಾವಹಿಸುವ ಕಾರ್ಯ ಹೆಚ್ಚಾಗಿರುವುದರಿಂದ, ಇದೀಗ 500 ಮೆಟ್ರಿಕ್ ಟನ್ ಸಂಸ್ಕರಣೆ ಘಟಕಗಳಿಗೆ ತಲುಪುತ್ತಿದೆ. ನಿಯಮದಂತೆ, ಪ್ರತಿ ಮೆಟ್ರಿಕ್ ಟನ್ 'ಸಿ ಆ್ಯಂಡ್ ಡಿ' ತ್ಯಾಜ್ಯಕ್ಕೆ ₹134 ಶುಲ್ಕ ಪಾವತಿಸಿ, ಸಂಸ್ಕರಣೆ ಘಟಕಕ್ಕೆ ನೀಡಬೇಕು.

ಯಾರಿಗೆ ಅನ್ವಯ?: ಬಿಎಂಆರ್‌ಸಿಎಲ್, ಎನ್‌ಎಚ್‌ಎಐ, ಭಾರತೀಯ ರೈಲ್ವೆ, ವಿಮಾನ ನಿಲ್ದಾಣ ಪ್ರಾಧಿಕಾರಗಳು, ಟೆಲಿಕಾಂ ಆಪರೇಟರ್‌ಗಳು, ಸಿಪಿಡಬ್ಲ್ಯುಡಿ, ಜಿಎಐಎಲ್, ಬಿಬಿಎಂಪಿ, ಬಿಡಬ್ಲ್ಯುಎಸ್‌ಎಸ್‌ಬಿ, ಬೆಸ್ಕಾಂ, ಕೆಪಿಟಿಸಿಎಲ್, ಬಿಡಿಎ, ಪಿಡಬ್ಲ್ಯುಡಿ ಇಲಾಖೆಗಳು 'ಸಿ ಆ್ಯಂಡ್ ಡಿ' ತ್ಯಾಜ್ಯವನ್ನು ಕಡ್ಡಾಯವಾಗಿ ಸಂಸ್ಕರಣೆ ಘಟಕಗಳಿಗೇ ಸಾಗಿಸಬೇಕು. ಆದರೆ, ಈ ಇಲಾಖೆಗಳು ನಿಯಮಗಳನ್ನು ಪಾಲಿಸುತ್ತಿಲ್ಲ. ಜತೆಗೆ ಬೃಹತ್ ಕಟ್ಟಡಗಳು, ಮನೆಗಳ ನಿರ್ಮಾಣ ಹಾಗೂ ತೆರವಿನ ನಂತರವೂ ತ್ಯಾಜ್ಯ, ಸಂಸ್ಕರಣೆ ಘಟಕಗಳಿಗೆ ತಲುಪುತ್ತಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಬಿಬಿಎಂಪಿ, ತೀವ್ರ ನಿಗಾವಹಿಸಿದೆ.

ಮರುಬಳಕೆಯೂ ಇಲ್ಲ: ಕಟ್ಟಡ ನಿರ್ಮಾಣ ಕಾಮಗಾರಿ, ರಸ್ತೆ ಕಾಮಗಾರಿಗಳಲ್ಲಿ ಸಂಸ್ಕರಿತ ಮರುಬಳಕೆ ಉತ್ಪನ್ನಗಳಾದ ಸ್ಕ್ರೀನ್ಡ್ ಮರಳು ಮತ್ತು ಗ್ರಾನುಲರ್ ಸಬ್‌ಬೇಸ್ ಅನ್ನು ಕನಿಷ್ಠ ಶೇ 20ರಷ್ಟು ಬಳಸಬೇಕು ಎಂಬ ನಿಯಮವಿದೆ. ಇದನ್ನು ಟೆಂಡರ್‌ಗಳ ಷರತ್ತಿನಲ್ಲಿ ಅಳವಡಿಸ ಬೇಕು. ಈ ನಿಯಮಗಳನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ಇದನ್ನು ಉಲ್ಲಂಘಿಸಿದವರ ಮೇಲೆ ಪರಿಸರ ಸಂರಕ್ಷಣೆ ಕಾಯ್ದೆ 1986 ಹಾಗೂ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976 ಮತ್ತು ಅನ್ವಯವಾಗುವ ಎಲ್ಲ ಕಾನೂನುಗಳಂತೆ ಕ್ರಮ ಕೈಗೊಳ್ಳಬೇಕು ಎಂದೂ ಸೂಚಿಸಲಾಗಿದೆ. ಆದರೆ ಬಿಬಿಎಂಪಿ ಸೇರಿದಂತೆ ಯಾವ ಇಲಾಖೆಗಳೂ ಈ ನಿಯಮವನ್ನು ಪಾಲಿಸುತ್ತಿಲ್ಲ.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎರಡು 'ಸಿ ಆ್ಯಂಡ್ ಡಿ' ತ್ಯಾಜ್ಯ ಸಂಸ್ಕರಣೆ ಘಟಕಗಳಲ್ಲಿ ಮರಳು ಹಾಗೂ ಗ್ರಾನುಲರ್ ಸಬ್‌ಬೇಸ್ ತಲಾ 7 ಸಾವಿರ ಮೆಟ್ರಿಕ್ ಟನ್‌ನಷ್ಟು ಲಭ್ಯವಿದೆ ಎಂದು ಘಟಕದ ಅಧಿಕಾರಿಗಳು ಹೇಳಿದರು.


ನಗರದ ಹೊರವಲಯದ ರಸ್ತೆ ಬದಿಯಲ್ಲಿ ಸುರಿದಿರುವ ಕಟ್ಟಡ ತ್ಯಾಜ್ಯ

ತ್ಯಾಜ್ಯ ವಿಲೇವಾರಿ ನಿರ್ವಹಣೆಗೆ ಆ್ಯಪ್

ಬಿಬಿಎಂಪಿ ಹಾಗೂ ಹೊರವಲಯದ ವ್ಯಾಪ್ತಿಯಲ್ಲಿ ಕಟ್ಟಡ ತ್ಯಾಜ್ಯ ವಿಲೇವಾರಿಗಾಗಿ ಮೊಬೈಲ್ ಆ್ಯಪ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಎಲ್ಲಿ ಕಟ್ಟಡ ತ್ಯಾಜ್ಯ ಉತ್ಪತ್ತಿಯಾಗುತ್ತದೆಯೋ ಅಲ್ಲಿಂದ ಸಂಸ್ಕರಣೆ ಘಟಕಕ್ಕೆ ರವಾನಿಸಲು ಹಾಗೂ ಅದಕ್ಕೆ ಶುಲ್ಕ ಪಾವತಿಸುವ ಸೌಲಭ್ಯ ಇದರಲ್ಲಿ ಇರಲಿದೆ. ಕಟ್ಟಡ ತ್ಯಾಜ್ಯವನ್ನು ಸಂಸ್ಕರಣೆ ಘಟಕಕ್ಕೆ ಕೊಂಡೊಯ್ಯಲು ಈ ಆ್ಯಪ್‌ನಲ್ಲಿ ಆಸ್ತಿ ಮಾಲೀಕರು ಅಥವಾ ಗುತ್ತಿಗೆದಾರರು ಮನವಿ ಸಲ್ಲಿಸಿದರೆ, ವಾಹನ ನಿಗದಿಯಿಂದ ಹಿಡಿದು ಎಲ್ಲ ಪ್ರಕ್ರಿಯೆಗಳನ್ನೂ ಇದರಲ್ಲೇ ನಿರ್ವಹಿಸಬಹುದು. ಈ ಆ್ಯಪ್ ಪ್ರಾಯೋಗಿಕ ಹಂತದಲ್ಲಿದ್ದು, ಶೀಘ್ರವೇ ಎಲ್ಲರ ಬಳಕೆಗೆ ಲಭ್ಯವಾಗಲಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಕ್ರಿಮಿನಲ್ ಪ್ರಕರಣದ ಎಚ್ಚರಿಕೆ

'ಸಿ ಆ್ಯಂಡ್ ಡಿ' ತ್ಯಾಜ್ಯ ಅಕ್ರಮ ವಿಲೇವಾರಿಗೆ ಕಡಿವಾಣ ಹಾಕಲು ನಿರ್ಧರಿಸಲಾಗಿದೆ. ಇದಕ್ಕಾಗಿ ಆಯಾ ಭಾಗದ ಅಧಿಕಾರಿಗಳಿಗೆ ಜವಾಬ್ದಾರಿ ವಹಿಸಲಾಗಿದೆ. ಯಾವುದೇ ಕಾರಣಕ್ಕೂ ಈ ತ್ಯಾಜ್ಯವನ್ನು ಎಲ್ಲೆಂದರಲ್ಲಿ ವಿಲೇವಾರಿ ಮಾಡಲು ಬಿಡುವುದಿಲ್ಲ. ನಗರವನ್ನು ಸ್ವಚ್ಛವಾಗಿರಿಸಿಕೊಳ್ಳುವ ಜವಾಬ್ದಾರಿ ನಾಗರಿಕರ ಮೇಲೂ ಇದೆ. ಅವರೆಲ್ಲರೂ ನಮ್ಮೊಂದಿಗೆ ಸಹಕರಿಸಬೇಕು. ಇಲ್ಲದಿದ್ದರೆ ಕ್ರಿಮಿನಲ್ ಪ್ರಕರಣ ಎದುರಿಸಬೇಕಾಗುತ್ತದೆ ಎಂದು ಬಿಬಿಎಂಪಿ ಘನತ್ಯಾಜ್ಯ ಘಟಕದ ಜಂಟಿ ಆಯುಕ್ತೆ ಆರ್. ಪ್ರತಿಭಾ ತಿಳಿಸಿದರು.

ಠಾಣೆ ಮೇಲೆ ಲೋಕಾಯುಕ್ತ ದಾಳಿ ಹೆಡ್‌ಕಾನ್‌ಸ್ಟೇಬಲ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರ ಪೊಲೀಸ್ ಠಾಣೆ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ಮಾಡಿದ್ದು, ₹ 50 ಸಾವಿರ ಲಂಚ ಪಡೆಯುತ್ತಿದ್ದ ಹೆಡ್ ಕಾನ್‌ಸ್ಟೆಬಲ್ ಆಂಜನೇಯ ಅವರನ್ನು ಬಂಧಿಸಿದ್ದಾರೆ.

'ಹಲ್ಲೆ ಪ್ರಕರಣದಲ್ಲಿ ಬಿ–ರಿಪೋರ್ಟ್ ಸಲ್ಲಿಸಲು ₹ 50 ಸಾವಿರ ಲಂಚಕ್ಕೆ ಠಾಣೆಯ ಪೊಲೀಸರು ಬೇಡಿಕೆ ಇರಿಸಿದ್ದರು. ಈ ಸಂಬಂಧ ಸಲ್ಲಿಕೆಯಾದ ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು. ಲಂಚ ಪಡೆಯುವಾಗಲೇ ಠಾಣೆಯ ಬರಹಗಾರನೂ ಆಗಿದ್ದ ಹೆಡ್ ಕಾನ್‌ಸ್ಟೆಬಲ್ ಆಂಜನೇಯ ಸಿಕ್ಕಿಬಿದ್ದ' ಲೋಕಾಯುಕ್ತ ಪೊಲೀಸ್ ಮೂಲಗಳು ಹೇಳಿವೆ.

'ಕಾರಿನ ವಿಚಾರವಾಗಿ ಮಹಿಳೆ ಹಾಗೂ ಸಾಗರ್–ಅವರ ತಂದೆ ನಡುವೆ ಗಲಾಟೆ ಆಗಿತ್ತು. ಹಲ್ಲೆ ಆರೋಪದಡಿ ಸಾಗರ್–ತಂದೆ ವಿರುದ್ಧ ಮಹಿಳೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, 'ನ್ಯಾಯಾಲಯಕ್ಕೆ ಬಿ–ರಿಪೋರ್ಟ್ ಸಲ್ಲಿಸಲಾಗುವುದು. ಇದಕ್ಕಾಗಿ ₹ 50 ಸಾವಿರ ಲಂಚ ನೀಡಬೇಕು' ಎಂದು ಬೇಡಿಕೆ ಇರಿಸಿದ್ದರು. ಲಂಚದ ಸಂಬಂಧ ಸಾಗರ್ ದೂರು ನೀಡಿದ್ದರು.'

'ಸಾಗರ್ ಅವರಿಂದ ಹೆಡ್ ಕಾನ್‌ಸ್ಟೆಬಲ್ ಆಂಜನೇಯ ₹ 50 ಸಾವಿರ ಲಂಚ ಪಡೆಯುತ್ತಿದ್ದ ಸಂದರ್ಭದಲ್ಲಿ ದಾಳಿ ಮಾಡಿ ಬಂಧಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಲಂಚದ ಪ್ರಕರಣದಲ್ಲಿ ಇನ್‌ಸ್ಪೆಕ್ಟರ್ ಲಕ್ಷ್ಮಣ್ ಗೌಡ ಹಾಗೂ ಪಿಎಸ್‌ಐ ಮಾರುತಿ ಪಾತ್ರವೂ ಇದೆ. ದಾಳಿ ಮಾಡುತ್ತಿದ್ದಂತೆ ಅವರಿಬ್ಬರು ತಲೆಮರೆಸಿಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಯುವತಿಯ ಅಂಗಾಂಗ ಮುಟ್ಟಿ ದೌರ್ಜನ್ಯ

ಬೆಂಗಳೂರು: ಆಟೊದಲ್ಲಿ ಕುಳಿತಿದ್ದ ಯುವತಿಯೊಬ್ಬರ ಅಂಗಾಂಗ ಮುಟ್ಟಿ ಲೈಂಗಿಕ ದೌರ್ಜನ್ಯ ಎಸಗಲಾಗಿದ್ದು, ಈ ಸಂಬಂಧ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬ್ರಿಗೇಡ್ ರಸ್ತೆಯಲ್ಲಿ ಅ. 16ರಂದು ತಡರಾತ್ರಿ ನಡೆದಿರುವ ಘಟನೆ ಬಗ್ಗೆ 28 ವರ್ಷದ ಯುವತಿ ದೂರು ನೀಡಿದ್ದಾರೆ. ಇಬ್ಬರು ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹೇರ್ ಸಲೂನ್‌ವೊಂದರಲ್ಲಿ ವ್ಯವಸ್ಥಾಪಕರಾಗಿರುವ ಯುವತಿ, ಅ. 16ರಂದು ರಾತ್ರಿ ಬ್ರಿಗೇಡ್ ರಸ್ತೆಗೆ ಬಂದಿದ್ದರು. ತಡರಾತ್ರಿ ಮನೆಗೆ ತೆರಳಲು ಆಟೊ ಹತ್ತಿ ಕುಳಿತಿದ್ದರು. ಈ ವೇಳೆ ದ್ವಿಚಕ್ರ ವಾಹನದಲ್ಲಿ ಬಂದಿದ್ದ ಇಬ್ಬರು ಆರೋಪಿಗಳು, ಯುವತಿಯ ಅಂಗಾಂಗಗಳನ್ನು ಮುಟ್ಟಿ ಪರಾರಿಯಾಗಿದ್ದಾರೆ.'

'ಘಟನೆಯಿಂದ ಹೆದರಿದ್ದ ಯುವತಿ, ಸ್ನೇಹಿತರು ಹಾಗೂ ಪೋಷಕರಿಗೆ ವಿಷಯ ತಿಳಿಸಿದ್ದರು. ನಂತರ ಠಾಣೆಗೆ ಬಂದು ದೂರು ನೀಡಿದ್ದಾರೆ. ಆರೋಪಿಗಳ ಪತ್ತೆಗಾಗಿ, ಘಟನಾ ಸ್ಥಳದಲ್ಲಿರುವ ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಕೈದಿಯ ಒಳ ಉಡುಪಿನಲ್ಲಿದ್ದ ಮೊಬೈಲ್ ಜಪ್ತಿ

ಅಪರಾಧ ಸುದ್ದಿ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಕೈದಿಯೊಬ್ಬರ ಬಳಿ ಮೊಬೈಲ್ ಹಾಗೂ ಬ್ಯಾಟರಿ ಜಪ್ತಿ ಮಾಡಲಾಗಿದ್ದು, ಎಫ್‌ಐಆರ್ ದಾಖಲಾಗಿದೆ.

'ವಿಚಾರಣಾಧೀನ ಕೈದಿ ಸೈಯದ್ ಶಬಾಜ್ ಬಳಿ ಮೊಬೈಲ್, ಬ್ಯಾಟರಿ ಪತ್ತೆಯಾಗಿದೆ. ಜೈಲಿನ ಅಧಿಕಾರಿಗಳು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕೈದಿ ಸೈಯದ್ ಶಬಾಜ್‌ನನ್ನು ಇತ್ತೀಚೆಗೆ ವಿಚಾರಣೆಗೆಂದು ನ್ಯಾಯಾಲಯಕ್ಕೆ ಕರೆದೊಯ್ಯಲಾಗಿತ್ತು. ವಿಚಾರಣೆ ಮುಗಿದ ನಂತರ, ಕಾರಾಗೃಹಕ್ಕೆ ಕರೆತರಲಾಗಿತ್ತು. ತಪಾಸಣೆ ನಡೆಸಿದಾಗ, ಒಳ ಉಡುಪಿನಲ್ಲಿ ಮೊಬೈಲ್ ಹಾಗೂ ಬ್ಯಾಟರಿ ಸಿಕ್ಕಿವೆ. ಕಾನೂನು ಬಾಹಿರ ಕೃತ್ಯ ಎಸಗಲು ಸೈಯದ್ ಸಂಚು ರೂಪಿಸಿದ್ದ ಮಾಹಿತಿ ಇದೆ' ಎಂದು ಮೂಲಗಳು ತಿಳಿಸಿವೆ.

1,400 ಮಂದಿಗೆ ₹6 ಕೋಟಿ ವಂಚನೆ: ತಂದೆ–ಮಗನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಪ್ಟೊ ಕರೆನ್ಸಿ ಹೂಡಿಕೆ ಹೆಸರಿನಲ್ಲಿ ಜನರಿಂದ ಹಣ ಪಡೆದು ವಂಚಿಸುತ್ತಿದ್ದ ತಂದೆ – ಮಗ ಸೇರಿ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಸತೀಶ್, ಅವರ ಮಗ ಶ್ರೀಕಾಂತ್ ಹಾಗೂ ಸಹಚರ ದೀಪಕ್ ಬಂಧಿತರು. ಹೂಡಿಕೆ ಹೆಸರಿನಲ್ಲಿ ಹಣ ಪಡೆದು ವಂಚಿಸಿದ್ದ ಬಗ್ಗೆ ಸಂತ್ರಸ್ತರು ದೂರು ನೀಡಿದ್ದರು. ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಜಿಜಿ ಆನ್‌ಲೈನ್ ಕಂಪನಿ ತೆರೆದಿದ್ದ ಆರೋಪಿಗಳು, ಇದುವರೆಗೂ 1,400 ಜನರಿಂದ ಸುಮಾರು ₹ 6 ಕೋಟಿ ಪಡೆದು ವಂಚಿಸಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿವೆ.

ಜಿಜಿಒ ಕರೆನ್ಸಿ: 'ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ಕಚೇರಿ ತೆರೆದಿದ್ದ ಆರೋಪಿಗಳು, ಜಿಜಿಒ ಹೆಸರಿನಲ್ಲಿ ಹೊಸ ಕರೆನ್ಸಿ ಪರಿಚಯಿಸುತ್ತಿರುವುದಾಗಿ ಹೇಳಿದ್ದರು. ಜಿಜಿಒ ಕರೆನ್ಸಿಯನ್ನು, ಕ್ರಿಪ್ಟೊ ಕರೆನ್ಸಿಗಳ ಪಟ್ಟಿಗೆ ಸೇರಿಸುವ ಕೆಲಸ ನಡೆಯುತ್ತಿರುವುದಾಗಿ ಹೇಳಿ ಜನರನ್ನು ನಂಬಿಸುತ್ತಿದ್ದರು' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಅಂತರರಾಷ್ಟ್ರೀಯ ಕ್ರಿಪ್ಟೊ ಕರೆನ್ಸಿ ವಿನಿಮಯ ಕೇಂದ್ರದಲ್ಲಿ ಜಿಜಿಒ ಕರೆನ್ಸಿ ನೋಂದಣಿ ಪ್ರಕ್ರಿಯೆ ನಡೆಯುತ್ತಿದೆ. ಸದ್ಯ ಹಣ ಹೂಡಿಕೆ ಮಾಡಿ ಜಿಜಿಒ ಕರೆನ್ಸಿ ಖರೀದಿಸಿದರೆ, ಮುಂದಿನ ದಿನಗಳಲ್ಲಿ ದುಪ್ಪಟ್ಟು ಲಾಭ ಗಳಿಸಬಹುದು' ಎಂಬುದಾಗಿಯೂ ಆರೋಪಿಗಳು ಹೇಳಿದ್ದರು. ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸ್‌ಆ್ಯಪ್ ಸೇರಿದಂತೆ ಹಲವು ಸಾಮಾಜಿಕ ಮಾಧ್ಯಮಗಳಲ್ಲೂ ಜಾಹೀರಾತು ನೀಡಿದ್ದರು.'

'ಜಾಹೀರಾತು ನಂಬಿ ಆರೋಪಿಗಳನ್ನು ಸಂಪರ್ಕಿಸಿದ್ದ ಕೆಲವರು, ಹಣ ಹೂಡಿಕೆ ಮಾಡಿ ಕರೆನ್ಸಿ ಖರೀದಿಸಿದ್ದರು. ಮತ್ತಷ್ಟು ಜನರನ್ನು ಕರೆತಂದರೆ ಶೇ 15ರಷ್ಟು ಕಮಿಷನ್ ನೀಡುವುದಾಗಿ ಆರೋಪಿಗಳು ಹೇಳಿದ್ದರು. ಇದೇ ಕಾರಣಕ್ಕೆ ಹೂಡಿಕೆದಾರರು, ಪರಿಚಯಸ್ಥರು ಹಾಗೂ ಸ್ನೇಹಿತರಿಂದಲೂ ಕಂಪನಿಯಲ್ಲಿ ಹಣ ಹೂಡಿಕೆ ಮಾಡಿಸಿದ್ದರು. ಎಲ್ಲರಿಗೂ ಜಿಜಿಒ ಕರೆನ್ಸಿ ನೀಡಿದ್ದರು. ಆನ್‌ಲೈನ್ ಮೂಲಕ ಕರೆನ್ಸಿ ವ್ಯವಹಾರ ನಡೆಸುವ ತರಬೇತಿಯನ್ನೂ ನೀಡಿದ್ದರು.'

'ಹಲವು ದಿನವಾದರೂ ಹೂಡಿಕೆದಾರರಿಗೆ ಯಾವುದೇ ಲಾಭ ಬಂದಿರಲಿಲ್ಲ. ಈ ಬಗ್ಗೆ ವಿಚಾರಿಸಿದಾಗ, ಆರೋಪಿಗಳು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ನೊಂದ ಸಂತ್ರಸ್ತರು ಠಾಣೆಗೆ ದೂರು ನೀಡಿದ್ದರು' ಎಂದು ಸಿಸಿಬಿ ಮೂಲಗಳು ಹೇಳಿವೆ.

ಮನೆ ಮೇಲೆ ದಾಳಿ: ₹2 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ದೊಡ್ಡ ನಾಗಮಂಗಲದ ವೀರಭದ್ರಸ್ವಾಮಿ ಬಡಾವಣೆಯಲ್ಲಿರುವ ಮನೆಯೊಂದರ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ₹2.04 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

'ಮನೆಯಲ್ಲಿ ಡ್ರಗ್ಸ್ ಸಂಗ್ರಹಿಸಿಟ್ಟುಕೊಂಡು ಪರಿಚಯಸ್ಥ ಗ್ರಾಹಕರಿಗೆ ಮಾರಲಾಗುತ್ತಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ನೈಜೀರಿಯಾ ಪ್ರಜೆಯೊಬ್ಬನನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ನೈಜೀರಿಯಾದ ವಿಕ್ಟರ್ ಒಬಿನ್ನಾ ಚುಕ್ವುಡಿ ಬಂಧಿತ. ಈತನಿಂದ 2 ಕೆ.ಜಿ 43 ಗ್ರಾಂ ಎಂಡಿಎಂಎ ಡ್ರಗ್ಸ್, ಎರಡು ಮೊಬೈಲ್, ತೂಕದ ಯಂತ್ರ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿವೆ.

ದೆಹಲಿಯಿಂದ ಡ್ರಗ್ಸ್ ತರಿಸುತ್ತಿದ್ದ: 'ಆರೋಪಿ ವಿಕ್ಟರ್ ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದಾನೆ. ವೀರಭದ್ರಸ್ವಾಮಿ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ನೈಜೀರಿಯಾದ ಪೆಡ್ಲರ್ ಮೆಸ್ಸೊ ಎಂಬಾತ ದೆಹಲಿಯಲ್ಲಿದ್ದಾನೆ. ಆತನ ಜೊತೆ ಒಡನಾಟ ಇಟ್ಟುಕೊಂಡಿದ್ದ ವಿಕ್ಟರ್, ಡ್ರಗ್ಸ್ ತರಿಸುತ್ತಿದ್ದ. ಅದನ್ನು ಬಾಡಿಗೆ ಮನೆಯಲ್ಲಿ ಸಂಗ್ರಹಿಸಿ ಟ್ಟುಕೊಂಡು, ಪೊಟ್ಟಣಗಳಲ್ಲಿ ತುಂಬಿ ಮಾರುತ್ತಿದ್ದರು. ಹಲವು ಪಾರ್ಟಿಗಳಿಗೂ ಡ್ರಗ್ಸ್ ಪೂರೈಸುತ್ತಿದ್ದ ಮಾಹಿತಿ ಇದೆ. ಮೆಸ್ಸೊ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ತಿಳಿಸಿವೆ.

ಪಾಲಿಕೆ ಸಿಬ್ಬಂದಿ ಬೆದರಿಸಿ ವಿಡಿಯೊ: ಆರೋಪಿ ವಶಕ್ಕೆ

ಬೆಂಗಳೂರು: ಬಿಬಿಎಂಪಿ ಪಶ್ಚಿಮ ವಲಯ ನಗರ ಯೋಜನೆ ವಿಭಾಗದ ಕಚೇರಿಗೆ ನುಗ್ಗಿ ಬಾಗಿಲುಗಳನ್ನು ಬಂದ್ ಮಾಡಿ ಸಿಬ್ಬಂದಿಯನ್ನು ಬೆದರಿಸಿ ವಿಡಿಯೊ ಚಿತ್ರೀಕರಣ ಮಾಡಿದ್ದ ಆರೋಪದಡಿ ಅರುಣ್ ಕುಮಾರ್ ಅವರನ್ನು ಶೇಷಾದ್ರಿಪುರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. 'ಅ. 18ರಂದು ಸಂಜೆ ನಡೆದಿದ್ದ ಘಟನೆ ಸಂಬಂಧ ಸಿಬ್ಬಂದಿ ದೂರು ನೀಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಮಾಹಿತಿ ಹಕ್ಕು ಕಾರ್ಯಕರ್ತರೊಬ್ಬರು ತಲೆಮರೆಸಿಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

'ಅರುಣ್‌ಕುಮಾರ್ ಹಾಗೂ ಮಾಹಿತಿ ಹಕ್ಕು ಕಾರ್ಯಕರ್ತರೊಬ್ಬರು ಕಚೇರಿಗೆ ಹೋಗಿದ್ದರು. ಮಾಹಿತಿ ನೀಡುವ ವಿಚಾರಕ್ಕೆ ಸಂಬಂಧಪಟ್ಟಂತೆ ಸಿಬ್ಬಂದಿ ಜೊತೆ ವಾಗ್ವಾದ ನಡೆದಿತ್ತು. ಇದೇ ಸಂದರ್ಭದಲ್ಲಿ ಅರುಣ್‌ಕುಮಾರ್ ಹಾಗೂ ಕಾರ್ಯಕರ್ತ, ಕಚೇರಿ ಬಾಗಿಲು ಬಂದ್ ಮಾಡಿದ್ದರು. ಸಿಬ್ಬಂದಿಯನ್ನು ಬೆದರಿಸಿ ವಿಡಿಯೊ ಚಿತ್ರೀಕರಿಸಿದ್ದರು. ಕೆಲ ಹೊತ್ತಿನ ನಂತರ, ಸಿಬ್ಬಂದಿ ಹೊರಗೆ ಬಂದಿದ್ದರು' ಎಂದು ತಿಳಿಸಿವೆ.

₹67.57 ಲಕ್ಷ ಮೌಲ್ಯದ ಚಿನ್ನ ವಶ: ಬೆರಗಾದ ಕಸ್ಟಮ್ಸ್ ಅಧಿಕಾರಿಗಳು

ಗುದದ್ವಾರದಲ್ಲಿ ಚಿನ್ನ ಸಾಗಣೆ!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶುಕ್ರವಾರ ತಡರಾತ್ರಿ ಹಾಗೂ ಶನಿವಾರ ಬೆಳಗ್ಗೆ ಮಲೇಷ್ಯಾ, ಕ್ವಾಲಾಲಂಪುರ ಮತ್ತು ಕುವೈತ್‌ನಿಂದ ಬಂದ ಮೂವರು ಪ್ರಯಾಣಿಕರಿಂದ ಅಕ್ರಮವಾಗಿ ತಂದ ಚಿನ್ನವನ್ನು ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಮೂವರು ಆರೋಪಿಗಳಿಂದ ₹67.57 ಲಕ್ಷ ಮೌಲ್ಯದ ಚಿನ್ನ ವಶ ಪಡಿಸಿಕೊಳ್ಳಲಾಗಿದೆ.

ರವಿಕೆಯಲ್ಲಿ ಪೇಸ್ಟ್ ಚಿನ್ನ: ಕ್ವಾಲಾಲಂಪುರದಿಂದ ಇಲ್ಲಿನ ವಿಮಾನ ನಿಲ್ದಾಣಕ್ಕೆ ಬಂದ ಭಾರತೀಯ ಮೂಲದ ಮಹಿಳೆಯೊಬ್ಬರು ತೊಟ್ಟಿದ್ದ ರವಿಕೆಯಲ್ಲಿ 301 ಗ್ರಾಂ ಪೇಸ್ಟ್ ರೂಪದ ಚಿನ್ನ ಇತ್ತು. ರವಿಕೆಯಿಂದ ಹೊರ ತೆಗೆದ ಚಿನ್ನದ ಮೌಲ್ಯ ₹17.90 ಲಕ್ಷ ಎಂದು ಅಂದಾಜಿಸಲಾಗಿದೆ. ರವಿಕೆಯ ಒಳ ಮತ್ತು ಹೊರ ಪದರಿನ ನಡುವೆ ಹಾಳೆಯಂತೆ ಚಿನ್ನದ ಪೇಸ್ಟ್ ಮೆತ್ತಿ ಹೊಲಿಗೆ ಹಾಕಲಾಗಿತ್ತು. ಇದನ್ನು ಕಂಡು ಕಸ್ಟಮ್ಸ್ ಅಧಿಕಾರಿಗಳು ಆಶ್ಚರ್ಯಗೊಂಡಿದ್ದಾರೆ.


ಗುದದ್ವಾರದಲ್ಲಿ ಅರ್ಧ ಕೆ.ಜಿ ಚಿನ್ನ: ಇದೇ ವಿಮಾನದಲ್ಲಿ ಬಂದಿದ್ದ ಮಲೇಷ್ಯಾ ಮೂಲದ ಮಹಿಳೆ ಗುದದ್ವಾರದಲ್ಲಿ ನಾಲ್ಕು ಕ್ಯಾಪ್ಸೂಲ್‌ಗಳಲ್ಲಿ ಒಟ್ಟು 578.27 ಗ್ರಾಂ ಚಿನ್ನವನ್ನು ಅಡಗಿಸಿಟ್ಟುಕೊಂಡು ಬಂದಿದ್ದರು. ವೈದ್ಯರ ಸಹಾಯದಿಂದ ಕ್ಯಾಪ್ಸೂಲ್ ಹೊರತೆಗೆಯಲಾಯಿತು. ಕ್ಯಾಪ್ಸೂಲ್‌ಗಳಲ್ಲಿ ಇಡಲಾಗಿದ್ದ ಅರ್ಧ ಕೆ.ಜಿ. ಚಿನ್ನದ ಮೌಲ್ಯ ₹34.40 ಲಕ್ಷ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಗುದದ್ವಾರದಿಂದ ಹೊರ ತೆಗೆದ ಚಿನ್ನ ಅಡಗಿಸಿಟ್ಟಿದ್ದ ಕ್ಯಾಪ್ಸೂಲ್


ಡ್ರೈ ಫ್ರೂಟ್ಸ್‌ನಲ್ಲಿ ದೊರೆತ ಚಿನ್ನದ ಸಣ್ಣ, ಸಣ್ಣ ಗಟ್ಟಿಗಳು

ಡ್ರೈ ಫ್ರೂಟ್ಸ್‌ನಲ್ಲಿ ಚಿನ್ನ

ಕುವೈತ್‌ನಿಂದ ಬಂದ ಭಾರತೀಯ ಮೂಲದ ಪ್ರಯಾಣಿಕರೊಬ್ಬರು ಚಿನ್ನವನ್ನು ಸಣ್ಣ, ಸಣ್ಣದಾಗಿ ತುಂಡುಗಳನ್ನಾಗಿ ಕತ್ತರಿಸಿ ಗೋಡಂಬಿ, ಬಾದಾಮಿ, ಪಿಸ್ತಾಗಳ ಪೊಟ್ಟಣದಲ್ಲಿ ಸೇರಿಸಿ ಅಧಿಕಾರಿಗಳನ್ನು ಯಾಮಾರಿಸಲು ಯತ್ನಿಸಿ ಸಿಕ್ಕಿಬಿದ್ದರು. ತಪಾಸಣೆಯ ವೇಳೆಯಲ್ಲಿ ಡ್ರೈ ಫ್ರೂಟ್ಸ್ ಪೊಟ್ಟಣದಲ್ಲಿ ಸಣ್ಣ ಸಣ್ಣ ಚಿನ್ನದ ತುಂಡುಗಳು ಪತ್ತೆಯಾದವು. ಎಲ್ಲವನ್ನೂ ತೂಕ ಮಾಡಿದಾಗ 254 ಗ್ರಾಂ ತೂಗಿದವು. ಇದರ ಮೌಲ್ಯ ₹15.26 ಲಕ್ಷ ಎಂದು ಅಂದಾಜಿಸಲಾಗಿದೆ. ಇದೇ ಪ್ರಯಾಣಿಕರಿಂದ ₹1.49 ಲಕ್ಷ ಮೌಲ್ಯದ ಐ–ಫೋನ್ ಮತ್ತು 14 ಪ್ರೊ ಮ್ಯಾಕ್ ಮೊಬೈಲ್ ವಶಕ್ಕೆ ಪಡೆಯಲಾಗಿದೆ.


ಡ್ರೈ ಫ್ರೂಟ್ಸ್ ನಲ್ಲಿ ಚಿನ್ನ ಹುಡುಕುತ್ತಿರುವುದು

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬಾಗಿಲು ಮುಚ್ಚಿದ ಯಶವಂತಪುರದ ಹೆರಿಗೆ ಆಸ್ಪತ್ರೆ • ಬಳಕೆಯಾಗದ ದುಬಾರಿ ಮೌಲ್ಯದ ಪರಿಕರಗಳು

ಗರ್ಭಿಣಿಯರ ಅಲೆದಾಟ, ಚಿಕಿತ್ಸೆಗೆ ಪರದಾಟ

• ಆದಿತ್ಯ ಕೆ.ಎ.

ಬೆಂಗಳೂರು: ಸುಸಜ್ಜಿತ ಕಟ್ಟಡ, ಶಸ್ತ್ರ-ಚಿಕಿತ್ಸಾ ವಿಭಾಗ, ತೀವ್ರ ನಿಗಾ ಘಟಕ, ತುರ್ತು ಸೇವೆ ಹಾಗೂ ಪ್ರಯೋಗಾಲಯ ವಿಭಾಗ, ಹೊಸದಾಗಿ ಖರೀದಿಸಿದ್ದ ಹಾಸಿಗೆಗಳು, ಸ್ತ್ರೀರೋಗ ತಜ್ಞರು, ಶುಶ್ರೂಷಕಿಯರಿಗೆ ಪ್ರತ್ಯೇಕ ಕೊಠಡಿ ಹೊಂದಿದ್ದ ಆಸ್ಪತ್ರೆಯೊಂದು ಬಾಗಿಲು ಮುಚ್ಚಿದೆ. ವಿವಿಧ ವಿಭಾಗದಲ್ಲಿದ್ದ ದುಬಾರಿ ಬೆಲೆಯ ವೈದ್ಯಕೀಯ ಉಪಕರಣಗಳು ಉಪಯೋಗಕ್ಕೆ ಬರುತ್ತಿಲ್ಲ.

ಇದು ನಗರದ ಯಶವಂತಪುರ ರೈಲು ನಿಲ್ದಾಣದ ಪಕ್ಕದಲ್ಲಿರುವ ಮಕ್ಕಳ ಹಾಗೂ ಹೆರಿಗೆ ಆಸ್ಪತ್ರೆಯ ಸ್ಥಿತಿ.

ಕಟ್ಟಡ ಸುಸ್ಥಿತಿಯಲ್ಲಿದ್ದರೂ ಅದನ್ನು ನಿರ್ವಹಣೆ ಮಾಡುವ ವ್ಯವಸ್ಥೆಯೇ ಅನಾರೋಗ್ಯಕ್ಕೆ ತುತ್ತಾಗಿದೆ. ಬಿಬಿಎಂಪಿ ನಿರ್ಲಕ್ಷ್ಯದಿಂದ ಕಾರ್ಮಿಕ ಮಹಿಳೆಯರು ಹಾಗೂ ಬಡ ಕುಟುಂಬದ ಮಹಿಳೆಯರು ಹಾಗೂ ಮಕ್ಕಳು ಸಂಕಷ್ಟಕ್ಕೆ ಸಿಲುಕುವಂತಾಗಿದೆ ಎಂದು ಸ್ಥಳೀಯರು ನೋವು ತೋಡಿಕೊಳ್ಳುತ್ತಾರೆ.

ಯಶವಂತಪುರದ ಸುತ್ತಮುತ್ತ ಮಧ್ಯಮ, ಕೂಲಿ ಕಾರ್ಮಿಕ ಹಾಗೂ ಬಡವವರ್ಗದ ಸಾಕಷ್ಟು ಕುಟುಂಬಗಳು ನೆಲೆಸಿವೆ. ಪಕ್ಕವೇ ಪೀಣ್ಯ ಕೈಗಾರಿಕೆ ಪ್ರದೇಶವೂ ಇದೆ. ಸಾಕಷ್ಟು ಹೋರಾಟದ ನಂತರ 1975ರಲ್ಲಿ ಯಶವಂತಪುರ ಕೇಂದ್ರ ಭಾಗದಲ್ಲೇ ಹೆರಿಗೆ ಆಸ್ಪತ್ರೆ ನಿರ್ಮಾಣಗೊಂಡಿತ್ತು. 2 ವರ್ಷದಲ್ಲಿ ಆಸ್ಪತ್ರೆ ಸುವರ್ಣ ಸಂಭ್ರಮ ಆಚರಿಸಿಕೊಳ್ಳಬೇಕಿತ್ತು. ಆದರೆ, ಬಾಗಿಲು ಮುಚ್ಚಿದೆ. ಇಂದಲ್ಲ, ನಾಳೆ ಆಸ್ಪತ್ರೆ ಪುನರ್ ಆರಂಭಗೊಳ್ಳಬಹುದು ಎಂಬ ನಿರೀಕ್ಷೆಯಲ್ಲಿ ನಿವಾಸಿಗಳಿದ್ದಾರೆ.

ಮಾಹಿತಿಯಿಲ್ಲದೆ ಹೆರಿಗೆ ನೋವಿನಲ್ಲಿ ಆಸ್ಪತ್ರೆ ಬಳಿಗೆ ಬಂದ ಗರ್ಭಿಣಿಯರು ಬೇರೊಂದು ಆಸ್ಪತ್ರೆಗೆ ಅಲೆದಾಡುವ ಸ್ಥಿತಿಯಿದೆ. ಅವರನ್ನು ಬೇರೆ ಆಸ್ಪತ್ರೆಗೆ ಕರೆದೊಯ್ಯಲು ಆಸ್ಪತ್ರೆ ಗೇಟ್ ಎದುರು ಆಂಬುಲೆನ್ಸ್ ನಿತ್ಯವೂ ನಿಂತಿರುತ್ತದೆ.

ಕಾರಣ ಏನು?: ‘41 ವರ್ಷಗಳ ಕಾಲ ಉತ್ತಮ ಆರೋಗ್ಯ ಸೇವೆ ನೀಡಿದ್ದ ಆಸ್ಪತ್ರೆಯನ್ನು 2016ರಲ್ಲಿ ದುರಸ್ತಿ ಕಾರಣ ನೀಡಿ, ಬಂದ್ ಮಾಡಲಾಗಿತ್ತು. ವೈದ್ಯರು ಹಾಗೂ ಶುಶ್ರೂಷಕಿಯರನ್ನು ಬೇರೆಡೆಗೆ ವರ್ಗಾವಣೆ ಮಾಡಲಾಗಿತ್ತು. ಆಸ್ಪತ್ರೆಗೆ ದಾಖಲಾಗಿದ್ದವರನ್ನೂ ಬೇರೆಡೆಗೆ ದಾಖಲಿಸಲಾಗಿತ್ತು. 2020ರ ವೇಳೆಗೆ ಕಟ್ಟಡ ದುರಸ್ತಿ ಕಾರ್ಯ ಪೂರ್ಣಗೊಂಡಿತ್ತು. 2021ರಲ್ಲಿ ಇದನ್ನು ಕೋವಿಡ್ ತುರ್ತು ಚಿಕಿತ್ಸೆಗೆ ಬಳಕೆ ಮಾಡಿಕೊಳ್ಳಲಾಯಿತು. ಕೋವಿಡ್ ಕಡಿಮೆಯಾದ ಮೇಲೆ ಹಿಂದಿನ ಮುಖ್ಯಮಂತ್ರಿ ಕಟ್ಟಡವನ್ನು ಉದ್ಘಾಟಿಸಿದ್ದರು. ಈಗ ಹಾಳು ಬಿದ್ದಿದೆ’ ಎಂದು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಉಪಾಧ್ಯಕ್ಷೆ ಎಚ್.ಎಲ್.ನಿರ್ಮಲಾ ಹೇಳಿದರು.

ಯಶವಂತಪುರ, ಜಾಲಹಳ್ಳಿ, ದಾಸರಹಳ್ಳಿ, ಲಗ್ಗೆರೆ, ಸುಂಕದಕಟ್ಟೆ, ಪೀಣ್ಯ, ಮತ್ತಿಕೆರೆ, ಮುನೇಶ್ವರ ಕೊಳೆಗೇರಿ, ಮುತ್ಯಾಲನಗರದ ಕೂಲಿ ಕಾರ್ಮಿಕ ಮಹಿಳೆಯರು, ಕೆಳಮಧ್ಯಮ ವರ್ಗದವರು ಈ ಆಸ್ಪತ್ರೆಗೆ ಬರುತ್ತಿದ್ದರು. ತಿಂಗಳಿಗೆ 250ರಿಂದ 300 ಹೆರಿಗೆಗಳು ಆಗುತ್ತಿದ್ದವು. ಈಗ ಅನಿವಾರ್ಯವಾಗಿ ಈ ಭಾಗದ ಗರ್ಭಿಣಿಯರು ಶ್ರೀರಾಮಪುರ ಹೆರಿಗೆ ಆಸ್ಪತ್ರೆ, ವಾಣಿ ವಿಲಾಸ ಆಸ್ಪತ್ರೆ, ಕೆಸಿ ಜನರಲ್ ಆಸ್ಪತ್ರೆಗೆ ಅಲೆದಾಡುತ್ತಿದ್ದಾರೆ ಎಂದು ಯಶವಂತಪುರ ನಿವಾಸಿ ಕೆ.ಹೇಮಾವತಿ ಅಳಲು ತೋಡಿಕೊಂಡರು.

ಸಣ್ಣಪುಟ್ಟ ಕಾಯಿಲೆಗೆ ಚಿಕಿತ್ಸೆ: ಜ್ವರ, ಮಕ್ಕಳ ಸಣ್ಣಪುಟ್ಟ ಕಾಯಿಲೆಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಲಭಿಸುತ್ತಿತ್ತು. ಈಗ ಜ್ವರಕ್ಕೂ ಖಾಸಗಿ ಕ್ಲಿನಿಕ್‌ನಲ್ಲಿ ದುಬಾರಿ ಹಣ ಕೊಟ್ಟು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂದು ಸ್ಥಳೀಯ ನಿವಾಸಿ ನಜೀರ್ ‘ಪ್ರಜಾವಾಣಿ’ಗೆ ತಿಳಿಸಿದರು.





ಬೆಂಗಳೂರಿನ ಯಶವಂತಪುರದ ಕೋವಿಡ್ ತುರ್ತು ಚಿಕಿತ್ಸಾ ಕೇಂದ್ರ ಸ್ಥಗಿತಗೊಂಡಿರುವುದು. (ಮೊದಲ ಚಿತ್ರ) ಹಾಳಾಗುತ್ತಿರುವ ಬೆಡ್ ಹಾಗೂ ವೈದ್ಯಕೀಯ ಉಪಕರಣಗಳು. –ಪ್ರಜಾವಾಣಿ ಚಿತ್ರಗಳು

ನವೆಂಬರ್ ಗಡುವು

ಈ ಆಸ್ಪತ್ರೆ, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ಹಾಗೂ ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದೆ. ನಾಲ್ಕು ದಿನಗಳ ಹಿಂದೆ ಡಿ.ಕೆ.ಸುರೇಶ್ ಅವರು ಆಸ್ಪತ್ರೆಗೆ ಭೇಟಿ ಪರಿಶೀಲನೆ ನಡೆಸಿದ್ದಾರೆ. ಸ್ಥಳಕ್ಕೆ ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಗಳನ್ನು ಕರೆಸಿ, ನವೆಂಬರ್ ಅಂತ್ಯಕ್ಕೆ ಆಸ್ಪತ್ರೆ ಬಾಗಿಲು ತೆರೆದು ಸೇವೆ ಕಲ್ಪಿಸಬೇಕು. ವೈದ್ಯರು, ಶುಶ್ರೂಷಕಿಯರ ನೇಮಕ ಮಾಡಬೇಕು ಎಂದು ಸಂಸದರು ಬಿಬಿಎಂಪಿಗೆ ಸೂಚನೆ ನೀಡಿದ್ದಾರೆ.

ಸದ್ಯದಲ್ಲೇ ಚಾಲನೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಆಸ್ಪತ್ರೆ ಹಸ್ತಾಂತರಿಸಲು ಸರ್ಕಾರ ಆದೇಶಿಸಿತ್ತು. ಹೀಗಾಗಿ ಪುನರ್ ಆರಂಭಿಸಿರಲಿಲ್ಲ. ಈಗ ಬಿಬಿಎಂಪಿಯಿಂದಲೇ ನಿರ್ವಹಣೆ ಮಾಡುತ್ತೇವೆ. ಸದ್ಯದಲ್ಲೇ ವೈದ್ಯರು ಹಾಗೂ ನರ್ಸ್ ನೇಮಕಕ್ಕೆ ಚಾಲನೆ ನೀಡಲಾಗುವುದು.

ಕೆ.ವಿ. ತ್ರಿಲೋಕ್ ಚಂದ್ರ,
ವಿಶೇಷ ಆಯುಕ್ತ, ಆರೋಗ್ಯ ವಿಭಾಗ, ಬಿಬಿಎಂಪಿ

ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ

ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೇವೆ. ನವೆಂಬರ್ ಅಂತ್ಯಕ್ಕೆ ಆಸ್ಪತ್ರೆ ಪುನರ್ ಆರಂಭಿಸಬೇಕು. ಸೇವೆಗೆ ಲಭ್ಯವಾಗದಿದ್ದರೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗುವುದು.

ಕೆ.ಹೇಮಾವತಿ, ಯಶವಂತಪುರ ನಿವಾಸಿ



ಹೇಮಾವತಿ

ಸಮಸ್ಯೆ ಯಾರಿಗೆ ಹೇಳೋದು?



ಯಶೋದಾ

ನಾನು ಹಾಗೂ ನನ್ನ ಇಬ್ಬರು ಮಕ್ಕಳು ಜನಿಸಿದ್ದು ಇದೇ ಆಸ್ಪತ್ರೆಯಲ್ಲಿ. ಬಿಬಿಎಂಪಿ ಸದಸ್ಯರೇ ಇಲ್ಲದಿರುವ ಕಾರಣಕ್ಕೆ ಸಮಸ್ಯೆ ಹೇಳಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಯಶೋದಾ,
ತರಕಾರಿ ವ್ಯಾಪಾರಿ, ಶವಂತಪುರ

ರಸ್ತೆಗುಂಡಿ ಮುಚ್ಚಲು ₹33 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಗಾರು ಮಳೆಯ ಸಮಯ ಮುಗಿದ ಹಿನ್ನೆಲೆಯಲ್ಲಿ ಬಿಬಿಎಂಪಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಯನ್ನು ಆರಂಭಿಸಿದೆ.

ಪ್ರತಿ ವಾರ್ಡ್‌ಗೆ ₹15 ಲಕ್ಷ ಹಣವನ್ನು ಬಿಡುಗಡೆ ಮಾಡಲಾಗಿದೆ. ಹಲವು ವಾರ್ಡ್‌ಗಳ ಟೆಂಡರ್‌ಗಳನ್ನು ಕರೆಯಲಾಗಿದ್ದು, ಕೆಲವು ಪ್ರದೇಶದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತಿದೆ.

‘ವಾರ್ಡ್‌ಗಳ ಎಂಜಿನಿಯರ್‌ಗಳಿಗೆ ರಸ್ತೆ ಗುಂಡಿಗಳ ಕಾಮಗಾರಿಗಳನ್ನು ಆರಂಭಿಸಲು ಸೂಚಿಸಲಾಗಿದೆ. ಕೆಲವು ಕಡೆ ಟೆಂಡರ್ ಆಗಿದ್ದು, ಕೆಲವರು ಕಾಮಗಾರಿ ಪ್ರಾರಂಭಿಸಿದ್ದಾರೆ. 12 ತಿಂಗಳ ಗುತ್ತಿಗೆಯನ್ನು ನೀಡಲಾಗುತ್ತದೆ. ಅವರು ರಸ್ತೆ ಗುಂಡಿಗಳು ಇಲ್ಲದಂತೆ ನೋಡಿಕೊಳ್ಳಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

225 ವಾರ್ಡ್‌ಗಳಿಗೆ ತಲಾ ₹15 ಲಕ್ಷದಂತೆ ₹33 ಕೋಟಿಯನ್ನು ಹಂಚಲಾಗಿದೆ. ಕಳೆದ ವರ್ಷ ವಾರ್ಡ್‌ವೊಂದಕ್ಕೆ ₹20 ಲಕ್ಷ ನೀಡಲಾಗಿತ್ತು. ಕಳೆದ ಬಾರಿಯ ಅನುದಾನ ಬಳಕೆ ತೃಪ್ತಿಕರವಾಗಿಲ್ಲದ ಕಾರಣ ಈ ಬಾರಿ ಹಣ ಕಡಿತ ಮಾಡಲಾಗಿದೆ ಎನ್ನಲಾಗಿದೆ.

‘ವಾರ್ಡ್ ಹಂಚಲಾಗಿರುವ ಹಣವನ್ನು ಸೂಕ್ತವಾಗಿ ಬಳಸಿಕೊಂಡರೆ ಸುಮಾರು 1,250 ಗುಂಡಿಗಳನ್ನು ಮುಚ್ಚಬಹುದು. ಒಂದು ಚದರ ಮೀಟರ್ ರಸ್ತೆ ಗುಂಡಿಯನ್ನು ಮುಚ್ಚಲು ₹1,200 ವೆಚ್ಚವಾಗುತ್ತದೆ. ವಾರ್ಡ್ ಕಾಮಗಾರಿಗಳಿಗೆ ಈಗಾಗಲೇ ಸರ್ಕಾರ ಶಾಸಕರ ನಿಧಿಯಲ್ಲಿ ಸುಮಾರು ₹200 ಕೋಟಿ ಬಿಡುಗಡೆ ಮಾಡಿದೆ. ಈ ಹಂಚಿಕೆಯಲ್ಲಿ ರಸ್ತೆ, ಚರಂಡಿಯ ಕಾಮಗಾರಿಗಳೇ ಇವೆ. ಹೀಗಾಗಿ, ಹಣವನ್ನು ಮಾಡಿದ ಕಾಮಗಾರಿಗೇ ಮತ್ತೆ ಮಾಡಬಾರದು’ ಎಂದು ಎಂಜಿನಿಯರ್‌ಗಳು ಅಭಿಪ್ರಾಯಪಟ್ಟಿದ್ದಾರೆ.



ಕೆ.ಆರ್.ಮಾರುಕಟ್ಟೆಯ ಎಸ್‌.ಆರ್‌.ರಸ್ತೆಯಲ್ಲಿ ಗುಂಡಿಗಳಲ್ಲೇ ಬೈಕ್ ಚಾಲನೆ ಮಾಡುವ ಸ್ಥಿತಿಯಿದ್ದು, ಸವಾರರು ಆಯತಪ್ಪಿ ಬೀಳುತ್ತಿದ್ದಾರೆ. –ಪ್ರಜಾವಾಣಿ ಚಿತ್ರ

ಸಹಕಾರ ಸಂಘ ಪ್ರತಿನಿಧಿಗಳ ವಿದೇಶ ಪ್ರವಾಸಕ್ಕೆ ತಡೆ

ಬೆಂಗಳೂರು: ‘ರಾಜ್ಯದಲ್ಲಿ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಪ್ರತಿನಿಧಿಗಳು, ಇಲಾಖೆಯ ಅಧಿಕಾರಿಗಳಿಗೆ ವಿದೇಶ ಪ್ರವಾಸಕ್ಕೆ ಅನುಮತಿ ಕೊಡುವುದಿಲ್ಲ’ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಇಲಾಖೆಯಿಂದ ವಿದೇಶ ಪ್ರವಾಸ ತೆರಳಲು ಅನೇಕ ಮಂದಿ ಪ್ರಸ್ತಾವನೆ ಸಲ್ಲಿಸಿದ್ದರು’ ಎಂದರು.

‘ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಸಮಯ ನೋಡಿ ವಿಷಯ ಪ್ರಸ್ತಾಪಿಸಿ ಟೀಕೆ–ಟಿಪ್ಪಣಿ ಮಾಡುತ್ತಾರೆ. ಇದಕ್ಕೆಲ್ಲ ತಲೆಕೆಡಿಸಿಕೊಳ್ಳ ಬೇಕಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ನನಗೆ ತಿಳಿದಂತೆ ಸರ್ಕಾರದಲ್ಲಿ ಗೊಂದಲಗಳಿಲ್ಲ. ಕೆಲವರು ಹೇಳಿಕೆ ನೀಡಿ ಅನವಶ್ಯಕ ಗೊಂದಲ ಮೂಡಿಸುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವುದೇ ಕಾರಣಕ್ಕೂ ಬದಲಾಗುವುದಿಲ್ಲ. ಆದರೆ ಲೋಕಸಭಾ ಚುನಾವಣೆ ಬಳಿಕ ರಾಜ್ಯದಲ್ಲಿ ಯಾವುದೇ ಬದಲಾವಣೆ ಬೇಕಾದರೂ ಆಗಬಹುದು’ ಎಂದು ಹೇಳಿದರು.

ಕೊಲೆ ಪ್ರಕರಣ: ಜಾಮೀನು ರದ್ದುಪಡಿಸಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಪತ್ನಿಯ ಕೊಲೆಗೆ ಪತಿಯೇ ಇಬ್ಬರಿಗೆ ಸುಪಾರಿ ನೀಡಿದ್ದ ಹಾಗೂ ಕೃತ್ಯಕ್ಕೆ ಕ್ರಿಮಿನಲ್ ಸಂಚು ಮಾಡಿದ್ದ ಬೆಂಗಳೂರಿನ ಪ್ರಕರಣವೊಂದರ ಆರೋಪಿಗೆ ನೀಡಲಾಗಿದ್ದ ಜಾಮೀನು ಅನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ.

‘ಜಾಮೀನು ಪಡೆದ ನಂತರದ ಕೆಲ ಘಟನೆಗಳು ಮನಕಲಕುವಂತಹದ್ದು, ಇವು, ಕೋರ್ಟ್‌ನ ಆತ್ಮಸಾಕ್ಷಿಗೆ ಪೆಟ್ಟು ನೀಡಿವೆ’ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ದೀಪಂಕರ್ ದತ್ತಾ ಅವರಿದ್ದ ನ್ಯಾಯಪೀಠವು ಅಭಿಪ್ರಾಯಪಟ್ಟಿತು.

ಅಪರಾಧ ಪ್ರಕ್ರಿಯಾ ಸಂಹಿತೆಯ (ಸಿಆರ್‌ಪಿಸಿ) ವಿಧಿ 142, ಸೆಕ್ಷನ್ 311ರ ಅನ್ವಯ ದತ್ತವಾಗಿರುವ ವಿಶೇಷಾಧಿಕಾರ ಬಳಸಿ, ಕೊಲೆಯಾಗಿದ್ದ ಮಹಿಳೆಯ ತಾಯಿ, ತಂದೆ ಮತ್ತು ಸಹೋದರಿಯನ್ನು ಮತ್ತೆ ವಿಚಾರಣೆಗೆ ಒಳಪಡಿಸಲು ವಿಚಾರಣಾ ಕೋರ್ಟ್‌ಗೆ ಆದೇಶಿಸಿತು.

ಬೆಂಗಳೂರಿನಲ್ಲಿ ನಡೆದಿದ್ದ ಕೊಲೆ ಪ್ರಕರಣವೊಂದರ ವಿಚಾರಣೆ ವೇಳೆ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು. ಡಿಸೆಂಬರ್ 21, 2019ರಂದು ಕೃತ್ಯ ನಡೆದಿದ್ದು, ರಕ್ತದ ಮಡುವಿನಲ್ಲಿ ಮಹಿಳೆ ದೇಹ ಫ್ಲ್ಯಾಟ್‌ನಲ್ಲಿ ಕಂಡುಬಂದಿತ್ತು.

ಪ್ರಕರಣದ ಆರೋಪಿ ನರೇಂದ್ರ ಬಾಬುವಿಗೆ ಕರ್ನಾಟಕ ಹೈಕೋರ್ಟ್ ಆಗಸ್ಟ್ 12, 2020ರಂದು ನೀಡಿದ್ದ ಜಾಮೀನು ರದ್ದುಪಡಿಸಿದ ಪೀಠವು, ಆರೋಪಿ ವಾರದೊಳಗೆ ಶರಣಾಗಬೇಕು ಎಂದು ಆದೇಶಿಸಿತು. ಅಲ್ಲದೆ, ಸಾಕ್ಷಿಗಳಿಗೆ ಅವರ ಮರು ವಿಚಾರಣೆ ಪೂರ್ಣವಾಗುವವರೆಗೆ ದಿನದ 24 ಗಂಟೆಯೂ ರಕ್ಷಣೆಯನ್ನು ಒದಗಿಸಬೇಕು ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಅವರಿಗೆ ಆದೇಶಿಸಿತು.

ಅರ್ಜಿದಾರರು, ಅವರ ಕುಟುಂಬ ಸದಸ್ಯರಿಗೆ ಬೆದರಿಕೆ ಒಡ್ಡಿರುವ ಬಗ್ಗೆಯೂ ತನಿಖೆ ನಡೆಸಲು ಪೊಲೀಸ್ ಕಮಿಷನರ್ ಅವರಿಗೆ ಆದೇಶಿಸಿತು.

ಮಹಿಳೆಯು ತನಗಿದ್ದ ಜೀವ ಬೆದರಿಕೆ, ಕಿರುಕುಳ, ಇತರೆ ಅಪರಾಧಗಳಿಗೆ ಸಂಬಂಧಿಸಿದಂತೆ ಪತಿಯ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು. ಕರ್ನಾಟಕ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿ ಪೊಲೀಸ್ ರಕ್ಷಣೆಗೆ ಮನವಿ ಮಾಡಿದ್ದರು. ಅಲ್ಲದೆ, ಕರ್ನಾಟಕದ ಮುಖ್ಯಮಂತ್ರಿ ಮತ್ತು ಮಹಿಳಾ ಸಂಘಟನೆಗಳಿಗೂ ಪತ್ರ ಬರೆದಿದ್ದು, ರಕ್ಷಣೆ ನೀಡುವಲ್ಲಿ ಬೆಂಗಳೂರು ನಗರ ಪೊಲೀಸರು ನಿಷ್ಕ್ರಿಯರಾಗಿದ್ದಾರೆ ಎಂದು ಉಲ್ಲೇಖಿಸಿದ್ದರು.

ಪ್ರಕರಣದ ಆರೋಪಿಗೆ ಜಾಮೀನು ನೀಡಿದ್ದನ್ನು ಪ್ರಶ್ನಿಸಿ ಮೃತಳ ತಾಯಿ ಮುನಿಲಕ್ಷ್ಮಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಜಾಮೀನು ಸೌಲಭ್ಯದ ದುರ್ಬಳಕೆಯನ್ನು ಪರಿಗಣಿಸಿದ ಪೀಠವು, ನ್ಯಾಯಾಂಗದ ಹಿತಾಸಕ್ತಿ ದೃಷ್ಟಿಯಿಂದ ಜಾಮೀನು ಹಿಂಪಡೆಯಲಾಗುತ್ತಿದೆ ಎಂದಿತು.

ಕೆಳಕಂತದ ವಿಚಾರಣಾ ನ್ಯಾಯಾಲಯವು ಸಾಕ್ಷಿಗಳನ್ನು (ಮೃತಳ ತಾಯಿ, ತಂದೆ ಮತ್ತು ಸಹೋದರಿ) ಮತ್ತೆ ವಿಚಾರಣೆಗೆ ಕರೆಸಬೇಕು. ಯಾವುದೇ ಭೀತಿ ಹಾಗೂ ಮಾನಸಿಕ ಆತಂಕವಿಲ್ಲದೆ ವಿಚಾರಣೆ ಎದುರಿಸುವ ವಾತಾವರಣ ಕಲ್ಪಿಸಬೇಕು ಎಂದು ನ್ಯಾಯಪೀಠವು ಸೂಚಿಸಿತು.

ನಿಧನವಾರ್ತೆ

ಕೆ.ಆರ್.ಪ್ರಕಾಶ್‌ಬಾಬು



ಕೆ.ಆರ್.ಪ್ರಕಾಶ್ ಬಾಬು

ಶಿವಮೊಗ್ಗ: ಧಾರ್ಮಿಕ ಚಿಂತಕ ಹಾಗೂ ಬರಹಗಾರ ಕೆ.ಆರ್.ಪ್ರಕಾಶ್ ಬಾಬು ಮಂಡಗದ್ದೆ (65) ಅನಾರೋಗ್ಯದಿಂದ ಶನಿವಾರ ನಿಧನರಾದರು. ಅವರು ಅವಿವಾಹಿತರಾಗಿದ್ದರು. ಮೃತರು ಹಲವು ಧಾರ್ಮಿಕ ಲೇಖನ, ಪುಸ್ತಕಗಳನ್ನು ಬರೆದಿದ್ದರು. ಧಾರ್ಮಿಕ ಆಚರಣೆಗಳ ಕುರಿತು ಅಗಾಧ ಜ್ಞಾನ ಹೊಂದಿದ್ದರು. ಅವರಿಗೆ ರಾಜ್ಯ ಸರ್ಕಾರದ ‘ಸಾಹಿತ್ಯ ರತ್ನ’ ಪ್ರಶಸ್ತಿ ಲಭಿಸಿತ್ತು.

ಐಐಎಂಬಿ ಸುವರ್ಣ ಮಹೋತ್ಸವ 26ಕ್ಕೆ

ಬೆಂಗಳೂರು: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ (ಐಐಎಂಬಿ) ಸುವರ್ಣ ಮಹೋತ್ಸವ ಸಪ್ತಾಹವು ಅ.26ರಿಂದ ಆರಂಭವಾಗಲಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉದ್ಘಾಟಿಸಲಿದ್ದಾರೆ. ರಾಜ್ಯಪಾಲ ಥಾವರಚಂದ್ ಗೆಹಲೋತ್, ಐಐಎಂ ಬೆಂಗಳೂರು ಆಡಳಿತ ಮಂಡಳಿಯ ಅಧ್ಯಕ್ಷ ಡಾ.ದೇವಿ ಪ್ರಸಾದ್ ಶೆಟ್ಟಿ, ನಿರ್ದೇಶಕ ರಿಷಿಕೇಶ ಟಿ. ಕೃಷ್ಣನ್ ಭಾಗವಹಿಸಲಿದ್ದಾರೆ.

ತುಂಗಭದ್ರಾ: ಒಳಹರಿವು ಬಂದ್

ಜಲಾಶಯದ ನೀರು ಸಂಗ್ರಹ ಪ್ರಮಾಣ 41.18 ಟಿಎಂಸಿ ಅಡಿಗೆ ಕುಸಿತ

ಪ್ರಜಾವಾಣಿ ವಾರ್ತೆ



ಮುಖ್ಯಾಂಶಗಳು
- ಮಳೆ ಕೊರತೆಯಿಂದ ಒಳಹರಿವು ಸಂಪೂರ್ಣ ಸ್ಥಗಿತ
- ಈ ಬಾರಿ 89 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹ
- ಮೊದಲ ಬೆಳೆಗೇ ನೀರು ಅಲಭ್ಯವಾಗುವ ಆತಂಕ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಜಲಾಶಯದ ಒಳಹರಿವು ಶನಿವಾರ ಸಂಪೂರ್ಣ ಬಂದ್ ಆಗಿದ್ದು, ನೀರು ಸಂಗ್ರಹ ಪ್ರಮಾಣ 41.18 ಟಿಎಂಸಿ ಅಡಿಗೆ ಕುಸಿದಿದೆ.

ಕೆಲವೇ ದಿನಗಳಲ್ಲಿ ಚಂಡಮಾರುತ ಅಥವಾ ಹಿಂಗಾರು ಮಳೆ ರೂಪದಲ್ಲಿ ಕನಿಷ್ಠ 5 ಟಿಎಂಸಿ ಅಡಿಯಷ್ಟು ನೀರು ಹರಿದು ಬರದಿದ್ದರೆ, ಮೊದಲ ಬೆಳೆಗೆ ನೀರು ಒದಗಿಸುವುದು ಸಹ ಕಷ್ಟವಾಗಲಿದೆ.

ಈಚೆಗೆ ಬೆಂಗಳೂರಿನಲ್ಲಿ ನಡೆದ ವಿಶೇಷ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ತುಂಗಭದ್ರಾ ಮೇಲ್ಮಟ್ಟದ ಬಲದಂಡೆ ಕಾಲುವೆಯಲ್ಲಿ ನವೆಂಬರ್ 10ರವರೆಗೆ ಮತ್ತು ಕೆಳಮಟ್ಟದ ಕಾಲುವೆ ಮತ್ತು ಎಡದಂಡೆ ಕಾಲುವೆಯಲ್ಲಿ ನವೆಂಬರ್ 30ರವರೆಗೆ ನೀರು ಹರಿಸಲು ತೀರ್ಮಾನಿಸಲಾಗಿತ್ತು. ಮೊದಲ ಬೆಳೆ ರೂಪದಲ್ಲಿ 5 ಲಕ್ಷ ಎಕರೆಗೂ ಅಧಿಕ ಕೃಷಿ ಭೂಮಿಯಲ್ಲಿ ಭತ್ತ, ಕಬ್ಬು ಬೆಳೆದಿದ್ದು, ಬೆಳೆ ಉಳಿಸಲು ನೀರು ಬಿಡುವುದು ಅನಿವಾರ್ಯ. ಮಳೆ ಕೊರತೆಯಿಂದ ಒಳಹರಿವು ಸಂಪೂರ್ಣ ಬಂದ್ ಆಗಿರುವುದು ಆತಂಕಕ್ಕೆ ಕಾರಣವಾಗಿದೆ.

‘ಹಿಂಗಾರು ಮಳೆ ಉತ್ತಮವಾಗಿ ಸುರಿದರೆ ಅಥವಾ ಚಂಡಮಾರುತಗಳ ಪರಿಣಾಮದಿಂದಾಗಿ ಮುಂದಿನ ಕೆಲವು ದಿನಗಳಲ್ಲಿ ಮಳೆ ಸುರಿದರೆ ಮಾತ್ರ ಮೊದಲ ಬೆಳೆಗೆ ನಿರೀಕ್ಷಿಸಿದಂತೆ ನೀರು ಹರಿಸಬಹುದು. 2016–17ರಲ್ಲೂ ಇಂತಹದೇ ಪರಿಸ್ಥಿತಿ ಎದುರಾಗಿತ್ತು. ಆಗ ಬರ ಪರಿಸ್ಥಿತಿಯನ್ನು ಮೊದಲೇ ಅಂದಾಜಿಸಿದ್ದ ರೈತರು ನೀರು ಬಯಸುವ ಬೆಳೆ ಬೆಳೆಯದೆ ಬುದ್ಧಿವಂತಿಕೆ ಮೆರೆದಿದ್ದರು. ಈ ಬಾರಿ ಸೆಪ್ಟೆಂಬರ್ ಮೊದಲ ವಾರದವರೆಗೆ ಸುರಿದ ಮಳೆ ಒಮ್ಮೆಲೇ ನಿಂತು ರೈತರ ಲೆಕ್ಕಾಚಾರಗಳೆಲ್ಲವನ್ನೂ ತಪ್ಪಿಸಿತು. ಮಳೆ ಸುರಿದು 5 ಟಿಎಂಸಿ ಅಡಿಯಷ್ಟು ನೀರು ಜಲಾಶಯಕ್ಕೆ ಹರಿದು ಬರಬೇಕು ಎಂಬುದೇ ನಮ್ಮೆಲ್ಲರ ಸದ್ಯದ ಆಶಯ’ ಎಂದು ತುಂಗಭದ್ರಾ ಜಲಾಶಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಕಳೆದ ವರ್ಷ ತುಂಗಭದ್ರಾ ಜಲಾಶಯ ಗರಿಷ್ಠ 1,633 ಅಡಿಯಷ್ಟು ತುಂಬಿ, 45 ದಿನ ಭರ್ತಿಯಾಗಿಯೇ ಇತ್ತು. ಒಟ್ಟು 105 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯದ ತುಂಗಭದ್ರಾ ಜಲಾಶಯದಲ್ಲಿ ಈ ಬಾರಿಯ ಮಳೆಗಾಲದಲ್ಲಿ 89 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹವಾಗಿದೆ.

ಪ್ರಿಯಾಂಕ್ ಖರ್ಗೆ ರಾಜ್ಯದ ಸ್ಪೆಷಲ್ ಬೇಬಿ: ಜಾಧವ

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಶಾಸಕನಾದ ಮೊದಲ ಅವಧಿಯಿಂದ ಮೂರು ಬಾರಿ ಮಂತ್ರಿಗಿರಿ ಪಡೆದು, ಮುಖ್ಯಮಂತ್ರಿ ಸೂಚನೆಯನ್ನೂ ಕಡೆಗಣಿಸಿ ಜಿಲ್ಲಾ ಕೇಂದ್ರವನ್ನು ಬಿಟ್ಟು ಚಿಂಚೋಳಿಯಲ್ಲಿ ಜನಸ್ಪಂದನೆ ಮಾಡಿದ ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಜ್ಯದ ಸ್ಪೆಷಲ್ ಬೇಬಿ’ ಎಂದು ಸಂಸದ ಡಾ.ಉಮೇಶ ಜಾಧವ ಹೇಳಿದ್ದಾರೆ.

‘ಜಿಲ್ಲಾ ಕೇಂದ್ರದಲ್ಲಿ ಜನಸ್ಪಂದನೆ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದರು. ಆದರೆ, ಅವರ ಮಾತನ್ನು ಕಡೆಗಣಿಸಿ, ತಮ್ಮ ಪ್ರಯಾಣಕ್ಕೆ ಅನುಕೂಲ ಆಗಲಿ ಎಂದು ಹೈದರಾಬಾದ್‌ಗೆ ಸಮೀಪದ ಚಿಂಚೋಳಿಯಲ್ಲಿ ಜನಸ್ಪಂದನೆ ನಡೆಸಿದ್ದು ಇದೇ ಸ್ಪೆಷಲ್ ಬೇಬಿ. ತಮ್ಮನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹೋಲಿಕೆ ಮಾಡಿಕೊಳ್ಳುತ್ತಿರುವ ಪ್ರಿಯಾಂಕ್ ಅವರನ್ನು ಸ್ಪೆಷಲ್ ಬೇಬಿ ಎಂದು ಸಂಬೋಧಿಸುತ್ತೇನೆ’ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.



ಡಾ. ಉಮೇಶ ಜಾಧವ

‘ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಖಾತೆ ಪಡೆದ ಪ್ರಿಯಾಂಕ್ ಅವರು ಎಂ.ಬಿ.ಪಾಟೀಲ ಅವರಿಗೆ ಸಿಕ್ಕಿದ್ದ ಐಟಿ, ಬಿಟಿ ಖಾತೆಯನ್ನೂ ಕಸಿದುಕೊಂಡರು. ಹಿರಿಯ ನಾಯಕರಾದ ಎಂ.ವೈ.ಪಾಟೀಲ ಮತ್ತು ರೇವುನಾಯಕ ಬೆಳಮಗಿ ಅವರನ್ನು ಎಡ–ಬಲಕ್ಕೆ ಕೂರಿಸಿಕೊಳ್ಳುವ ಪ್ರಿಯಾಂಕ್ ಸ್ಪೆಷಲ್ ಬೇಬಿ’ ಎಂದರು.

‘ಗುರಮಠಕಲ್‌ನಲ್ಲಿ ನಿಮ್ಮ ತಂದೆ (ಮಲ್ಲಿಕಾರ್ಜುನ ಖರ್ಗೆ) 8 ಬಾರಿ, ಚಿತ್ತಾಪುರದಲ್ಲಿ ನೀವು ಮೂರು ಬಾರಿ ಗೆದ್ದಿದ್ದೀರಿ. ಆದರೆ, ಗುರಮಠಕಲ್‌ನಲ್ಲಿ ಸಿಬಿಎಸ್‌ಇ ಶಾಲೆ ಮಾಡದೆ ಯಲಹಂಕದಲ್ಲಿ ಮಾಡಿಕೊಂಡಿದ್ದೀರಿ. ಬೆಂಗಳೂರಿನಲ್ಲಿ ಮೆಡಿಕಲ್ ಕಾಲೇಜ್ ತೆರೆದಿದ್ದೀರಿ. ಬೆಂಗಳೂರಿನ ಡಾಲರ್ಸ್ ಕಾಲೊನಿಯ ಮಂತ್ರಿಗೆ ಬಡವರ ಕಷ್ಟ ಅರಿವಾಗಲ್ಲ’ ಎಂದರು.

ಪ್ರತಿಷ್ಠೆ ಕಣವಾದ ಮಹಾನಗರ ಪಾಲಿಕೆ ಸಭೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಆಸ್ತಿ ಕರ ಪರಿಷ್ಕರಣೆ ಸಂಬಂಧವಾಗಿ ನಡೆದ ವಿದ್ಯಮಾನ ಮಹಾನಗರ ಪಾಲಿಕೆಯಲ್ಲಿ ಶನಿವಾರ ಕೋಲಾಹಲ ಸೃಷ್ಟಿಸಿತು. ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹಾಗೂ ಶಾಸಕ ಅಭಯ ಪಾಟೀಲ ನಡುವೆ ಒಣಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿತು.

2023–24ನೇ ಸಾಲಿನಲ್ಲಿ ನಗರದ ಆಸ್ತಿ ಕರ ಪರಿಷ್ಕರಿಸಬೇಕು ಎಂದು ಮಹಾನಗರ ಪಾಲಿಕೆಯಲ್ಲಿ ನಿರ್ಣಯ ಅಂಗೀಕರಿಸಲಾಗಿತ್ತು. ಆದರೆ, ಪಾಲಿಕೆ ಆಯುಕ್ತರು 2024–25ನೇ ಸಾಲಿನಲ್ಲಿ ಪರಿಷ್ಕರಣೆಗೆ ನಿರ್ಣಯಿಸಲಾಗಿದೆ ಎಂಬ ಮಾಹಿತಿ ಸರ್ಕಾರಕ್ಕೆ ರವಾನೆಯಾಗಿದೆ. ಈ ಪ್ರಮಾದ ಹೇಗಾಯಿತು ಎಂಬ ಅಂಶ ವಾಗ್ಯುದ್ಧಕ್ಕೆ ಕಾರಣವಾಯಿತು.

ಈ ವೇಳೆ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು. ಆದರೆ, ಪೀಠದ ಮೇಲಿದ್ದ ಮೇಯರ್ ಶೋಭಾ ಸೋಮನಾಚೆ ಯಾವುದೇ ಮಾತು ಆಡಲಿಲ್ಲ.


ಸೂಪರ್‌ಸೀಡ್ ಎಚ್ಚರಿಕೆ: ಸಭೆ ಬಳಿಕ ಸುದ್ದಿಗಾರರ ಜೊತೆ ಸಚಿವ ಸತೀಶ ಜಾರಕಿಹೊಳಿ ಮಾತನಾಡಿ, ‘ಮೇಯರ್ ಅವರು ಶಾಸಕ ಅಭಯ ಪಾಟೀಲನ ಕೈಗೊಂಬೆ ಆಗಿದ್ದಾರೆ. ಆಸ್ತಿಕರ ಪರಿಷ್ಕರಣೆಯ ಮೂಲಪ್ರತಿ ಅವರೇ ಕದ್ದಿರಬಹುದು’ ಎಂದರು.

‘ಪಾಲಿಕೆ ಅಧಿಕಾರಿಗಳ ಅಕ್ರಮವನ್ನು ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ದ ಮೂಲಕ ತನಿಖೆಗೆ ಒಳಪಡಿಸಲಾಗುವುದು ಎಂದು ಶಾಸಕ ಅಭಯ ಹೇಳಿದ್ದಾರೆ. ಇದು ನಿಯಮ ಬಾಹಿರ. ರಾಜ್ಯ ಸರ್ಕಾರವೇ ತನಿಖೆ ಮಾಡುತ್ತದೆ. ಬಿಜೆಪಿಯವರು ದಾರಿ ಬಿಟ್ಟು ಕೇಂದ್ರಕ್ಕೆ ಹೋದರೆ ನಾವು ಪಾಲಿಕೆಯನ್ನು ವಿಸರ್ಜನೆ ಮಾಡುತ್ತೇವೆ’ ಎಂದರು.

ಗೊತ್ತುವಳಿ ಪ್ರತಿಯೇ ಕಾಣೆ: ಪಾಲಿಕೆ ಆಯುಕ್ತ ದೂರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಆಸ್ತಿಕರ ಪರಿಷ್ಕರಣೆಗೆ ಸಂಬಂಧಿಸಿದಂತೆ ಮೇಯರ್ ಶೋಭಾ ಸೋಮನಾಚೆ ಅವರು ಸಹಿ ಮಾಡಿದ ಗೊತ್ತುವಳಿಯ ಮೂಲಪ್ರತಿ ಕಾಣೆಯಾಗಿದೆ’ ಎಂದು ಮಹಾನಗರ ಪಾಲಿಕೆ ಆಯುಕ್ತ ಅಶೋಕ ದುಡಗುಂಟಿ, ಇಲ್ಲಿನ ಮಾರ್ಕೆಟ್ ಠಾಣೆಗೆ ಶನಿವಾರ ರಾತ್ರಿ ದೂರು ದಾಖಲಿಸಿದ್ದಾರೆ.



ಅಶೋಕ ದುಡಗುಂಟಿ

2023–24ನೇ ಸಾಲಿನಲ್ಲಿ ನಗರದ ಆಸ್ತಿ ಕರ ಪರಿಷ್ಕರಣೆ ಮಾಡಬೇಕು ಎಂದು ಮಹಾನಗರ ಪಾಲಿಕೆಯಲ್ಲಿ ನಿರ್ಣಯ ಅಂಗೀಕರಿಸಲಾಗಿತ್ತು. ಆದರೆ, ಪಾಲಿಕೆ ಆಯುಕ್ತರು 2024–25ನೇ ಸಾಲಿನಲ್ಲಿ ಪರಿಷ್ಕರಣೆಗೆ ನಿರ್ಣಯಿಸಲಾಗಿದೆ ಎಂಬ ಮಾಹಿತಿ ಸರ್ಕಾರಕ್ಕೆ ರವಾನಿಸಿದ್ದಾರೆ. ಇದು ಆಯುಕ್ತರು ಮಾಡಿದ ಲೋಪ. ಇದೇ ಕಾರಣಕ್ಕೆ ಸರ್ಕಾರದಿಂದ ಪಾಲಿಕೆಗೆ ಷೋಕಾಸ್ ನೋಟಿಸ್ ಬಂದಿದೆ ಎಂದು ಆಡಳಿತ ಗುಂಪಿನ ಬಿಜೆಪಿ ಸದಸ್ಯರು ಆರೋಪ ಮಾಡಿದ್ದರು.

‘ಆಸ್ತಿ ಕರ ಪರಿಷ್ಕರಣೆಯ ಗೊತ್ತುವಳಿ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸುವ ಮುನ್ನ ಮೇಯರ್ ಸಹಿ ಮಾಡಿಲ್ಲವೇ ಅಥವಾ ನಕಲಿ ಸಹಿ ಮಾಡಲಾಗಿದೆಯೇ’ ಎಂದು ಪ್ರಶ್ನಿಸಿದ ಸಚಿವ ಸತೀಶ ಜಾರಕಿಹೊಳಿ, ‘ಈ ಪ್ರತಿಯನ್ನು ಶಾಸಕ ಅಭಯ ಪಾಟೀಲ ಕದ್ದಿದ್ದಾರೆ’ ಎಂದೂ ಆರೋಪಿಸಿದ್ದರು.

ಈ ಎಲ್ಲ ಬೆಳವಣಿಗೆಗಳಿಂದಾಗಿ ಆಯುಕ್ತ ಅಶೋಕ ಅವರು, ‘ಪಾಲಿಕೆ ಪರಿಷತ್ ಕಾರ್ಯದರ್ಶಿ ವಿರುದ್ಧ ದೂರು ದಾಖಲಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.


HONDA
ಒಂದುಗೂಡಿಸುವ
Shine
Shine 100
ಎಕ್ಸ್ ಶೋರೋಂ ₹66600
(ಕರ್ನಾಟಕ)
Shine 125
ಎಕ್ಸ್ ಶೋರೋಂ ₹81100
(ಕರ್ನಾಟಕ)
SUPER 6 OFFERS*
ಕನಿಷ್ಠ ಬಡ್ಡಿದರ @ 6.99%
ನೋ ಕಾಸ್ಟ್ EMI
ನಗದು ಹಿಂಪಾವತಿ ₹5000 ರವರೆಗೆ
ಮುಂಗಡ ಪಾವತಿ ₹0
100 ಕ್ಕೆ 100
ನೋ ಹೈಪೋಥಿಕೇಷನ್
ಡೀಲರ್ ವಿವರಗಳಿಗೆ 7230032200 ಗೆ
WhatsApp ಅಥವಾ ಮಿಸ್ಡ್ ಕಾಲ್ ಮಾಡಿ ಅಥವಾ QR Code ಸ್ಕ್ಯಾನ್ ಮಾಡಿ
1. ಇಯರ್‌ಫೋನ್ ಕನೆಕ್ಟ್ ಮಾಡಿ
2. QR ಕೋಡ್ ಸ್ಕ್ಯಾನ್ ಮಾಡಿ
3. ವಿಡಿಯೋ ಆನಂದಿಸಿ
Shine 1 CRORE HAPPY FAMILY
BOOK ONLINE NOW!
CLICK BOOK RELAX

ಫಲವತ್ತತೆ ಹಾಳಾದ ಪ್ರದೇಶ (ಹೆಕ್ಟೇರ್‌ಗಳಲ್ಲಿ)	ಕೃಷ್ಣಾ ಅಚ್ಚುಕಟ್ಟು	ತುಂಗಭದ್ರಾ ಎಡದಂಡೆ	ತುಂಗಭದ್ರಾ ಬಲದಂಡೆ	ಕಾವೇರಿ ಅಚ್ಚುಕಟ್ಟು
	1,07,483	1 ಲಕ್ಷ	29,938	8 ಸಾವಿರ

ಬರಡಾಗುತ್ತಿದೆ ರಾಜ್ಯದ ಭೂಮಿ



ಹಿಂದಿನವರು ಭೂಮಿಗೆ ಸಗಣಿ, ಹಸಿರೆಲೆ ಗೊಬ್ಬರ ಹಾಕಿ ಗದ್ದೆಯನ್ನು ನಾಟಿಗೆ ಸಿದ್ಧಗೊಳಿಸುತ್ತಿದ್ದರು. ಈಗ ರಸಗೊಬ್ಬರ ಬಳಸುತ್ತಿರುವುದರಿಂದ ಭೂಮಿ ಸವಳು– ಜವಳು ಆಗಿದೆ. ಈಗಲೂ ಸಾವಯವ ಕೃಷಿ ಪದ್ಧತಿ ಅನುಸರಿಸಿ ಭೂಮಿಯನ್ನು ಕಾಪಾಡಬೇಕು

ಸೋಮಶೇಖರ್, ಪ್ರಗತಿಪರ ರೈತ, ಹನಿಯಂಬಾಡಿ, ಮಂಡ್ಯ ತಾಲ್ಲೂಕು

ಅತಿಯಾದ ರಾಸಾಯನಿಕ ಮತ್ತು ಕ್ರಿಮಿನಾಶಕ ಬಳಕೆಯಿಂದ ಭೂಮಿಯ ಫಲವತ್ತತೆ ಕಡಿಮೆಯಾಗಿದೆ ಸಗಣಿ ಗೊಬ್ಬರ, ಎರೆಹುಳು ಗೊಬ್ಬರ, ಹಸಿರು ಎಲೆ ಮಲ್ಚಿಂಗ್ ಮತ್ತು ಪರ್ಯಾಯ ಬೆಳೆ ಬೆಳೆಯುವ ಮೂಲಕ ಭೂಮಿಯ ಫಲವತ್ತತೆ ಕಾಪಾಡಿಕೊಳ್ಳಲು ಪ್ರಯತ್ನಿಸಬೇಕಿದೆ

ವೆಂಕಟಪತಿ ಮಲ್ಲದಗುಡ್ಡ, ರಾಯಚೂರು ಜಿಲ್ಲೆ ಕವಿತಾಳ ಸಮೀಪ ಮಲ್ಲದಗುಡ್ಡ

ರೈತರು ಟ್ರ್ಯಾಕ್ಟರ್ ಮೂಲಕ ಭೂಮಿ ಉಳುಮೆ ಮಾಡಿಸುತ್ತಿರುವುದರಿಂದ ಮಣ್ಣು ಕಿತ್ತು ಗಾಳಿಗೆ ಹಾರಿ ಹೋಗಿ ಸವಕಳಿ ಹೆಚ್ಚಾಗುತ್ತಿದೆ. ಅತಿಯಾದ ರಸಗೊಬ್ಬರ ಬಳಕೆ, ಒಂದೇ ಬೆಳೆಗೆ ಮೀಸಲಾಗಿರುವುದು ಕೂಡ ಮಣ್ಣಿನ ಫಲವತ್ತತೆ ಕಡಿಮೆಯಾಗಲು ಕಾರಣ. ಸಜ್ಜೆ, ಮೆಕ್ಕೆಜೋಳ ಬೆಳೆಗಳಲ್ಲಿ ತೆನೆ ಮಾತ್ರ ತೆಗೆದುಕೊಂಡು ಉಳಿದ ಭಾಗವನ್ನು ರೂಟರಿಂಗ್ ಮಾಡಿಸಿದಾಗ ಮಣ್ಣಿನಲ್ಲಿ ಸೇರಿ ಮಳೆಯಾದಾಗ, ಇಲ್ಲವೆ ನೀರು ಹರಿಸಿದಾಗ ತೇವಾಂಶ ಹಿರಿಕೊಂಡು ಮಣ್ಣುಕೊಚ್ಚಿ ಹೋಗದಂತೆ ತಡೆಯುತ್ತದೆ.

ಪಾಮಣ್ಣ ನಾಯಕ, ಹೊಸಳ್ಳಿ, ಗಂಗಾವತಿ ತಾಲ್ಲೂಕು

ಮಣ್ಣಿನ ಸವಕಳಿ ಅನಾದಿ ಕಾಲದಿಂದಲೂ ಆಗುತ್ತಿದ್ದು ಈಗ ಪ್ರಮಾಣ ಹೆಚ್ಚಾಗಿದೆ. ಮಣ್ಣು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕೊಚ್ಚಿ ಹೋಗಿ ಸವಕಳಿ ಉಂಟಾಗುತ್ತಿದೆ. ಮಣ್ಣಿನ ಮೇಲಿನ ಒಂದು ಇಂಚು ಫಲವತ್ತಾದ ಪದರ ಸಂಗ್ರಹವಾಗಲು ವೈಜ್ಞಾನಿಕವಾಗಿ 200 ವರ್ಷಗಳ ಸಮಯ ಬೇಕು. ಈ ಹಿಂದೆ ಕುಂಟೆ, ಎತ್ತಿನ ಕರದಿಂದ ಭೂಮಿ ಉಳುಮೆ ಮಾಡಿದರೆ ಎರಡು ಇಂಚು ಮಣ್ಣು ಕಿತ್ತಿ ಅಲ್ಲಿಯೇ ಉಳಿಯುತ್ತಿತ್ತು. ಮಣ್ಣಿನ ಸವಕಳಿ ತಪ್ಪುತ್ತಿತ್ತು. ಈಗ ಹೆಚ್ಚಾಗುತ್ತಿದೆ.

ಶ್ರೀನಾಥ್ ತೂನಾ, ರೈತ, ಮುಸಲಾಪುರ, ಕೊಪ್ಪಳ ಜಿಲ್ಲೆ

ಒಂದನೇ ಪುಟದಿಂದ..

‘ಫಲವತ್ತಾದ ಮಣ್ಣು, ಅದಕ್ಕೆ ಕೇವಲ ರಾಸಾಯನಿಕಗಳನ್ನು ನೀಡುವುದು ಮತ್ತು ನೀರು ಪೂರೈಕೆಯು ಆಹಾರ ಉತ್ಪಾದನೆಯ ಮೇಲೆ ನೇರ ಪರಿಣಾಮ ಬೀರುತ್ತದೆ. ಕಾಲಕ್ರಮೇಣ, ಮಣ್ಣು ಅದರ ಪೋಷಕಾಂಶಗಳನ್ನು ಕಳೆದು-ಕೊಳ್ಳುತ್ತಿರುವುದು ಎಲ್ಲೆಡೆ ಗೋಚರಿಸುತ್ತಿದೆ. ಈ ಅಪಾಯ ಹಿಂದಿಗಿಂತಲೂ ಈಗ ತೀವ್ರವಾಗಿದೆ’ ಎನ್ನುತ್ತಾರೆ ಜಿಕೆವಿಕೆಯ ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ ವಿಭಾಗದ ಪ್ರಾಧ್ಯಾಪಕ ಸತೀಶ್.

ಸಕಲ ಜೀವರಾಶಿಗಳಿಗೆ ಮಣ್ಣು ಅತ್ಯಂತ ಮುಖ್ಯವಾದುದು. ಇದರ ಫಲವತ್ತತೆ ಕಾಪಾಡಲು ಸಾವಯವ ಗೊಬ್ಬರ ಹೆಚ್ಚಿಸಿ, ಕೀಟನಾಶಕಗಳ ಬಳಕೆ ಕಡಿಮೆ ಮಾಡಬೇಕು. ಅಲ್ಲದೆ, ಮಣ್ಣಿನ ಪರೀಕ್ಷೆ ನಡೆಸಿ, ಅದಕ್ಕೆ ಅನುಗುಣವಾಗಿ ರಸಗೊಬ್ಬರ ನೀಡಬೇಕು. ಇದಕ್ಕಾಗಿಯೇ ಪ್ರತಿ ಜಿಲ್ಲೆಯಲ್ಲಿ ಮಣ್ಣಿನ ಆರೋಗ್ಯ ಕೇಂದ್ರಗಳಿವೆ. ಮಣ್ಣಿನ ತಪಾಸಣೆ ನಡೆಸಿ ರೈತರಿಗೆ ಹೆಲ್ತ್‌ಕಾರ್ಡ್ ನೀಡುವ ಯೋಜನೆ 2014ರಿಂದಲೇ ಜಾರಿಯಲ್ಲಿದೆ. ಆದರೆ, ಈ ಕಾರ್ಯ ಪರಿಣಾಮ-ಕಾರಿಯಾಗಿ ಆಗುತ್ತಿಲ್ಲ.

’ಮಣ್ಣಿಗೆ ಯಾವ ಪ್ರಮಾಣದಲ್ಲಿ ಪೋಷ-ಕಾಂಶಗಳನ್ನು ನೀಡಬೇಕು ಎಂದು ರೈತರಿಗೆ ತಿಳಿಸಬೇಕು. ಆದರೆ, ಕೆಳ ಹಂತದಲ್ಲಿ ಈ ಕಾರ್ಯ ಪರಿಣಾಮಕಾರಿಯಾಗಿ ಆಗುತ್ತಿಲ್ಲ. ಬಹಳಷ್ಟು ರೈತರಿಗೆ ಮಣ್ಣು ಪರೀಕ್ಷೆ ಬಗ್ಗೆ ಮಾಹಿತಿಯೇ ಎಲ್ಲ’ ಎನ್ನುತ್ತಾರೆ ಸಾಯಿಲ್ ಟ್ರಸ್ಟ್‌ನ ಪಿ.ಶ್ರೀನಿವಾಸ್.

ಮಣ್ಣಿನ ಪರೀಕ್ಷೆಗೆ ಆರು ಗಂಟೆ ಸಮಯಾವಕಾಶ ಬೇಕಾಗುತ್ತದೆ. ಆದರೆ ಇದನ್ನು ತರಾತುರಿಯಲ್ಲಿ ಕೇವಲ 2–3 ಗಂಟೆಯಲ್ಲಿ ಮಾಡುತ್ತಾರೆ. ಅಲ್ಲದೆ ಪ್ರಯೋಗಾಲಯಗಳಲ್ಲಿ ಅಗತ್ಯವಾದ ಉಪಕರಣಗಳು, ಪರಿಣತಿ ಪಡೆದ ಸಿಬ್ಬಂದಿ ಇಲ್ಲ. ಮಣ್ಣಿನ ಆರೋಗ್ಯ, ಸಾವಯವ ಅಂಶಗಳ ಪ್ರಮಾಣದ ಬಗ್ಗೆ ರೈತರಿಗೆ ನಿಖರವಾದ ಮಾಹಿತಿ ನೀಡುವ ಕೆಲಸ ವೈಜ್ಞಾನಿಕವಾಗಿ ಆಗುತ್ತಿಲ್ಲ ಎಂಬುದು ಶ್ರೀನಿವಾಸ್ ಅವರ ಅಸಮಾಧಾನ.

ರಾಜ್ಯದಲ್ಲಿನ ಒಟ್ಟು 190.50 ಲಕ್ಷ ಹೆಕ್ಟೇರ್ ಪೈಕಿ 40.32 ಲಕ್ಷ ಹೆಕ್ಟೇರ್ ಭೂಮಿ ನೀರಾವರಿ ಪ್ರದೇಶವಾಗಿದ್ದರೆ, 129.70 ಲಕ್ಷ ಹೆಕ್ಟೇರ್ ಜಲಾನಯನ ಪ್ರದೇಶವಾಗಿದೆ. ಉಳಿದ ಪ್ರದೇಶ ಅರಣ್ಯ, ರಸ್ತೆಗಳು, ಜನವಸತಿ ಇತ್ಯಾದಿಗೆ ಸೇರಿದ್ದಾಗಿದೆ. ಕಾವೇರಿ ನೀರಾವರಿ ನಿಗಮ, ಕೃಷ್ಣಾ ಭಾಗ್ಯಜಲನಿಗಮ, ಕರ್ನಾಟಕ ನೀರಾವರಿ ನಿಗಮ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಮಣ್ಣಿನ ಸವಕಳಿ ಸಮಸ್ಯೆ ಇದೆ. ಕೆಲವು ಕಡೆ ಜಾಸ್ತಿ ಇರಬಹುದು, ಕೆಲವು ಕಡೆ ಕಡಿಮೆ ಇರಬಹುದು. ಸಮಸ್ಯೆಯಂತೂ ಇದ್ದೇ ಇದೆ ಎನ್ನುತ್ತಾರೆ ಅಧಿಕಾರಿಗಳು.

ವಿವಿಧ ಜಲಾನಯನ ಯೋಜನೆಗಳಡಿ ಸುಮಾರು 73.25 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಣ್ಣಿನ ಫಲವತ್ತತೆ ಹೆಚ್ಚಿಸಲಾಗಿದೆ. 9.52 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಣ್ಣಿನ ಸಂರಕ್ಷಣೆಯ ಯೋಜನೆಗಳು ಅನುಷ್ಠಾನದ ವಿವಿಧ ಹಂತಗಳಲ್ಲಿವೆ. ಇನ್ನುಳಿದ 46.93 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಣ್ಣಿನ ಫಲವತ್ತತೆ ಹೆಚ್ಚಿಸಲು ಕಾರ್ಯಕ್ರಮ ರೂಪಿಸಬೇಕಾಗಿದೆ. ಅನುದಾನದ ಕೊರತೆಯಿಂದಾಗಿ ಈ ಕಾರ್ಯ ಇನ್ನೂ ಸಾಧ್ಯವಾಗಿಲ್ಲ.

ಕುಸಿದ ಇಳುವರಿ: ಮಣ್ಣಿನಲ್ಲಿ ಪ್ರಮುಖವಾಗಿ ಸಾವಯವ ಅಂಶ ಕಡಿಮೆಯಾಗುತ್ತಿರುವುದರಿಂದ ಬೆಳೆಗಳ ಇಳುವರಿ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಮಣ್ಣು ಪೋಷಕಾಂಶವನ್ನು ಕಳೆದುಕೊಳ್ಳುವ ಮುನ್ನ ಒಂದು ಎಕರೆ ಪ್ರದೇಶದಲ್ಲಿ ಸರಾಸರಿ 30 ಕ್ವಿಂಟಲ್ ಇಳುವರಿ ಬರುತ್ತಿದ್ದರೆ, ಈಗ ಅದೇ ಭೂಮಿಯಲ್ಲಿ 10ರಿಂದ 15 ಕ್ವಿಂಟಲ್ ಮಾತ್ರ ಇಳುವರಿ ಬರುತ್ತಿದೆ.

‘ನಮಗೆ 4 ಎಕರೆ ಜಮೀನು ಇದೆ. 10 ವರ್ಷಗಳಿಂದ ಜಮೀನಿನಲ್ಲಿ ಸವಳು ಜಾಸ್ತಿಯಾಗಿದ್ದು, ಇಳುವರಿ ಕಡಿಮೆಯಾಗಿದೆ. ಮೊದಲು ಕಬ್ಬಿನ ಇಳುವರಿ ಸರಾಸರಿ 65 ಟನ್ ಇತ್ತು, ಸವಕಳಿಯ ನಂತರ ಇಳುವರಿ 35 ಟನ್‌ಗೆ ಇಳಿದಿದೆ’ ಎನ್ನುತ್ತಾರೆ ಬಾಗಲಕೋಟೆ ಜಿಲ್ಲೆ ಚಿಕ್ಕಾಲಗುಂಡಿ ಬೆಳೆಗಾರ ಪೀರ್‌ಸಾಬ್ ಬುಡ್ನೇಶಿ.

ಸಾವಯವದಲ್ಲಿ ಸತು ಬಹಳ ಮುಖ್ಯವಾದ ಪೋಷಕಾಂಶ. ಇತರ ಪೋಷಕಾಂಶಗಳಾದ ಕಬ್ಬಿಣ, ತಾಮ್ರ, ಮ್ಯಾಂಗನೀಸ್, ಬೋರಾನ್, ಕ್ಲೋರಿನ್ ಪೋಷಕಾಂಶ ಬೆಳೆಯ ಇಳುವರಿಗೆ ಪರಿಣಾಮಕಾರಿಯಾಗಿವೆ. ಇವುಗಳ ಬಳಕೆಯಿಂದ ರಾಸಾಯನಿಕ ಗೊಬ್ಬರ, ಕೀಟನಾಶಕಗಳಿಂದ ಆಗುವ ಹಾನಿಯನ್ನು ತಡೆಯಬಹುದು. ಆದರೆ, ಈ ಬಗ್ಗೆ ರೈತರಿಗೆ ಮಾಹಿತಿಯ ಕೊರತೆ ಇದೆ.

ಕಾವೇರಿ ಜಲಾನಯನ ಪ್ರದೇಶದಲ್ಲಿ ಬೆಳೆಗೆ ಹೆಚ್ಚು ನೀರು ಬೇಡುವ ಕಬ್ಬು, ಭತ್ತ ಮುಂತಾದ ಬೆಳೆಗಳಿಗೆ ಆದ್ಯತೆ ನೀಡಲಾಗುತ್ತಿದೆ. ಇದರಿಂದಾಗಿ, ಇಲ್ಲಿನ ಶೇ 59ಕ್ಕೂ ಹೆಚ್ಚು ಪ್ರದೇಶದ ಮಣ್ಣಿನಲ್ಲಿ ಹೆಚ್ಚಿನ ಲವಣಾಂಶ ಇರುವುದು, ಕೇಂದ್ರ ಸರ್ಕಾರದ ರಾಷ್ಟ್ರೀಯ ಮಣ್ಣು ಸರ್ವೇಕ್ಷಣಾ ಮತ್ತು ಭೂಬಳಕೆ ಯೋಜನಾ ಸಂಸ್ಥೆಯ (ಎನ್‌ಬಿಎಸ್‌ಎಸ್) ವಿಜ್ಞಾನಿಗಳು ನಡೆಸಿದ ಅಧ್ಯಯನದಲ್ಲಿ ಪತ್ತೆಯಾಗಿದೆ. ಈ ಸಮಸ್ಯೆಯಿಂದ ಇಡೀ ಕಾವೇರಿ ಜಲಾನಯನ ಪ್ರದೇಶದಲ್ಲಿ ವಾರ್ಷಿಕ ₹850 ಕೋಟಿಗೂ ಹೆಚ್ಚು ಆರ್ಥಿಕ ನಷ್ಟವಾಗುತ್ತಿದೆ ಎಂದು ಅಂದಾಜಿಸಲಾಗಿದೆ. ಎನ್‌ಬಿಎಸ್‌ಎಸ್ ಸಂಸ್ಥೆಯು 2014ರಿಂದ 2019ರ ಅವಧಿಯಲ್ಲಿ ಏಳು ಜಿಲ್ಲೆಗಳ 11 ತಾಲ್ಲೂಕುಗಳ 14.5 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸಮೀಕ್ಷೆ ನಡೆಸಿ ಅಧ್ಯಯನ ವರದಿ ಸಿದ್ಧಪಡಿಸಿದೆ. ಸಸ್ಯ ಸಂಪತ್ತು ಕುಸಿದಿರುವುದು, ಹವಾಮಾನ ಬದಲಾವಣೆಯಿಂದಾಗಿ ದಿಢೀರ್ ಪ್ರವಾಹ ಮತ್ತು ಒಂದೇ ದಿನ ಅತಿ ಹೆಚ್ಚು ಮಳೆ ಬೀಳುವುದು ಮುಂತಾದ ನೈಸರ್ಗಿಕ ಕಾರಣಗಳು ಮಣ್ಣು ಸವಕಳಿಗೆ ಪ್ರಮುಖವಾಗಿರುವುದು ಅಧ್ಯಯನದಿಂದ ತಿಳಿದು ಬಂದಿದೆ.

’ಮಣ್ಣಿಗೆ ಜೀವ ತುಂಬುವುದು ಸಾವಯವ ಅಂಶ. ಮಣ್ಣಿನ ರಚನೆಯೂ ಆರೋಗ್ಯವಾಗಿ-ರಬೇಕು. ಆಗ ಮಾತ್ರ ಬೆಳೆಗಳಿಗೆ ಅಗತ್ಯವಿರುವ ಉತ್ತಮ ಪೋಷಕಾಂಶಗಳು ದೊರೆಯಲು ಸಾಧ್ಯ. ಮಣ್ಣಿನಲ್ಲಿ ಸಾವಯವ ಅಂಶ 0.5ಕ್ಕಿಂತಲೂ ಹೆಚ್ಚು ಇರಬೇಕು. 0.5 ಅಂಶಕ್ಕಿಂತ ಕಡಿಮೆ ಇದ್ದರೆ ಮಣ್ಣು ಸತ್ವಹೀನವಾಗುತ್ತದೆ ಅಥವಾ ಮರಳಾಗುತ್ತದೆ’ ಎನ್ನುತ್ತಾರೆ ಎನ್‌ಬಿಎಸ್‌ಎಸ್ ಪ್ರಧಾನ ವಿಜ್ಞಾನಿ ರಾಜೇಂದ್ರ ಹೆಗಡೆ.

ಕಬ್ಬು ಬೆಳೆಯುವ ಪ್ರದೇಶಗಳಲ್ಲಿ ಡಿಎಪಿ ರಸಗೊಬ್ಬರ ಹೆಚ್ಚು ಬಳಕೆಯಾಗುತ್ತದೆ. ಕಪ್ಪು ಮಣ್ಣು ಹೆಚ್ಚು ಇರುವ ಉತ್ತರ ಕರ್ನಾಟಕದಲ್ಲಿ ಜಿಂಕ್ ಮತ್ತು ಕಬ್ಬಿಣ ಅಂಶ ಹೆಚ್ಚಿಗೆ ಇದೆ. ಇಲ್ಲಿ ಬೆಳೆಗಳಿಗೆ ಲಘು ಪೋಷಕಾಂಶಗಳು ಅತ್ಯಗತ್ಯ. ಈ ಪೋಷಕಾಂಶಗಳ ಕೊರತೆಯಾದರೂ ಅದೇ ಮುಖ್ಯ ಸಮಸ್ಯೆಯಾಗಬಹುದು ಎನ್ನುತ್ತಾರೆ ವಿಜ್ಞಾನಿಗಳು. ಇದೀಗ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಬೋರಾನ್ ಕೊರತೆ ಕಂಡು ಬಂದಿದೆ. ದಕ್ಷಿಣ ಕರ್ನಾಟಕದ ಕೆಂಪು ಮಣ್ಣಿನಲ್ಲಿ ಶೇ 96ರಷ್ಟು ಬೋರಾನ್ ಕೊರತೆ ಇದೆ.

ನೀರಾವರಿ ಪ್ರದೇಶಗಳಲ್ಲಿ ಬೆಳೆಗಳಿಗೆ ಹೆಚ್ಚು ನೀರು ಬಳಸುವುದು ಸಾಮಾನ್ಯ. ಮಣ್ಣಿಗೆ ನೀರು ಎಷ್ಟು ಇಂಗಿಸುವ ಶಕ್ತಿ ಇದೆಯೋ ಅಷ್ಟು ಮಾತ್ರ ಕೊಡಬೇಕು. ಆದರೆ, ಅವೈಜ್ಞಾನಿಕ ಪದ್ಧತಿಗಳಿಂದ ಹೆಚ್ಚು ನೀರು ಹರಿಸುವುದರಿಂದ ಮಣ್ಣಿನಲ್ಲಿ ಜವಳು, ಸವಕಳಿ ಮತ್ತು ಲವಣಾಂಶ ಹೆಚ್ಚುತ್ತದೆ. ಹವಾಮಾನ ಬದಲಾವಣೆಯಿಂದಲೂ ಮಣ್ಣು ಮರಳು ರೂಪ ಪಡೆಯುವುದು ಮುಂದುವರಿಯುತ್ತಿದೆ. ಒಂದೇ ರೀತಿಯ ಬೆಳೆ ಪದ್ಧತಿಯನ್ನು ಹಲವು ವರ್ಷಗಳಿಂದ ಅನುಸರಿಸುತ್ತಿರುವುದು ಸವಕಳಿಗೆ ಕಾರಣವಾಗಿದೆ. ಕಪ್ಪು ಮಣ್ಣಿನ ಪ್ರದೇಶದಲ್ಲಿ ಸವಕಳಿ ಹೆಚ್ಚಾಗಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ.

’1950ರಲ್ಲಿ ಸಾರಜನಕ ಕೊರತೆ ಮಾತ್ರವೇ ಕಂಡು ಬಂದಿತ್ತು. ಈಗ ಹಲವು ಪೋಷಕಾಂಶಗಳ ಕೊರತೆ ಕಂಡು ಬಂದಿದೆ. ನೀರಾವರಿ ಪ್ರದೇಶಗಳಲ್ಲಿ ಲವಣಾಂಶ ಹೆಚ್ಚುತ್ತಿದೆ. ಭತ್ತದ ಗದ್ದೆಗಳಲ್ಲಿ ನಿರಂತರವಾಗಿ ನೀರು ನಿಲ್ಲಿಸುವುದು ಇದಕ್ಕೆ ಮುಖ್ಯ ಕಾರಣ. ಹೀಗಾಗಿ, ರೈತರು ವೈಜ್ಞಾನಿಕ ಪದ್ಧತಿ-ಗಳನ್ನು ಅಳವಡಿಸಿಕೊಳ್ಳಬೇಕು ಮತ್ತು ಕಾಲಕ್ಕೆ ತಕ್ಕಂತೆ ಕೃಷಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು’ ಎನ್ನುತ್ತಾರೆ ಪ್ರಾಧ್ಯಾಪಕ ಸತೀಶ್.

ಮಣ್ಣಿನ ಫಲವತ್ತತೆ ಕಾಪಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಭೂ ಚೇತನ ಯೋಜನೆಯಡಿಯಲ್ಲಿ ರಾಜ್ಯದ 16 ಜಿಲ್ಲೆಗಳಲ್ಲಿ 12.79 ಲಕ್ಷ ಹೆಕ್ಟೇರ್ ಜಮೀನಿನಲ್ಲಿ ವೈಜ್ಞಾನಿಕ ಬೇಸಾಯ ಪದ್ಧತಿ ಅಳವಡಿಸಲಾಗಿತ್ತು. 2009ರಿಂದ 2018ರವರೆಗೆ ಈ ಯೋಜನೆ ಜಾರಿಯಲ್ಲಿತ್ತು. ಒಟ್ಟು 1.04 ಕೋಟಿ ಫಲಾನುಭವಿಗಳು ಯೋಜನೆ ಪ್ರಯೋಜನ ಪಡೆದಿದ್ದರು. ಆದರೆ, ಯೋಜನೆಯ ಅವಧಿ ಮುಗಿದ ಬಳಿಕ ಮರುಜಾರಿಗೊಳಿಸಲು ರಾಜ್ಯ ಸರ್ಕಾರ ಆಸಕ್ತಿ ತೋರಿಸಲಿಲ್ಲ.

ಪರ್ಯಾಯ ಬೆಳೆಗಳತ್ತ ಯೋಚನೆ: ಬರಗಾಲ ಪೀಡಿತ ಕಲ್ಯಾಣ ಕರ್ನಾಟಕದ ರಾಯಚೂರು, ಕೊಪ್ಪಳ, ಯಾದಗಿರಿ ಜಿಲ್ಲೆಗಳಲ್ಲಿ ಲಕ್ಷಾಂತರ ಹೆಕ್ಟೇರ್ ಭೂಮಿಯು ಅತಿಯಾದ ರಾಸಾಯನಿಕಗಳ ಬಳಕೆ, ಬೆಳೆಗಳಿಗೆ ಸದಾ ನೀರು ನಿಲ್ಲಿಸುವ ಕ್ರಮದಿಂದಾಗಿ ತನ್ನ ಫಲವತ್ತತೆಯನ್ನು ಕಳೆದುಕೊಂಡು ಬರಡಾಗುತ್ತಿದೆ. ರಾಯಚೂರು ಜಿಲ್ಲೆಯಲ್ಲಿ ಒಟ್ಟು 5,41,953 ಹೆಕ್ಟೇರ್ ಬಿತ್ತನೆ ಪ್ರದೇಶ ಇದೆ. ಇಲ್ಲೂ ಸಹ ಭತ್ತಕ್ಕೆ ಪ್ರಾಶಸ್ತ್ಯ ನೀಡುತ್ತಿದ್ದಾರೆ. ಒಟ್ಟಾರೆ 1,70,363 ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತದೆ.

ಮಳೆಯಾಶ್ರಿತ ಕೃಷಿ ಪ್ರದೇಶವಾಗಿದ್ದ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ 1953ರಲ್ಲಿ ಜಲಾಶಯ ನಿರ್ಮಿಸಿದ ನಂತರ ಬಹುತೇಕ ರೈತರು ಭತ್ತವನ್ನೇ ಬೆಳೆಯುತ್ತಿದ್ದಾರೆ. ಕಾಲುವೆ ಅಂಚಿನಲ್ಲಿ ಶೇ 8ರಷ್ಟು ಪ್ರದೇಶದಲ್ಲಿ ಮಾತ್ರ ಭತ್ತ ಬೆಳೆಯಲು ಅವಕಾಶ ಇದೆ. ಆದರೆ, ಕಾಲುವೆ ಪಕ್ಕದ ಶೇಕಡ 44ರಷ್ಟು ಪ್ರದೇಶದಲ್ಲಿ ಭತ್ತ ಬೆಳೆಯುತ್ತಿದ್ದಾರೆ. ಎಡದಂಡೆ ಕಾಲುವೆಯ 3.20 ಲಕ್ಷ ಹೆಕ್ಟೇರ್ ಪ್ರದೇಶದ ಪೈಕಿ ಬೆಳೆ 1 ಲಕ್ಷ ಹೆಕ್ಟೇರ್ ಭೂಮಿ ಸವಳಾಗಿದೆ.

‘ಮಣ್ಣಿನ ಫಲವತ್ತತೆ ಕಡಿಮೆಯಾಗಲು ರಾಸಾಯನಿಕ ಗೊಬ್ಬರಗಳ ಬಳಕೆ ಒಂದೇ ಕಾರಣ ಅಲ್ಲ. ರೈತರು ಸಾಂಪ್ರದಾಯಿಕ ಪದ್ಧತಿಯಲ್ಲಿ ಕೃಷಿ ಮಾಡುವುದನ್ನು ನಿಲ್ಲಿಸಿದ್ದಾರೆ. ಸರಿಯಾಗಿ ಮಣ್ಣು ಪರೀಕ್ಷೆ ಮಾಡಿಸದೇ ಮನಸೋ ಇಚ್ಛೆ ರಾಸಾಯನಿಕ ಗೊಬ್ಬರ ಬಳಸುತ್ತಿದ್ದಾರೆ. ಕೃಷಿ ವಿಜ್ಞಾನಿಗಳು ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳು ರೈತರಿಗೆ ನೀಡುವ ಸಲಹೆಗಳನ್ನು ರೈತರು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಮಳೆ ಬಂದ ತಕ್ಷಣ ಮತ್ತೆ ತಮ್ಮದೇ ನಿರ್ಧಾರ ಮಾಡುತ್ತಾರೆ. ಈ ಎಲ್ಲ ಅಂಶಗಳು ಭೂಮಿಯ ಫಲವತ್ತತೆ ಹಾಳಾಗಲು ಕಾರಣವಾಗಿದೆ’ ಎಂದು ರಾಯಚೂರು ಕೃಷಿ ವಿ.ವಿ. ಗಂಗಾವತಿ ಕೃಷಿ ಸಂಶೋಧನಾ ಕೇಂದ್ರದ ವಿಜ್ಞಾನಿ ಡಾ. ಅಣ್ಣನಗೌಡ ವಿ.ಕರೇಗೌಡರ ವಿವರಿಸುತ್ತಾರೆ.

‘ಶಹಾಪುರ ತಾಲ್ಲೂಕಿನಲ್ಲಿ ರೈತರು ಹೆಚ್ಚಾಗಿ ವಾಣಿಜ್ಯ ಬೆಳೆಯಾದ ಹತ್ತಿ ಹಾಗೂ ಮೆಣಸಿನಕಾಯಿ ಬೆಳೆಯನ್ನು ಹಲವು ವರ್ಷಗಳಿಂದ ಬೆಳೆಯುತ್ತಾ ಬರುತ್ತಿದ್ದಾರೆ. ಇದರಿಂದ ಭೂಮಿಯಲ್ಲಿ ಸತ್ವ ಕಡಿಮೆಯಾಗುವುದರ ಜತೆಗೆ ಇಳುವರಿ ಗಣನೀಯವಾಗಿ ಕಡಿಮೆಯಾಗಿದೆ. ರೈತರು ಪರ್ಯಾಯ ಬೆಳೆ ಬೆಳೆಯಬೇಕು’ ಎನ್ನುತ್ತಾರೆ ಶಹಾಪುರದ ಭೀಮರಾಯನಗುಡಿ ಕೃಷಿ ಮಹಾವಿದ್ಯಾಲಯದ ಕೃಷಿ ವಿಜ್ಞಾನಿ ಡಾ.ದಯಾನಂದ ಹೊನ್ನಾಳೆ.

ಮಣ್ಣಿನ ಫಲವತ್ತತೆಯನ್ನು ಸಂರಕ್ಷಿಸುವ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡಬೇಕು, ರಾಜ್ಯದ ಎಲ್ಲೆಡೆ ಮಣ್ಣಿನ ಪರೀಕ್ಷೆ ಮಾಡುವ ಮೂಲಕ ರೈತರಿಗೆ ಇನ್ನಷ್ಟು ಪರಿಣಾಮ-ಕಾರಿಯಾಗಿ ಮಾಹಿತಿ ಒದಗಿಸುವ ಕೆಲಸ ತ್ವರಿತವಾಗಿ ಆಗಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ.

ಪೂರಕ ಮಾಹಿತಿ: ಸಚ್ಚಿದಾನಂದ ಕುರಗುಂದ, ಎಂ.ಜಿ. ಬಾಲಕೃಷ್ಣ, ಯೋಗೇಶ್ ಮಾರೇನಹಳ್ಳಿ, ಬಿ.ಜೆ. ಧನ್ಯಪ್ರಸಾದ್, ಮನೋಜಕುಮಾರ್ ಗುದ್ದಿ, ಚಂದ್ರಕಾಂತ ಮಸಾನಿ, ಬಿ.ಜಿ. ಪ್ರವೀಣಕುಮಾರ್, ಪ್ರಮೋದ

ಕಾವೇರಿ ಅಚ್ಚುಕಟ್ಟು: 8 ಸಾವಿರ ಹೆಕ್ಟೇರ್ ಪ್ರದೇಶ ರಸಹೀನ

ಕೃಷಿ ಭೂಮಿಯಲ್ಲಿ ದೀರ್ಘಕಾಲದವರೆಗೆ ನೀರು ನಿಲ್ಲುವಂತೆ ಮಾಡಿ, ರಾಸಾಯನಿಕ ಗೊಬ್ಬರ ಹಾಕಿ ಬೆಳೆ ಬೆಳೆಯುವ ರೈತರ ಸಂಖ್ಯೆ ಹೆಚ್ಚಾಗಿದೆ. ಅವೈಜ್ಞಾನಿಕವಾಗಿ ನೀರು ಕಟ್ಟುವುದರಿಂದಲೇ ಕಾವೇರಿ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯಲ್ಲಿ 8 ಸಾವಿರ ಹೆಕ್ಟೇರ್ ಕೃಷಿ ಭೂಮಿ ಸವಕಳಿಯಾಗಿದೆ.

ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಹಾಸನ ಜಿಲ್ಲಾ ವ್ಯಾಪ್ತಿಯನ್ನೊಳಗೊಂಡ ಅಚ್ಚುಕಟ್ಟು ಪ್ರದೇಶದಲ್ಲಿ 2013ರಲ್ಲಿ ನಡೆದ ಅಧ್ಯಯನದಲ್ಲಿ 5 ಸಾವಿರ ಹೆಕ್ಟೇರ್ ಕೃಷಿ ಭೂಮಿ ಸವಕಳಿಯಾಗಿತ್ತು. ಈಚೆಗೆ ನಡೆದ ಅಧ್ಯಯನದಲ್ಲಿ ಸವಕಳಿ ಪ್ರದೇಶ 8 ಸಾವಿರ ಹೆಕ್ಟೇರ್‌ಗೆ ಏರಿಕೆಯಾಗಿದೆ. ಯೂರಿಯಾ, ಡಿಎಪಿ, 10–26–26 ರಸಗೊಬ್ಬರ ಬಳಕೆಯೇ ಸವಕಳಿಗೆ ಮುಖ್ಯ ಕಾರಣ ಎನ್ನುತ್ತಾರೆ ಮಣ್ಣಿನ ತಜ್ಞರು.

ಒಟ್ಟು ಸವಕಳಿ ಪ್ರದೇಶದಲ್ಲಿ 200 ಹೆಕ್ಟೇರ್ ಪ್ರದೇಶ ಯಾವುದೇ ಬೆಳೆ ಬೆಳೆಯಲಾಗದಷ್ಟು ರಸಹೀನಗೊಂಡಿದೆ. ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲೇ ಈ ಪ್ರದೇಶ ಹೆಚ್ಚು ಕಂಡು ಬಂದಿದೆ. ಪಾಂಡವಪುರ, ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು ತಾಲ್ಲೂಕು ವ್ಯಾಪ್ತಿಯಲ್ಲಿ ಕೆಆರ್‌ಎಸ್ ಜಲಾಶಯದ ನೀರಿನ ಹರಿವು ಹೆಚ್ಚಾಗಿದ್ದು ಮಣ್ಣಿನ ಮೇಲ್ಪದರ ಹಾಳಾಗಿರುವುದು ಅಧ್ಯಯನದಿಂದ ಕಂಡುಬಂದಿದೆ.

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾಲಯ (ವಿ.ಸಿ.ಫಾರಂ ಕೃಷಿ ವಿಜ್ಞಾನ ಕೇಂದ್ರ, ಮಂಡ್ಯ) ಹಾಗೂ ಅರಣ್ಯ ಇಲಾಖೆ ಸಹಯೋಗದಲ್ಲಿ ಅಧ್ಯಯನ ನಡೆದಿದ್ದು ಭೂಮಿಯ ಎರಡೂವರೆ ಅಡಿ ಮೇಲ್ಪದರ ಸವಳು– ಜವಳಾಗಿರುವುದು ಕಂಡುಬಂದಿದೆ. ರಾಸಾಯನಿಕ ಗೊಬ್ಬರ ಬಳಕೆಯಿಂದ ರಂಜಕಾಂಶ ಹೆಚ್ಚಾಗಿದ್ದು ಮಣ್ಣಿನ ಫಲವತ್ತತೆ ಹಾಳಾಗಿದೆ.

‘ಹೆಚ್ಚು ನೀರಿನ ಹರಿವು, ನೀರಿನ ಕಟ್ಟುವಿಕೆಯಿಂದಾಗಿ ಮಣ್ಣಿನ ಕಣಗಳು ಛಿದ್ರಗೊಳ್ಳುತ್ತಿವೆ. ನೀರಿನ ಜೊತೆಗೆ ರಾಸಾಯನಿಕ ಗೊಬ್ಬರ ಬೆರೆತು ಭೂಮಿಯ ಮೇಲ್ಪದರ ಹಾಳಾಗುತ್ತಿದೆ’ ಎನ್ನುತ್ತಾರೆ ವಿ.ಸಿ ಫಾರಂ ಕೃಷಿ ವಿಜ್ಞಾನ ಕೇಂದ್ರದ ಮಣ್ಣು ತಜ್ಞೆ ಡಾ.ಅತೀಫಾ ಮುನಾವರಿ.

ರೈತರ ಆದಾಯ ದ್ವಿಗುಣಕ್ಕೆ ಮಣ್ಣು ಸಂರಕ್ಷಣೆ ಅಗತ್ಯ

ಮಣ್ಣಿನ ಸವಕಳಿ ತಪ್ಪಿಸಲು ಸರ್ಕಾರ ರೂಪಿಸಿರುವ ಯೋಜನೆಗಳು ಯಶಸ್ವಿಯಾಗಿದ್ದರೂ ಸ್ಥಿರತೆಯನ್ನು ಕಾಪಾಡಿಕೊಳ್ಳಲು ವಿಫಲವಾಗಿವೆ. ನಿರಂತರವಾಗಿ ಮಣ್ಣು ಸಂರಕ್ಷಣೆಯ ಬಗ್ಗೆ ಕಾಳಜಿವಹಿಸದಿರುವುದೇ ಇದಕ್ಕೆ ಮುಖ್ಯ ಕಾರಣ.

ಭೂಚೇತನ ಸೇರಿದಂತೆ ಹಲವಾರು ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಿದೆ. ವಿಶ್ವಬ್ಯಾಂಕ್ ಅನುದಾನದ ಅಡಿಯಲ್ಲೂ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಈ ಯೋಜನೆಗಳು ಖಂಡಿತವಾಗಿ ಯಶಸ್ಸು ಸಾಧಿಸಿವೆ. ಆದರೆ, ಯಾವುದಾದರೂ ಒಂದು ಯೋಜನೆ ಸ್ಥಗಿತವಾದ ನಂತರ ಮತ್ತೆ ಯಥಾಸ್ಥಿತಿಗೆ ಮರಳುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದರಿಂದ, ಮೂಲ ಉದ್ದೇಶವೇ ಈಡೇರುತ್ತಿಲ್ಲ.

ರೈತರ ಆದಾಯ ದ್ವಿಗುಣಗೊಳಿಸುವ ಯೋಜನೆಯಲ್ಲಿ ಮಣ್ಣು ಸಂರಕ್ಷಣೆಯೇ ಪ್ರಮುಖ ಪಾತ್ರವಹಿಸುತ್ತದೆ. ಈ ನಿಟ್ಟಿನಲ್ಲಿ ಸ್ಥಳೀಯವಾಗಿ ರೈತರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕಾಗಿದೆ. ಹಲವು ರೈತರು ಸರ್ಕಾರದ ಯಾವುದೇ ರೀತಿಯ ನೆರವು ಇಲ್ಲದೆ ಮಣ್ಣು ಸಂರಕ್ಷಣೆಗೆ ಕಾಳಜಿವಹಿಸುತ್ತಿರುವ ಉದಾಹರಣೆಗಳು ಸಾಕಷ್ಟಿವೆ. ಇನ್ನು ಕೆಲವರು ಸರ್ಕಾರದ ಮೇಲೆಯೇ ಅವಲಂಬನೆಯಾಗಿ ನಿರ್ಲಕ್ಷ್ಯ ವಹಿಸುತ್ತಾರೆ.

ಡಾ. ಸತೀಶ್, ಪ್ರಾಧ್ಯಾಪಕ. ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ ವಿಭಾಗ, ಜಿಕೆವಿಕೆ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 22-10-1998

- **ವಿರೋಧಪಕ್ಷಗಳ ಜತೆ ಪಟೇಲ್ ಶಾಮೀಲು: ದೇವೇಗೌಡ**

ಬೆಂಗಳೂರು, ಅ.21– ಜನತಾ ದಳದ ಶಾಸಕರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಅಧಿಕಾರದಲ್ಲಿ ಮುಂದುವರೆಯುವ ಉದ್ದೇಶದಿಂದ ಬಿಜೆಪಿ ಸೇರಿದಂತೆ ಕೆಲವು ವಿರೋಧ ಪಕ್ಷಗಳ ಜೊತೆ ಶಾಮಿಲಾಗಿದ್ದಾರೆ ಎಂದು ಮಾಜಿ ಪ್ರಧಾನಿ ಎಚ್. ಡಿ.ದೇವೇಗೌಡ ಆರೋಪಿಸಿದರು. ಸರ್ಕಾರ ರಕ್ಷಣೆಗೆ ಬಿಜೆಪಿಯ ಬಿ.ಎಸ್. ಯಡಿಯೂರಪ್ಪ ಸೇರಿ ಕೆಲ ವಿರೋಧಿ ಸದಸ್ಯರು ವಿಶೇಷ ಆಸಕ್ತಿ ವಹಿಸಿದ್ದಾರೆ. ಇದನ್ನೆಲ್ಲಾ ನೋಡಿದರೆ ಪಟೇಲ್ ಯಾರ ಜೊತೆ ಶಾಮಿಲಾಗಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

50 ವರ್ಷಗಳ ಹಿಂದೆ

ಸೋಮವಾರ, 22-10-1973

- **ಇಸ್ರೇಲ್ ವಾಪಸಾತಿ ಬಗ್ಗೆ ರಷ್ಯ ನಿಲುವಿನಲ್ಲಿ ಬದಲಾವಣೆ**

ಮಾಸ್ಕೊ, ಅ.21–ಪಶ್ಚಿಮ ಏಷ್ಯ ಸಮರಕ್ಕೆ ಶಾಂತಿಸೂತ್ರವನ್ನು ಕಂಡು ಹಿಡಿಯಲು ಕ್ರೆಮ್ಲಿನ್ ಭವನದಲ್ಲಿ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಹೆನ್ರಿ ಕಿಂಸಿಜರ್ ಮತ್ತು ರಷ್ಯದ ನಾಯಕರ ನಡುವೆ ಇಂದು ಮಾತುಕತೆ ನಡೆಯುತ್ತಿದ್ದಂತೆ ಪರಿಹಾರದ ಮೂಲ ಅಂಶಗಳ ಬಗ್ಗೆ ರಷ್ಯದ ನಿಲುವು ಬದಲಾಗಿರುವ ಸೂಚನೆಗಳನ್ನು ಪ್ರಾವ್ದಾ ನೀಡಿತು. ಕ್ರೆಮ್ಲಿನ್ ಭವನದಲ್ಲಿ ಮಾತುಕತೆ ಈ ದಿನ ಆರಂಭವಾಯಿತು. ರಷ್ಯದ ಕಡೆ ರಷ್ಯ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಬ್ರೆಜ್ನೇವ್ ಮತ್ತು ವಿದೇಶಾಂಗ ಸಚಿವ ಆಂಡ್ರಿ ಗ್ರೋಮಿಕೊ ಮಾತುಕತೆಯಲ್ಲಿ ಭಾಗವಹಿಸಿದ್ದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಅಕ್ಟೋಬರ್ 22, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ನವಮಿ ಗಂ. 17-45 ನಕ್ಷತ್ರ: ಶ್ರವಣ ಗಂ. 17-14 ಯೋಗ: ಶೂಲ ಗಂ 18-52 ಕರಣ: ಬಾಲವ ಗಂ. 06-55, ತುಲಾ ಮಾಸದ 06 ನೇ ದಿನ, ಮಳೆನಕ್ಷತ್ರ: ಚಿತ್ರ 4. ರಾಹುಕಾಲ: ಬೆಳಿಗ್ಗೆ 07-30 - 09-00 ಸೂರ್ಯೋದಯ: 06-26 ಸೂರ್ಯಾಸ್ತ : 06-04

ಮುಸ್ಲಿಂ ದಿನಾಂಕ : 07 ರಬಿಯುಸ್ಸಾನಿ

ದಿನ ವಿಶೇಷ : ನವರಾತ್ರಿ 9ನೇ ದಿನ, ಮಹಾ ನವಮಿ, ಆಯುಧ ಪೂಜಾ, ತ್ರಿವೆಂಡ್ರಮ್ ಆರತ್

ಅದೃಷ್ಟ ಸಂಖ್ಯೆ : 5, 4

ಮೇಷ: ರೈತರು ಮತ್ತು ವಿದ್ಯಾರ್ಥಿ ವರ್ಗಕ್ಕೆ ನಿಮ್ಮ ಪ್ರಯತ್ನ ಬಲಕ್ಕೆ ಉತ್ತಮ ಫಲ ದೊರೆಯುವುದು. ಸರ್ಕಾರಿ ನೌಕರರಿಗೆ ಉದ್ಯೋಗದಲ್ಲಿ ಹೆಚ್ಚಿನ ಸ್ಥಾನ ಮಾನ. ಉದ್ಯೋಗದಲ್ಲಿ ಎದುರಾಗಿದ್ದ ಚಿಂತೆ ದೂರ.

ವೃಷಭ: ನಿರುದ್ಯೋಗಿ ಯುವಕರಿಗೆ ಖಾಸಗಿ ಸಂಸ್ಥೆಗಳಲ್ಲಿ ತಾತ್ಕಾಲಿಕ ಅಥವಾ ಗುತ್ತಿಗೆಯ ಕೆಲಸದಂತಹ ಸಣ್ಣ-ಪುಟ್ಟ ಉದ್ಯೋಗ ದೊರೆಯಲಿದೆ. ಚಾಲಕ ವೃತ್ತಿಯವರು ಒತ್ತಡ ಎದುರಿಸಬೇಕಾಗುವುದು.

ಮಿಥುನ: ರಾಜಕೀಯ ವ್ಯಕ್ತಿಗಳಿಗೆ ಪಕ್ಷದ ವರಿಷ್ಠರೊಂದಿಗೆ ದಿಢೀರ್ ಸಮಾಲೋಚನೆ ನಡೆಸುವ ಅನಿವಾರ್ಯ ಎದುರಾಗುವುದು. ಅವಿವಾಹಿತರಿಗೆ ಸೋದರ ಮಾವನ ಸಹಾಯದಿಂದ ವಿವಾಹ ಸಂಬಂಧ ಕೂಡಿ ಬರಲಿದೆ.

ಕರ್ಕಾಟಕ: ಕ್ರೀಡಾಪಟು, ಕಲಾವಿದರು ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಪೂರ್ವ ತಯಾರಿ ಅನಿವಾರ್ಯ. ಆರಕ್ಷಕ ಅಧಿಕಾರಿಗಳಿಗೆ ಕೆಲಸದ ಒತ್ತಡ ನಿವಾರಣೆ-ಯಾಗಲಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗಲಿದೆ.

ಸಿಂಹ: ನಿಮ್ಮನ್ನು ವಂಚನೆಯ ಕಡೆಗೆ ಕರೆದೊಯ್ಯುವ ಪ್ರಯತ್ನ ನಿಮ್ಮ ಸ್ನೇಹಿತರ ಬಳಗದಲ್ಲಿ ನಡೆಯಲಿದೆ. ಸಾಮಾಜಿಕವಾಗಿ ಗೌರವ ದೊರೆತು ನೆಮ್ಮದಿ ಉಂಟಾಗುವುದು. ಕಠಿಣ ಶ್ರಮಕ್ಕೆ ಇಂದು ತಕ್ಕ ಪ್ರತಿಫಲ.

ಕನ್ಯಾ: ಪೀಠೋಪಕರಣ ವ್ಯಾಪಾರಸ್ಥರು ಪ್ರದರ್ಶನ ಮಾರಾಟದಂತಹ ಯೋಜನೆಯಿಂದ ಅಥವಾ ಜಾಹೀರಾತುಗಳ ಮೂಲಕ ಬೆಳಕಿಗೆ ಬರುವ ಪ್ರಯತ್ನ ಮಾಡಬಹುದು. ಮೆಕ್ಯಾನಿಕ್ ಕೆಲಸಗಾರರಿಗೆ ಅಧಿಕ ವರಮಾನ.

ತುಲಾ: ನಿಮ್ಮ ಮೃದು ಮನಸ್ಸು ಹೊಸ ಜಾಗದಲ್ಲಿ ಹೊಸ ಕೆಲಸಗಳಲ್ಲಿ ಹೊಂದಿಕೊಳ್ಳಲು ಉಪಯೋಗವಾಗುವುದು. ನಿಮ್ಮ ಅಭ್ಯುದಯಕ್ಕೆ ನಿಮ್ಮ ಚಂಚಲ ಮನೋಭಾವ ಅಡ್ಡಿ ಉಂಟುಮಾಡುತ್ತದೆ.

ವೃಶ್ಚಿಕ: ಪಾಲುದಾರಿಕೆಯಲ್ಲಿ ಹೋಟೆಲ್ ನಡೆಸಲು ಒಪ್ಪಿಕೊಳ್ಳಬಹುದು. ವೃತ್ತಿ-ರಂಗದಲ್ಲಿ ತಮ್ಮತನ ಕಾಯ್ದುಕೊಳ್ಳುವುದರಿಂದ ಅಭಿವೃದ್ಧಿಗೆ ಪೂರಕ. ಉನ್ನತ ವ್ಯಾಸಂಗದವರಿಗೆ ಕೆಲಸಕ್ಕೆ ನೇರ ಆಯ್ಕೆಗೊಳ್ಳುವ ಸಂಭವವಿದೆ.

ಧನು: ತಾಂತ್ರಿಕ ಉದ್ಯೋಗಿಗಳಿಗೆ ಈಗಿರುವ ಸಂಸ್ಥೆಯಲ್ಲಿ ತಾತ್ಕಾಲಿಕ ಸಮಾಧಾನ ತಂದರೂ ಬದಲಾವಣೆಗೆ ಅವಕಾಶ ಇರುತ್ತದೆ. ಬಂದ ಅವಕಾಶ ಬಳಸಿಕೊಳ್ಳುವುದು ಉತ್ತಮ. ಶೀತ ಬಾಧೆ ಉಂಟಾಗುವುದು.

ಮಕರ: ಬೇರೆಯವರು ಮಾಡಿದ ವಂಚನೆಯ ಕೆಲಸಕ್ಕೆ ನೀವು ಹೊಣೆಗಾರಿ-ಕೆಯನ್ನು ಹೊರುವ ಪರಿಸ್ಥಿತಿಗೆ ಸಿಕ್ಕಿಕೊಳ್ಳುವ ಸನ್ನಿವೇಶ ಎದುರಾಗಬಹುದು. ಎಚ್ಚರವಾಗಿರಿ. ವಾಹನ ಮಾರಾಟಗಾರರಿಗೆ ಉತ್ತಮ ಆದಾಯ ಸಿಗಲಿದೆ.

ಕುಂಭ: ಸಮಾದಾನದಿಂದ ವಿಚಾರ ವಿನಿಮಯ ಮಾಡಿಕೊಂಡರೆ ಹಂತ ಹಂತವಾಗಿ ವಿವಾದ ನಿವಾರಣೆಯಾಗಲಿವೆ. ಉಪನ್ಯಾಸಕರಿಗೆ, ಸಂಗೀತಗಾರರಿಗೆ ಸನ್ಮಾನ ಗೌರವ. ಚರ್ಮ ರೋಗಗಳು ಎದುರಾಗಬಹುದು.

ಮೀನ: ವೃತ್ತಿಯ ಬದುಕಿನಲ್ಲಿ ಬೆಳಕಿಗೆ ಬರಲು ಅನುಕೂಲವಾಗಿರುವ ಸಲಹೆ ಪಡೆಯಲಿದ್ದೀರಿ. ಗೆಳೆಯರ ದುಃಖದ ಪರಿಸ್ಥಿತಿಗಳಿಗೆ ಸಮಾಧಾನ ಹೇಳಬೇಕಾಗುವುದು. ಉತ್ತಮ ಆದಾಯ ಪ್ರಾಪ್ತಿಯಾಗುತ್ತದೆ.


ಪದಬಂಧ 5478 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಾಡಿನಲ್ಲಿ ಪುನರಾವರ್ತನೆ ಗೊಳ್ಳುವ ಭಾಗ (3)
3.ಊಟ ಮಾಡದಿರುವುದು (4)
5.ಕರ ಕಡಿಯಲು ಬಂದಿರುವ ಭಲ್ಲೂಕ (3)
6. ಮತಿ ಇಟ್ಟುಕೊಂಡು ನೀಡಿದ ಒಪ್ಪಿಗೆ (4)
8.ಕೊಡು ಕೊಡು ಎನ್ನುತ್ತಿರುವ ಅಜ್ಜ (2)
9.ಉಮೇದುವಾರನಿಗಿರುವ ಹುರುಪು (3)
10.ವರನ ಜೊತೆಗಿರುವ ಮದುವೆ ಹೆಣ್ಣು (2)
11.ಕಾಡಿನಲ್ಲಿನ ವಾಸ (4)
12.ಈ ರಾಗ ಸಲೀಸು! (3)
15.ದಿನವೆಲ್ಲಾ ಕಳೆದ ಹೊಳೆಯ ದಂಡೆ (4)
16.ಸರದೊಡನಿರಿಸಿದ ಸಾಮಾನು (3)

ಮೇಲಿಂದ ಕೆಳಕ್ಕೆ

1.ಪತಿಯ ಜೊತೆಯಿರುವ ಹೆಂಡತಿ (2)
2.ಈತ ಹೆಂಡತಿಯನ್ನು ಕಳೆದುಕೊಂಡವನು (3)
4.ಒಳ್ಳೆಯ ಗತಿ ಅಥವಾ ಮೋಕ್ಷ (3)
5.ಚಪ್ಪಾಳೆಯನ್ನು ಹೀಗೆನ್ನಿ (5)
6.ಆ ಮದುವೆಗೆ ತರಿಸಿಕೊಂಡ ವಸ್ತು (3)
7.ಈತ ಮದುವೆಮಾಡಿಕೊಳ್ಳುತ್ತಿರುವವನು (5)
9.ಸಂತೋಷ ಹೀಗೆ ಬಂದಿದೆ (3)
11.ದನವನ್ನು ನೋಡುತ್ತಿರುವವನ ಮುಖ! (3)
13.ರಾಯರಿಂದ ಬಂದಿರುವ ನಿರೂಪ (3)
14.ತಂಬಾಕು ಕೊಯ್ಯಲು ಬಳಸಿದ ಕಿರುಗತ್ತಿ (2)



5477ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. ಬಹಿಷ್ಕಾರ 3.ನರುಗಂಪು 5.ಸದರ 7.ಪರ 9.ಗುರು 12.ಮರ 13.ಕವಿ 15.ಅಂಬಾರಿ 17.ತೆಗಳಿಕೆ 18.ಸದಾಶಯ

ಮೇಲಿಂದ ಕೆಳಕ್ಕೆ: 1.ಬಳಪ 2.ರಸ 3.ನರ 4.ಪುಕಾರು 6.ದಲ್ಲಾಳಿ 8.ರಕ್ತಸಂಚಾರ 9.ಗುಣವಾಚಕ 11.ಕಲಬಾ 12.ಮಮತೆ 14.ವಿನಯ 15.ಅಂಕೆ 16.ರಿಸ

ಸುಡೊಕು 5864

	9		2		5		6	
		6	4			8		5
	4	5			9		3	
4	6		9		7			
				4		1		6
8		7	5		6		4	9
		4			2			7
7						6		3
	8		7			2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5863 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬೆಳಗಾವಿ ಬೆಳವಣಿಗೆಗೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಸ್ಪಷ್ಟನೆ • ಸರ್ಕಾರ ಸುರಕ್ಷಿತ –ಸತೀಶ ಜಾರಕಿಹೊಳಿ ಪ್ರತಿಪಾದನೆ

‘ಒಟ್ಟಿಗೆ ಪ್ರವಾಸ, ಬಂಡಾಯ ಎನ್ನಬೇಡಿ’

ಪ್ರಜಾವಾಣಿ ವಾರ್ತೆ


ಲಕ್ಷ್ಮಿ ಹೆಬ್ಬಾಳಕರ


ಸತೀಶ ಜಾರಕಿಹೊಳಿ

ಬೆಳಗಾವಿ: ‘ಸಚಿವ ಸತೀಶ ಜಾರಕಿಹೊಳಿ ಅವರು ಏರ್ಪಡಿಸಿದ್ದ ಮೈಸೂರು ಪ್ರವಾಸದ ಪಟ್ಟಿಯಲ್ಲಿ ನಾನೂ ಇದ್ದೆ. ಆದರೆ, ಕೊನೆಯ ಕ್ಷಣದಲ್ಲಿ ನಾನು ಭದ್ರಾವತಿಗೆ ಹೋದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ತಿಳಿಸಿದರು.

ಇಲ್ಲಿ ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಶಾಸಕರಾದ ರಾಜು ಕಾಗೆ, ಮಹಾಂತೇಶ ಕೌಜಲಗಿ, ವಿಶ್ವಾಸ ವೈದ್ಯ, ಬಾಬಾಸಾಹೇಬ ಪಾಟೀಲ ಅವರಿಗೂ ಮೈಸೂರಿಗೆ ಬರುವಂತೆ ನಾನೇ ಹೇಳಿದ್ದೆ’ ಎಂದು ಹೇಳಿದರು.

‘ಭದ್ರಾವತಿಗೆ ಹೋಗಿದ್ದರಿಂದಾಗಿ ಮೈಸೂರಿನಲ್ಲಿ ಮಹಿಳಾ ದಸರಾ ಉದ್ಘಾಟನೆಗೂ ಹೋಗಲಾಗಲಿಲ್ಲ. ನಾವು ಒಂದಾಗಿ ಪ್ರವಾಸಕ್ಕೆ ಹೊರಟಿದ್ದ ಕಾರಣವನ್ನೇ ಬಂಡಾಯ ಎಂದು ಬಿಂಬಿಸಬಾರದು’ ಎಂದು ಮನವಿ ಮಾಡಿದರು.

‘ಆದರೆ, ಶಾಸಕರ ಮೈಸೂರು ಪ್ರವಾಸವನ್ನು ಏಕೆ ತಡೆ ಹಿಡಿಯಲಾಯಿತು ಎಂಬುದು ನನಗೆ ಗೊತ್ತಿಲ್ಲ. ಅದನ್ನು ಸತೀಶಣ್ಣ ಅವರಿಗೇ ಕೇಳಿ’ ಎಂದರು. ಸತೀಶ ಜಾರಕಿಹೊಳಿ ಅವರು ತಮ್ಮ ಮೌನವನ್ನು ದೌರ್ಬಲ್ಯವೆಂದು ಭಾವಿಸಬಾರದು ಎಂದು ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ನನ್ನ ಮೌನವೂ ಕೂಡ ದೌರ್ಬಲ್ಯ ಅಲ್ಲ’ ಎಂದರು.

ಸರ್ಕಾರಕ್ಕೆ ಏನೂ ಆಗದು: ‘ವಿಮಾನ ಹಾರಾಡುವಾಗ ಜೋರು ಗಾಳಿಗೆ ಸ್ವಲ್ಪ ಅಲುಗಾಡುತ್ತದೆ. ಅಷ್ಟಕ್ಕೇ ಏನೂ ಆಗುವುದಿಲ್ಲ. ಅದು ಸುರಕ್ಷಿತವಾಗಿರುತ್ತದೆ. ಅದೇ ತರಹ ನಮ್ಮ ಸರ್ಕಾರವು ಸುರಕ್ಷಿತ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಹೇಳಿದರು.

‘ಕೆಲವೊಮ್ಮೆ ನಮ್ಮ ಲೆಕ್ಕಾಚಾರ ತಪ್ಪಾಗುತ್ತವೆ. ಹೊಂದಾಣಿಕೆಯಿಂದ ಮುನ್ನಡೆಯಬೇಕು. ನನ್ನ, ಲಕ್ಷ್ಮಿ ಹೆಬ್ಬಾಳಕರ ಮಧ್ಯೆ ಭಿನ್ನಾಭಿಪ್ರಾಯ ಇಲ್ಲ. ವಿಧಾನ ಪರಿಷತ್ ಚುನಾವಣೆಯಲ್ಲಿ ನನ್ನ ಸಹೋದರ ಲಖನ್ ಜಾರಕಿಹೊಳಿ ವಿರುದ್ಧವಾಗಿ, ಲಕ್ಷ್ಮಿ ಅವರ ಸಹೋದರ ಚನ್ನರಾಜ ಹಟ್ಟಿಹೊಳಿ ಅವರನ್ನು ಭಾರಿ ಅಂತರದಿಂದ ಗೆಲ್ಲಿಸಿದ್ದೇವೆ’ ಎಂದು ಪ್ರತಿಕ್ರಿಯಿಸಿದರು.

ಒಂದೇ ವಿಮಾನದಲ್ಲಿ ಬಂದರು: ಸಚಿವರಾದ ಸತೀಶ ಜಾರಕಿಹೊಳಿ ಹಾಗೂ ಲಕ್ಷ್ಮೀ ಹೆಬ್ಬಾಳಕರ ಬೆಂಗಳೂರಿನಿಂದ ಬೆಳಗಾವಿಗೆ ಒಂದೇ ವಿಮಾನದಲ್ಲಿ ಬಂದಿಳಿದರು. ನಿಲ್ದಾಣದಲ್ಲಿ ಕೆಲಕಾಲ ಚರ್ಚಿಸಿದರು. ಬಳಿಕ ಪ್ರತ್ಯೇಕವಾಗಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದರು.

> **ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನಕ್ಕೆ ನನ್ನ ಬದಲು, ರಾಜ್ಯದಾದ್ಯಂತ ಓಡಾಡುವವರನ್ನು ನೇಮಿಸಿ ಎಂದು ನಾನೇ ಹೇಳಿದ್ದೇನೆ. ನನ್ನ ಹಾಗೂ ಉಪ ಮುಖ್ಯಮಂತ್ರಿ ಮಧ್ಯೆ ಗೊಂದಲ ಇಲ್ಲ**
> **ಸತೀಶ ಜಾರಕಿಹೊಳಿ,** ಕೆಪಿಸಿಸಿ ಕಾರ್ಯಾಧ್ಯಕ್ಷ

> **ಜನರು ಮತ್ತು ಜನಪ್ರತಿನಿಧಿಗಳಿಗೆ ಸರ್ಕಾರದ ಬಗ್ಗೆ ದಿನೇ ದಿನೇ ಅಸಮಾಧಾನ ಹೆಚ್ಚಾಗಿದೆ. ಶಾಸಕರು–ಸಚಿವರ ತಿಕ್ಕಾಟದಿಂದ ಯಾವ ಹೊತ್ತಿನಲ್ಲಾದರೂ ರಾಜ್ಯ ಸರ್ಕಾರ ಪತನವಾಗಬಹುದು**
> **ಬಿ.ವೈ. ವಿಜಯೇಂದ್ರ,** ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ

> **ಡಿಕೆಶಿ ಸತ್ಯಹರಿಶ್ಚಂದ್ರನ ರೀತಿ ಮಾತಾಡುತ್ತಿದ್ದಾರೆ. ಇನ್ನು ಮೂರು ತಿಂಗಳೊಳಗೆ ಅವರ ವಿರುದ್ಧದ ಪ್ರಕರಣದ ವಿಚಾರಣೆ ಮುಗಿಯಲಿದ್ದು, ಜೈಲಿಗೆ ಹೋಗುವುದು ನಿಶ್ಚಿತ**
> **ಕೆ.ಎಸ್.ಈಶ್ವರಪ್ಪ,** ಮಾಜಿ ಉಪ ಮುಖ್ಯಮಂತ್ರಿ

‘ಪಕ್ಷಕ್ಕೆ ಧಕ್ಕೆ ಆಗುವುದಾದರೆ ಮಾತಾಡಲ್ಲ’

ಬೆಂಗಳೂರು: ‘ಪಕ್ಷಕ್ಕೆ ಧಕ್ಕೆಯಾಗುವ ಹೇಳಿಕೆ ನೀಡದಂತೆ ಡಿ.ಕೆ.ಶಿವಕುಮಾರ್ ಸೂಚಿಸಿದ್ದಾರೆ. ಧಕ್ಕೆ ಆಗುವುದಾದರೆ ರಾಜಕಾರಣದ ಬಗ್ಗೆ ನಾನು ಮಾತನಾಡುವುದಿಲ್ಲ’ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿ ಅಗತ್ಯವಿದೆ ಎಂದಿದ್ದೆ. ಯಾರೋ ಹೇಳಿದರೆಂದು ನಾನು ಮಾತನಾಡುವುದಿಲ್ಲ’ ಎಂದರು.

‘ಹೇಳಿಕೆಗಳನ್ನು ನೀಡುವುದರಿಂದ ಮುಜುಗರ, ಗೊಂದಲ ಆಗಬಾರದೆಂದು ಅಧ್ಯಕ್ಷರು, ವರಿಷ್ಠರು ಹೇಳಿದ್ದಾರೆ. ಪಕ್ಷದ ಹಿತದೃಷ್ಟಿಯಿಂದ ಸಲಹೆ ಸ್ವೀಕರಿಸುವುದು ಅವರವರಿಗೆ ಬಿಟ್ಟ ವಿಚಾರ’ ಎಂದರು.

‘136 ಶಾಸಕರು ಗೆದ್ದಿರುವುದಕ್ಕೆ ನಾವು ಬೀಗುವಂತಿಲ್ಲ. ಲೋಕಸಭೆ ಚುನಾವಣೆಗೆ ಉದಾಸೀನ ಭಾವನೆ ಬರಬಾರದು. ಹೀಗಾಗಿ ಹೆಚ್ಚುವರಿ ಡಿಸಿಎಂ ಹುದ್ದೆ ಕುರಿತು ಮಾತನಾಡಿದ್ದು, ಕೇಂದ್ರದ ನಾಯಕರ ಗಮನಕ್ಕೂ ತರಲಾಗಿದೆ’ ಎಂದರು.

‘ಸಂಪುಟ ಬದಲಾದರೆ ತ್ಯಾಗಕ್ಕೆ ಸಿದ್ಧರಿದ್ದೀರಾ’ ಎಂಬ ಪ್ರಶ್ನೆಗೆ, ‘ನಾಳೆಯೇ ನನ್ನನ್ನು ತೆಗೆದರೂ ಅತ್ಯಂತ ಸಂತೋಷಪಡುವ ಮನುಷ್ಯ. ಅಧಿಕಾರಕ್ಕೆ ಅಂಟಿಕೊಂಡಿರುವ ವ್ಯಕ್ತಿಯಲ್ಲ’ ಎಂದರು.

ದ್ವೇಷ, ಹಣ ಬಲದ ರಾಜಕಾರಣ ಸರಿಹೊಂದುತ್ತಿಲ್ಲ –ಶಾಸಕ ರಾಯರಡ್ಡಿ

ಕೊಪ್ಪಳ: ‘ಎಲ್ಲ ಪಕ್ಷಗಳಲ್ಲಿ ದ್ವೇಷ, ಅಸೂಯೆ, ಜಾತಿ, ಹಣಬಲವೇ ನಡೆಯುತ್ತಿದೆ. ಪ್ರಸ್ತುತ ರಾಜಕಾರಣ ಸರಿ ಹೊಂದುತ್ತಿಲ್ಲ. ನಿವೃತ್ತಿ ಉತ್ತಮವೆಂದು ಅನಿಸುತ್ತಿದೆ’ ಎಂದು ಕಾಂಗ್ರೆಸ್ ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

ಕುಕನೂರು ತಾಲ್ಲೂಕಿನ ಮಸಬಹಂಚಿನಾಳದಲ್ಲಿ ಸುದ್ದಿಗಾರರ ಜೊತೆ ಮಾತನಾಡಿ, ‘ನನಗೂ 67 ವರ್ಷ ವಯಸ್ಸಾಯಿತು. ಈಗ ಚಿಲ್ಲರೆ ರಾಜಕಾರಣ ಮಾಡಲಾಗುತ್ತಿದೆ. ಇದು, ಹೊಂದುವುದಿಲ್ಲ ಎನ್ನುವ ಭಾವನೆ ಮೂಡಿದೆ. ಈ ನಿಟ್ಟಿನಲ್ಲಿ ಎಲ್ಲ ರಾಜಕೀಯ ಪಕ್ಷಗಳು ಆತ್ಮಾವಲೋಕ ಮಾಡಿಕೊಳ್ಳಬೇಕಾದ ಅಗತ್ಯವಿದೆ’ ಎಂದರು.

‘ಬೆಳಗಾವಿಯಲ್ಲಿ ಯಾವುದೇ ರಾಜಕೀಯ ನಡೆದಿಲ್ಲ. ಅದನ್ನು ಸೃಷ್ಟಿ ಮಾಡಲಾಗಿದೆಯಷ್ಟೇ. ಡಿ.ಕೆ.ಶಿವಕುಮಾರ್ ಅಲ್ಲಿಗೆ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ದಿಢೀರ್ ಹೋಗಿದ್ದರಿಂದ ಅವರನ್ನು ಭೇಟಿಯಾಗಲು ಸಾಧ್ಯವಾಗಿಲ್ಲ ಎಂದು ಅಲ್ಲಿನ ಕೆಲ ಶಾಸಕರು ಹೇಳಿದ್ದಾರೆ. ನಮ್ಮ ಪಕ್ಷ ಪೂರ್ಣ ಐದು ವರ್ಷ ಆಡಳಿತ ನಡೆಸುತ್ತದೆ’ ಎಂದು ಪ್ರತಿಕ್ರಿಯಿಸಿದರು.

ಬಿಎಸ್‌ವೈ ಆಪ್ತರಿಂದ ಕಾಂಗ್ರೆಸ್ ಶಾಸಕರಿಗೆ ಆಮಿಷ: ಆಯನೂರು

ಶಿವಮೊಗ್ಗ: ‘ಕೆ.ಎಸ್.ಈಶ್ವರಪ್ಪ ಸೇರಿ ಅಧಿಕಾರ ಕಳೆದುಕೊಂಡಿರುವ ಬಿಜೆಪಿ ನಾಯಕರು ನೀರಿನಿಂದ ಹೊರಬಿದ್ದ ಮೀನಿನಂತೆ ಚಡಪಡಿಸುತ್ತಿದ್ದು, ಸರ್ಕಾರ ಅಸ್ಥಿರಗೊಳಿಸಲು ವ್ಯರ್ಥ ಪ್ರಯತ್ನ ಮಾಡುತ್ತಿದ್ದಾರೆ’ ಎಂದು ಕೆಪಿಸಿಸಿ ವಕ್ತಾರ ಆಯನೂರು ಮಂಜುನಾಥ್ ಆಕ್ರೋಶ ವ್ಯಕ್ತಪಡಿಸಿದರು.

‘ಯಡಿಯೂರಪ್ಪ ಅವರಿಗೆ ಆಪ್ತರಾದ ಮಾಜಿ ಸಚಿವರೊಬ್ಬರು ಕಾಂಗ್ರೆಸ್ ಶಾಸಕರೊಬ್ಬರ ಮನೆಗೆ ತೆರಳಿ ಸರ್ಕಾರ ಬೀಳಿಸಲು ₹50 ಕೋಟಿ ಆಮಿಷ ಒಡ್ಡಿದ್ದಾರೆ. ಅದರ ಸಮರ್ಥನೆ ಎಂಬಂತೆ ಈಶ್ವರಪ್ಪ ಕೂಡ ಸರ್ಕಾರ ಬೀಳಿಸುತ್ತೇವೆ’ ಎಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

‘ಈಶ್ವರಪ್ಪ ಅಪ್ರಬುದ್ಧ ರಾಜಕಾರಣಿ. ಬಾಯಿ ಹರುಕ ಲಜ್ಜೆಗೆಟ್ಟ ವ್ಯಕ್ತಿ. ಜೊತೆಗೆ ಭ್ರಷ್ಟಾಚಾರಿ. ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಭ್ರಷ್ಟಾಚಾರಿಗಳು ಎನ್ನುವ ಈಶ್ವರಪ್ಪ ಅವರಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ನೈತಿಕತೆ ಇದೆಯೇ’ ಎಂದು ಪ್ರಶ್ನಿಸಿದರು.

ಸರ್ಕಾರ ಪತನ, ಬಿಜೆಪಿಯವರ ಕನಸು: ಮಧು ಬಂಗಾರಪ್ಪ

ಕೊಪ್ಪಳ: ‘ಲೋಕಸಭಾ ಚುನಾವಣೆ ವೇಳೆಗೆ ನಮ್ಮ ಸರ್ಕಾರ ಪತನವಾಗುತ್ತದೆ ಎಂದು ಕನಸು ಕಾಣುತ್ತಿರುವ ಬಿಜೆಪಿಯವರು ಬಸ್‌ಸ್ಟ್ಯಾಂಡ್‌ಗೆ ಹೋಗಿ ಜ್ಯೋತಿಷ್ಯ ಹೇಳಲಿ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಶನಿವಾರ ತಿರುಗೇಟು ನೀಡಿದರು.

ಕುಕನೂರು ತಾಲ್ಲೂಕಿನ ಮಸಬಹಂಚಿನಾಳ ಗ್ರಾಮದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸರ್ಕಾರ ಪತನವಾಗುತ್ತದೆ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿಕೆಗೆ ಈ ರೀತಿ ಪ್ರತಿಕ್ರಿಯೆ ನೀಡಿದರು.

‘ಬಿಜೆಪಿಯವರು ಇದೇ ರೀತಿ ಮಾತನಾಡುತ್ತಿದ್ದರೆ ಮುಂದಿನ ಚುನಾವಣೆಯಲ್ಲಿ ಜನ ಅವರನ್ನು 37 ಸ್ಥಾನಗಳಿಗೆ ಇಳಿಸುತ್ತಾರೆ. ಅವರ ತಂದೆ ನೇತೃತ್ವದಲ್ಲಿ ಚುನಾವಣೆ ಎದುರಿಸಿದ ಬಿಜೆಪಿ 66 ಸ್ಥಾನಗಳಿಗೆ ಕುಸಿದಿದ್ದು ಯಾಕೆ ಎಂದು ವಿಜಯೇಂದ್ರ ಉತ್ತರಿಸಲಿ’ ಎಂದರು.

‘ಅಶೋಕ ಪಟ್ಟಣ ಹೇಳಿಕೆಯಲ್ಲಿ ತಪ್ಪೇನಿದೆ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಶೋಕ ಪಟ್ಟಣ ಅವರ ಹೇಳಿಕೆಯಲ್ಲಿ ತಪ್ಪೇನೂ ಇಲ್ಲ’ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.

ಈ ಮೂಲಕ ‘ಎರಡೂವರೆ ವರ್ಷಗಳ ನಂತರ ಸಚಿವ ಸಂಪುಟ ಪುನಾರಚನೆ ಆಗುತ್ತದೆ’ ಎಂಬ ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ ಹೇಳಿಕೆಯನ್ನು ಸಮರ್ಥಿಸಿದರು.

‘ಪಕ್ಷದಲ್ಲಿ ಅನೇಕ ಹಿರಿಯರಿದ್ದಾರೆ. ಗೆದ್ದವರಿದ್ದಾರೆ. ಅವರು ಮಂತ್ರಿಗಳಾಗಿಲ್ಲ. ಅಂಥವರಿಗೆ ಅವಕಾಶ ಕೊಡಬೇಕೆಂದು ಅವರು ಹೀಗೆ ಹೇಳಿದ್ದಾರೆ’ ಎಂದರು. ಅಶೋಕ ಪಟ್ಟಣ ಅವರ ಹೇಳಿಕೆ ಕಾಂಗ್ರೆಸ್ ವಲಯದಲ್ಲಿ ಭಾರಿ ಚರ್ಚೆಯನ್ನು ಹುಟ್ಟುಹಾಕಿದೆ.


ರಾಮಲಿಂಗಾ ರೆಡ್ಡಿ

‘ಆಂತರಿಕ ಚರ್ಚೆ ಬಹಿರಂಗಪಡಿಸಲ್ಲ’: ಅಶೋಕ ಪಟ್ಟಣ ಅವರ ಹೇಳಿಕೆ ಕುರಿತ ಪ್ರಶ್ನೆಗೆ ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಪಕ್ಷದಲ್ಲಿ ಆಂತರಿಕವಾಗಿ ಕೆಲ ವಿಚಾರಗಳು ಚರ್ಚೆ ಆಗಿರುತ್ತವೆ. ಅದನ್ನು ಬಹಿರಂಗವಾಗಿ ಹೇಳಲು ಸಾಧ್ಯವಿಲ್ಲ’ ಎಂದರು.

‘ಪಕ್ಷದಲ್ಲಿ ಆಂತರಿಕವಾಗಿ ನಡೆಯುವ ವಿಚಾರಗಳನ್ನು ಚರ್ಚೆ ಮಾಡಲು ನಾನು ಹೋಗುವುದಿಲ್ಲ. ಆದರೆ, ನನಗೆ ಇರುವ ಮಾಹಿತಿ ಪ್ರಕಾರ ಆ ರೀತಿಯಾಗಿ ಚರ್ಚೆ ನಡೆದಿಲ್ಲ’ ಎಂದು ಪ್ರತಿಕ್ರಿಯಿಸಿದರು.

ಶಾಸಕರು ಮಾತನಾಡಬಾರದು –ಡಿಕೆಶಿ

‘ಪಕ್ಷ ಮತ್ತು ಸರ್ಕಾರದ ಆಂತರಿಕ ವಿಚಾರಗಳ ಬಗ್ಗೆ ಶಾಸಕರು ಮಾಧ್ಯಮಗಳ ಮುಂದೆ ಮಾತನಾಡಬಾರದು’ ಎಂದು ಕಾಂಗ್ರೆಸ್ ಶಾಸಕರಿಗೆ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದರು.

ಶಾಸಕ ಅಶೋಕ ಪಟ್ಟಣ ನೀಡಿದ ಹೇಳಿಕೆ ಕಾಂಗ್ರೆಸ್ ವಲಯದಲ್ಲಿ ಚರ್ಚೆಗೆ ವಸ್ತುವಾಗುತ್ತಿದ್ದಂತೆ ಎಚ್ಚೆತ್ತುಕೊಂಡ ಶಿವಕುಮಾರ್, ‘ಅಧಿಕಾರ ಹಂಚಿಕೆ, ಬೆಂಬಲ ಹಾಗೂ ಇತರೆ ವಿಚಾರಗಳ ಬಗ್ಗೆ ಯಾವುದೇ ಕಾರಣಕ್ಕೂ ಶಾಸಕರು ಮಾಧ್ಯಮಗಳ ಮುಂದೆ ಮಾತನಾಡಬಾರದು’ ಎಂದರು.

‘ಪಕ್ಷ ಹಾಗೂ ಸರ್ಕಾರದ ಆಂತರಿಕ ವಿಚಾರಗಳು ಏನೇ ಇದ್ದರೂ ಮುಖ್ಯಮಂತ್ರಿ ಮತ್ತು ನನ್ನ ಬಳಿ ಶಾಸಕರು ಚರ್ಚಿಸಲಿ’ ಎಂದು ಸೂಚನೆ ನೀಡಿದರು.

‘ನಾನೇ ಅಧಿಕಾರಕ್ಕೆ ತಂದಿದ್ದಾಗಿ ಹೇಳಿಲ್ಲ’: ‘ನಾನೊಬ್ಬನೇ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾಗಿ ಯಾವತ್ತೂ ಹೇಳಿಲ್ಲ. ಹೇಳುವುದೂ ಇಲ್ಲ. ಕಾರ್ಯಕರ್ತರು, ಜನರು ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ’ ಎಂದು ಹೇಳಿದರು.

‘ಶಿವಕುಮಾರ್ ಒಬ್ಬರೇ ಪಕ್ಷವನ್ನು ಅಧಿಕಾರಕ್ಕೆ ತಂದಿಲ್ಲ’ ಎಂಬ ಸಚಿವ ಸತೀಶ ಜಾರಕಿಹೊಳಿ ನೀಡಿರುವ ಹೇಳಿಕೆ ಕುರಿತು ಗಮನಸೆಳೆದಾಗ ಈ ಮಾತು ಹೇಳಿದರು.

ಮತದಾರರ ನಕಲಿ ಗುರುತಿನ ಚೀಟಿ: ಮೂವರು ವಶಕ್ಕೆ

ಎಂ.ಎಸ್‌.ಎಲ್ ಟೆಕ್ನೊ ಸಲ್ಯೂಷನ್ಸ್ ಮಳಿಗೆಯ ಮೇಲೆ ಪೊಲೀಸರ ದಾಳಿ; ಹಲವು ಮಹತ್ವದ ದಾಖಲೆಗಳು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಗುರುತಿನ ಚೀಟಿ, ಆಧಾರ್, ಪಡಿತರ ಚೀಟಿ ಹಾಗೂ ಇತರೆ ಸರ್ಕಾರಿ ದಾಖಲೆಗಳನ್ನು ನಕಲಿಯಾಗಿ ಸೃಷ್ಟಿಸಿ ಮಾರುತ್ತಿದ್ದ ಆರೋಪದಡಿ ಮೂವರನ್ನು ಹೆಬ್ಬಾಳ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಆರ್.ಟಿ. ನಗರ ಬಳಿಯ ಕನಕನಗರದ ಸುಲ್ತಾನ್ ಪಾಳ್ಯ ಮುಖ್ಯರಸ್ತೆಯಲ್ಲಿರುವ ಎಂ.ಎಸ್.ಎಲ್ ಟೆಕ್ನೊ ಸಲ್ಯೂಷನ್ಸ್ ಮಳಿಗೆ ಮೇಲೆ ಶುಕ್ರವಾರ ದಾಳಿ ಮಾಡಿದ್ದ ಪೊಲೀಸರು, ಹಲವು ದಾಖಲೆಗಳನ್ನು ಜಪ್ತಿ ಮಾಡಿದ್ದಾರೆ.

‘ಸಿಸಿಬಿ ಪೊಲೀಸರು ನೀಡಿದ್ದ ದೂರು ಆಧರಿಸಿ ಅ.19ರಂದು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ಪ್ರಾಥಮಿಕ ಮಾಹಿತಿ ಸಂಗ್ರಹಿಸಿ, ಮಳಿಗೆ ಮೇಲೆ ದಾಳಿ ಮಾಡಲಾಗಿದೆ. ಮಳಿಗೆ ಮಾಲೀಕ ಮೌನೇಶ್‌ಕುಮಾರ್, ಕೃತ್ಯಕ್ಕೆ ಸಹಕರಿಸುತ್ತಿದ್ದ ಭಗತ್ ಹಾಗೂ ರಾಘವೇಂದ್ರ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸ್ಥಳೀಯ ನಿವಾಸಿ ಮೌನೇಶ್‌ಕುಮಾರ್, ಹಲವು ವರ್ಷಗಳಿಂದ ಮಳಿಗೆ ನಡೆಸುತ್ತಿದ್ದರು. ಇದೇ ಮಳಿಗೆಯಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಜನರಿಗೆ ಮಾರಾಟ ಮಾಡುತ್ತಿದ್ದ ಬಗ್ಗೆ ಸಿಸಿಬಿ ಪೊಲೀಸರಿಗೆ ಮಾಹಿತಿ ಲಭ್ಯವಾಗಿತ್ತು. ಅದೇ ಮಾಹಿತಿ ಆಧಾರದಲ್ಲಿ ಪೊಲೀಸರು ದೂರು ನೀಡಿದ್ದರು. ದೂರಿನಲ್ಲಿರುವ ಸಂಗತಿಗಳಿಗೆ ಸಂಬಂಧಪಟ್ಟಂತೆ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ’ ಎಂದು ತಿಳಿಸಿವೆ.

ಹಣ ಸಂಪಾದನೆ: ‘ಮಳಿಗೆಗೆ ಬರುತ್ತಿದ್ದ ಜನರಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಟ್ಟು ಹಣ ಸಂಪಾದನೆ ಮಾಡುತ್ತಿದ್ದರು ಎಂಬ ಆರೋಪವಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಚುನಾವಣಾ ಗುರುತಿನ ಚೀಟಿ, ಆಧಾರ್, ಚಾಲನಾ ಪರವಾನಗಿ, ಪಾನ್ ಕಾರ್ಡ್ ಸೇರಿದಂತೆ ಹಲವು ಸರ್ಕಾರಿ ದಾಖಲೆಗಳನ್ನು ಆರೋಪಿಗಳು ನಕಲಿಯಾಗಿ ಸೃಷ್ಟಿಸುತ್ತಿದ್ದರು. ಅವುಗಳನ್ನೇ ಸಾರ್ವಜನಿಕರು ಹಾಗೂ ಕಾನೂನುಬಾಹಿರ ಕೃತ್ಯದಲ್ಲಿ ತೊಡಗುತ್ತಿದ್ದವರಿಗೆ ನೀಡುತ್ತಿದ್ದರೆಂಬ ಶಂಕೆ ಇದೆ’ ಎಂದು ಮೂಲಗಳು ತಿಳಿಸಿವೆ.

‘ಒಂದು ದಾಖಲೆಗೆ ₹200ರಿಂದ ₹1,000ದವರೆಗೆ ಹಣ ಪಡೆಯುತ್ತಿದ್ದರು. ಆರೋಪಿಗಳು ನೀಡುತ್ತಿದ್ದ ನಕಲಿ ದಾಖಲೆಗಳನ್ನು ಬಳಸಿಕೊಂಡು ಸಾರ್ವಜನಿಕರು, ಹಲವು ಸರ್ಕಾರಿ ಸೌಲಭ್ಯಗಳನ್ನು ಪಡೆಯುತ್ತಿದ್ದರು. ಚುನಾವಣೆ ಸಂದರ್ಭದಲ್ಲೂ ನಕಲಿ ಚುನಾವಣಾ ಗುರುತಿನ ಚೀಟಿಗಳು ಬಳಕೆಯಾಗಿರುವ ಬಗ್ಗೆ ಮಾಹಿತಿ ಇದೆ. ಆದರೆ, ಸದ್ಯಕ್ಕೆ ಪುರಾವೆ ಸಿಕ್ಕಿಲ್ಲ’ ಎಂದು ಹೇಳಿವೆ.

ಬೈರತಿ, ಶರಣಪ್ರಕಾಶ ಪಾಟೀಲ ರಾಜೀನಾಮೆಗೆ ಒತ್ತಾಯ

ಬೆಂಗಳೂರು: ಮತದಾರರ ಅಕ್ರಮ ಪಟ್ಟಿ ಸೃಷ್ಟಿಗೆ ಕಾರಣರಾದ ಸಚಿವ ಬೈರತಿ ಸುರೇಶ್ ಹಾಗೂ ಬಿಜೆಪಿ ಕಾರ್ಯಕರ್ತ ಶಿವಕುಮಾರ್ ಪೂಜಾರಿ ಆತ್ಮಹತ್ಯೆಗೆ ಪ್ರಚೋದನೆ ನೀಡಿರುವ ಆರೋಪ ಹೊತ್ತ ಶರಣಪ್ರಕಾಶ ಪಾಟೀಲ ಅವರು ರಾಜೀನಾಮೆ ನೀಡಬೇಕು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಅವರು ಆಗ್ರಹಿಸಿದರು.

‘ಬೈರತಿ ಸುರೇಶ್ ಸಾವಿರಾರು ನಕಲಿ ಮತದಾರರನ್ನು ಸೃಷ್ಟಿಸಿದ್ದಾರೆ. ಸಿಸಿಬಿ ಪೊಲೀಸರ ದಾಳಿಯಲ್ಲಿ ಎಂ.ಎಸ್.ಎಲ್ ಟೆಕ್ನೊ ಸೊಲ್ಯೂಷನ್ಸ್‌ನ ಕಿಂಗ್‌ಪಿನ್ ಮೌನೇಶ್ ಕುಮಾರ್ ಸಿಕ್ಕಿಬಿದ್ದಿದ್ದಾನೆ. ಅಕ್ರಮವಾಗಿ ಮತದಾರರ ಫೋಟೊ, ಆಧಾರ್ ಕಾರ್ಡ್, ಗುರುತುಪತ್ರಗಳನ್ನು ಸೃಷ್ಟಿಸಲಾಗಿದೆ. ಬೇರೆ ಬೇರೆ ವಿಳಾಸದಲ್ಲಿ ಒಬ್ಬ ವ್ಯಕ್ತಿಯ ಹಲವು ಆಧಾರ್ ಕಾರ್ಡ್. ನಕಲಿ ಚಾಲನಾ ಪರವಾನಗಿ ಪತ್ರಗಳೂ ಪತ್ತೆಯಾಗಿವೆ. ಮೌನೇಶ್ ಪುತ್ರನ ಜತೆ ಬೈರತಿ ಸುರೇಶ್ ಇರುವ ಫೋಟೊ ಸಿಕ್ಕಿದೆ. ಈ ಕುರಿತು ಸಮಗ್ರ ತನಿಖೆ ನಡೆಸಬೇಕು’ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಶಿರೋಳ್ಳಿ ಗ್ರಾಮದ ಬಿಜೆಪಿ ಕಾರ್ಯಕರ್ತ ಶಿವಕುಮಾರ್ ಪೂಜಾರ್ ಅವರ ಆತ್ಮಹತ್ಯೆ ಪ್ರಕರಣ ಮುಚ್ಚಿಹಾಕುವ ಪ್ರಯತ್ನ ನಡೆದಿದೆ. ಸಚಿವ ಶರಣಪ್ರಕಾಶ ಪಾಟೀಲರ ಕಿರುಕುಳದಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗುತ್ತಿದೆ. ಶಿವಕುಮಾರ್ ಹೇಳಿಕೆ ನೀಡಿರುವ ಆಡಿಯೊ ರೆಕಾರ್ಡ್ ಸಹ ಇದೆ ಎಂದರು.

‘ಸಚಿವರ ಬೆಂಬಲಿಗ ಮೌನೇಶ್’


ಆರೋಪಿ ಮೌನೇಶ್, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಬೆಂಬಲಿಗ ಎಂದು ಹೇಳಲಾಗುತ್ತಿದ್ದು, ಅದನ್ನು ಸಚಿವರು ಅಲ್ಲಗಳೆದಿದ್ದಾರೆ. ಸುರೇಶ್ ಅವರ ಜೊತೆ ಹಲವು ಕಾರ್ಯಕ್ರಮಗಳಲ್ಲಿ ಮೌನೇಶ್ ಭಾಗಿಯಾಗಿದ್ದರು. ಸಚಿವರ ಜೊತೆ ತೆಗೆಸಿಕೊಂಡಿದ್ದ ಫೋಟೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವ ಬೈರತಿ ಸುರೇಶ್, ‘ನಿತ್ಯವೂ ಹಲವರು ನನ್ನ ಜೊತೆ ಫೋಟೊ ತೆಗೆಸಿಕೊಳ್ಳುತ್ತಾರೆ. ಅಷ್ಟು ಮಾತ್ರಕ್ಕೆ ನನ್ನ ಆಪ್ತರೆಂದು ಹೇಳುವುದು ಸರಿಯಲ್ಲ. ಪೊಲೀಸರು ಎಫ್‌ಐಆರ್ ಮಾಡಿಕೊಂಡಿದ್ದಾರೆ. ತಪ್ಪಿತಸ್ಥರ ವಿರುದ್ಧ ಕಾನೂನು ಪ್ರಕಾರ ತನಿಖೆಯಾಗಲಿ’ ಎಂದರು.

ಅಧಿಕಾರಿಗಳಿಂದ ಮಾಹಿತಿ ಸಂಗ್ರಹ

‘ಅಸಲಿ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಅದರ ಪ್ರತಿಗಳನ್ನು ಮಾತ್ರ ಮುದ್ರಿಸಿ ಕೊಡುತ್ತಿದ್ದೆವು. ಯಾವುದೇ ನಕಲಿ ದಾಖಲೆ ಸೃಷ್ಟಿಸಿಲ್ಲವೆಂದು ಆರೋಪಿಗಳು ಹೇಳುತ್ತಿದ್ದಾರೆ. ಆದರೆ, ಮಳಿಗೆಯಲ್ಲಿದ್ದ ಕೆಲ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ. ಜನರಿಗೆ ದಾಖಲೆಗಳನ್ನು ಹೇಗೆ ನೀಡಲಾಗುತ್ತದೆ? ಅನುಸರಿಸುವ ಕ್ರಮವೇನು? ಎಂಬುದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿಗಳು ಯಾವ ರೀತಿ ದಾಖಲೆ ಸೃಷ್ಟಿಸುತ್ತಿದ್ದರು. ಅವರು ಸೃಷ್ಟಿಸುತ್ತಿದ್ದ ದಾಖಲೆಗಳು ಅಸಲಿಯೋ? ಅಥವಾ ನಕಲಿಯೋ? ಇದುವರೆಗೂ ಯಾರಿಗೆಲ್ಲ ದಾಖಲೆಗಳನ್ನು ನೀಡಿದ್ದಾರೆ ಎಂಬ ಮಾಹಿತಿ ತನಿಖೆಯಿಂದ ತಿಳಿಯಬೇಕಿದೆ’ ಎಂದು ಮೂಲಗಳು ಹೇಳಿವೆ.



ವಿವೇಕ್ ಅಗ್ನಿಹೋತ್ರಿ, ಎಸ್‌.ಎಲ್‌.ಭೈರಪ್ಪ, ಪಲ್ಲವಿ ಜೋಷಿ, ಪ್ರಕಾಶ್ ಬೆಳವಾಡಿ

ಸಿನಿಮಾ ಆಗಲಿದೆ ಭೈರಪ್ಪನವರ ‘ಪರ್ವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್.ಎಲ್. ಭೈರಪ್ಪ ಅವರ ‘ಪರ್ವ’ ಕಾದಂಬರಿ ಚಲನಚಿತ್ರವಾಗಲಿದೆ. ‘ದಿ ಕಾಶ್ಮೀರ್ ಫೈಲ್ಸ್’ ಸಿನಿಮಾ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ಈ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳಲಿದ್ದಾರೆ.

ಶನಿವಾರ ಎಸ್.ಎಲ್. ಭೈರಪ್ಪನವರೇ ಸಿನಿಮಾದ ಶೀರ್ಷಿಕೆಯನ್ನು ಅನಾವರಣಗೊಳಿಸಿದರು. ಪಲ್ಲವಿ ಜೋಷಿ ಈ ಚಿತ್ರವನ್ನು ನಿರ್ಮಿಸಲಿದ್ದಾರೆ.

‘ಒಂದು ವರ್ಷದ ಹಿಂದೆ ಪ್ರಕಾಶ್ ಬೆಳವಾಡಿ ನನಗೆ ಕರೆ ಮಾಡಿ ಭೈರಪ್ಪನವರ ಜೊತೆ ಮಾತನಾಡುವಂತೆ ಹೇಳಿದ್ದರು. ‘ದಿ ಕಾಶ್ಮೀರ್ ಫೈಲ್ಸ್’ ಸಿನಿಮಾವನ್ನು ನೋಡಿ ಎಸ್.ಎಲ್. ಭೈರಪ್ಪ ಅವರು ‘ಪರ್ವ’ವನ್ನೂ ಸಿನಿಮಾ ಮಾಡುವಂತೆ ಹೇಳಿದರು. ಮಹಾಭಾರತದಲ್ಲಿ ನಾವು ಕೇಳದೆ ಇರುವಂತಹ ವಿಷಯಗಳನ್ನು ಅವರು ಬರೆದಿದ್ದಾರೆ. ಇದಕ್ಕಾಗಿ ಹಲವು ವರ್ಷ ಶ್ರಮಿಸಿದ್ದಾರೆ. ಈ ಸಿನಿಮಾ ಮೂರು ಭಾಗಗಳಲ್ಲಿ ಬರಲಿದೆ. ಚಿತ್ರದ ಉಳಿದ ವಿವರಗಳನ್ನು ಶೀರ್ಘದಲ್ಲಿ ಹಂಚಿಕೊಳ್ಳುತ್ತೇವೆ’ ಎಂದು ಚಿತ್ರದ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ತಿಳಿಸಿದರು.

ಎಸ್.ಎಲ್. ಭೈರಪ್ಪ ಮಾತನಾಡಿ, ‘ಪರ್ವ’ ಕಾದಂಬರಿಯನ್ನು ಸಿನಿಮಾ ಮಾಡಲು ಬಂದಿದ್ದಾರೆ. ವಿವೇಕ್ ಅಗ್ನಿಹೋತ್ರಿ ಅವರಿಗೆ ಸಾಕಷ್ಟು ಅನುಭವವಿದೆ. ಇವರು ಮಾಡಿರುವ ಸಿನಿಮಾಗಳು ಯಶಸ್ವಿಯಾಗಿವೆ. ಕನ್ನಡ ಹಾಗೂ ಹಿಂದಿ ಭಾಷೆಯಲ್ಲಿ ಸಿನಿಮಾ ಮಾಡುತ್ತಿದ್ದಾರೆ. ಇಂಗ್ಲಿಷ್‌ನಲ್ಲಿ ಈ ಸಿನಿಮಾ ಮಾಡಬೇಕು. ನಿಜವಾದ ಮಹಾಭಾರತ ಏನು ಎಂಬುದನ್ನು ತೋರಿಸಬಹುದು. ಸಿನಿಮಾ ಮಾಡಲು ನನ್ನ ಒಪ್ಪಿಗೆ ಇದೆ’ ಎಂದು ತಂಡಕ್ಕೆ ಶುಭ ಹಾರೈಸಿದರು.


ಲಾಡ್ಲಿ ಸಂಸ್ಥೆಯಿಂದ ‘ಲಿಂಗ ಸಂವೇದನೆಗಾಗಿ ನೀಡಲಾಗುವ ಮಾಧ್ಯಮ ಪ್ರಶಸ್ತಿ’ಯನ್ನು ‘ಡೆಕ್ಕನ್ ಹೆರಾಲ್ಡ್’ನ ಸುದ್ದಿ ಸಂಪಾದಕಿ ಅನಿತಾ ಪೈಲೂರು (ಚಿತ್ರದಲ್ಲಿಲ್ಲ) ಹಾಗೂ ಹಿರಿಯ ವಿಡಿಯೊ ಎಡಿಟರ್ ರಜತ್ ಶರ್ಮಾ (ವಿಡಿಯೊ ಸ್ಟೋರಿ ವಿಭಾಗ) ಮತ್ತು ‘ಪ್ರಜಾವಾಣಿ’ಯ ಹಿರಿಯ ಉಪ ಸಂಪಾದಕಿ ಮಂಜುಶ್ರೀ ಎಂ. ಕಡಕೋಳ (ಲೇಖನ ವಿಭಾಗ) ಅವರಿಗೆ ಜೈಪುರದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು. ವಿಶ್ವಸಂಸ್ಥೆ ಜನಸಂಖ್ಯಾ ನಿಧಿಯ (ಯುಎನ್‌ಪಿಎಫ್) ನೀತಿ ಮತ್ತು ಸಹಭಾಗಿತ್ವ ವಿಭಾಗದ ಮುಖ್ಯಸ್ಥ ಜಯದೀಪ್ ಬಿಸ್ವಾಸ್; ಲಾಡ್ಲಿ ರಾಷ್ಟ್ರೀಯ ಸಮನ್ವಯಾಧಿಕಾರಿ ಡಾಲಿ ಠಾಕೂರ್ ಹಾಗೂ ಪಬ್ಲಿಕ್ ರಿಲೇಷನ್ಸ್ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷ ರವಿಶಂಕರ್ ಶರ್ಮಾ ಚಿತ್ರದಲ್ಲಿ ಇದ್ದಾರೆ

‘ಮಗ್ಗಗಳಿಗೆ ಉಚಿತ ವಿದ್ಯುತ್ ಸೌಲಭ್ಯ’

ವಿಜಯಪುರ: ‘10 ಎಚ್.ಪಿ. ವರೆಗಿನ ಮಗ್ಗ ಮತ್ತು ಮಗ್ಗಪೂರ್ವ ಘಟಕಗಳಿಗೆ ತಿಂಗಳಿಗೆ ಗರಿಷ್ಠ 250 ಯೂನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸುವ ಮೂಲಕ ನೇಕಾರರನ್ನು ಆರ್ಥಿಕ ಸ್ವಾವಲಂಬಿ ಆಗಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದು ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವ ಶಿವಾನಂದ ಎಸ್. ಪಾಟೀಲ ತಿಳಿಸಿದರು.

‘10ರಿಂದ 20 ಎಚ್.ಪಿ. ವರೆಗಿನ ವಿದ್ಯುತ್ ಮಗ್ಗ ಹಾಗೂ ಮಗ್ಗಪೂರ್ವ ಘಟಕಗಳಿಗೆ ಪ್ರತಿ ಯೂನಿಟ್‌ಗೆ ₹1.25ರಂತೆ ರಿಯಾಯಿತಿ ದರದಲ್ಲಿ ತಿಂಗಳಿಗೆ ಗರಿಷ್ಠ 500 ಯೂನಿಟ್ ವರೆಗೆ ವಿದ್ಯುತ್ ಪೂರೈಸಲಾಗುವುದು’ ಎಂದು ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ನೇಕಾರರಿಗೆ ಉಚಿತ ವಿದ್ಯುತ್ ಪೂರೈಕೆಯಿಂದ ತಿಂಗಳಿಗೆ ಅಂದಾಜು ₹150 ಕೋಟಿ ಮೊತ್ತವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಭರಿಸಲಾಗುವುದು. ಈ ಯೋಜನೆ ಅನುಷ್ಠಾನದಿಂದ ರಾಜ್ಯದ 40 ಸಾವಿರ ನೇಕಾರರಿಗೆ ಅನುಕೂಲವಾಗಲಿದೆ’ ಎಂದು ಅವರು ತಿಳಿಸಿದರು.

‘ವಿದ್ಯುತ್ ಸಹಾಯಧನ ಯೋಜನೆಗೆ ನೋಂದಾಯಿಸಿಕೊಳ್ಳಲು ನೇಕಾರರು ತಮ್ಮ ಆಧಾರ್ ಕಾರ್ಡ್, ಪಡಿತರ ಕಾರ್ಡ್, ಮಗ್ಗದ ಚಿತ್ರ, ವಿದ್ಯುತ್ ಸಂಪರ್ಕ ಹೊಂದಿರುವ ದಾಖಲಾತಿ, ಆರ್.ಆರ್.ಸಂಖ್ಯೆ, ಬಿಲ್ ಮತ್ತು ರಸೀದಿ ಸೇರಿ ಇತರೆ ಅವಶ್ಯಕ ದಾಖಲೆಗಳ ಸಹಿತ ಅರ್ಜಿ ಸಲ್ಲಿಸಬೇಕು’ ಎಂದರು.

ಕಬ್ಬು ನುರಿಸುವಿಕೆ: ಸಕ್ಕರೆ ಕಾರ್ಖಾನೆಗಳು ಅ.25ರಿಂದ ಕಬ್ಬು ನುರಿಸಲು ಆರಂಭಿಸುವಂತೆ ಆದೇಶಿಸಲಾಗಿದೆ. ಬರಗಾಲದ ಕಾರಣದಿಂದ ಈ ಬಾರಿ ಕಬ್ಬಿನ ಇಳುವರಿ ಕಡಿಮೆಯಾಗುವ ಸಾಧ್ಯತೆಯಿದೆ. ಅದನ್ನು ತಪ್ಪಿಸಲು ಏಕಕಾಲಕ್ಕೆ ಕಬ್ಬು ನುರಿಸಲು ಎಲ್ಲಾ ಸಕ್ಕರೆ ಕಾರ್ಖಾನೆಯವರಿಗೆ ಸೂಚಿಸಲಾಗಿದೆ.

5,675 ಬಸ್ ಖರೀದಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನಿಗಮಗಳಿಗೆ 5,675 ಬಸ್‌ಗಳ ಖರೀದಿ ಪ್ರಕ್ರಿಯೆ ತ್ವರಿತಗೊಳಿಸುವಂತೆ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಸೂಚಿಸಿದರು.

ಸಾರಿಗೆ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿ, ‘ಶಕ್ತಿ’ (ಮಹಿಳೆಯರಿಗೆ ಉಚಿತ ಪ್ರಯಾಣ) ಯೋಜನೆಯಿಂದ ಬಸ್ ಪ್ರಯಾಣಿಕರ ಸಂಖ್ಯೆ ಶೇ 15ರಷ್ಟು ಹೆಚ್ಚಾಗಿದೆ. ಹೆಚ್ಚುವರಿ ಶೆಡ್ಯೂಲ್‌ಗಳನ್ನು ಸೇರಿಸಲು ಮತ್ತು ಉತ್ತಮ ಸೇವೆ ನೀಡಲು ಬಸ್‌ಗಳ ಸೇರ್ಪಡೆಗೊಳಿಸಲು ಸಲಹೆ ನೀಡಿದರು.

ಹೊಸ ಬಸ್‌ಗಳ ಖರೀದಿಗೆ ಬಜೆಟ್‌ನಲ್ಲಿ ₹500 ಕೋಟಿ ಒದಗಿಸಲಾಗಿದೆ ಎಂದೂ ಮುಖ್ಯಮಂತ್ರಿ ತಿಳಿಸಿದರು.

ಸಾರಿಗೆ ಇಲಾಖೆಯ ರಾಜಸ್ವ ಗುರಿ ಸಂಗ್ರಹ ಮತ್ತು ಸಾರಿಗೆ ನಿಗಮಗಳ ಹಣಕಾಸು ನಿರ್ವಹಣೆ ಕುರಿತು ಚರ್ಚೆ ನಡೆಯಿತು. ಸಾರಿಗೆ ನಿಯಮ ಉಲ್ಲಂಘಿಸಿದ ವಾಹನಗಳ ಮಾಲೀಕರಿಂದ ₹83 ಕೋಟಿ ದಂಡ ಸಂಗ್ರಹಿಸಿರುವುದಾಗಿ ಅಧಿಕಾರಿಗಳು ತಿಳಿಸಿದರು.

‘8 ಸಾವಿರ ನೇಮಕಕ್ಕೆ ಒಪ್ಪಿಗೆ’

‘ಚಾಲನಾ ಮತ್ತು ತಾಂತ್ರಿಕ ಸಿಬ್ಬಂದಿ ಸೇರಿ 8,719 ಜನರನ್ನು ಹೊಸದಾಗಿ ನೇಮಿಸಿಕೊಳ್ಳಲಾಗುವುದು’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು. ಮೈಸೂರು ವಿಭಾಗವನ್ನು ಎರಡು ಭಾಗವಾಗಿ ಮಾಡಲು ಅಧಿಕಾರಿಗಳಿಗೆ ಸೂಚಿಸಿದ್ದೇವೆ ಎಂದರು.

‘ಶಕ್ತಿ ಯೋಜನೆಯಲ್ಲಿ 80 ಕೋಟಿ ಮಹಿಳೆಯರು ಸಂಚಾರ ಮಾಡಿದ್ದಾರೆ. ನಾಲ್ಕು ವರ್ಷಗಳಿಂದ ನಿಗಮಗಳಿಗೆ ಬಸ್ ಖರೀದಿ ಮಾಡಿರಲಿಲ್ಲ. ಬಸ್‌ಗಳ ಬೇಡಿಕೆ ಹೆಚ್ಚಾಗಿದೆ. 5,675 ಹೊಸ ಬಸ್‌ಗಳ ಖರೀದಿಗೆ ₹2 ಸಾವಿರ ಕೋಟಿ ವೆಚ್ಚವಾಗಲಿದೆ. ಡೀಸೆಲ್, ಡೀಸೆಲ್‌ರಹಿತ, ಬ್ಯಾಟರಿ ಮತ್ತು ಸ್ಲೀಪರ್ ಬಸ್ ಈ ಖರೀದಿಯಡಿ ಇರಲಿವೆ’ ಎಂದರು.

‘ಬಸ್‌ಗಳ ಖರೀದಿಗೆ ವಾಹನ ತೆರಿಗೆ ವಿನಾಯಿತಿ ನೀಡುವಂತೆ ಮುಖ್ಯಮಂತ್ರಿಗೆ ಮನವಿ ಮಾಡಿದ್ದೇವೆ’ ಎಂದು ಅವರು ಹೇಳಿದರು.

ಅಂಗವಿಕಲರಿಗಾಗಿ ಶೇ 5ರಷ್ಟು ಅನುದಾನ ಬಳಕೆ ಬಗ್ಗೆ ಮಾಹಿತಿಯೇ ಇಲ್ಲ

ಅಂಗವಿಕಲರ ‘ಕಲ್ಯಾಣ’ಕ್ಕೆ ಬಳಕೆಯಾಗದ ನಿಧಿ

• ಬಸವರಾಜ ಹವಾಲ್ದಾರ

ಬಾಗಲಕೋಟೆ: 2011ರ ಜನಗಣತಿ ಪ್ರಕಾರ, ರಾಜ್ಯದಲ್ಲಿ 13,24,205 ಅಂಗವಿಕಲರಿದ್ದಾರೆ. ಬಾಗಲಕೋಟೆ ಜಿಲ್ಲೆಯಲ್ಲಿ 43,179 ಜನರಿದ್ದಾರೆ. ಅವರಿಗೆ ಸ್ವಾವಲಂಬಿ ಜೀವನ ಸಾಗಿಸಲು ಅನುಕೂಲವಾಗಲಿ ಎಂದು ಎಲ್ಲ ಇಲಾಖೆಗಳ ಅನುದಾನದಲ್ಲಿ ಶೇ 5ರಷ್ಟನ್ನು ಅಂಗವಿಕಲರ ಕಲ್ಯಾಣ ನಿಧಿಯಾಗಿ ಬಳಸಬೇಕು ಎಂದಿದೆ. ಆದರೆ, ಬಹುತೇಕ ಇಲಾಖೆಗಳು ಪಾಲಿಸದ್ದರಿಂದ ಸೌಲಭ್ಯಕ್ಕಾಗಿ ಅಲೆದಾಡುವಂತಾಗಿದೆ.

‘ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ’ಯಲ್ಲಿ ಸಿಗುವ ವಿವಿಧ ಸೌಲಭ್ಯಗಳ ಬಗ್ಗೆ ಅಂಗವಿಕಲರಿಗೆ ಮಾಹಿತಿ ಇದೆ. ಇನ್ನುಳಿದ ಇಲಾಖೆಗಳಲ್ಲಿಯೂ ತಮಗಾಗಿ ಶೇ 5ರಷ್ಟು ಅನುದಾನವಿದೆ ಎಂಬುದು ಬಹಳಷ್ಟು ಅಂಗವಿಕಲರಿಗೆ ಗೊತ್ತಿಲ್ಲ. ಕೆಲ ಇಲಾಖೆಯ ಅಧಿಕಾರಿಗಳಿಗೂ ಇದರ ಬಗ್ಗೆ ಮಾಹಿತಿ ಇಲ್ಲ.

‘ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಬಿಡುಗಡೆಯಾದ ಅನುದಾನ, ಖರ್ಚಿನ ವಿವರ ಸಿಗುತ್ತದೆ. ಅರ್ಜಿ ಹಾಕಿದ ಅಂಗವಿಕಲರಿಗೂ ಸೌಲಭ್ಯ ಒದಗಿಸಲಾಗುತ್ತದೆ. ಉಳಿದ ಇಲಾಖೆಗಳಿಗೆ ಬಿಡುಗಡೆಯಾದ ಅನುದಾನದಲ್ಲಿ ಅಂಗವಿಕಲರಿಗೆ ಎಷ್ಟು ಖರ್ಚಾಗಿದೆ ಎಂಬ ವಿವರ ಸಿಗುವುದಿಲ್ಲ’ ಎಂದು ಅಂಗವಿಕಲರೊಬ್ಬರು ತಿಳಿಸಿದರು.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ₹150 ಕೋಟಿ ಆಸುಪಾಸಿನಲ್ಲಿ ಅನುದಾನ ದೊರೆಯುತ್ತಿದೆ. ಉಳಿದ ಇಲಾಖೆಗಳಿಂದ ಶೇ 5ರಂತೆ ₹1,000ದಿಂದ ₹1,200 ಕೋಟಿ ಮೊತ್ತ ಅಂಗವಿಕಲರಿಗಾಗಿ ಖರ್ಚಾಗಬೇಕು. ಅಂಗವಿಕಲರ ಕಲ್ಯಾಣ ನಿಧಿಯನ್ನು ಬೇರೆ, ಬೇರೆ ಕಾರ್ಯಗಳಿಗೆ ಬಳಸಲಾಗುತ್ತದೆ.

‘ಎಲ್ಲ ಇಲಾಖೆಗಳ ಮುಖ್ಯಸ್ಥರಿಗೂ ಅಂಗವಿಕಲರಿಗಾಗಿ ಖರ್ಚು ಮಾಡಿದ ಅನುದಾನ ಹಾಗೂ ಫಲಾನುಭವಿ ಅಂಗವಿಕಲರ ವಿವರ ನೀಡುವಂತೆ ಪತ್ರ ಬರೆದು ಕೇಳಲಾಗಿದೆ. ಜಿಲ್ಲಾ ಪಂಚಾಯಿತಿ, ರೇಷ್ಮೆ, ಜಿಲ್ಲಾ ವಯಸ್ಕರ ಶಿಕ್ಷಣ ಮುಂತಾದ ನಾಲ್ಕೈದು ಇಲಾಖೆ ಹೊರತುಪಡಿಸಿದರೆ, ಉಳಿದವರು ವಿವರ ನೀಡಿಲ್ಲ’ ಎಂದು ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ಸವಿತಾ ಕಾಳೆ ‘ಪ್ರಜಾವಾಣಿ’ಗೆ ತಿಳಿಸಿದರು.

ತ್ರಿಚಕ್ರ ವಾಹನ, ಶ್ರವಣಯಂತ್ರ, ಹೊಲಿಗೆ ಯಂತ್ರ, ಬ್ರೈಲ್ ಕಿಟ್, ಲ್ಯಾಪ್‌ಟಾಪ್ ಸೇರಿ ಹಲವು ಸೌಲಭ್ಯಗಳಿಗಾಗಿ ಅಂಗವಿಕಲರು ಅರ್ಜಿ ಸಲ್ಲಿಸುತ್ತಲೇ ಇದ್ದಾರೆ. ಅರ್ಜಿ ಸಲ್ಲಿಸಿದವರಲ್ಲಿ ಶೇ 20ರಷ್ಟು ಜನರಿಗೂ ಸೌಲಭ್ಯ ಸಿಗುತ್ತಿಲ್ಲ.

ವಿವಿಧ ಸೌಲಭ್ಯಕ್ಕಾಗಿ ಹಲವಾರು ವರ್ಷಗಳಿಂದ ಅಂಗವಿಕಲರು ಅರ್ಜಿ ಸಲ್ಲಿಸುತ್ತಿದ್ದಾರೆ. ಯಂತ್ರಚಾಲಿತ ವಾಹನಗಳಿಗಾಗಿ 958, ಹೊಲಿಗೆ ಯಂತ್ರಕ್ಕಾಗಿ 20, ಬ್ರೈಲ್ ಕಿಟ್‌ಗಾಗಿ 18 ಹಾಗೂ ಲ್ಯಾಪ್ ಟಾಪ್‌ಗಳಿಗಾಗಿ 24 ಜನರು ಬಾಗಲಕೋಟೆ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಿ, ಸೌಲಭ್ಯಕ್ಕಾಗಿ ಕಾಯುತ್ತಿದ್ದಾರೆ.

ರಾಜ್ಯದಲ್ಲಿನ ಅಂಗವಿಕಲರ ವಿವರ (2011ರ ಜನಗಣತಿ ಪ್ರಕಾರ)

ಪುರುಷರು	7,26,521
ಮಹಿಳೆಯರು	5,97,684
ಒಟ್ಟು	13,24,205

ವಿವಿಧ ಬಗೆ ಅಂಗವಿಕಲತೆ ಹೊಂದಿದವರ ವಿವರ

ದೈಹಿಕ ನ್ಯೂನತೆ	2,71,982
ದೃಷ್ಟಿ ದೋಷ	2,64,170
ಶ್ರವಣ ದೋಷ	3,26,432
ಬುದ್ಧಿಮಾಂದ್ಯತೆ	93,974
ಮಾನಸಿಕ ಅಸ್ವಸ್ಥರು	20,913
ಬಹುವಿಧ ನ್ಯೂನತೆ	1,00,013
ಇತರೆ ಅಂಗವಿಕಲತೆ	2,46,721

> **ಅಂಗವಿಕಲರಿಗಾಗಿ ಇರುವ ಶೇ 5ರಷ್ಟು ಅನುದಾನ ಬಳಕೆಯ ಮಾಹಿತಿ ಕೊಡುವಂತೆ ಇಲಾಖೆಗಳಿಗೆ ಪತ್ರ ಬರೆದರೂ ಮಾಹಿತಿ ನೀಡುವುದಿಲ್ಲ**
> **ಸವಿತಾ ಕಾಳೆ,** ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ, ಬಾಗಲಕೋಟೆ

> **ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯಿಂದಾಗಿ ಅಂಗವಿಕಲರಿಗೆ ಅಗತ್ಯವಿರುವ ಸೌಲಭ್ಯ ಸಿಗುವುದಿಲ್ಲ. ಕಚೇರಿಗಳಲ್ಲಿ ರ‍್ಯಾಂಪ್ ನಿರ್ಮಾಣಕ್ಕಾಗಿ ಆಗ್ರಹಿಸುವುದರಲ್ಲಿಯೇ ಆಯುಸ್ಸು ಮುಗಿಯುತ್ತದೆ**
> **ಘನಶ್ಯಾಂ ಭಾಂಡಗೆ,** ಅಂಗವಿಕಲ ಕ್ರೀಡಾಪಟು

ರಾಜಸ್ಥಾನ: ಬಿಜೆಪಿ ಎರಡನೇ ಪಟ್ಟಿಯಲ್ಲಿ ರಾಜೇ ಬೆಂಬಲಿಗರು ● ಸಂಸದರಿಗೆ ಸಿಗದ ಅವಕಾಶ

ವಸುಂಧರಾ ಸೇರಿ 83 ಮಂದಿಗೆ ಟಿಕೆಟ್

ನವದೆಹಲಿ (ಪಿಟಿಐ): ರಾಜಸ್ಥಾನ ವಿಧಾನಸಭಾ ಚುನಾವಣೆಗೆ ಬಿಜೆಪಿ ತನ್ನ ಎರಡನೇ ಪಟ್ಟಿಯನ್ನು ಶನಿವಾರ ಬಿಡುಗಡೆ ಮಾಡಿದ್ದು, ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಸೇರಿದಂತೆ 83 ಮಂದಿಗೆ ಟಿಕೆಟ್ ನೀಡಿದೆ.

ಐವರು ಶಾಸಕರಿಗೆ ಟಿಕೆಟ್ ನೀಡಲಾಗಿದ್ದು, ಒಂಬತ್ತು ಮಂದಿ ಶಾಸಕರಿಗೆ ಟಿಕೆಟ್ ನಿರಾಕರಿಸಲಾಗಿದೆ. ಕಳೆದ ವರ್ಷ ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ್ದಕ್ಕಾಗಿ ಪಕ್ಷದಿಂದ ಅಮಾನತುಗೊಂಡಿರುವ ಧೋಲ್‌ಪುರ ಕ್ಷೇತ್ರದ ಶಾಸಕಿ ಶೋಭಾರಾಣಿ ಕುಶ್ವಾಹ ಅವರಿಗೂ ಟಿಕೆಟ್ ನೀಡಿಲ್ಲ.

ಎರಡನೇ ಪಟ್ಟಿಯಲ್ಲಿ ಸಂಸದರ ಹೆಸರಿಲ್ಲ. 10 ಮಂದಿ ಮಹಿಳೆಯರಿಗೆ ಟಿಕೆಟ್ ನೀಡಲಾಗಿದೆ. ಒಟ್ಟು 200 ಸ್ಥಾನಗಳ ಪೈಕಿ ಈವರೆಗೆ 124 ಸ್ಥಾನಗಳಿಗೆ ಬಿಜೆಪಿ ತನ್ನ ಅಭ್ಯರ್ಥಿಗಳ ಹೆಸರು ಪ್ರಕಟಿಸಿದಂತಾಗಿದೆ.

ಪ್ರಧಾನಿ ನರೇಂದ್ರ ಮೋದಿ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನೇತೃತ್ವದಲ್ಲಿ ನಡೆದ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಲಾಗಿದೆ.

ನಾಲ್ಕು ಬಾರಿ ಗೆಲುವು ಸಾಧಿಸಿರುವ ಝಾಲರಾಪಾಟನ ಕ್ಷೇತ್ರದಿಂದ ವಸುಂಧರಾ ಸ್ಪರ್ಧಿಸಲಿದ್ದಾರೆ. ಇಬ್ಬರು ಮಾಜಿ ಸಚಿವರು ಸೇರಿದಂತೆ ರಾಜೇ ಅವರ ಕೆಲವು ಬೆಂಬಲಿಗರಿಗೆ ಟಿಕೆಟ್ ನೀಡಲಾಗಿದೆ.

ಪಕ್ಷದ ಹಿರಿಯ ನಾಯಕ ಭೈರೋನ್ ಸಿಂಗ್ ಶೇಖಾವತ್ ಅವರ ಅಳಿಯ, ಐದು ಬಾರಿ ಶಾಸಕರಾಗಿರುವ ನರ್ಪತ್ ಸಿಂಗ್ ರಾಜ್ವಿ ಅವರನ್ನು ವಿದ್ಯಾನಗರ ಬದಲು ಚಿತ್ತೋರ್‌ಗಢದಿಂದ ಕಣಕ್ಕಿಳಿಸಲು ನಿರ್ಧರಿಸಲಾಗಿದೆ.

ವಸುಂಧರಾ ರಾಜೇ ಅವರು ಸಿಂಧಿಯಾ ರಾಜಮನೆತನದಿಂದ ಬಂದವರು. ಅವರ ತಾಯಿ ವಿಜಯರಾಜೇ ಸಿಂಧಿಯಾ ಭಾರತೀಯ ಜನ ಸಂಘ (ಬಿಜೆಎಸ್) ಮತ್ತು ನಂತರ ಬಿಜೆಪಿಯಲ್ಲಿ ಪ್ರಮುಖ ನಾಯಕಿಯಾಗಿದ್ದರು. ಅವರ ಸಹೋದರ ಮಾಧವರಾವ್ ಸಿಂಧಿಯಾ ಕಾಂಗ್ರೆಸ್ ನಾಯಕರಾಗಿದ್ದರು.

ಇತ್ತೀಚೆಗೆ ಪಕ್ಷಕ್ಕೆ ಸೇರಿದ ಮಹಾರಾಣಾ ಪ್ರತಾಪ್ ಸಿಂಗ್ ಅವರ ವಂಶಸ್ಥ ವಿಶ್ವರಾಜ್ ಸಿಂಗ್ ಮೇವಾರ್ ಅವರಿಗೂ ಟಿಕೆಟ್ ನೀಡಲಾಗಿದೆ. 2018ರಲ್ಲಿ ಹಿರಿಯ ಕಾಂಗ್ರೆಸ್ ಮುಖಂಡ ಸಿ.ಪಿ. ಜೋಶಿ ಗೆದ್ದ ನಾಥದ್ವಾರದಿಂದ ಅವರನ್ನು ಕಣಕ್ಕಿಳಿಸಲಾಗಿದೆ.

ಮಧ್ಯಪ್ರದೇಶ: 12 ಮಹಿಳೆಯರಿಗೆ ಅವಕಾಶ

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ವಿಧಾನಸಭಾ ಚುನಾವಣೆಗೆ 92 ಅಭ್ಯರ್ಥಿಗಳ ಐದನೇ ಪಟ್ಟಿಯನ್ನು ಬಿಜೆಪಿ ಶನಿವಾರ ಬಿಡುಗಡೆ ಮಾಡಿದೆ.

ಪಕ್ಷದ ಹಿರಿಯ ಮುಖಂಡ ಕೈಲಾಶ್ ವಿಜಯವರ್ಗೀಯ ಅವರ ಪುತ್ರ ಇಂದೋರ್ -3 ಕ್ಷೇತ್ರದ ಶಾಸಕ ಆಕಾಶ್ ವಿಜಯವರ್ಗೀಯ ಅವರಿಗೆ ಟಿಕೆಟ್ ನಿರಾಕರಿಸಲಾಗಿದೆ. ಆಕಾಶ್ ಬದಲಿಗೆ ರಾಕೇಶ್ ಗೋಲು ಶುಕ್ಲಾ ಅವರನ್ನು ಪಕ್ಷ ಕಣಕ್ಕಿಳಿಸಿದೆ.

ಸಚಿವರಾದ ಒಪಿಎಸ್ ಭದೋರಿಯಾ, ಯಶೋಧರ ಸಿಂಧಿಯಾ ಮತ್ತು ಗೌರಿಶಂಕರ್ ಬಿಸೆನ್ ಸೇರಿದಂತೆ 29 ಶಾಸಕರಿಗೆ ಟಿಕೆಟ್ ಕೈ ತಪ್ಪಿದ್ದು, 37 ಶಾಸಕರು ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಸೋದರಳಿಯ ಅನೂಪ್ ಮಿಶ್ರಾ ಅವರಿಗೂ ಟಿಕೆಟ್ ನಿರಾಕರಿಸಲಾಗಿದೆ. ಮಾಜಿ ಸಚಿವ ನಾರಾಯಣ್ ಸಿಂಗ್ ಕುಶ್ವಾಹ ಸ್ಪರ್ಧಿಸಲಿದ್ದಾರೆ.

ಪಟ್ಟಿಯಲ್ಲಿ ಮಾಜಿ ಸಚಿವರಾದ ಮಾಯಾ ಸಿಂಗ್ ಮತ್ತು ಅರ್ಚನಾ ಚಿಟ್ನಿಸ್ ಸೇರಿದಂತೆ 12 ಮಹಿಳಾ ಅಭ್ಯರ್ಥಿಗಳ ಹೆಸರುಗಳಿವೆ. ಸಚಿವೆ ಉಷಾ ಠಾಕೂರ್ ಅವರನ್ನು ಮೋವ್ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ. ಗುನಾ ಮತ್ತು ವಿದಿಶಾ ಕ್ಷೇತ್ರ ಹೊರತುಪಡಿಸಿ 230 ಸ್ಥಾನಗಳ ಪೈಕಿ 228ಕ್ಕೆ ಪಕ್ಷ ಅಭ್ಯರ್ಥಿಗಳನ್ನು ಘೋಷಿಸಿದೆ.

ದ್ರೋಹ ಮಾಡಬೇಡಿ, ಮೈತ್ರಿ ಬಗ್ಗೆ ಸ್ಪಷ್ಟಪಡಿಸಿ: ಅಖಿಲೇಶ್

ಹರ್ದೋಯಿ (ಉತ್ತರ ಪ್ರದೇಶ) (ಪಿಟಿಐ): 'ಸಮಾಜವಾದಿ ಪಕ್ಷಕ್ಕೆ ಕಾಂಗ್ರೆಸ್ ದ್ರೋಹ ಮಾಡಬಾರದು ಮತ್ತು ಮೈತ್ರಿ ಬೇಕೇ ಬೇಡವೇ ಎಂಬುದನ್ನು ಸ್ಪಷ್ಟಪಡಿಸಬೇಕು' ಎಂದು ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಶನಿವಾರ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರೊಬ್ಬರ ಮೂಲಕ ನನಗೆ ಸಂದೇಶ ಬಂದಿದೆ. ಅದನ್ನು ನಾನು ಪಾಲಿಸಬೇಕಾಗುತ್ತದೆ' ಎಂದು ಹೇಳಿದರು. ಆದರೆ, ಅವರ ಹೆಸರನ್ನು ಬಹಿರಂಗಪಡಿಸಲಿಲ್ಲ.

'ಆದರೆ, ಒಂದು ವಿಷಯ ಹೇಳಲು ಬಯಸುತ್ತೇನೆ. ಅವರಿಗೆ ಮೈತ್ರಿ ಬೇಡವಾಗಿದ್ದರೆ ನನ್ನನ್ನು ಏಕೆ ಸಂಪರ್ಕಿಸಿದರು' ಎಂದು ಪ್ರಶ್ನಿಸಿದರು.

'ನಮ್ಮ ವಿರುದ್ಧ ಪಿತೂರಿ ಮಾಡಬೇಡಿ, ದ್ರೋಹ ಮಾಡಬೇಡಿ. ಸಮಾಜವಾದಿಗಳ ಅಗತ್ಯವಿಲ್ಲ ಎಂದು ಅವರು ನಮಗೆ ನೇರವಾಗಿ ಹೇಳಬೇಕು. ನಾವು ಒಮ್ಮೆಯೂ ಮೈತ್ರಿಯ ಬಗ್ಗೆ ಮಾತನಾಡುವುದಿಲ್ಲ ಮತ್ತು ಬಿಜೆಪಿ ಸೋಲಿಸಲು ನಮ್ಮದೇ ಸಿದ್ಧತೆ ಪ್ರಾರಂಭಿಸುತ್ತೇವೆ ಎಂಬ ಭರವಸೆ ನೀಡುತ್ತೇನೆ' ಎಂದು ಅವರು ಹೇಳಿದರು.

'ವಿಧಾನಸಭಾ ಚುನಾವಣೆಯಲ್ಲಿ ಮೈತ್ರಿ ಇರುವುದಿಲ್ಲ ಮತ್ತು ಲೋಕಸಭಾ ಚುನಾವಣೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು ಎಂಬ ನಿಲುವು ಇದ್ದಿದ್ದರೆ ಅದನ್ನು ನಮಗೆ ಹೇಳಬೇಕಿತ್ತು' ಎಂದು ಯಾದವ್ ಹೇಳಿದರು.



ರಾಜಸ್ಥಾನ ವಿಧಾನಸಭಾ ಚುನಾವಣೆಗೆ ಬಿಕಾನೇರ್ ಪಶ್ಚಿಮ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಪಡೆದ ಅಭ್ಯರ್ಥಿ ಜೆತಾನಂದ ವ್ಯಾಸ್ ಅವರನ್ನು ಬೆಂಬಲಿಗರು ಶನಿವಾರ ಅಭಿನಂದಿಸಿದರು. ಪಿಟಿಐ ಚಿತ್ರ

ಮೊದಲ ಪಟ್ಟಿಯಲ್ಲಿ ಗೆಹಲೋತ್, ಪೈಲಟ್

ನವದೆಹಲಿ/ಜೈಪುರ (ಪಿಟಿಐ): ರಾಜಸ್ಥಾನ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ 33 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಶನಿವಾರ ಬಿಡುಗಡೆ ಮಾಡಿದೆ. ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರಿಗೆ ಸರ್ದಾರ್‌ಪುರದಿಂದ ಹಾಗೂ ಸಚಿನ್ ಪೈಲಟ್ ಅವರಿಗೆ ಟೋಂಕ್ ಕ್ಷೇತ್ರದಿಂದ ಕಣಕ್ಕಿಳಿಯಲು ಟಿಕೆಟ್ ನೀಡಲಾಗಿದೆ.

2020ರಲ್ಲಿ ಪೈಲಟ್ ಅವರೊಂದಿಗೆ ಗೆಹಲೋತ್ ವಿರುದ್ಧ ಬಂಡಾಯ ಎದ್ದ ಮೂವರು ನಾಯಕರು ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಐವರು ಸಚಿವರು, 27 ಶಾಸಕರು ಮತ್ತು ಪಕ್ಷೇತರ ಶಾಸಕರೊಬ್ಬರಿಗೆ ಟಿಕೆಟ್ ನೀಡಲಾಗಿದೆ. ಪಟ್ಟಿಯಲ್ಲಿ ಒಂಬತ್ತು ಮಹಿಳಾ ಅಭ್ಯರ್ಥಿಗಳ ಹೆಸರುಗಳಿವೆ. ಇದರಲ್ಲಿ ಪರಿಶಿಷ್ಟ ಜಾತಿಯ ಮೂರು ಮತ್ತು ಪರಿಶಿಷ್ಟ ಪಂಗಡದ ನಾಲ್ಕು ಸ್ಥಾನಗಳು ಸೇರಿವೆ.

ಇನ್ನೂ ಹಲವು ಕ್ಷೇತ್ರಗಳಿಗೆ ಹೆಸರು ಅಂತಿಮಗೊಳಿಸಲು ಪಕ್ಷದ ಕೇಂದ್ರ ಚುನಾವಣಾ ಸಮಿತಿ ಭಾನುವಾರ ಸಭೆ ಸೇರಲಿದೆ. ಈ ಚುನಾವಣೆ ಕಾಂಗ್ರೆಸ್‌ಗೆ ನಿರ್ಣಾಯಕವಾಗಿರುವ ಕಾರಣ, ಪಕ್ಷದ ನಾಯಕರು ಸಂಭಾವ್ಯ ಕಾರ್ಯತಂತ್ರಗಳ ಬಗ್ಗೆಯೂ ಚರ್ಚಿಸಿದರು.

ಮಾಳವೀಯ ನಗರದಿಂದ ಅರ್ಚನಾ ಶರ್ಮಾ ಮತ್ತು ಸಂಗನೇರ್‌ನಿಂದ ಪುಷ್ಪೇಂದ್ರ ಭಾರದ್ವಾಜ್ ಅವರನ್ನು ಪಕ್ಷ ಕಣಕ್ಕಿಳಿಸಿದೆ. ಇಬ್ಬರೂ ಕಳೆದ ಚುನಾವಣೆಯಲ್ಲಿ ಸೋತಿದ್ದರು. ಕುಶಾಲನಗರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದ ರಮೀಳಾ ಖಾಡಿಯಾ ಅವರಿಗೂ ಟಿಕೆಟ್ ನೀಡಿದೆ.

ಸ್ಪೀಕರ್ ಸಿ.ಪಿ.ಜೋಶಿ ಅವರು ತಮ್ಮ ನಾಥದ್ವಾರಾ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದರೆ, ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಗೋವಿಂದ್ ಸಿಂಗ್ ದೊತಾಸ್ರಾ ಅವರನ್ನು ಲಚ್ಮನ್‌ಗಢದಿಂದ ಕಣಕ್ಕಿಳಿಸಲಾಗಿದೆ. ಸಚಿವ ಹರೀಶ್ ಚೌಧರಿ ಬೈಟೂನಿಂದ, ಮಮತಾ ಭೂಪೇಶ್ ಸಿಕ್ರೈಯಿಂದ ಸ್ಪರ್ಧಿಸಲಿದ್ದಾರೆ.

'ಕಾಂಗ್ರೆಸ್ ಟಿಕೆಟ್ ಘೋಷಿಸಿರುವ ಎಲ್ಲಾ 33 ಅಭ್ಯರ್ಥಿಗಳು ಗೆಲ್ಲುತ್ತಾರೆ. ಕಾಂಗ್ರೆಸ್‌ಗೆ ಜನಾದೇಶ, ಇದು ರಾಜಸ್ಥಾನದ ಸಂದೇಶ' ಎಂದು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಗೋವಿಂದ್ ಸಿಂಗ್ ದೊತಾಸ್ರಾ ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ನಕ್ಸಲ್ ಉಪಟಳ ನಿಯಂತ್ರಣ ಕೇಂದ್ರದ ಪಾತ್ರ ಶೂನ್ಯ'

ರಾಯಪುರ (ಪಿಟಿಐ): ರಾಜ್ಯದಲ್ಲಿ 'ಡಬಲ್ ಎಂಜಿನ್' ಸರ್ಕಾರದ ಅವಧಿಯಲ್ಲಿ ನಕ್ಸಲ್ ಹಿಂಸಾಚಾರದ ಘಟನೆಗಳು ಹೆಚ್ಚಿದ್ದವು. ನಕ್ಸಲ್ ಉಪಟಳ ನಿಗ್ರಹಿಸುವಲ್ಲಿ ಕೇಂದ್ರ ಸರ್ಕಾರ ಯಾವುದೇ ಪಾತ್ರ ವಹಿಸಲಿಲ್ಲ ಎಂದು ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೆಲ್ ದೂರಿದ್ದಾರೆ.

ತಮ್ಮ ಸರ್ಕಾರದ ಅಭಿವೃದ್ಧಿ, ವಿಶ್ವಾಸ ಮತ್ತು ಭದ್ರತೆ ಕಾರ್ಯತಂತ್ರವು ಮಾವೋವಾದಿಗಳನ್ನು ಹಿಮ್ಮೆಟ್ಟಿಸಲು ಕಾರಣವಾಯಿತು ಎಂದರು.

ಚುನಾವಣಾ ಕಣದಲ್ಲಿ....


ತೆಲಂಗಾಣ ಅತ್ಯಂತ ಕಡಿಮೆ ಭ್ರಷ್ಟ ರಾಜ್ಯ: ರಾಹುಲ್‌ಗೆ ಕವಿತಾ ತಿರುಗೇಟು

ಹೈದರಾಬಾದ್ (ಪಿಟಿಐ): 'ತೆಲಂಗಾಣವು ದೇಶದಲ್ಲೇ ಅತ್ಯಂತ ಕಡಿಮೆ ಭ್ರಷ್ಟಾಚಾರ ಇರುವ ರಾಜ್ಯ ಎಂದು ಕೇಂದ್ರ ಸರ್ಕಾರದ ವರದಿಯೊಂದು ಹೇಳಿದೆ' ಎಂದು ಬಿಆರ್‌ಎಸ್ ವಿಧಾನ ಪರಿಷತ್ ಸದಸ್ಯೆ ಕೆ. ಕವಿತಾ ಹೇಳಿದ್ದಾರೆ.

ತೆಲಂಗಾಣ ಅತ್ಯಂತ ಭ್ರಷ್ಟ ರಾಜ್ಯ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಾಡಿದ್ದ ಆರೋಪಕ್ಕೆ ಕವಿತಾ ಹೀಗೆ ತಿರುಗೇಟು ನೀಡಿದ್ದಾರೆ.

'ರಾಹುಲ್ ಒಬ್ಬ ನಾಯಕ ಅಲ್ಲ, ಅವರು ಬರೆದುಕೊಟ್ಟಿದ್ದನ್ನು ಓದುವವರು. ಚುನಾವಣಾ ಪ್ರಚಾರಕ್ಕಾಗಿ ರಾಜ್ಯಕ್ಕೆ ಬರುವ ಮುನ್ನ ಅವರು ಸರಿಯಾಗಿ ಹೋಂವರ್ಕ್ ಮಾಡಿಕೊಂಡು ಬರಬೇಕು' ಎಂದು ಕವಿತಾ ಕುಟುಕಿದ್ದಾರೆ. 'ನಮ್ಮ ತಂದೆ, ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರು ಇತರ ರಾಜಕಾರಣಿಗಳಂತಲ್ಲ. ಅವರು ಚಳವಳಿಗಳಿಂದ ಬಂದವರು, ತಳಮಟ್ಟದಿಂದ ಬೆಳೆದು ನಾಯಕರಾದವರು. ಅವರಿಗೆ ಈ ರಾಜ್ಯದ ಜನರ ಕಷ್ಟಗಳ ಅರಿವಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಬೇರೆ ರಾಜ್ಯಗಳಿಗೆ ಹೋಲಿಸಿದರೆ ಉತ್ತಮ ಮಟ್ಟದಲ್ಲಿ ಇದೆ' ಎಂದು ಹೇಳಿದ್ದಾರೆ.

30ರಂದು ಮಿಜೋರಾಂಗೆ ಮೋದಿ?



ಐಜ್ವಾಲ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಮಿಜೋರಾಂನ ಮಮಿತ್ ಪಟ್ಟಣಕ್ಕೆ ಅಕ್ಟೋಬರ್ 30ರಂದು ಭೇಟಿ ನೀಡಿ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ನಡೆಸುವ ನಿರೀಕ್ಷೆ ಇದೆ ಎಂದು ಪಕ್ಷದ ರಾಜ್ಯ ಘಟಕ ಮುಖ್ಯಸ್ಥ ವನ್‌ಲಾಹುಮುಆಕ ಅವರು ಶನಿವಾರ ತಿಳಿಸಿದ್ದಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಸಚಿವರಾದ ರಾಜನಾಥ ಸಿಂಗ್ ಮತ್ತು ನಿತಿನ್ ಗಡ್ಕರಿ ಅವರೂ ಮೋದಿ ಅವರ ಜೊತೆ ಇರಲಿದ್ದಾರೆ. ಆದರೆ ಅಮಿತ್ ಶಾ ಅವರು ಬರುವುದು ಇನ್ನೂ ಖಚಿತವಾಗಿಲ್ಲ ಎಂದು ಅವರು ಹೇಳಿದ್ದಾರೆ.

ಬಿಜೆಪಿ ಮುಖಂಡನ ಹತ್ಯೆ

ಮಾನ್ಪುರ: ಛತ್ತೀಸಗಢದ ನಕ್ಸಲ್ ಪೀಡಿತ ಮೋಹ್ಲ- ಮಾನ್ಪುರ-ಅಂಬಾಗಢ ಚೌಕಿ ಜಿಲ್ಲೆಯ ಗ್ರಾಮವೊಂದರಲ್ಲಿ ದುಷ್ಕರ್ಮಿಗಳು ಬಿಜೆಪಿ ಮುಖಂಡ ಬಿರ್ಜು ತರಮ್ ಅವರನ್ನು ಶುಕ್ರವಾರ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣವು ಸರ್ಖೇಡಾ ಗ್ರಾಮದಲ್ಲಿ ನಡೆದಿದೆ. ಬಿರ್ಜು ತರಮ್ ವಾಯುವಿಹಾರಕ್ಕೆಂದು ಹೊರಗೆ ಹೋಗಿದ್ದ ವೇಳೆ 2–3 ಜನರು ಅವರ ಮೇಲೆ ಗುಂಡು ಹಾರಿಸಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಈ ಹತ್ಯೆಯಲ್ಲಿ ನಕ್ಸಲ್ ಕೈವಾಡ ಇದೆಯೇ ಎಂಬ ಪ್ರಶ್ನೆಗೆ, 'ಪ್ರಕರಣದ ತನಿಖೆ ನಡೆಯುತ್ತಿದೆ. ಈಗಲೇ ಏನನ್ನೂ ಹೇಳಲು ಸಾಧ್ಯವಿಲ್ಲ' ಎಂದು ಪೊಲೀಸರು ಹೇಳಿದ್ದಾರೆ.

ಪ್ರಕರಣ ಕುರಿತು ಆಕ್ರೋಶ ವ್ಯಕ್ತಪಡಿಸಿರುವ ರಾಜ್ಯ ಬಿಜೆಪಿ ಅಧ್ಯಕ್ಷ ಅರುಣ್ ಸಾವೊ, 'ಇಂಥ ಕೃತ್ಯಗಳಿಂದ ಬಿಜೆಪಿ ಕಾರ್ಯಕರ್ತರು ಹೆದರುವುದಿಲ್ಲ. ಕಾಂಗ್ರೆಸ್‌ಅನ್ನು ಅಧಿಕಾರದಿಂದ ಕೆಳಗಿಳಿಸುತ್ತೇವೆ' ಎಂದು ವಿಡಿಯೊ ಸಂದೇಶ ಬಿಡುಗಡೆ ಮಾಡಿದ್ದಾರೆ.

ಇದಕ್ಕೂ ಮೊದಲು, ಜೂನ್‌ನಲ್ಲಿ ಒಬ್ಬರು ಮತ್ತು ಫೆಬ್ರುವರಿಯಲ್ಲಿ ಮೂವರು ಸ್ಥಳೀಯ ಬಿಜೆಪಿ ಮುಖಂಡರ ಹತ್ಯೆ ನಡೆದಿತ್ತು.

ಗಾಜಾ ಪಟ್ಟಿ ಪ್ರವೇಶಿಸಿದ ನೆರವು ಸಾಮಗ್ರಿ

ಕುಡಿಯುವ ನೀರು, ವೈದ್ಯಕೀಯ ಸಾಮಗ್ರಿಯನ್ನು ಹೊತ್ತು ರಫಾ ಗಡಿ ದಾಟಿದ ಟ್ರಕ್ಕುಗಳು

ರಫಾ (ಗಾಜಾ ಪಟ್ಟಿ) (ಎಪಿ): ಗಾಜಾ ಪಟ್ಟಿಯಲ್ಲಿ ಇರುವ ಪ್ಯಾಲೆಸ್ಟೀನ್ ನಾಗರಿಕರಿಗೆ ಅಗತ್ಯವಿರುವ ವಸ್ತುಗಳನ್ನು ಪೂರೈಸಲು ಈಜಿಪ್ಟ್ ಮತ್ತು ಗಾಜಾ ಪಟ್ಟಿಯ ನಡುವಿನ ರಫಾ ಗಡಿಯನ್ನು ಶನಿವಾರ ಮುಕ್ತವಾಗಿಸಲಾಯಿತು. ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ದಾಳಿ ನಡೆಸಿದ ನಂತರದಲ್ಲಿ ಈ ಗಡಿಯನ್ನು ಬಂದ್ ಮಾಡಲಾಗಿತ್ತು.

ಪ್ಯಾಲೆಸ್ಟೀನ್ ನಾಗರಿಕರು ಈಗ ಆಹಾರ ವಸ್ತುಗಳನ್ನು ಬಹಳ ಮಿತವಾಗಿ ಬಳಸುತ್ತಿದ್ದಾರೆ. ಕೊಳಕು ನೀರನ್ನು ಕುಡಿಯಬೇಕಾದ ಪರಿಸ್ಥಿತಿ ಅವರಿಗೆ ಎದುರಾಗಿದೆ. ಅಲ್ಲಿನ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಚಿಕಿತ್ಸೆಗೆ ಅಗತ್ಯವಿರುವ ಸಾಮಗ್ರಿಗಳ ದಾಸ್ತಾನು ಖಾಲಿಯಾಗುತ್ತಿದೆ. ವಿದ್ಯುತ್ ಜನರೇಟರ್‌ಗಳಿಗೆ ಇಂಧನ ಸಿಗುತ್ತಿಲ್ಲ.

ಶನಿವಾರ 20 ಟ್ರಕ್ಕುಗಳನ್ನು ಮಾತ್ರ ಗಾಜಾ ಪಟ್ಟಿಯೊಳಕ್ಕೆ ಬಿಡಲಾಗಿದೆ. ಆದರೆ, ಇಷ್ಟು ಟ್ರಕ್ಕುಗಳಲ್ಲಿ ಇರುವ ಅಗತ್ಯ ವಸ್ತುಗಳು ಗಾಜಾ ಪಟ್ಟಿಯ ಜನರ ಬೇಡಿಕೆಯನ್ನು ಪೂರೈಸಲು ಏನೇನೂ ಸಾಲದು ಎಂದು ನೆರವು ಕಾರ್ಯಕರ್ತರು ಬೇಸರ ವ್ಯಕ್ತಪಡಿಸಿದ್ದಾರೆ.

ಅಂದಾಜು ಮೂರು ಸಾವಿರ ಟನ್‌ಗಳಷ್ಟು ಅಗತ್ಯ ವಸ್ತುಗಳನ್ನು ಹೊತ್ತ 200ಕ್ಕೂ ಹೆಚ್ಚು ಟ್ರಕ್‌ಗಳು ಗಾಜಾ ಪಟ್ಟಿಯ ಗಡಿಯಲ್ಲಿ ನಿಂತಿವೆ. ಇದೇ ಹೊತ್ತಿನಲ್ಲಿ, ಗಾಜಾ ಪಟ್ಟಿಯಲ್ಲಿ ಸಿಲುಕಿಕೊಂಡಿರುವ, ವಿದೇಶಿ ಪಾಸ್‌ಪೋರ್ಟ್ ಹೊಂದಿರುವವರು ಅಲ್ಲಿಂದ ಹೊರಹೋಗಲು ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ರಫಾ ಗಡಿಯ ಪ್ರಮುಖ ದ್ವಾರದ ಮೂಲಕ ಟ್ರಕ್ಕುಗಳು ಸಾಗಿದಾಗ, ನೆರವು ಕಾರ್ಯಕರ್ತರು ಚಪ್ಪಾಳೆ ತಟ್ಟಿ ಸಂಭ್ರಮಿಸಿದರು.

ಹಮಾಸ್ ಬಂಡುಕೋರರು ಅಮೆರಿಕದ ಇಬ್ಬರು ಪ್ರಜೆಗಳನ್ನು ಬಿಡುಗಡೆ ಮಾಡಿದ ನಂತರದಲ್ಲಿ ಈ ಗಡಿಯನ್ನು ಅಗತ್ಯ ವಸ್ತುಗಳ ಪೂರೈಕೆಗೆ ತೆರೆಯಲಾಯಿತು. ಆದರೆ ಒತ್ತೆಯಾಳುಗಳ ಬಿಡುಗಡೆಗೂ ಅಗತ್ಯ ವಸ್ತುಗಳನ್ನು ಸಾಗಿಸಲು ಅವಕಾಶ ಕಲ್ಪಿಸಿದ್ದಕ್ಕೂ ನೇರ ಸಂಬಂಧ ಇದೆಯೇ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ.

ಇಸ್ರೇಲ್ ಮಿಲಿಟರಿಯು ಗಾಜಾದ ಉದ್ದಕ್ಕೂ ವಾಯುದಾಳಿಯನ್ನು ಮುಂದುವರಿಸಿದೆ. ಹಮಾಸ್ ಬಂಡುಕೋರರು ಇಸ್ರೇಲ್ ಗುರಿಯಾಗಿಸಿಕೊಂಡು ರಾಕೆಟ್ ದಾಳಿ ನಡೆಸುತ್ತಿದ್ದಾರೆ.

ಗಾಜಾ ನಗರದಲ್ಲಿ ಇರುವ ಅಲ್–ಕುದ್ಸ್ ಆಸ್ಪತ್ರೆಯ ಮೇಲೆ ಬಾಂಬ್ ದಾಳಿ ಆಗಬಹುದು ಎಂಬ ಬೆದರಿಕೆಯು ಇಸ್ರೇಲ್ ಕಡೆಯಿಂದ ಬಂದಿದೆ ಎಂದು ಪ್ಯಾಲೆಸ್ಟೀನ್ ರೆಡ್ ಕ್ರೆಸೆಂಟ್ ಸೊಸೈಟಿ ಹೇಳಿದೆ. ಈ ಆಸ್ಪತ್ರೆಯ ಕಟ್ಟಡವನ್ನು ತಕ್ಷಣವೇ ಖಾಲಿ ಮಾಡಬೇಕು ಎಂದು ಇಸ್ರೇಲ್ ಸೂಚಿಸಿದೆ ಎಂದು ಸೊಸೈಟಿ ಹೇಳಿದೆ. ಆಸ್ಪತ್ರೆಯಲ್ಲಿ 400ಕ್ಕೂ ಹೆಚ್ಚಿನ ರೋಗಿಗಳು, ಸಹಸ್ರಾರು ಮಂದಿ ನಿರಾಶ್ರಿತರು ಇದ್ದಾರೆ.

ಯುದ್ಧ ಆರಂಭವಾಗುವ ಮೊದಲು ಪ್ರತಿನಿತ್ಯ 400 ಟ್ರಕ್ಕುಗಳು ಗಾಜಾಕ್ಕೆ ಬರುತ್ತಿದ್ದವು. ಈಗ ಇಲ್ಲಿನ ಪರಿಸ್ಥಿತಿ ಗಂಭೀರವಾಗಿದೆ. ಇಲ್ಲಿಗೆ ಇನ್ನೂ ಹಲವು ಟ್ರಕ್ಕುಗಳಷ್ಟು ನೆರವು ವಸ್ತುಗಳ ಅಗತ್ಯ ಇದೆ ಎಂದು ವಿಶ್ವಸಂಸ್ಥೆಯ ವಿಶ್ವ ಆಹಾರ ಯೋಜನೆಯ ಮುಖ್ಯಸ್ಥೆ ಸಿಂಡಿ ಮೆಕ್‌ಕೇನ್ ಹೇಳಿದ್ದಾರೆ.



ಅಗತ್ಯ ವಸ್ತುಗಳನ್ನು ಹೊತ್ತಿರುವ ಟ್ರಕ್ಕುಗಳು ರಫಾ ಗಡಿಯ ಮೂಲಕ ಶನಿವಾರ ಗಾಜಾ ಪಟ್ಟಿ ಪ್ರವೇಶಿಸಿದವು (ಎಎಫ್‌ಪಿ ಚಿತ್ರ)

ದಕ್ಷಿಣದ ಪ್ರದೇಶಗಳಿಗೆ ಮಾತ್ರ ನೆರವು

ಜೆರುಸಲೇಂ (ರಾಯಿಟರ್ಸ್): ಗಾಜಾ ಪಟ್ಟಿಯನ್ನು ಪ್ರವೇಶಿಸಿರುವ ಅಗತ್ಯ ವಸ್ತುಗಳು ದಕ್ಷಿಣ ಭಾಗಕ್ಕೆ ಮಾತ್ರ ಸೀಮಿತ ಎಂದು ಇಸ್ರೇಲ್ ಮಿಲಿಟರಿ ಹೇಳಿದೆ. ಗಾಜಾ ಪಟ್ಟಿಯ ಉತ್ತರ ಭಾಗವನ್ನು ತೊರೆಯಬೇಕು ಎಂದು ಅಲ್ಲಿನ ನಿವಾಸಿಗಳಿಗೆ ಇಸ್ರೇಲ್ ಈ ಹಿಂದೆಯೇ ಸೂಚನೆ ನೀಡಿತ್ತು.

ಈಗ ಸಿಗುತ್ತಿರುವ ಅಗತ್ಯ ವಸ್ತುಗಳ ಪಟ್ಟಿಯಲ್ಲಿ ಇಂಧನ ಇಲ್ಲ ಎಂದು ಇಸ್ರೇಲ್ ಮಿಲಿಟರಿ ವಕ್ತಾರ ಡೇನಿಯಲ್ ಹಗರಿ ಹೇಳಿದ್ದಾರೆ. ಹಮಾಸ್ ಬಳಿ ಇರುವ ಒತ್ತೆಯಾಳುಗಳ ಸಂಖ್ಯೆ 210 ಎಂದು ಅವರು ತಿಳಿಸಿದ್ದಾರೆ.

ಯುದ್ಧ ಭೂಮಿಯಲ್ಲಿ...

- 44 ಸಾವಿರ ಬಾಟಲಿ ಕುಡಿಯುವ ನೀರನ್ನು ಗಾಜಾ ಪಟ್ಟಿಯೊಳಕ್ಕೆ ಕಳುಹಿಸಲಾಗಿದೆ.
- ವೈದ್ಯಕೀಯ ನೆರವು ವಸ್ತುಗಳನ್ನು ಕಳುಹಿಸಲಾಗಿದೆ. ರಫಾ ಗಡಿಯನ್ನು ಮುಕ್ತವಾಗಿ ಇರಿಸಬೇಕು ಎಂದು ಅಮೆರಿಕ ಕೋರಿದೆ. ನೆರವು ವಸ್ತುಗಳನ್ನು ಹಮಾಸ್ ಬಳಸಿಕೊಳ್ಳಬಾರದು ಎಂದು ಎಚ್ಚರಿಕೆ ನೀಡಿದೆ.
- ಹಮಾಸ್ ಸಂಘಟನೆ ಇಸ್ರೇಲ್ ಮೇಲೆ ನಡೆಸಿರುವ ದಾಳಿಯು, ಪ್ಯಾಲೆಸ್ಟೀನ್ ನಾಗರಿಕರಿಗೆ ಸಾಮೂಹಿಕವಾಗಿ ಶಿಕ್ಷೆ ವಿಧಿಸಲು ಸಮರ್ಥನೆ ಆಗುವುದೇ ಇಲ್ಲ ಎಂದು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಹೇಳಿದ್ದಾರೆ.

'ಆಪರೇಷನ್ ಅಜಯ್'ನಲ್ಲಿ ಮಹಿಮಾ



ಮಹಿಮಾ ಶೆಟ್ಟಿ

ಕಾರವಾರ: ಇಸ್ರೇಲ್‌ನಿಂದ ಭಾರತೀಯರನ್ನು ಸುರಕ್ಷಿತವಾಗಿ ಕರೆತರಲು ಕೇಂದ್ರ ಸರ್ಕಾರದ 'ಆಪರೇಷನ್ ಅಜಯ್' ತಂಡದಲ್ಲಿ ತಾಲ್ಲೂಕಿನ ಬಿಣಗಾದ ಮಹಿಮಾ ಶೆಟ್ಟಿ ಕೂಡ ಇದ್ದರು.

ಸದ್ಯ ಗೋವಾದ ಪರ್ವೊರಿಮ್‌ನಲ್ಲಿ ನೆಲೆಸಿರುವ ದುರ್ಗಪ್ಪ ಶೆಟ್ಟಿ ಮತ್ತು ನಯನಾ ದಂಪತಿಯ ಪುತ್ರಿ ಮಹಿಮಾ ಶೆಟ್ಟಿ ಆಪರೇಷನ್ ಅಜಯ್ ತಂಡದಲ್ಲಿದ್ದರು. ಏರ್ ಇಂಡಿಯಾದಲ್ಲಿ ಗಗನಸಖಿ ಆಗಿರುವ ಅವರು ಇಸ್ರೇಲ್‌ನಲ್ಲಿ ಸಿಲುಕಿದ್ದ ಭಾರತೀಯರನ್ನು ಕರೆತರುವ ಆರು ಮಂದಿಯ ತಂಡದಲ್ಲಿದ್ದರು.

'ಮಗಳು ಮಹಿಮಾ ಇಸ್ರೇಲ್‌ನಲ್ಲಿ ಇರುವವರನ್ನು ಕರೆತರಲು ಹೋಗುತ್ತಾಳೆ ಎಂದು ತಿಳಿದು ಆತಂಕವಾಗಿತ್ತು. ಅಲ್ಲಿ ಸಂಕಷ್ಟದಲ್ಲಿ ಇರುವ ನಮ್ಮವರನ್ನು ಸುರಕ್ಷಿತವಾಗಿ ಕರೆತರುವುದು ಪುಣ್ಯದ ಕೆಲಸ. ಈ ಅವಕಾಶ ಎಲ್ಲರಿಗೂ ಸಿಗದು ಎಂದು ನಮಗೇ ಧೈರ್ಯ ತುಂಬಿದಳು. ಕ್ಷಿಪಣಿ ದಾಳಿ ನಡೆಯುತ್ತಿದ್ದುದರಿಂದ ವಿಮಾನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದ್ದ ಅನುಭವ ಹೇಳಿದಳು. 236 ಮಂದಿ ಭಾರತೀಯರನ್ನು ಕರೆತಂದಿದ್ದಾಗಿ ತಿಳಿಸಿದ್ದಾಳೆ. ಮಗಳು ಇಸ್ರೇಲ್‌ನಿಂದ ಮರಳಿದ್ದಾಳೆ' ಎಂದು ಮಹಿಮಾ ತಾಯಿ ನಯನಾ ತಿಳಿಸಿದರು.

ಇಬ್ಬರು ಒತ್ತೆಯಾಳುಗಳ ಬಿಡುಗಡೆ

ರಫಾ (ಎಎಫ್‌ಪಿ/ಎಪಿ): ಹಮಾಸ್ ಬಂಡುಕೋರರು ಇಬ್ಬರು ಅಮೆರಿಕನ್ ಒತ್ತೆಯಾಳುಗಳನ್ನು ಶನಿವಾರ ಬಿಡುಗಡೆ ಮಾಡಿದ್ದಾರೆ. ಇಸ್ರೇಲ್ ಮೇಲೆ ಅಕ್ಟೋಬರ್ 7ರಂದು ದಾಳಿ ಮಾಡಿದ್ದ ಬಂಡುಕೋರರು 200ಕ್ಕೂ ಹೆಚ್ಚು ಮಂದಿಯನ್ನು ಒತ್ತೆಯಾಳುಗಳನ್ನಾಗಿ ಇರಿಸಿಕೊಂಡಿದ್ದಾರೆ.

ಈಗ ಬಿಡುಗಡೆ ಮಾಡಲಾಗಿರುವ ಒತ್ತೆಯಾಳುಗಳ ಹೆಸರು ಜುಡಿತ್ ಮತ್ತು ನತಾಲಿ ರಾನನ್ (ತಾಯಿ ಮತ್ತು ಮಗಳು). ಈ ಬಿಡುಗಡೆಯು ಸಣ್ಣ ಆಶಾಕಿರಣವೊಂದನ್ನು ಮೂಡಿಸಿದೆ ಎಂದು ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿಯ ಅಧ್ಯಕ್ಷೆ ಮಿರ್ಜಾನಾ ಸ್ಪೊಲ್ಜಾರಿಕ್ ಹೇಳಿದ್ದಾರೆ.

ಇಸ್ರೇಲ್‌ಗೆ ಬೆಂಬಲ ಸೂಚಿಸಲು ಹಾಗೂ ಗಾಜಾ ಪಟ್ಟಿಗೆ ಮಾನವೀಯ ನೆಲೆಯಲ್ಲಿ ಅಗತ್ಯ ವಸ್ತುಗಳ ಪೂರೈಕೆ ಆಗುವಂತೆ ನೋಡಿಕೊಳ್ಳುವ ಉದ್ದೇಶದಿಂದ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಇಸ್ರೇಲ್‌ಗೆ ಭೇಟಿ ನೀಡಿದ ನಂತರದಲ್ಲಿ ಈ ಬಿಡುಗಡೆ ಆಗಿದೆ. ಒತ್ತೆಯಾಳುಗಳ ಬಿಡುಗಡೆಯಿಂದಾಗಿ 'ನನಗೆ ಬಹಳ ಸಂತೋಷವಾಗಿದೆ' ಎಂದು ಬೈಡನ್ ಹೇಳಿದ್ದಾರೆ.


ಇಸ್ರೇಲ್ ದೇಶಕ್ಕೆ ಮಾನ್ಯತೆ ನೀಡಲು ಸೌದಿ ಅರೇಬಿಯಾ ಹೊಂದಿದ್ದ ಚಿಂತನೆಯೂ ಹಮಾಸ್ ಬಂಡುಕೋರರು ನಡೆಸಿದ ದಾಳಿಗೆ ಒಂದು ಕಾರಣವಾಗಿರಬಹುದು ಎಂದು ಬೈಡನ್ ಅವರು ಶುಕ್ರವಾರ ಹೇಳಿದ್ದರು. ಬೈಡನ್ ಅವರು ಬಿಡುಗಡೆ ಆಗಿರುವ ಅಮೆರಿಕನ್ ಪ್ರಜೆಗಳ ಜೊತೆ ದೂರವಾಣಿ ಮೂಲಕ ಮಾತನಾಡಿದ್ದಾರೆ.

ಹಮಾಸ್ ಸಂಘಟನೆಯ ರಾಜಕೀಯ ವಿಭಾಗಕ್ಕೆ ಆಶ್ರಯ ನೀಡಿರುವ ಕತಾರ್ ಈ ಇಬ್ಬರ ಬಿಡುಗಡೆಯ ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸಿತ್ತು.

ಈ ಇಬ್ಬರ ಬಿಡುಗಡೆ ಮಾತುಕತೆಯನ್ನು ಈಜಿಪ್ಟ್ ಮತ್ತು ಕತಾರ್ ನಡೆಸಿವೆ ಎಂದು ಹಮಾಸ್ ಹೇಳಿದೆ. ಅಪಹರಣಕ್ಕೆ ಒಳಗಾಗಿರುವವರಲ್ಲಿ ಬಹುತೇಕರು ಜೀವಂತವಾಗಿದ್ದಾರೆ ಎಂದು ಇಸ್ರೇಲ್ ಮಿಲಿಟರಿ ಹೇಳಿದೆ.

ಭದ್ರತಾ ಪರಿಸ್ಥಿತಿಯು ಸೂಕ್ತವಾಗಿದ್ದಲ್ಲಿ, ಒತ್ತೆಯಾಳು ಪ್ರಕರಣವನ್ನು ಮುಕ್ತಾಯಗೊಳಿಸಲು ಮಧ್ಯಸ್ಥಿಕೆದಾರರ ಜೊತೆ ಮಾತುಕತೆ ನಡೆದಿದೆ ಎಂದು ಹಮಾಸ್ ಪ್ರಕಟಣೆ ತಿಳಿಸಿದೆ. ಕತಾರ್ ಮತ್ತು ಈಜಿಪ್ಟ್ ನಡೆಸುತ್ತಿರುವ ಮಧ್ಯಸ್ಥಿಕೆ ಪ್ರಯತ್ನಗಳಿಗೆ ತಾನು ಬದ್ಧವಾಗಿ ನಡೆದುಕೊಳ್ಳುವುದಾಗಿಯೂ ಅದು ಹೇಳಿದೆ.

ಎರಡು ರಾಷ್ಟ್ರಗಳ ಪೌರತ್ವ ಇರುವ ಒತ್ತೆಯಾಳುಗಳ ಬಿಡುಗಡೆ ಮಾತುಕತೆ ನಡೆದಿದೆ. ಇದಕ್ಕೆ ಪ್ರತಿಯಾಗಿ ಇಂಧನ ಒದಗಿಸುವ ಮಾತುಕತೆ ನಡೆದಿದೆ. ಆದರೆ ಎಲ್ಲ ಒತ್ತೆಯಾಳುಗಳನ್ನು ಒಂದೇ ಬಾರಿಗೆ ಬಿಡುಗಡೆ ಮಾಡಬೇಕು ಎಂದು ಇಸ್ರೇಲ್ ಆಗ್ರಹಿಸುತ್ತಿದೆ ಎಂದು ಮೂಲಗಳು ಹೇಳಿವೆ.



ಹಮಾಸ್ ಬಂಡುಕೋರರು ಒತ್ತೆಯಾಳಾಗಿ ಇರಿಸಿಕೊಂಡಿದ್ದ ನತಾಲಿ ರಾನನ್ (ಎಡದಿಂದ ಎರಡನೆಯವರು) ಮತ್ತು ಜುಡಿತ್ (ಬಲದಿಂದ ಎರಡನೆಯವರು) ಇಸ್ರೇಲ್‌ಗೆ ಮರಳಿದರು. (ಎಎಫ್‌ಪಿ ಚಿತ್ರ/ಇಸ್ರೇಲ್ ಸರ್ಕಾರ)



ಇಸ್ರೇಲ್–ಹಮಾಸ್ ಸಮರ

ಫಲ ನೀಡಿದ ಕತಾರ್ ಮಧ್ಯಸ್ಥಿಕೆ

ಪ್ಯಾರಿಸ್ (ಎಎಫ್‌ಪಿ): ಪಾಶ್ಚಿಮಾತ್ಯ ದೇಶಗಳು ಹಾಗೂ ಹಮಾಸ್ ಸಂಘಟನೆಯ ಜೊತೆ ಉತ್ತಮ ಸಂಬಂಧ ಹೊಂದಿರುವ ಕತಾರ್ ದೇಶವು ಒತ್ತೆಯಾಳುಗಳನ್ನು ಬಿಡಿಸಿಕೊಂಡು ಬರುವ ಪ್ರಯತ್ನದಲ್ಲಿ ಪ್ರಮುಖ ಮಧ್ಯಸ್ಥಿಕೆದಾರ ಆಗಿ ಕೆಲಸ ಮಾಡುತ್ತಿದೆ.

ಇರಾನ್ ಹಿಡಿತದಲ್ಲಿ ಇದ್ದ ಐವರು ಅಮೆರಿಕನ್ನರನ್ನು ಕಳೆದ ತಿಂಗಳು ಬಿಡುಗಡೆ ಮಾಡುವಲ್ಲಿಯೂ ಕತಾರ್ ಪ್ರಮುಖ ಪಾತ್ರ ವಹಿಸಿತ್ತು. ಒತ್ತೆಯಾಳುಗಳನ್ನು ಬಿಡಿಸಿಕೊಂಡು ಬರುವ ಸನ್ನಿವೇಶ ಎದುರಾದಾಗ, ಕತಾರ್ ಹೊಂದಿರುವ ಪ್ರಭಾವವನ್ನು ಪಾಶ್ಚಿಮಾತ್ಯ ದೇಶಗಳು ಹೆಚ್ಚೆಚ್ಚು ನೆಚ್ಚಿಕೊಳ್ಳುತ್ತಿವೆ. 'ಎಲ್ಲ ರೀತಿಯಲ್ಲಿಯೂ ಉಪಕಾರಶೀಲ ಮನೋಭಾವ ಹೊಂದಿರುವ ದೇಶ ಕತಾರ್. ಈ ದೇಶಕ್ಕೆ ಹಮಾಸ್ ಬಗ್ಗೆ ಚೆನ್ನಾಗಿ ತಿಳಿದಿದೆ' ಎಂದು ತಜ್ಞರು ಹೇಳಿದ್ದಾರೆ. ಹಮಾಸ್‌ನ ರಾಜಕೀಯ ವಿಭಾಗದ ಕಚೇರಿಗೆ ಕತಾರ್ ಜಾಗ ಕಲ್ಪಿಸಿದೆ. ಅಲ್ಲದೆ, ಕತಾರ್ ಬಗ್ಗೆ ಅಮೆರಿಕಕ್ಕೆ ಬಹಳ ಗೌರವ ಇದೆ. ಅಮೆರಿಕದ ದೊಡ್ಡ ಮಿಲಿಟರಿ ನೆಲೆಯೊಂದು ಕತಾರ್‌ನಲ್ಲಿ ಇದೆ.

ಒತ್ತೆಯಾಳುಗಳನ್ನು ಬಿಡುಗಡೆ ಮಾಡಿಸುವ ಪ್ರಕ್ರಿಯೆಯಲ್ಲಿ ಕತಾರ್ ಬಹಳ ವಿಶೇಷವಾದ ಪರಿಣತಿಯನ್ನು ಹೊಂದಿದೆ ಎಂದು ಕೂಡ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಒತ್ತೆಯಾಳುಗಳ ಬಿಡುಗಡೆಯ ವಿಚಾರವಾಗಿ ಕತಾರ್ ವಹಿಸಿದ ಪಾತ್ರವನ್ನು ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುವಲ್ ಮ್ಯಾಕ್ರನ್ ಪ್ರಶಂಸಿಸಿದ್ದಾರೆ.

ಎಚ್–1ಬಿ ವೀಸಾ ನಿಯಮ ಬದಲಾವಣೆ ಪ್ರಸ್ತಾವ

ವಾಷಿಂಗ್ಟನ್(ಪಿಟಿಐ): ವಲಸೆಯೇತರ ಎಚ್–1ಬಿ ವೀಸಾ ನೀಡುವ ಕಾರ್ಯಕ್ರಮದಲ್ಲಿ ಬದಲಾವಣೆಗಳನ್ನು ತರಲು ಅಮೆರಿಕ ಅಧ್ಯಕ್ಷ ಜೋ ಬೈಡನ್ ಆಡಳಿತ ಮುಂದಾಗಿದೆ.

ಅರ್ಹತೆಗೆ ಮನ್ನಣೆ, ವಿದ್ಯಾರ್ಥಿಗಳಿಗೆ, ಉದ್ಯಮಶೀಲರಿಗೆ ಹಾಗೂ ಲಾಭಗಳಿಸುವ ಉದ್ದೇಶವಿಲ್ಲದ ಸಂಸ್ಥೆಗಳ ಉದ್ಯೋಗಿಗಳಿಗೆ ವೀಸಾ ನೀಡುವ ಪ್ರಕ್ರಿಯೆ ಸುಲಭಗೊಳಿಸುವ ಉದ್ದೇಶ ಹೊಂದಲಾಗಿದೆ.

ಆದರೆ, ಪ್ರತಿವರ್ಷ 60 ಸಾವಿರ ವೀಸಾಗಳನ್ನು ನೀಡಲಾಗುತ್ತದೆ. ಈ ಮಿತಿಯಲ್ಲಿ ಯಾವುದೇ ಬದಲಾವಣೆ ಮಾಡುವ ಪ್ರಸ್ತಾವ ಇಲ್ಲ.

ಹೊಸ ನಿಯಮಗಳನ್ನು ಅಮೆರಿಕ ಪೌರತ್ವ ಮತ್ತು ವಲಸೆ ಸೇವೆಗಳ (ಯುಎಸ್‌ಸಿಐಎಸ್) ಇಲಾಖೆಯು ಇದೇ 23ರಂದು ಪ್ರಕಟಿಸಲಿದೆ.

'ಪ್ರತಿಭಾವಂತರನ್ನು ಆಕರ್ಷಿಸುವುದು, ಅಮೆರಿಕದ ಕಂಪನಿಗಳ ಹೊರೆ ಕಡಿಮೆ ಮಾಡುವುದು, ವಲಸೆ ವ್ಯವಸ್ಥೆಯ ದುರುಪಯೋಗ,- ವಂಚನೆ ತಡೆಗಟ್ಟುವುದೇ ಬೈಡನ್–ಕಮಲಾ ಹ್ಯಾರಿಸ್ ನೇತೃತ್ವದ ಆಡಳಿತ ಆದ್ಯತೆಯಾಗಿದೆ. ಇದಕ್ಕಾಗಿಯೇ ವೀಸಾ ನಿಯಮಗಳಲ್ಲಿ ಬದಲಾವಣೆಗಳನ್ನು ತರಲು ಮುಂದಾಗಿದೆ' ಎಂದು ಆಂತರಿಕ ಭದ್ರತೆ ಕಾರ್ಯದರ್ಶಿ ಅಲೆಜಾಂಡ್ರೊ ಮೇಯರ್‌ಕಾಸ್ ಹೇಳಿದ್ದಾರೆ.

ರಾಜತಾಂತ್ರಿಕರ ನಿರ್ಗಮನ: ವಿಯೆನ್ನಾ ಒಪ್ಪಂದ ಗೌರವಿಸಲು ಆಗ್ರಹ

ಕೆನಡಾ ಬೆನ್ನಿಗೆ ನಿಂತ ಅಮೆರಿಕ, ಬ್ರಿಟನ್

ಪ್ರಜಾವಾಣಿ ವಾರ್ತೆ/ಪಿಟಿಐ

ವಾಷಿಂಗ್ಟನ್: ಖಾಲಿಸ್ತಾನ ಪರ ಪ್ರತ್ಯೇಕತಾವಾದಿ ನಾಯಕನ ಹತ್ಯೆ ಹಿನ್ನೆಲೆಯಲ್ಲಿ ಉದ್ಭವಿಸಿರುವ ಬಿಕ್ಕಟ್ಟಿನ ಪರಿಣಾಮ ಭಾರತದಲ್ಲಿದ್ದ ತನ್ನ ರಾಜತಾಂತ್ರಿಕರನ್ನು ವಾಪಸು ಕರೆಸಿಕೊಂಡಿರುವ ಕೆನಡಾದ ಬೆನ್ನಿಗೆ ಅಮೆರಿಕ, ಬ್ರಿಟನ್ ನಿಂತಿವೆ.

ಈ ಬೆಳವಣಿಗೆ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಅಮೆರಿಕದ ವಿದೇಶಾಂಗ ಇಲಾಖೆ, 'ರಾಜತಾಂತ್ರಿಕ ಸಂಬಂಧಗಳ ವಿಚಾರವಾಗಿ ಭಾರತವು 1961ರ ವಿಯೆನ್ನಾ ಒಪ್ಪಂದದಂತೆ ನಡೆದುಕೊಳ್ಳಬೇಕು' ಎಂದು ಹೇಳಿದೆ.

ಖಾಲಿಸ್ತಾನ ಪರ ಪ್ರತ್ಯೇಕತಾವಾದಿ ನಾಯಕ ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆ ನಂತರ ಉದ್ಭವಿಸಿರುವ ರಾಜತಾಂತ್ರಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಭಾರತ ಕಠಿಣ ನಿಲುವು ತಳೆದಿದೆ. ಕೆನಡಾ ರಾಜತಾಂತ್ರಿಕರು ಭಾರತ ತೊರೆಯಲು ಕಾರಣವಾದ ಭಾರತದ ನಿರ್ಧಾರಗಳನ್ನು ತಾನು ಒಪ್ಪುವುದಿಲ್ಲ ಎಂದು ಬ್ರಿಟನ್ ಹೇಳಿದೆ.

ದೇಶದಲ್ಲಿರುವ ರಾಜತಾಂತ್ರಿಕರ ಪೈಕಿ 41 ಅಧಿಕಾರಿಗಳನ್ನು ಅ.20ರ ಒಳಗಾಗಿ ಹಿಂದಕ್ಕೆ ಕರೆಸಿಕೊಳ್ಳುವಂತೆ ಭಾರತ ಗಡುವು ನೀಡಿತ್ತು. ಈ ಗಡುವಿನ ಒಳಗಾಗಿಯೇ ಕೆನಡಾ ತನ್ನ 41 ರಾಜತಾಂತ್ರಿಕರನ್ನು ಹಿಂದಕ್ಕೆ ಕರೆಸಿಕೊಂಡಿದೆ.

'ಭಾರತದಲ್ಲಿ ತನ್ನ ರಾಜತಾಂತ್ರಿಕ ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂಬ ಭಾರತದ ಸೂಚನೆಗೆ ಮಣಿದು, ತನ್ನ ರಾಜತಾಂತ್ರಿಕರನ್ನು ಕೆನಡಾ ವಾಪಸ್ ಕರೆಸಿಕೊಂಡಿದ್ದು, ಇದು ಕಳವಳಕಾರಿ. ಎರಡು ದೇಶಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ರಾಜತಾಂತ್ರಿಕರ ಉಪಸ್ಥಿತಿ ಅಗತ್ಯ' ಎಂದು ಅಮೆರಿಕದ ವಿದೇಶಾಂಗ ಇಲಾಖೆ ವಕ್ತಾರ ಮ್ಯಾಥ್ಯೂ ಮಿಲ್ಲರ್ ಹೇಳಿದ್ದಾರೆ.

'ಭಾರತದಲ್ಲಿರುವ ರಾಜತಾಂತ್ರಿಕರ ಸಂಖ್ಯೆಯನ್ನು ಕಡಿಮೆ ಮಾಡುವಂತೆ ಕೆನಡಾ ಮೇಲೆ ಒತ್ತಡ ಹೇರಬಾರದು. ನಿಜ್ಜರ್ ಹತ್ಯೆ ವಿಷಯವಾಗಿ ಕೆನಡಾ ಕೈಗೊಂಡಿರುವ ತನಿಖೆಗೆ ಸಹಕಾರ ನೀಡುವಂತೆ ಭಾರತವನ್ನು ಒತ್ತಾಯಿಸುತ್ತೇವೆ' ಎಂದು ಮ್ಯಾಥ್ಯೂ ಹೇಳಿದ್ದಾರೆ.

'ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಉಭಯ ದೇಶಗಳಲ್ಲಿ ರಾಜತಾಂತ್ರಿಕ ಅಧಿಕಾರಿಗಳ ಉಪಸ್ಥಿತಿ ಹಾಗೂ ಮಾತುಕತೆ ಅಗತ್ಯ. ಎಲ್ಲ ದೇಶಗಳು ವಿಯೆನ್ನಾ ಒಪ್ಪಂದದಂತೆ ನಡೆದುಕೊಳ್ಳಬೇಕು ಎಂದು ನಿರೀಕ್ಷಿಸುತ್ತೇವೆ' ಎಂದು ಬ್ರಿಟನ್‌ನ ವಿದೇಶಾಂಗ, ಕಾಮನ್‌ವೆಲ್ತ್ ಮತ್ತು ಅಭಿವೃದ್ಧಿ ಕಚೇರಿ (ಎಫ್‌ಸಿಡಿಒ) ಹೇಳಿದೆ.

4 ವರ್ಷಗಳ ಬಳಿಕ ನವಾಜ್ ಷರೀಫ್ ತಾಯ್ನಾಡಿಗೆ

ಇಸ್ಲಾಮಾಬಾದ್ (ಪಿಟಿಐ): ನಾಲ್ಕು ವರ್ಷಗಳ ಕಾಲ ಬ್ರಿಟನ್‌ನಲ್ಲಿದ್ದ ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರು ಶನಿವಾರ ವಿಶೇಷ ವಿಮಾನದಲ್ಲಿ ತಾಯ್ನಾಡಿಗೆ ಮರಳಿದರು.

ನೀಲಿ ಕುರ್ತಾ ಪೈಜಾಮಾ, ಕಡುಗೆಂಪು ಬಣ್ಣದ ಮಫ್ಲರ್ ಮತ್ತು ಕಪ್ಪು ಕೋಟು ಧರಿಸಿದ್ದ ಅವರು ಮಧ್ಯಾಹ್ನ 1.30ರ ವೇಳೆಗೆ ಇಸ್ಲಾಮಾಬಾದ್ ವಿಮಾನ ನಿಲ್ದಾಣದಲ್ಲಿ ಬಂದಿಳಿದರು. ಮುಂದಿನ ವರ್ಷದ ಜನವರಿ ತಿಂಗಳಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಪಿಎಂಎಲ್–ಎನ್ ಪಕ್ಷವನ್ನು ಮರಳಿ ಅಧಿಕಾರಕ್ಕೆ ತರಲು ಅವರು ಪ್ರಯತ್ನಿಸಲಿದ್ದಾರೆ. ಈ ಮೂಲಕ, ದೇಶದಲ್ಲಿ ನಾಲ್ಕನೇ ಅವಧಿಗೆ ಆಡಳಿತದ ಚುಕ್ಕಾಣಿ ಹಿಡಿಯಲು ಮುಂದಾಗಿದ್ದಾರೆ.

ಷರೀಫ್ ಅವರನ್ನು ಭೇಟಿ ಮಾಡಿದ ಅವರ ಕಾನೂನು ತಂಡವು ಇಸ್ಲಾಮಾಬಾದ್ ಹೈಕೋರ್ಟ್‌ಗೆ ಸಲ್ಲಿಸಲು ದಾಖಲಾತಿಗಳಿಗೆ ಸಹಿ ಮಾಡಿಸಿಕೊಂಡಿತು. ಜೊತೆಗೆ ವಿಮಾನ ನಿಲ್ದಾಣದಲ್ಲಿನ ಅಧಿಕಾರಿಗಳು ಅವರ ಬಯೋಮೆಟ್ರಿಕ್ ಪಡೆದರು.

ದುಬೈ ವಿಮಾನ ನಿಲ್ದಾಣದಲ್ಲಿ ಮಾತನಾಡಿದ ಅವರು, ಪ್ರಸ್ತುತ ಪಾಕಿಸ್ತಾನ ಎದುರಿಸುತ್ತಿರುವ ಹಣಕಾಸು ಬಿಕ್ಕಟ್ಟನ್ನು ಸರಿಪಡಿಸಲು ತಮ್ಮ ಪಕ್ಷ ಸಮರ್ಥವಿದೆ ಎಂದು ಹೇಳಿದರು.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1590 (1590)
ಸೋಯಾ (ರಿಫೈಂಡ್)	₹917 (915)
ಸೂರ್ಯಕಾಂತಿ (ರಿಫೈಂಡ್)	₹919 (915)
ಪಾಮೋಲಿನ್	₹818 (820)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹565

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹258-445
ದ್ವಿತಳಿ (ಬಿ.ವಿ)	₹222-563

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148.50
ಆರ್‌ಎಸ್‌ಎಸ್-5	₹143.00
ಗುಡ್ ಲಾಟ್	₹132

ತಿಪಟೂರು ಕೊಬ್ಬರಿ

(ಕ್ವಿಂಟಲ್‌ಗೆ)

ಕನಿಷ್ಠ	₹8000
ಗರಿಷ್ಠ	₹8900
ಮಾದರಿ	₹8500

ಚಿನ್ನ, ಬೆಳ್ಳಿ

ಬೆಂಗಳೂರು

ಸ್ಟಾಂಡರ್ಡ್ ಚಿನ್ನ 10 ಗ್ರಾಂ	₹62,580
ಒಡವೆ ಚಿನ್ನ 1 ಗ್ರಾಂ	₹5,790
ಬೆಳ್ಳಿ ಕೆ.ಜಿಗೆ	₹74,700

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಕಾರ್ಕಳ	
ಹೊಸತು	25000-36500
ಹಳತು	30000-48500
ಚಿತ್ರದುರ್ಗ	
ಅಪಿ	46619-46569
ಬೆಟ್ಟೆ	36149-36579
ಕೆಂಪುಗೋಟು	39109-30510
ರಾಶಿ	39490-40119
ಶಿರಸಿ	
ಬೆಟ್ಟೆ	39109-42899
ಬಿಳಿಗೋಟು	31099-35699
ಚಾಲಿ	37109-41408
ರಾಶಿ	44609-46899
ಸೊರಬ	
ಬಿಳಿಗೋಟು	27313-30199
ಚಾಲಿ	34099-34099
ಗೊರಬಲು	32509-33009
ರಾಶಿ	38199-47609
ತಟ್ಟಿಬೆಟ್ಟೆ	18313-19313
ಕುಂದಾಪುರ	
ಹಳೆಚಾಲಿ	43500-47000

ಗಗನಯಾನ: ಮೊದಲ ಪರೀಕ್ಷೆ ಯಶಸ್ವಿ

ಇಸ್ರೊ ಸಾಧನೆಗೆ ಮತ್ತೊಂದು ಗರಿ ● ಬಂಗಾಳಕೊಲ್ಲಿಯಲ್ಲಿ ಸುರಕ್ಷಿತವಾಗಿ ಇಳಿದ ಕ್ರೂ ಮಾಡ್ಯೂಲ್

ಚೆನ್ನೈ/ ಶ್ರೀಹರಿಕೋಟ (ಆಂಧ್ರಪ್ರದೇಶ) (ಪಿಟಿಐ): ಆರಂಭದಲ್ಲಿ ಕಂಡುಬಂದ ಕೆಲ ತಾಂತ್ರಿಕ ತೊಂದರೆಗಳನ್ನು ಸಮರ್ಥವಾಗಿ ನಿವಾರಿಸಿದ ಇಸ್ರೊ, ಮಾನವ ಸಹಿತ ಗಗನಯಾನಕ್ಕೆ ಪೂರ್ವಭಾವಿಯಾಗಿ ಕೈಗೊಳ್ಳುವ ಸರಣಿ ಪರೀಕ್ಷೆಗಳ ಪೈಕಿ ಮೊದಲ ಪರೀಕ್ಷಾ ಉಡಾವಣೆಯನ್ನು ಶನಿವಾರ ಯಶಸ್ವಿಯಾಗಿ ನಡೆಸಿತು.

ಇತ್ತೀಚೆಗಷ್ಟೆ ಚಂದ್ರಯಾನ–3ರ ಯಶಸ್ವಿನಿಂದ ಬಾಹ್ಯಾಕಾಶ ಕ್ಷೇತ್ರದಲ್ಲಿ ಮಹತ್ವದ ಸಾಧನೆ ದಾಖಲಿಸಿದ್ದ ಭಾರತವು ಮತ್ತೊಂದು 'ವಿಕ್ರಮ'ದತ್ತ ಮುನ್ನಡೆದಿರುವುದನ್ನು ಪರೀಕ್ಷಾ ಉಡಾವಣೆ ಸಾರಿದಂತಾಗಿದೆ.

'ಗಗನಯಾನಿಗಳು ಪಯಣಿಸುವ ಕೋಶ'ವನ್ನು (ಕ್ರೂ ಮಾಡ್ಯೂಲ್) ಹೊತ್ತ ರಾಕೆಟ್ (ಜಿಎಸ್‌ಎಲ್‌ವಿ) ದಟ್ಟ ಹೊಗೆಯನ್ನು ಉಗುಳುತ್ತಾ ರಭಸದಿಂದ ನಭಕ್ಕೆ ಚಿಮ್ಮಿತು. 17 ಕಿ.ಮೀ.ನಷ್ಟು ಎತ್ತರ ತಲುಪಿದ್ದ ರಾಕೆಟ್‌ನಿಂದ ಪ್ರತ್ಯೇಕಗೊಂಡ 'ಕ್ರೂ ಮಾಡ್ಯೂಲ್', ಬಂಗಾಳ ಕೊಲ್ಲಿಯಲ್ಲಿ ಪೂರ್ವ ನಿರ್ಧರಿತ ಸ್ಥಳದಲ್ಲಿ ಕರಾರುವಾಕ್ಕಾಗಿ ಇಳಿಯುವ ಮೂಲಕ ಇಸ್ರೊ ವಿಜ್ಞಾನಿಗಳ ಕುಶಾಗ್ರಮತಿ–ಪ್ರಯತ್ನಗಳಿಗೆ ಸಾಕ್ಷಿಯಾಯಿತು.

ರಾಕೆಟ್‌ನಿಂದ ಬೇರ್ಪಟ್ಟ ಕ್ರೂ ಮಾಡ್ಯೂಲ್ ಬೀಳಲಾರಂಭಿಸಿ, ಅದಕ್ಕೆ ಅಳವಡಿಸಿದ್ದ ಪ್ಯಾರಾಚೂಟ್‌ಗಳು ತೆರೆದುಕೊಳ್ಳುತ್ತಿದ್ದಂತೆಯೇ, ಇತ್ತ ನಿಯಂತ್ರಣ ಕೇಂದ್ರದಲ್ಲಿದ್ದ ವಿಜ್ಞಾನಿಗಳು ಹಾಗೂ ಇತರ ತಾಂತ್ರಿಕ ಸಿಬ್ಬಂದಿಯ ಹರ್ಷೋದ್ಗಾರಕ್ಕೆ ಪಾರವೇ ಇರಲಿಲ್ಲ; ಕರತಾಡನವೂ ಮುಗಿಲು ಮುಟ್ಟಿತ್ತು.



ಮಾನವ ಸಹಿತ ಗಗನಯಾನ ಪೂರ್ವಭಾವಿಯಾಗಿ ಇಸ್ರೊ ಕೈಗೊಂಡಿದ್ದ ಮೊದಲ ಪರೀಕ್ಷಾ ಉಡಾವಣೆಯ ಭಾಗವಾದ ಕ್ರೂ ಮಾಡ್ಯೂಲ್ ಹೊತ್ತ ರಾಕೆಟ್ ಆಂಧ್ರ ಪ್ರದೇಶದ ಶ್ರೀಹರಿಕೋಟದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಉಡ್ಡಯನ ನೆಲೆಯಿಂದ ಶನಿವಾರ ನಭಕ್ಕೆ ಚಿಮ್ಮಿತು —ಎಎಫ್‌ಪಿ ಚಿತ್ರ

ಇತ್ತ, ಸನ್ನದ್ಧರಾಗಿಯೇ ಇದ್ದ ನೌಕಾಪಡೆಯ ಈಸ್ಟರ್ನ್ ಕಮಾಂಡ್‌ನ ಸಿಬ್ಬಂದಿ, ಬಂಗಾಳ ಕೊಲ್ಲಿಯಲ್ಲಿ ಇಳಿದಿದ್ದ ಕ್ರೂ ಮಾಡ್ಯೂಲ್ ವಶಕ್ಕೆ ಪಡೆದರು.

ಪರೀಕ್ಷಾ ಉಡಾವಣೆಯ ಯಶಸ್ಸಿನಿಂದ ಬೀಗುತ್ತಿದ್ದ ಇಸ್ರೊ ಮುಖ್ಯಸ್ಥ ಎಸ್.ಸೋಮನಾಥ್ ಅವರು 'ಮಿಷನ್ ಕಂಟ್ರೋಲ್ ಸೆಂಟರ್'ನಿಂದ ಮಾತನಾಡಿ, 'ಮೊದಲ ಪರೀಕ್ಷಾ ಉಡಾವಣೆ ಯಶಸ್ವಿಯಾಗಿದೆ ಎಂದು ಘೋಷಿಸಲು ಸಂತಸವಾಗುತ್ತದೆ. ಬಂಗಾಳ ಕೊಲ್ಲಿ ಸಮುದ್ರ ಭಾಗದಲ್ಲಿ ಇಳಿದಿದ್ದ ಕ್ರೂ ಮಾಡ್ಯೂಲನ್ನು ಚೆನ್ನೈ ಬಂದರಿಗೆ ತರಲಾಗಿದೆ' ಎಂದರು.

'ಗಗನಯಾನ ಸಂದರ್ಭದಲ್ಲಿ ರಾಕೆಟ್ ಅವಘಡಕ್ಕೆ ತುತ್ತಾದ ಸಂದರ್ಭದಲ್ಲಿ ಗಗನಯಾನಿಗಳು ಅಲ್ಲಿಂದ ಪಾರಾಗುವುದು ಹೇಗೆ ಎಂಬುದರ ಪ್ರಾತ್ಯಕ್ಷಿಕೆಯೇ ಈ ಪರೀಕ್ಷಾ ಉಡಾವಣೆಯ ಉದ್ದೇಶವಾಗಿತ್ತು' ಎಂದು ಹೇಳಿದರು.

'400 ಕಿ.ಮೀ. ಎತ್ತರದಲ್ಲಿರುವ ಭೂ ಕೆಳ ಕಕ್ಷೆಗೆ ಮಾನವರನ್ನು ಕಳಿಸುವುದು. ಮೂರು ದಿನಗಳ ಕಾಲ ಅಂತರಿಕ್ಷ ಯಾನ ನಡೆಸಿದ ನಂತರ ಅವರನ್ನು ಸುರಕ್ಷಿತವಾಗಿ ಭೂಮಿಗೆ ಕರೆ ತರುವುದು ಗಗನಯಾನ ಕಾರ್ಯಕ್ರಮದ ಗುರಿಯಾಗಿದೆ' ಎಂದೂ ಸೋಮನಾಥ್ ಹೇಳಿದರು.

ಹರ್ಷೋದ್ಗಾರ: ಕೆಲ ತಿಂಗಳ ಹಿಂದೆ ಚಂದ್ರಯಾನ–3ರ ಗಗನನೌಕೆ ಉಡಾವಣೆ ವೇಳೆ ಶ್ರೀಹರಿಕೋಟದ ಉಡ್ಡಯನ ಕೇಂದ್ರಕ್ಕೆ ಸಮೀಪದಲ್ಲಿ ಜಮಾಯಿಸಿದ್ದ ರೀತಿಯಲ್ಲಿಯೇ ಈ ಬಾರಿಯೂ ಜನರು ಬಂಗಾಳ ಕೊಲ್ಲಿ ತೀರದಲ್ಲಿ ಜಮಾಯಿಸಿದ್ದರು.

ಕ್ರೂ ಮಾಡ್ಯೂಲ್ ಹೊತ್ತ ರಾಕೆಟ್ ಆಕಾಶಕ್ಕೆ ಚಿಮ್ಮಿ, ಕೆಲ ಹೊತ್ತಿನ ನಂತರ ಕ್ರೂ ಮಾಡ್ಯೂಲ್ ಬಂಗಾಳ ಕೊಲ್ಲಿಯಲ್ಲಿನ ನಿಗದಿತ ಸ್ಥಳದಲ್ಲಿ ಸುರಕ್ಷಿತವಾಗಿ ಇಳಿದದ್ದನ್ನು ಜನರು ಕಣ್ತುಂಬಿಕೊಂಡು, ಸಂಭ್ರಮಿಸಿದರು.

ಆತಂಕ... ಗೆಲುವಿನ ನಗೆ–ಸಂಭ್ರಮ

ಮಾನವ ಸಹಿತ ಗಗನಯಾನಕ್ಕೂ ಮೊದಲು ಕೈಗೊಂಡಿದ್ದ ಮೊದಲ ಪರೀಕ್ಷಾ ಉಡಾವಣೆಗೆ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ ಶನಿವಾರ ಎಲ್ಲ ಸಿದ್ಧತೆಗಳು ಪೂರ್ಣಗೊಂಡಿದ್ದರೂ, ಬೆಳಿಗ್ಗೆ ಪ್ರತಿಕೂಲ ಹವಾಮಾನದಿಂದಾಗಿ ವಿಜ್ಞಾನಿಗಳ ಮೊಗದಲ್ಲಿ ನಗು ಮಾಯವಾಗಿತ್ತು. ಹೀಗಾಗಿ, ಮೊದಲು ಬೆಳಿಗ್ಗೆ 8ಕ್ಕೆ ನಿಗದಿಯಾಗಿದ್ದ ಉಡ್ಡಯನವನ್ನು 8.30ಕ್ಕೆ, ನಂತರ ಮತ್ತೆ 15 ನಿಮಿಷಗಳಷ್ಟು ಮುಂದೂಡಲಾಯಿತು.

'ಕ್ರೂ ಮಾಡ್ಯೂಲ್' ಹೊತ್ತ ರಾಕೆಟ್ ಆಕಾಶಕ್ಕೆ ಚಿಮ್ಮಲು 4 ಸೆಕೆಂಡುಗಳು ಬಾಕಿ ಇದ್ದಾಗ, ನಿಯಂತ್ರಣ ಕೇಂದ್ರದ ಕಂಪ್ಯೂಟರ್ ಪರದೆಗಳ ಮೇಲೆ ಮೂಡಿದ 'ಹೋಲ್ಡ್' ಎಂಬ ಸಂದೇಶ, ವಿಜ್ಞಾನಿಗಳಲ್ಲಿ ಆತಂಕ ಮನೆ ಮಾಡಲು ಕಾರಣವಾಯಿತು.

'ಪರೀಕ್ಷಾ ಉಡಾವಣೆ ಮೇಲೆ ಕಣ್ಗಾಲಿಸಿರುವ ವ್ಯವಸ್ಥೆಯಲ್ಲಿ ಕಂಡುಬಂದಿದ್ದ ವ್ಯತ್ಯಾಸವೇ ಈ ಸಂದೇಶ ಬರಲು ಕಾರಣವಾಗಿತ್ತು. ಬಹಳ ತ್ವರಿತವಾಗಿಯೇ ಸಮಸ್ಯೆಯನ್ನು ಪತ್ತೆ ಮಾಡಿ, ಸರಿಪಡಿಸಿದೆವು' ಎಂದು ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಮಾಹಿತಿ ನೀಡಿದರು.

'ಉಡ್ಡಯನಕ್ಕೆ ಅಗತ್ಯವಿದ್ದ ಅನಿಲಗಳನ್ನು ಪುನಃ ಭರ್ತಿ ಮಾಡಲಾಯಿತು. ನಂತರ, ಉಡ್ಡಯನ ಪ್ರಕ್ರಿಯೆಗೆ ಸಂಬಂಧಿಸಿದ ಎಲ್ಲ ಹಂತಗಳ ವ್ಯವಸ್ಥೆಗಳು ಸುಸ್ಥಿತಿಯಲ್ಲಿವೇ ಎಂಬುದನ್ನು ಮತ್ತೊಮ್ಮೆ ಪರಿಶೀಲಿಸಲಾಯಿತು. ನಿಯಂತ್ರಣ ಕೇಂದ್ರದ ಕಂಪ್ಯೂಟರ್‌ಗಳು ಉಡ್ಡಯನಕ್ಕೆ ಮುದ್ರೆ ಒತ್ತಿದ ನಂತರ 34.9 ಕೆ.ಜಿ ಭಾರದ ನೌಕೆಯನ್ನು ಹೊತ್ತ ರಾಕೆಟ್ ನಭಕ್ಕೆ ಚಿಮ್ಮಿತು' ಎಂದು ವಿವರಿಸಿದರು.

'ಉಡ್ಡಯನ ವ್ಯವಸ್ಥೆಯಲ್ಲಿದ್ದ ದೋಷವನ್ನು ನಮ್ಮ ತಂಡ ಪತ್ತೆ ಹಚ್ಚಿ, ಅಷ್ಟೇ ತ್ವರಿತವಾಗಿ ಸರಿಪಡಿಸಿರುವುದು ನನಗೆ ಸಂತಸ ತಂದಿದೆ. ಗಗನಯಾನ ಕಾರ್ಯಕ್ರಮದ ಭಾಗವಾಗಿರುವ ಪ್ರತಿಯೊಬ್ಬರಿಗೂ ಇದು ದೊಡ್ಡ ತರಬೇತಿಯೇ ಸರಿ' ಎಂದೂ ಹೇಳಿದರು.

ಮೊದಲ ಪರೀಕ್ಷಾ ಉಡಾವಣೆಯು ದೇಶದ ಮೊದಲ ಮಾನವಸಹಿತ ಬಾಹ್ಯಾಕಾಶ ಕಾರ್ಯಕ್ರಮವನ್ನು ಸಾಧಿಸುವ ನಿಟ್ಟಿನಲ್ಲಿ ಇಟ್ಟ ಪ್ರಮುಖ ಹೆಜ್ಜೆಯಾಗಿದೆ. ಇಸ್ರೊ ವಿಜ್ಞಾನಿಗಳಿಗೆ ಶುಭಾಶಯಗಳು

ನರೇಂದ್ರ ಮೋದಿ, ಪ್ರಧಾನಿ

ಇಸ್ರೊ ವಿಜ್ಞಾನಿಗಳಿಗೆ ಅಭಿನಂದನೆಗಳು. ಮಾನವಸಹಿತ ಗಗನಯಾನ ಕಾರ್ಯಕ್ರಮ ಕುರಿತ ಕಾರ್ಯ 2007ರಿಂದಲೇ ನಡೆದಿತ್ತು. ಈಗ ಅದು ಸಾಕಾರಗೊಳ್ಳುತ್ತಿರುವುದು ಖುಷಿ ತಂದಿದೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಕ್ರೂ ಮಾಡ್ಯೂಲ್‌ನಲ್ಲಿರುವ ಗಗನಯಾನಿಗಳು ಸುರಕ್ಷಿತವಾಗಿ ಪಾರಾಗುವುದೇ ಈ ಬಾಹ್ಯಾಕಾಶ ಕಾರ್ಯಕ್ರಮದ ಮಹತ್ವದ ಭಾಗ. ಈ ಪ್ರಾತ್ಯಕ್ಷಿಕೆ ಯಶಸ್ವಿಯಾಗಿದೆ.

ಆರ್.ಹಾಟನ್, ಕ್ರೂ ಮಾಡ್ಯೂಲ್ ವಿನ್ಯಾಸ ಮತ್ತು ಅಭಿವೃದ್ಧಿ ಕಾರ್ಯಕ್ರಮದ ನಿರ್ದೇಶಕ

ಎಫ್‌ಪಿಐ: ₹16,176 ಕೋಟಿ ಬಂಡವಾಳ ಹಿಂತೆಗೆತ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ಬಿಕ್ಕಟ್ಟು, ಹಣದುಬ್ಬರದ ಜೊತೆಗೆ ಅಮೆರಿಕದ ಬಾಂಡ್ ಗಳಿಕೆಯು ಹೆಚ್ಚಾಗುತ್ತಿರುವ ಕಾರಣಗಳಿಂದಾಗಿ ವಿದೇಶಿ ಹೂಡಿಕೆದಾರರು (ಎಫ್‌ಪಿಐ) ಭಾರತದ ಮಾರುಕಟ್ಟೆಯಿಂದ ಬಂಡವಾಳ ಹಿಂದಕ್ಕೆ ಪಡೆಯುತ್ತಿದ್ದಾರೆ.

ವಿದೇಶಿ ಹೂಡಿಕೆದಾರರು ಅಕ್ಟೋಬರ್ 20ರವರೆಗೆ ನಡೆದಿರುವ ವಹಿವಾಟಿನಲ್ಲಿ ₹16,176 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

ಅಮೆರಿಕದ 10 ವರ್ಷಗಳ ಬಾಂಡ್ ಗಳಿಕೆಯು ಗುರುವಾರದ ವಹಿವಾಟಿನಲ್ಲಿ ಶೇ 5ಕ್ಕೆ ತಲುಪುವ ಮೂಲಕ 17 ವರ್ಷಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದೆ. ಈ ಕಾರಣದಿಂದಾಗಿಯೇ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡಿ, ಬಾಂಡ್‌ಗಳ ಮೇಲೆ ಹಣ ತೊಡಗಿಸುತ್ತಿದ್ದಾರೆ ಎಂದು ವಿವರಿಸಿದ್ದಾರೆ.

ಬಾಂಡ್‌ಗಳತ್ತ ಗಮನ: ವಿದೇಶಿ ಹೂಡಿಕೆದಾರರು ಭಾರತದ ಸಾಲಪತ್ರ ಮಾರುಕಟ್ಟೆಯಲ್ಲಿ ತಮ್ಮ ಹೂಡಿಕೆಯ ಪ್ರಮಾಣವನ್ನು ಹೆಚ್ಚಿಸುತ್ತಿದ್ದಾರೆ. ಇದಕ್ಕೆ ಹಲವು ಕಾರಣಗಳಿವೆ. ಜಾಗತಿಕ ಮಟ್ಟದಲ್ಲಿ ಎದುರಾಗಿರುವ ಅನಿಶ್ಚಿತ ಸ್ಥಿತಿ ಮತ್ತು ಜಾಗತಿಕ ಆರ್ಥಿಕತೆಯ ಮಂದಗತಿಯ ಬೆಳವಣಿಗೆಯು ಮುಖ್ಯವಾಗಿವೆ. ಭಾರತದ ಬಾಂಡ್‌ಗಳು ಉತ್ತಮ ಲಾಭ ತಂದುಕೊಡುತ್ತಿವೆ.



ಭಾರತದ ಆರ್ಥಿಕತೆಯು ಸ್ಥಿರವಾಗಿ ಇರುವ ಅಂದಾಜಿನ ಮೇಲೆ ರೂಪಾಯಿ ಮೌಲ್ಯವು ಸ್ಥಿರವಾಗಿರುವ ನಿರೀಕ್ಷೆ ಮಾಡಲಾಗುತ್ತಿದೆ. ಅಲ್ಲದೆ, ಬಾರತದ ಬಾಂಡ್ ಅನ್ನು ಜೆ.ಪಿ. ಮಾರ್ಗನ್‌ನ ಗ್ಲೋಬಲ್ ಬಾಂಡ್ ಇಂಡೆಕ್ಸ್‌ಗೆ ಸೇರಿಸುತ್ತಿರುವುದು ಸಹ ಭಾರತದ ಬಾಂಡ್‌ಗಳತ್ತ ವಿದೇಶಿ ಹೂಡಿಕೆದಾರರು ಗಮನ ಹರಿಸುವಂತೆ ಮಾಡುತ್ತಿದೆ ಎಂದು ವಿಜಯಕುಮಾರ್ ಹೇಳಿದ್ದಾರೆ.

ಇಸ್ರೇಲ್–ಹಮಾಸ್ ಸಮರವು ತೀವ್ರಗೊಳ್ಳುವ ಸಾಧ್ಯತೆ ಇರುವುದು ಜಾಗತಿಕ ಬಿಕ್ಕಟ್ಟನ್ನು ಇನ್ನಷ್ಟು ಹೆಚ್ಚಿಸುವ ಆತಂಕ ಎದುರಾಗಿದೆ. ಇದು ರೂಪಾಯಿ ವಹಿವಾಟಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ಪೂರೈಕೆ ಸಮಸ್ಯೆಯಿಂದಾಗಿ ಕಚ್ಚಾ ತೈಲ ದರವು ಇನ್ನಷ್ಟು ಏರಿಕೆ ಆಗುವ ಸಂಭವ ಇದೆ ಎಂದು ಶೇರ್‌ಖಾನ್ ಕಂಪನಿಯ ಸಂಶೋಧನಾ ವಿಶ್ಲೇಷಕ ಅನುಜ್ ಚೌಧರಿ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

21-10-2023

ಜಾವಾ 70/80(ಹೊಸ)	12200-12300
ಜಾವಾ 80/90(ಹೊಸ)	11900-12000
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11300-11400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	862 (860)
ಪಾಮ್ ವಾರದ ಡೆಲಿವರಿ	816 (818)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

60,520 (60,500)

ಬೆಳ್ಳಿ ಕೆ.ಜಿ 72,450 (72,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮರುಬಳಕೆ ಮಾಡಿದ ಚಿನ್ನಾಭರಣ ಖರೀದಿಗೂ ಹೆಚ್ಚಿದ ಆಸಕ್ತಿ

'ಹಬ್ಬ: 120 ಟನ್ ಚಿನ್ನಕ್ಕೆ ಬೇಡಿಕೆ'

● ವಿಶ್ವನಾಥ ಎಸ್.

ಬೆಂಗಳೂರು: ಈ ಬಾರಿಯ ಹಬ್ಬದ ಋತು ಮತ್ತು ಮದುವೆ ಸಮಾರಂಭಗಳಿಗೆ ಚಿನ್ನದ ಬೇಡಿಕೆ ಕಳೆದ ವರ್ಷಕ್ಕಿಂತಲೂ ಹೆಚ್ಚಾಗಬಹುದು ಎಂಬ ನಿರೀಕ್ಷೆಯನ್ನು ಚಿನ್ನಾಭರಣ ಉದ್ಯಮ ವ್ಯಕ್ತಪಡಿಸಿದೆ. ಆದರೆ, ಜಾಗತಿಕ ವಿದ್ಯಮಾನಗಳು ಅದರಲ್ಲಿಯೂ ಮುಖ್ಯವಾಗಿ ಇಸ್ರೇಲ್–ಹಮಾಸ್ ಸಮರವು ಇನ್ನಷ್ಟು ತೀವ್ರಗೊಂಡಲ್ಲಿ ಚಿನ್ನದ ಬೆಲೆಯಲ್ಲಿ ಭಾರಿ ಏರಿಕೆ ಕಂಡು, ಬೇಡಿಕೆ ತಗ್ಗಿಸುವ ಆತಂಕವನ್ನೂ ವ್ಯಕ್ತಪಡಿಸಿದೆ.

ಹಬ್ಬದ ಋತು ಆರಂಭ ಆಗಿದ್ದು ಚಿನ್ನಾಭರಣಗಳಿಗೆ ಗ್ರಾಹಕರಿಂದ ಬೇಡಿಕೆ ಹೆಚ್ಚಾಗುತ್ತಿದೆ. ಮದುವೆ ಸಮಾರಂಭಗಳೂ ಇರುವುದರಿಂದ ಕಳೆದ ವರ್ಷಕ್ಕಿಂತಲೂ ಹೆಚ್ಚಿನ ಬೇಡಿಕೆ ಬರುವ ಅಂದಾಜು ಮಾಡಲಾಗಿದೆ. ಕಳೆದ ವರ್ಷ ಮದುವೆ ಮತ್ತು ಹಬ್ಬದ ಋತುವಿನಲ್ಲಿ ದೇಶದಲ್ಲಿ ಒಟ್ಟು 80 ಟನ್‌ನಷ್ಟು ಬೇಡಿಕೆ ಬಂದಿತ್ತು. ಈ ಬಾರಿ 120 ಟನ್‌ನಷ್ಟು ಬೇಡಿಕೆ ಬರುವ ನಿರೀಕ್ಷೆ ಇದೆ ಎಂದು ಇಂಡಿಯನ್ ಬುಲಿಯನ್ ಆ್ಯಂಡ್ ಜುವೆಲರಿ ಅಸೋಸಿಯೇಷನ್ ಅಧ್ಯಕ್ಷ ಕುಮಾರ್ ಜೈನ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಚಿನ್ನ ಖರೀದಿಗೆ ಆನ್‌ಲೈನ್ ಮೂಲಕ ಹಣ ಪಾವತಿಸುವ ಪ್ರವೃತ್ತಿಯೂ ಹೆಚ್ಚಾಗುತ್ತಿದೆ. ಈ ಬಾರಿ ಕಾರ್ಡ್ ಮೂಲಕ ಹಣ ಪಾವತಿಸುವ ಆಯ್ಕೆಯನ್ನೇ ಗ್ರಾಹಕರು ಹೆಚ್ಚಾಗಿ ಬಳಸುತ್ತಿದ್ದಾರೆ ಎಂದು ಅವರು ಹೇಳಿದರು.

ಚಿನ್ನಾಭರಣಗಳಿಗೆ ನಿತ್ಯ ಇರುವುದಕ್ಕಿಂತಲೂ ಶೇ 30ರಷ್ಟು ಅಧಿಕ ಬೇಡಿಕೆ ಸದ್ಯಕ್ಕೆ ಇದೆ. ಸದ್ಯದ ಬೇಡಿಕೆಯನ್ನು ಗಮನಿಸಿದರೆ, ಈ ಬಾರಿಯ ಹಬ್ಬದ ಋತು ಮತ್ತು ಮದುವೆ ಸಮಾರಂಭದಲ್ಲಿ ಚಿನ್ನಾಭರಣ ಮಾರಾಟವು ಕಳೆದ ವರ್ಷಕ್ಕಿಂತಲೂ ಶೇ 15 ರಿಂದ ಶೇ 20ರವರೆಗೆ ಏರಿಕೆ ಆಗುವ ನಿರೀಕ್ಷೆ ಮಾಡಲಾಗಿದೆ ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘದ ನಿರ್ದೇಶಕ ಎನ್. ವಿದ್ಯಾಸಾಗರ್ ತಿಳಿಸಿದರು.

'ಹೂಡಿಕೆ ಮುಂದೂಡುವುದೇ ಒಳಿತು'

ಇಸ್ರೇಲ್–ಹಮಾಸ್ ಸಂಘರ್ಷವು ಚಿನ್ನದ ಬೆಲೆ ಮತ್ತು ಬೇಡಿಕೆ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಂಭವ ಇದೆ. ಹೀಗಾಗಿ ಸದ್ಯದ ಮಟ್ಟಿಗೆ ಹೂಡಿಕೆಯ ಉದ್ದೇಶದಿಂದ ಚಿನ್ನದ ಮೇಲೆ ಹಣ ತೊಡಗಿಸದಿರುವುದೇ ಸೂಕ್ತ ಎನ್ನುವುದು ಉದ್ಯಮ ವಲಯದ ಅಭಿಪ್ರಾಯವಾಗಿದೆ.

ಇಸ್ರೇಲ್ ಮೇಲೆ ಹಮಾಸ್ ಬಂಡುಕೋರರು ಯುದ್ಧ ಆರಂಭಿಸಿದ ಬಳಿಕ ನಿಧಾನವಾಗಿ ಚಿನ್ನದ ದರ ಏರಿಕೆ ಕಾಣುತ್ತಿದೆ. 24 ಕ್ಯಾರಟ್ ಚಿನ್ನದ ಬೆಲೆಯು 20 ದಿನದಲ್ಲಿ ₹450 ಏರಿಕೆ ಕಂಡಿದೆ. ಶುಕ್ರವಾರದ ಅಂತ್ಯಕ್ಕೆ ಗ್ರಾಂಗೆ ₹6,250ಕ್ಕೆ ತಲುಪಿದೆ. ಮುಂದಿನ ದಿನಗಳಲ್ಲಿ ಬೆಲೆಯಲ್ಲಿ ಇನ್ನಷ್ಟು ಏರಿಕೆ ಕಾಣುವ ಸಂಭವ ಇದೆ ಎಂದು ವಿದ್ಯಾಸಾಗರ್ ಹೇಳಿದರು.

ಮುಂದೆ ಚಿನ್ನದ ದರದಲ್ಲಿ ಭಾರಿ ಏರಿಕೆ ಕಾಣಲಿದೆ ಎಂದು ಈಗಲೇ ಒಂದಿಷ್ಟು ಹೂಡಿಕೆ ಮಾಡುವ ಆಲೋಚನೆಯನ್ನು ಕೆಲವರು ಮಾಡಬಹುದು. ಆದರೆ, ಈಗಿನ ಜಾಗತಿಕ ಬಿಕ್ಕಟ್ಟಿನ ತೀವ್ರತೆ ಕಡಿಮೆ ಆದರೆ ಅಥವಾ ಯುದ್ಧ ಅಂತ್ಯಗೊಂಡರೆ ಚಿನ್ನದ ಬೆಲೆಯು ಇಳಿಕೆ ಕಾಣಲು ಆರಂಭಿಸುತ್ತದೆ. ಹಾಗಾದಲ್ಲಿ, ನಷ್ಟ ಅನುಭವಿಸಬೇಕಾಗುವ ಸಾಧ್ಯತೆ ಇರುತ್ತದೆ ಎನ್ನುತ್ತಾರೆ ಕುಮಾರ್ ಜೈನ್



ಭಾರತೀಯ ಸೇನೆಯ 'ಉದ್ಭವ್'ಗೆ ಚಾಲನೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ (ಪಿಟಿಐ): ಪ್ರಾಚೀನ ಕಾಲದ ಯುದ್ಧ ತಂತ್ರಗಾರಿಕೆಗಳನ್ನು ಪರಿಶೋಧಿಸಿ ಅವುಗಳನ್ನು ಸೇನೆಗೆ ಅಳವಡಿಸುವ ಮೂಲಕ ಭದ್ರತಾ ಪಡೆಗಳ ಸಾಮರ್ಥ್ಯವನ್ನು ಹೆಚ್ಚಿಸಿ, ಆ ಮೂಲಕ ಭವಿಷ್ಯದ ಸವಾಲುಗಳಿಗೆ ಸನ್ನದ್ಧಗೊಳಿಸುವ 'ಉದ್ಭವ್' ಯೋಜನೆಯನ್ನು ಭಾರತೀಯ ಸೇನೆ ಶನಿವಾರ ಆರಂಭಿಸಿದೆ.

ಈ ಯೋಜನೆಗೆ ಚಾಲನೆ ನೀಡಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಮಹಾಭಾರತ, ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಕಾಮಂಡಕಿಯ ನೀತಿಸಾರದಿಂದ ಹೆಕ್ಕಿ ತೆಗೆದ 75 ತಂತ್ರಗಳನ್ನು ಈ ಉದ್ಭವ್ ಪ್ರಾಜೆಕ್ಟ್‌ನಲ್ಲಿ ಸೇನಾ ತರಬೇತಿ ಕಮಾಂಡ್ ಅಳವಡಿಸಿಕೊಂಡಿದೆ ಎಂದು ಹೇಳಿದರು.

'ಅಹೋಮ್ ಸಾಮ್ರಾಜ್ಯವು 600 ವರ್ಷಗಳ ಕಾಲ ಯಶಸ್ವಿಯಾಗಿ ಆಳ್ವಿಕೆ ನಡೆಸಿದ, ಪದೇ ಪದೇ ಮೊಘಲರನ್ನು ಸೋಲಿಸಿದ ನಿದರ್ಶನವನ್ನು ನಾವು ಹೊಂದಿದ್ದೇವೆ' ಎಂದು 'ಉದ್ಭವ್ ಪ್ರಾಜೆಕ್ಟ್' ಉಪಕ್ರಮ ಮುನ್ನಡೆಸುತ್ತಿರುವ ಸೇನಾ ಉಪ ಮುಖ್ಯಸ್ಥ (ತಂತ್ರಗಾರಿಕೆ) ಲೆಫ್ಟಿನೆಂಟ್ ಜನರಲ್ ತರುಣ್ ಕುಮಾರ್ ಐಚ್ ತಿಳಿಸಿದರು.

ದೇಶದ ಸೇನಾ ಇತಿಹಾಸದಲ್ಲಿನ ಆಯ್ದ ಮೈಲಿಗಲ್ಲುಗಳು ಮತ್ತು ಸಾಧನೆ ಬಿಂಬಿಸಲು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹೆರಿಟೇಜ್ ಸಹಯೋಗದಲ್ಲಿ ಈ ಉತ್ಸವ ಆಯೋಜಿಸಲಾಗಿದೆ.

'ಮಹುವಾ ಸಂಸತ್ ಐ.ಡಿ ದುಬೈನಲ್ಲಿ ಬಳಕೆ'

ಟಿಎಂಸಿ ಸಂಸದೆ ವಿರುದ್ಧ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಗಂಭೀರ ಆರೋಪ

ನವದೆಹಲಿ (ಪಿಟಿಐ): ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಭಾರತದಲ್ಲಿ ಇದ್ದಾಗಲೇ ಸಂಸತ್‌ನ ಅವರ ಲಾಗಿನ್ ಮತ್ತು ಪಾಸ್‌ವರ್ಡ್ ದುಬೈನಲ್ಲಿ ಬಳಕೆಯಾಗಿದೆ. ರಾಷ್ಟ್ರೀಯ ಮಾಹಿತಿ ಕೇಂದ್ರವೇ (ಎನ್‌ಐಸಿ) ತನಿಖಾ ಸಂಸ್ಥೆಗಳಿಗೆ ಈ ಮಾಹಿತಿ ನೀಡಿದೆ ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಶನಿವಾರ ಹೊಸ ಆರೋಪ ಮಾಡಿದ್ದಾರೆ.

'ಈ ಸಂಸದೆ ಹಣಕ್ಕಾಗಿ ಈ ದೇಶದ ಭದ್ರತೆಯನ್ನೇ ಒತ್ತೆ ಇಟ್ಟಿದ್ದಾರೆ' ಎಂದೂ ಅವರು 'ಎಕ್ಸ್'ನಲ್ಲಿ ವಾಗ್ದಾಳಿ ನಡೆಸಿದ್ದಾರೆ.

'ಸಂಸದೆ ಭಾರತದಲ್ಲಿ ಇದ್ದಾಗಲೇ ಅವರ ಸಂಸತ್ ಐಡಿಯನ್ನು ದುಬೈನಲ್ಲಿ ಬಳಕೆ ಮಾಡಲಾಗಿದೆ. ಪ್ರಧಾನಿ, ಹಣಕಾಸು ಸಚಿವರು ಮತ್ತು ಕೇಂದ್ರ ತನಿಖಾ ಸಂಸ್ಥೆಗಳು ಸೇರಿದಂತೆ ಇಡೀ ಸರ್ಕಾರವೇ ಎನ್‌ಐಸಿಯನ್ನು ಬಳಕೆ ಮಾಡುತ್ತದೆ. ಟಿಎಂಸಿ ಮತ್ತು ವಿರೋಧ ಪಕ್ಷಗಳು ಈಗಲೂ ರಾಜಕೀಯ ಮಾಡುತ್ತವೆಯೇ? ಜನರೇ ನಿರ್ಧರಿಸುತ್ತಾರೆ' ಎಂದು ಮಹುವಾ ಮತ್ತು ತನಿಖಾ ಸಂಸ್ಥೆಯ ಹೆಸರು ಉಲ್ಲೇಖಿಸದೇ ದೂರಿದ್ದಾರೆ.

ಅದಾನಿ ಸಮೂಹ ಮತ್ತು ಪ್ರಧಾನಿ ಮೋದಿ ವಿರುದ್ಧ ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ಮಹುವಾ ಅವರು ಹಣ, ಉಡುಗೊರೆ ಪಡೆದಿದ್ದಾರೆ ಎಂದು ಆರೋಪಿಸಿದ ಬೆನ್ನಲ್ಲೇ ದುಬೆ ಈ ಗಂಭೀರ ಆರೋಪ ಮಾಡಿದ್ದಾರೆ.

'ಕಾಸಿಗಾಗಿ ಪ್ರಶ್ನೆ' ಪ್ರಕರಣದ ಕುರಿತು ಲೋಕಸಭೆಯ ನೀತಿ–ನಿಯಮಗಳ ಸಮಿತಿಯು ತನಿಖೆ ನಡೆಸುತ್ತಿದ್ದು, ಅ.26ರಂದು ವಿಚಾರಣೆಗೆ ಹಾಜರಾಗುವಂತೆ ದುಬೆ ಅವರಿಗೆ ಸೂಚಿಸಿದೆ.

ಈ ನಡುವೆ ಮಹುವಾ ಅವರ ಸಂಸತ್ ಲಾಗಿನ್ ಮತ್ತು ಪಾಸ್‌ವರ್ಡ್ ಬಳಕೆ ಮಾಡಿರುವುದಾಗಿ ಉದ್ಯಮಿ ದರ್ಶನ್ ಹೀರಾನಂದಾನಿ ಅವರು ತನಿಖಾ ಸಮಿತಿಗೆ ಪ್ರಮಾಣಪತ್ರ ಸಲ್ಲಿಸಿದ್ದಾರೆ.

ಹೀರಾನಂದಾನಿ ಅಫಿಡವಿಟ್ ವಿಶ್ವಾಸಾರ್ಹತೆ ಬಗ್ಗೆ ಪ್ರಶ್ನೆ

ಹಿರಾನಂದನಿ ಸಮೂಹದ ಸಿಇಒ ದರ್ಶನ್ ಹೀರಾನಂದಾನಿ ಅವರು ತನಿಖಾ ಸಮಿತಿಗೆ ಸಲ್ಲಿಸಿರುವ ಅಫಿಡವಿಟ್‌ನ ವಿಶ್ವಾಸಾರ್ಹತೆಯನ್ನು ಸಂಸದೆ ಮಹುವಾ ಮೊಯಿತ್ರಾ ಪ್ರಶ್ನಿಸಿದ್ದಾರೆ.

ಪ್ರಧಾನಿ ಕಾರ್ಯಾಲಯವೇ (ಪಿಎಂಒ) ಅಫಿಡವಿಟ್ ಸಿದ್ಧಪಡಿಸಿ, ಕುಟುಂಬದ ಉದ್ಯಮವನ್ನು ಮುಚ್ಚುವ ಬೆದರಿಕೆಯೊಡ್ಡಿ ಒತ್ತಾಯಪೂರ್ವಕವಾಗಿ ಅವರಿಂದ ಸಹಿ ಪಡೆದಿದೆ ಎಂದು ಅವರು ಆರೋಪಿಸಿದ್ದಾರೆ.

'ದರ್ಶನ್ ಮತ್ತು ಅವರ ತಂದೆಗೆ ಬೆದರಿಕೆ ವೊಡ್ಡಲಾಗಿದೆ. ಸಹಿ ಹಾಕಲು ಅವರಿಗೆ 20 ನಿಮಿಷ ಗಡುವು ನೀಡಲಾಗಿತ್ತು' ಗುರುವಾರ ತಡರಾತ್ರಿ ಹೇಳಿಕೆಯಲ್ಲಿ ಹೇಳಿದ್ದಾರೆ.

'ಅಫಿಡವಿಟ್ ಸಲ್ಲಿಕೆಗೂ ಮೂರು ದಿನ ಮುನ್ನ ಹೀರಾನಂದಾನಿ ಸಮೂಹವು ಎಲ್ಲಾ ಆರೋಪಗಳು ಆಧಾರರಹಿತ ಎಂದು ಹೇಳಿತ್ತು. 'ಅಫಿಡವಿಟ್' ಬಿಡುಗಡೆಯಾಗಿದೆ. ಇದರಲ್ಲಿ ಯಾವುದೇ ಲೆಟರ್‌ಹೆಡ್ ಇಲ್ಲ. ತಲೆಗೆ ಪಿಸ್ತೂಲು ಗುರಿ ಇಡದ ಹೊರತಾಗಿ ಭಾರತದ ಗೌರವಾನ್ವಿತ ಉದ್ಯಮಿಯೊಬ್ಬರು ಬಿಳಿ ಹಾಳೆ ಮೇಲೆ ಸಹಿ ಹಾಕಲು ಹೇಗೆ ಸಾಧ್ಯ' ಎಂದು ಅವರು ಪ್ರಶ್ನಿಸಿದ್ದಾರೆ.

ಹೀರಾನಂದಾನಿ ಅವರು ಪತ್ರಿಕಾಗೋಷ್ಠಿ ಕರೆದು ಅಥವಾ 'ಎಕ್ಸ್'ನಲ್ಲಿ ಪ್ರಕಟಿಸುವ ಮೂಲಕ ಏಕೆ ವಿಷಯ ತಿಳಿಸಲಿಲ್ಲ. ತನಿಖಾ ಸಂಸ್ಥೆಗಳಾಗಲೀ, ನೀತಿ–ನಿಯಮ ಸಮಿತಿಯಾಗಲೀ ಏಕೆ ಈವರೆಗೂ ಅವರಿಗೆ ಸಮನ್ಸ್ ನೀಡಿಲ್ಲ ' ಎಂದೂ ಕೇಳಿದ್ದಾರೆ.

ಪ್ರತಿಯೊಬ್ಬ ಸಂಸದರಿಗೂ ಸಂಸತ್ತಿನಲ್ಲಿ ಮಾತನಾಡುವ ಹಕ್ಕು ಇದೆ. ಆಡಳಿತಾರೂಢ ಪಕ್ಷ ಸಂಸತ್ತಿನ ಒಳಗೆ ಮತ್ತು ಹೊರಗೆ ಧ್ವನಿಯನ್ನು ಹತ್ತಿಕ್ಕಲು ಬಯಸಿದೆ

ಅಧೀರ್ ರಂಜನ್ ಚೌಧರಿ, ಕಾಂಗ್ರೆಸ್ ನಾಯಕ

ಈ ವಿವಾದದ ಬಗ್ಗೆ ಟಿಎಂಸಿ ಹೇಳುವುದು ಏನೂ ಇಲ್ಲ. ಈ ವಿಚಾರವಾಗಿ ಪ್ರತಿಕ್ರಿಯಿಸಲು ಅವರೇ (ಮಹುವಾ) ಸೂಕ್ತ ವ್ಯಕ್ತಿ

ಕುನಾಲ್ ಘೋಷ್, ಟಿಎಂಸಿ ಪ್ರಧಾನ ಕಾರ್ಯದರ್ಶಿ

ಎಲ್ಲ ಸಂಸದರ ಸಂಸತ್ ಲಾಗಿನ್‌ಗೆ ಸಂಬಂಧಿಸಿದ ಮಾಹಿತಿಯನ್ನು ಎನ್‌ಐಸಿ ಬಿಡುಗಡೆ ಮಾಡಬೇಕು ಹಾಗೂ ಅವರೆಲ್ಲರೂ ಲಾಗಿನ್ ವೇಳೆ ಖುದ್ದು ಹಾಜರಿದ್ದರೆ ಎಂಬುದನ್ನು ಧೃಡಪಡಿಸಬೇಕು.

ಮಹುವಾ ಮೊಯಿತ್ರಾ, ಸಂಸದೆ

ಮಹುವಾ ವಜಾಕ್ಕೆ ಬಿಜೆಪಿ ಒತ್ತಾಯ

ಮಹುವಾ ಮೊಯಿತ್ರಾ ತಾವಾಗಿಯೇ ಸಂಸತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಬೇಕು ಅಥವಾ ಅವರನ್ನು ಟಿಎಂಸಿ ಪರಮೋಚ್ಚ ನಾಯಕಿ ಮಮತಾ ಬ್ಯಾನರ್ಜಿ ಅವರು ವಜಾಗೊಳಿಸಬೇಕು ಎಂದು ಬಿಜೆಪಿ ಶುಕ್ರವಾರ ಒತ್ತಾಯಿಸಿದೆ.

'ಮಹುವಾ ಸಂಸದೀಯ ವ್ಯವಸ್ಥೆಯೊಂದಿಗೆ ಸಂಪೂರ್ಣ ರಾಜಿಯಾಗಿದ್ದಾರೆ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಆರೋಪಿಸಿದ್ದಾರೆ. 'ಪ್ರಕರಣದತ್ತ ಗಮನ ನೀಡಬೇಕು. ಸಂಸದೆ ವಿರುದ್ಧ ಅಗತ್ಯ ಕ್ರಮ ಜರುಗಿಸಬೇಕು' ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಲ್ಲಿ ಸಂಸದ ನಿಶಿಕಾಂತ್ ದುಬೆ ಮನವಿ ಮಾಡಿದ್ದಾರೆ. ಟಿಎಂಸಿ ಈ ವಿಷಯವಾಗಿ ಮೌನ ವಹಿಸಿದೆ. ಮಹುವಾ ವಿರುದ್ಧದ ಆರೋಪ ಅಲ್ಲಗಳೆದಿರುವ ಪಕ್ಷವು, ಅದಾನಿ ಸಮೂಹ ಮತ್ತು ದುಬೆ ವಿರುದ್ಧ ಟೀಕೆ ಮುಂದುವರಿಸಿದೆ.

ಸ್ಪೀಕರ್‌ಗೆ ಸಂಸದ ಡ್ಯಾನಿಶ್ ಅಲಿ ಪತ್ರ

ಬಿಜೆಪಿ ಸಂಸದ ರಮೇಶ್ ಬಿಧೂಢಿ ವಿರುದ್ಧ ತಾವು ನೀಡಿದ ದೂರಿಗೆ ಸಂಬಂಧಿಸಿದಂತೆ ವಿಚಾರಣೆಗೆ ತಮ್ಮನ್ನು ಮೊದಲು ಕರೆಯದೆ ಸಂಸದೀಯ ಕಾರ್ಯವಿಧಾನ ಪ್ರಕ್ರಿಯೆಯನ್ನು ಉಲ್ಲಂಘಿಸಲಾಗಿದೆ ಎಂದು ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ ಅವರು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದಾರೆ ಎಂದು ಮೂಲಗಳು ಶನಿವಾರ ತಿಳಿಸಿವೆ. 'ಸೆ.22ರಂದು ಬಿಧೂಢಿ ವಿರುದ್ಧ ಹಕ್ಕುಚ್ಯುತಿ ನೋಟಿಸ್ ಸಲ್ಲಿಸಲಾಗಿತ್ತು. ನಿಯಮದ ಪ್ರಕಾರ ಹಕ್ಕುಬಾಧ್ಯತಾ ಸಮಿತಿಯು ದೂರುದಾರರನ್ನು ಮೊದಲು ವಿಚಾರಣೆಗೆ ಕರೆಯಬೇಕು, ನಂತರ ಆರೋಪಿಯನ್ನು ಕರೆಯಬೇಕಿತ್ತು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಲ್ಲಿ ತಯಾರಿ • ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲೂ ಶೀಘ್ರ ಆರಂಭ

ರೈಲು ಕೋಚ್ ರೆಸ್ಟೋರೆಂಟ್ ತಿಂಗಳಲ್ಲಿ ಸಿದ್ಧ

• ಬಾಲಕೃಷ್ಣ ಪಿ.ಎಚ್.





ಬೆಂಗಳೂರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ರೈಲು ಕೋಚ್ ರೆಸ್ಟೋರೆಂಟ್ ನಿರ್ಮಾಣಗೊಳ್ಳಲಿರುವ ಸ್ಥಳ (ಎಡಚಿತ್ರ) ಹುಬ್ಬಳ್ಳಿಯ 'ಬೋಗಿ ಬೋಗಿ' ರೆಸ್ಟೋರೆಂಟ್

ಬೆಂಗಳೂರು: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ರೈಲು ನಿಲ್ದಾಣದ 'ರೈಲು ಕೋಚ್ ರೆಸ್ಟೋರೆಂಟ್‌ನಲ್ಲಿ' ಇನ್ನೊಂದು ತಿಂಗಳಲ್ಲಿ ಆಹಾರ ಲಭ್ಯವಾಗಲಿದೆ.

ಹವಾನಿಯಂತ್ರಿತ ರೈಲು ಮತ್ತು ಅತ್ಯಾಧುನಿಕ ರೆಸ್ಟೋರೆಂಟ್‌ನ ಅನುಭವ ಏಕಕಾಲದಲ್ಲಿ ನೀಡುವ 'ರೈಲು ಕೋಚ್ ರೆಸ್ಟೋರೆಂಟ್' ನವೆಂಬರ್ ಅಂತ್ಯಕ್ಕೆ ಆರಂಭವಾಗಲಿದೆ.

15 ವರ್ಷ ಬಳಸಿದ ಬೋಗಿಗಳನ್ನು ಗುಜರಿಗೆ ಮಾರಾಟ ಮಾಡುವುದು ವಾಡಿಕೆ. ಅದರ ಬದಲು ಬೋಗಿಗಳನ್ನು ರೆಸ್ಟೋರೆಂಟ್ ಮಾಡುವ ಮೂಲಕ ಟಿಕೆಟೇತರ ಆದಾಯ ಗಳಿಸಲು ನೈರುತ್ಯ ರೈಲ್ವೆ ಮುಂದಾಗಿದೆ. ಈಗಾಗಲೇ ಹುಬ್ಬಳ್ಳಿಯಲ್ಲಿ 'ಬೋಗಿ ಬೋಗಿ ರೆಸ್ಟೋರೆಂಟ್' ಆರಂಭವಾಗಿದೆ. ಕರ್ನಾಟಕದ ಎರಡನೇ 'ಕೋಚ್ ರೆಸ್ಟೋರೆಂಟ್' ಕೆಎಸ್‌ಆರ್ ರೈಲು ನಿಲ್ದಾಣದ ಮುಖ್ಯಪ್ರವೇಶ ದ್ವಾರದ ಮುಂಭಾಗ ಪ್ರಾರಂಭವಾಗಲಿದೆ.

ಪ್ರಜಾವಾಣಿ ವಿಶೇಷ

ಕೆಎಸ್‌ಆರ್ ರೈಲು ನಿಲ್ದಾಣದ ರೆಸ್ಟೋರೆಂಟ್ ಗುತ್ತಿಗೆಯನ್ನು ಓಂ ಇಂಡಸ್ಟ್ರೀಸ್ ಹಾಗೂ ಬೈಯಪನಹಳ್ಳಿ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನ ರೆಸ್ಟೋರೆಂಟ್ ಗುತ್ತಿಗೆಯನ್ನು ಗೌರವ್ ಎಂಟರ್‌ಪ್ರೈಸಸ್ ಪಡೆದುಕೊಂಡಿವೆ. ಗುತ್ತಿಗೆ ಅವಧಿ 5 ವರ್ಷಗಳಾಗಿದ್ದು, ರೈಲ್ವೆಗೆ ಒಟ್ಟಾರೆ ₹7.54 ಕೋಟಿ ಆದಾಯ ಬರಲಿದೆ.

ಕೆಎಸ್‌ಆರ್ ನಿಲ್ದಾಣದಲ್ಲಿ ಸ್ಥಳ ಪರಿಶೀಲನೆ ಮುಗಿದಿದ್ದು, ಟ್ರ್ಯಾಕ್ ಅಳವಡಿಕೆ ಕಾರ್ಯ ನಡೆಯುತ್ತಿದೆ. ಬಳಿಕ ರೈಲ್ವೆಯಿಂದ ಗುತ್ತಿಗೆದಾರರಿಗೆ ಬೋಗಿ ಹಸ್ತಾಂತರವಾಗಲಿದೆ. ಬೋಗಿಯಲ್ಲಿರುವ ಪ್ರಯಾಣಿಕರ ಸೀಟ್‌ಗಳನ್ನು ತೆಗೆದು, ಹೋಟೆಲ್ ಆಸನ, ಟೇಬಲ್‌ಗಳನ್ನು ಅಳವಡಿಸಲಾಗುತ್ತದೆ. ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ ಎರಡು ಬಾರಿ ಸ್ಥಳ ಪರಿಶೀಲನೆಯಾಗಿದೆ. ನೈರುತ್ಯ ರೈಲ್ವೆ ವಾಣಿಜ್ಯ ವಿಭಾಗದ ಎಂಜಿನಿಯರ್‌ಗಳು ಮತ್ತು ಗುತ್ತಿಗೆದಾರರು ಅಂತಿಮ ಪರಿಶೀಲನೆ ನಡೆಸಲಿದ್ದಾರೆ. ಕೆಎಸ್‌ಆರ್‌ನಲ್ಲಿ ನವೆಂಬರ್ ಅಂತ್ಯದೊಳಗೆ, ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ ಡಿಸೆಂಬರ್ ಅಂತ್ಯದೊಳಗೆ ಕೋಚ್ ರೆಸ್ಟೋರೆಂಟ್ ಆರಂಭಗೊಳ್ಳಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇನ್ನೊಂದು ರೆಸ್ಟೋರೆಂಟ್



ಕುಸುಮಾ ಹರಿಪ್ರಸಾದ್

'ಕೆಎಸ್‌ಆರ್ ರೈಲು ನಿಲ್ದಾಣದ ಪ್ರಮುಖ ಪ್ರವೇಶದ ಬದಿಯಲ್ಲಿ ಕೋಚ್ ರೆಸ್ಟೋರೆಂಟ್ ನವೆಂಬರ್‌ನಲ್ಲಿ ಆರಂಭವಾಗಲಿದೆ. ಅಲ್ಲಿ ಗ್ರಾಹಕರ ಸ್ಪಂದನೆ ಉತ್ತಮವಾಗಿದ್ದರೆ ನಿಲ್ದಾಣದ ಎರಡನೇ ಪ್ರವೇಶದ ಕಡೆಯಲ್ಲೂ 'ಕೋಚ್ ರೆಸ್ಟೋರೆಂಟ್' ತೆರೆಯಲು ಕ್ರಮ ಕೈಗೊಳ್ಳಲಾಗುವುದು' ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗೀಯ ಹೆಚ್ಚುವರಿ ವ್ಯವಸ್ಥಾಪಕಿ (ಆಡಳಿತ) ಕುಸುಮಾ ಹರಿಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.

ವಿಜಯವಾಡ, ದೆಹಲಿ, ಚೆನ್ನೈ, ಮುಂಬೈಯಲ್ಲಿ ರೈಲು ಕೋಚ್ ರೆಸ್ಟೋರೆಂಟ್ ಯಶಸ್ವಿಯಾಗಿದ್ದು, ರಾಜ್ಯದಲ್ಲಿಯೂ ಗ್ರಾಹಕರನ್ನು ಸೆಳೆಯುವ ವಿಶ್ವಾಸವಿದೆ ಎಂದು ಮಾಹಿತಿ ನೀಡಿದರು.

ಹೇಗಿರಲಿದೆ?

ಹವಾನಿಯಂತ್ರಿತ ಬೋಗಿಯೊಳಗೆ ಆರಾಮದಾಯಕ 52 ಆಸನಗಳು ಇರಲಿವೆ. ಅಲ್ಲದೇ ಬೋಗಿಯ ಹೊರಗೆ 30 ಆಸನಗಳನ್ನು ಅಳವಡಿಸಲಾಗುತ್ತದೆ. ಸಸ್ಯಾಹಾರ ಮತ್ತು ಮಾಂಸಾಹಾರ ಎರಡಕ್ಕೂ ಅವಕಾಶ ನೀಡಲಾಗಿದೆ. ಆದರೆ, ಆರಂಭದಲ್ಲಿ ಸಸ್ಯಾಹಾರ ಮಾತ್ರ ಇರಲಿದೆ.

ದಕ್ಷಿಣ ಭಾರತ, ಉತ್ತರ ಭಾರತೀಯ ಶೈಲಿಯ ಖಾದ್ಯ ಸೇರಿದಂತೆ ದೇಶದ ವಿವಿಧ ಭಾಗಗಳ ತಿನಿಸುಗಳು ಇಲ್ಲಿ ಸಿಗಲಿವೆ. ದಿನದ 24 ಗಂಟೆಯೂ ಕಾರ್ಯನಿರ್ವಹಿಸಲಿದೆ. ಬೋಗಿಯಲ್ಲಿ ರಾಜ್ಯದ ಕಲಾಕುಸರಿಗಳು, ರೈಲ್ವೆಯ ಇತಿಹಾಸ ವಿವರಿಸುವ ಚಿತ್ರ ಮತ್ತು ಮಾಹಿತಿ ಇರಲಿದೆ.

ಸುದ್ದಿ 2 ನಿಮಿಷ


ಮಹಿಷ ದಸರಾ ವಿರೋಧಿಸುವವರ ಒಪ್ಪೆನು: ಮೂಡ್ನಾಕೂಡು ಚಿನ್ನಸ್ವಾಮಿ

ಮೈಸೂರು: 'ಮಹಿಷ ದಸರಾ ವಿರೋಧಿಸುವವರನ್ನು ನಾನು ಒಪ್ಪುವುದಿಲ್ಲ' ಎಂದು ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಪ್ರತಿಪಾದಿಸಿದರು.

ದಸರಾ ಅಂಗವಾಗಿ ನಗರದ ಕಲಾಮಂದಿರದಲ್ಲಿ ಶನಿವಾರ ಆಯೋಜಿಸಿದ್ದ ಪ್ರಧಾನ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಮಹಿಷ ದಸರೆ ಆಚರಣೆಯನ್ನು ವಿರೋಧಿಸಬಾರದು. ಏಕೆಂದರೆ, ಇತಿಹಾಸವು ಯಾವ ದೇಶದಲ್ಲೇ ಆಗಲಿ ಇದಂಮಿತ್ಥಂ ಅಂತ ಉಳಿದಿಲ್ಲ. ಒಂದು ಪಂಗಡದವರು ಹೇಳುವ ರಾಕ್ಷಸ ಕಲ್ಪನೆಯೇ ಸುಳ್ಳು. ಯಾರದ್ದೋ ಸ್ವಾರ್ಥಕ್ಕಾಗಿ ಎಲ್ಲ ದೇವತೆಗಳೂ ರಾಕ್ಷಸರನ್ನು ಸುಟ್ಟು ಕೊಂದಿದ್ದಾರೆ. ಮಹಿಷಾಸುರ ಒಬ್ಬರ ದೃಷ್ಟಿಯಲ್ಲಿ ಖಳನಾಯಕ. ಸಂಶೋಧನೆಯಿಂದ ತಿಳಿದುಬಂದಿರುವ ಪ್ರಕಾರ ಅವನೊಬ್ಬ ಬೌದ್ಧ ಬಿಕ್ಕು ಎನ್ನುವುದು ಇನ್ನೊಂದು ತಂಡದವರು ಹೇಳುವ ಮಾತು. ಅದನ್ನು ನಂಬುವವರನ್ನು ವಿರೋಧಿಸಬೇಕೇ' ಎಂದು ಕೇಳಿದರು.

'ಸಮಾಜ ಇಂದು ಎರಡು ಪಂಥಗಳಾಗಿ ಹೋಳಾಗಿದೆ. ಮೇಲಾಟದಲ್ಲಿ ತೊಡಗಿರುವುದರಿಂದಾಗಿ ಸತತವಾದ ಸಂಘರ್ಷ ಏರ್ಪಡುತ್ತಿದೆ. ಎಲ್ಲರೂ ಮನುಷ್ಯ ಪರವಾಗಿ ಯೋಚಿಸಿದರೆ ಸಂಘರ್ಷವನ್ನು ತಗ್ಗಿಸಬಹುದು. ಯಾರೂ ಸುರರಲ್ಲ; ಯಾರೂ ಅಸುರರಲ್ಲ. ಎಲ್ಲರಲ್ಲೂ ಮಾನವೀಯತೆ ಇದೆ. ಎಲ್ಲರಲ್ಲೂ ದ್ವೇಷದ ಕಿಡಿ ಇದೆ. ಅದನ್ನು ಪಳಗಿಸುವ ಕೆಲಸ ಮಾಡಬೇಕು. ದುಷ್ಟ ಎಂದು ಶಿಕ್ಷೆ ಕೊಡುವುದು ದೇವರ ಕೆಲಸವಲ್ಲ. ಕೊಲ್ಲುವವನು ದೇವರಲ್ಲ. ಪಳಗಿಸುವವನು ದೇವರು. ಎಲ್ಲವನ್ನೂ ಸೃಷ್ಟಿಸುವ ಸೃಷ್ಟಿಕರ್ತನಿಗೆ ಮನಸ್ಸು ಪಳಗಿಸುವ ಶಕ್ತಿ ಇರುವುದಿಲ್ಲವೇ ಎಂದರು.



ಶಿವಕುಮಾರ್ ಅದೇನೋ ಬೇಗ ಬಿಚ್ಚಲಿ: ಎಚ್‌.ಡಿ ಕುಮಾರಸ್ವಾಮಿ

ಬೆಂಗಳೂರು: 'ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅದೇನೋ ಬಿಚ್ಚಿಡ್ತೀನಿ ಅಂದಿದ್ದಾರೆ. ಆದಷ್ಟು ಬೇಗ ಬಿಚ್ಚಲಿ, ಅದಕ್ಕೂ ಮೊದಲು ಅವರಿಗೆ ಏನಾದರೂ ಆದರೆ ಕಷ್ಟ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

'ರಾಜಕೀಯಕ್ಕೆ ಬಂದ ತಕ್ಷಣ ಬಂದೀಖಾನೆ ಸಚಿವರಾಗಿದ್ದರು. ಅವರು ಅಲ್ಲಿಂದಲೇ ಬಂದವರು. ಹಾಗಾಗಿ, ಬಿಚ್ಚುವ ಮಾತು ಸಹಜವಾಗಿ ಹೇಳುತ್ತಾರೆ. ಮಾಹಿತಿ ಇಲ್ಲದೆ ಯಾವ ವಿಚಾರವನ್ನೂ ನಾನು ಚರ್ಚೆ ಮಾಡುವುದಿಲ್ಲ. ಅದನ್ನು ಕಾಂಗ್ರೆಸ್ ನಾಯಕರು ಅರ್ಥ ಮಾಡಿಕೊಂಡರೆ ಸಾಕು' ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದರು.

'ರಾಜ್ಯ ಬರ ಪರಿಸ್ಥಿತಿಯತ್ತ ಸಾಗಿದೆ. ಕೇಂದ್ರಕ್ಕೆ ಪತ್ರ ಬರೆದು ಅನುದಾನಕ್ಕಾಗಿ ಕಾಯುತ್ತಾ ಕುಳಿತುಕೊಂಡರೆ ಸಾಲದು. ಅಲ್ಲಿಗೆ ಹೋಗಿ ಮಾತನಾಡಬೇಕು. ಬರವಿದ್ದರೂ ಸಚಿವರಿಗೆಲ್ಲ ಹೊಸ ಕಾರು ಖರೀದಿಸಲಾಗಿದೆ. ಹಾಗೆಯೇ, ದೆಹಲಿ ಪ್ರತಿನಿಧಿಗಳಿಗೂ ಹೊಸ ಕಾರು ಕೊಡಿಸಿ. ಕೇಂದ್ರದ ಮೇಲೆ ಒತ್ತಡ ಹಾಕಲು ಅವರು ಓಡಾಡಬೇಕಲ್ಲವಾ. ಹಿಂದೆ ಬಿಜೆಪಿ ವಿರುದ್ಧ 40 ಪರ್ಸೆಂಟ್ ಸರ್ಕಾರ ಎಂದು ಡಂಗುರ ಹೊಡೆದು ಕಾಂಗ್ರೆಸ್ ಅಧಿಕಾರಕ್ಕೆ ಬಂತು. ಈ ಸರ್ಕಾರದ ಪರ್ಸೆಂಟೇಜ್ ವ್ಯವಹಾರ, ರಾಜ್ಯದ ಸಂಪತ್ತು ಹೇಗೆ ಲೂಟಿಯಾಗುತ್ತಿದೆ ಎನ್ನುವುದನ್ನು ಜನರು ಗಮನಿಸುತ್ತಿದ್ದಾರೆ. ಐದು ಗ್ಯಾರಂಟಿಗಳನ್ನು ಮುಂದಿಟ್ಟುಕೊಂಡು ಹಣದ ಕೊರತೆಯ ನೆಪ ಹೇಳುತ್ತಾರೆ. ವಾಸ್ತವದಲ್ಲಿ ₹79 ಸಾವಿರ ಕೋಟಿ ತೆರಿಗೆ ಸಂಗ್ರಹವಾಗಿದೆ' ಎಂದರು.

ಮಾಲೂರು: ಪಂಚಾಯಿತಿ ಸದಸ್ಯನ ಕೊಲೆ



ಅನಿಲ್ ಕುಮಾರ್

ಮಾಲೂರು (ಕೋಲಾರ): ತಾಲ್ಲೂಕಿನ ಮಿಣಸಂದ್ರ ಗೇಟ್ (ಹೊಸೂರು ಮುಖ್ಯ ರಸ್ತೆ) ಬಳಿ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರನ್ನು ಶನಿವಾರ ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಲಾಗಿದೆ.

ಜಯಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಿಣಸಂದ್ರ ಗ್ರಾಮದ ಎಂ.ವಿ. ಅನಿಲ್ ಕುಮಾರ್ (35) ಕೊಲೆಯಾದ ವ್ಯಕ್ತಿ. ಅವರು ಕಾಂಗ್ರೆಸ್ ಬೆಂಬಲಿಗರು ಎಂಬುದು ತಿಳಿದುಬಂದಿದೆ. ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ಅವರನ್ನು ಅಡ್ಡಗಟ್ಟಿ ಹತ್ಯೆ ಮಾಡಿದ್ದಾರೆ. ಕೊಲೆಗೆ ರಾಜಕೀಯ ದ್ವೇಷ ಕಾರಣ ಎನ್ನಲಾಗಿದೆ.

ಪ್ರಕರಣ ದಾಖಲಿಸಿಕೊಂಡಿರುವ ಮಾಲೂರು ಪಟ್ಟಣ ಪೊಲೀಸರು ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ಕೈಗೊಂಡಿದ್ದಾರೆ.

ಕಾಲೇಜು ಅಭಿವೃದ್ಧಿಗೆ ₹1,540 ಕೋಟಿ ಸಾಲ

ಕಲ್ಯಾಣ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ 3,321 ಹುದ್ದೆಗಳ ಭರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅಭಿವೃದ್ಧಿಗೆ ವಿಶ್ವಬ್ಯಾಂಕ್‌ನಿಂದ 1,540 ಕೋಟಿ ಮೊತ್ತವನ್ನು ಅಲ್ಪ ಬಡ್ಡಿದರದ ಸಾಲದ ರೂಪದಲ್ಲಿ ಪಡೆಯಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಇಲಾಖೆಯ ಅಭಿವೃದ್ಧಿ ವಿಷಯಗಳ ಕುರಿತು ಶನಿವಾರ ಚರ್ಚಿಸಿದ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು.

ವಿಶ್ವಬ್ಯಾಂಕ್‌ನಿಂದ ದೀರ್ಘಾವಧಿ ತೀರುವಳಿಯ ಸಾಲ ಪಡೆಯಲು ಮುಖ್ಯಮಂತ್ರಿ ಸಮ್ಮತಿಸಿದ್ದಾರೆ. ಮೊದಲ ಹಂತದಲ್ಲಿ 72 ಕಾಲೇಜುಗಳನ್ನು ಉನ್ನತಮಟ್ಟದಲ್ಲಿ ಸರ್ವತೋಮುಖವಾಗಿ ಅಭಿವೃದ್ಧಿಗೊಳಿಸಲಾಗುವುದು. ಪ್ರತಿ ಜಿಲ್ಲೆಯ ಕನಿಷ್ಠ ಒಂದು ಕಾಲೇಜು ಆಯ್ಕೆ ಮಾಡಲಾಗುವುದು. ಹಾಗೆಯೇ, 31 ಪಾಲಿಟೆಕ್ನಿಕ್, 10 ಎಂಜಿನಿಯರಿಂಗ್ ಕಾಲೇಜುಗಳ ಅಭಿವೃದ್ಧಿಗೆ ₹620 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಸುಪ್ರೀಂಕೋರ್ಟ್ ಆದೇಶ ಪ್ರಕಾರ ಶಾಲಾ-ಕಾಲೇಜುಗಳ ಒಳಗೆ ಹಿಜಾಬ್ ನಿಷಿದ್ಧ. ಪರೀಕ್ಷಾ ಕೇಂದ್ರಗಳಿಗೆ ತಡೆ ಇಲ್ಲ. ಪರೀಕ್ಷಾ ಅಕ್ರಮ ತಡೆಯಲು ಒಂದು ಗಂಟೆ ಮೊದಲು ಬರಲು ಸೂಚಿಸಲಾಗಿದೆ

ಎಂ.ಸಿ.ಸುಧಾಕರ್, ಸಚಿವ

ಬ್ಯಾಕ್‌ಲಾಗ್ ಹುದ್ದೆ ಭರ್ತಿಗೆ ಅನುಮತಿ: ಕಲ್ಯಾಣ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ 3,321 ಹುದ್ದೆಗಳ ಭರ್ತಿಗೆ ಅನುಮತಿ ದೊರೆತಿದೆ. ಉನ್ನತ ಶಿಕ್ಷಣ ಇಲಾಖೆಯ ಹಲವು ವಿಚಾರಗಳ ಕುರಿತು ಚರ್ಚಿಸಲಾಗಿದೆ. ಉನ್ನತ ಶಿಕ್ಷಣ ಇಲಾಖೆಯ 16,455 ಬೋಧಕ ಹುದ್ದೆಗಳಲ್ಲಿ 699 ಖಾಲಿ ಇವೆ. ಬೋಧಕೇತರ 19,682 ಹುದ್ದೆಗಳಲ್ಲಿ 13,558 ಖಾಲಿ ಇವೆ. ಲ್ಯಾಬ್ ತಂತ್ರಜ್ಞರು ಮತ್ತಿತರ ಹುದ್ದೆಗಳ ಭರ್ತಿಗೆ ಈಗಾಗಲೇ ಹಣಕಾಸು ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಹಂತಹಂತವಾಗಿ ಭರ್ತಿ ಮಾಡಲು ನಿರ್ಧರಿಸಲಾಗಿದೆ ಎಂದರು.

ಚಿತ್ರಕಲಾ ಪರಿಷತ್ತಿನ ಕಾಲೇಜಿಗೆ ಲಂಚ ಕೇಳಿದ ವಿಚಾರ ಗಮನಕ್ಕೆ ಬಂದಿದೆ. ಸಮಿತಿ ಈಗಾಗಲೇ ವರದಿ ನೀಡಿದೆ. ಮಧ್ಯವರ್ತಿಗಳು ಬೇಡಿಕೆ ಸಲ್ಲಿಸಿರಬಹುದು. ಈ ಕುರಿತು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದರು.

ಉನ್ನತ ಶಿಕ್ಷಣ ಇಲಾಖೆಯಡಿ ನಿರ್ಮಿಸಿರುವ 13,169 ವಿದ್ಯಾರ್ಥಿಗಳ ಸಾಮರ್ಥ್ಯದ 224 ವಸತಿ ನಿಲಯಗಳ ಹಸ್ತಾಂತರ ಮಾಡಿಕೊಳ್ಳಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಿದ್ಧವಿದ್ದು, ಇದನ್ನು ಸಚಿವ ಸಂಪುಟದ ಮುಂದೆ ತರುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ ಎಂದೂ ಅವರು ತಿಳಿಸಿದರು.

ಮೈಸೂರಿನ ಮಹಾರಾಣಿ ಕಲಾ ಕಾಲೇಜು ಹಾಸ್ಟೆಲ್ ಆವರಣದಲ್ಲಿ ₹99 ಕೋಟಿ ಅಂದಾಜು ವೆಚ್ಚದಲ್ಲಿ ಕಲಾ ಮತ್ತು ವಿಜ್ಞಾನ ಕಾಲೇಜಿನ ತಲಾ ಸಾವಿರ ವಿದ್ಯಾರ್ಥಿನಿಯರಿಗೆ ಅವಕಾಶ ಕಲ್ಪಿಸುವ ಹಾಸ್ಟೆಲ್ ನಿರ್ಮಾಣಕ್ಕೆ ಕೂಡಲೇ ಕ್ರಮ ಕೈಗೊಳ್ಳುವಂತೆ ಅವರು ನಿರ್ದೇಶನ ನೀಡಿದ್ದಾರೆ ಎಂದರು.

ಅತಿಥಿ ಉಪನ್ಯಾಸಕರಿಗೆ 10 ತಿಂಗಳ ವೇತನ ಕಡ್ಡಾಯ

ಅತಿಥಿ ಉಪನ್ಯಾಸಕರಿಗೆ ವರ್ಷದಲ್ಲಿ 10 ತಿಂಗಳು ವೇತನ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ಸುಧಾಕರ್ ತಿಳಿಸಿದರು.

ರಾಜ್ಯದ ವಿಶ್ವವಿದ್ಯಾಲಯಗಳು ವಿಭಜನೆಯಾಗಿರುವುದರಿಂದ ಹಳೆಯ 5 ವಿಶ್ವವಿದ್ಯಾಲಯಗಳ ಪಿಂಚಣಿ ವಿತರಣೆ ಸಮಸ್ಯೆ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು ಎಂದರು.

ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಹಣಕಾಸು ಶಿಸ್ತು, ನೇಮಕಾತಿಯಲ್ಲಿ ಪಾರದರ್ಶಕತೆ ಮತ್ತಿತರ ವಿಷಯಗಳಲ್ಲಿ ಸುಧಾರಣೆ ತರುವ ಕುರಿತು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ ಎಂದರು.

ಕಾರಿನ ಗಾಜು ಒಡೆದು ₹13.75 ಲಕ್ಷ ದೋಚಿದರು

ಪ್ರಜಾವಾಣಿ ವಾರ್ತೆ



ಆನೇಕಲ್: ಸರ್ಜಾಪುರದಲ್ಲಿ ಶುಕ್ರವಾರ ಜಮೀನು ನೋಂದಣಿ ಮಾಡಿಸಿಕೊಳ್ಳಲು ಬಂದಿದ್ದ ವ್ಯಕ್ತಿಯೊಬ್ಬರು ಕಾರಿನಲ್ಲಿ ಹಣ ಇಟ್ಟು ಉಪ ನೋಂದಣಾಧಿಕಾರಿ ಕಚೇರಿಗೆ ಹೋಗಿದ್ದ ವೇಳೆ ಕಾರಿನ ಗಾಜು ಒಡೆದು ₹13.75 ಲಕ್ಷ ದೋಚಲಾಗಿದೆ.

ಹೊನ್ನಕಳಾಸಪುರದ ಮೋಹನ್ ಬಾಬು ಎಂಬುವರು ತಮ್ಮ ಭಾವ ರಮೇಶ್ ಅವರೊಂದಿಗೆ ಜಮೀನು ನೋಂದಣಿ ಮಾಡಿಕೊಳ್ಳಲು ಸರ್ಜಾಪುರಕ್ಕೆ ಕಾರಿನಲ್ಲಿ ಹೋಗಿದ್ದರು.

ನೋಂದಣಿ ಕಚೇರಿ ಸಮೀಪದ ಅಂಗಡಿ ಬಳಿ ಕಾರನ್ನು ನಿಲ್ಲಿಸಿ ಕಚೇರಿಗೆ ಹೋಗಿ ಬರುವಷ್ಟರಲ್ಲಿ ಕಾರಿನ ಬಾಗಿಲಿನ ಗಾಜು ಒಡೆದು ಹಣ ದೋಚಲಾಗಿದೆ.

ಸಿ.ಸಿ ಕ್ಯಾಮೆರಾದಲ್ಲಿ ಕಳ್ಳತನದ ವಿಡಿಯೊ ದಾಖಲಾಗಿದ್ದು, ವ್ಯಕ್ತಿಯೊಬ್ಬರು ಕಾರಿನ ಗಾಜು ಒಡೆದು ಹಣ ದೋಚಿ ದ್ವಿಚಕ್ರ ವಾಹನದಲ್ಲಿ ಪರಾರಿಯಾಗಿದ್ದಾರೆ. ಸರ್ಜಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣದಲ್ಲಿ ದಾಖಲಾಗಿದೆ.



ಎ.ವಿ. ನಾವಡ, ಹಿ.ಚಿ. ಬೋರಲಿಂಗಯ್ಯ, ನರಸಿಂಹಲು ವಡವಾಟಿ ಅವರಿಗೆ ಸಂಸ್ಕೃತಿ ಸಂಗಮ ಪ್ರಶಸ್ತಿಯನ್ನು ಡಿ.ಕೆ. ಶಿವಕುಮಾರ್ ಪ್ರದಾನ ಮಾಡಿದರು. ಎನ್. ಸರ್ವಮಂಗಳ, ಸಿ. ಸೋಮಶೇಖರ, ಹಂ.ಪ. ನಾಗರಾಜಯ್ಯ, ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಶಿವರಾಜ್ ವಿ. ಪಾಟೀಲ (ಎಡದಿಂದ ಬಲಕ್ಕೆ ನಿಂತವರು) –ಪ್ರಜಾವಾಣಿ ಚಿತ್ರ

'ಪ್ರಶಸ್ತಿಗೆ ಅರ್ಜಿ: ಸ್ಥಗಿತಗೊಳಿಸಲು ಚಿಂತನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರ ನೀಡುವ ಪ್ರಶಸ್ತಿಗಳಿಗೆ ಅರ್ಜಿ ಹಾಕುವ ಪದ್ಧತಿಯನ್ನು ಸ್ಥಗಿತಗೊಳಿಸಿ, ಪರಿಣತರ ಸಮಿತಿ ಮೂಲಕ ಆಯ್ಕೆ ಮಾಡುವ ವಿಧಾನದ ಬಗ್ಗೆ ಚಿಂತನೆ ಮಾಡಲಾಗುವುದು' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಡಾ. ಸಿ. ಸೋಮಶೇಖರ– ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನವು ಶನಿವಾರ ಆಯೋಜಿಸಿದ್ದ 'ಸಂಸ್ಕೃತಿ ಸಂಗಮ ಪ್ರಶಸ್ತಿ–2023' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಸರ್ಕಾರ ನೀಡುವ ಪ್ರಶಸ್ತಿಗಳ ಆಯ್ಕೆಗೆ ಹೊಸ ವ್ಯವಸ್ಥೆ ಜಾರಿಗೊಳಿಸಬೇಕಿದೆ. ಸಾಧನೆ ನೋಡಿ ಪ್ರಶಸ್ತಿ ನೀಡಬೇಕೇ ಹೊರತು ಯಾವುದೇ ಒತ್ತಡಕ್ಕೆ ಮಣಿದು ನೀಡಬಾರದು. ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು. ಸುಮಾರು ಎರಡೂವರೆ ಸಾವಿರಕ್ಕೂ ಹೆಚ್ಚು ಅರ್ಜಿಗಳು ಬಂದಿವೆ. ಇದರಲ್ಲಿ ಜಾತಿ, ಜಿಲ್ಲೆ ಸೇರಿದಂತೆ ಎಲ್ಲ ಕ್ಷೇತ್ರಗಳಿಗೆ ಆದ್ಯತೆ ನೀಡಬೇಕು. ಇದರಲ್ಲಿ ಪ್ರತಿಯೊಂದನ್ನು ಲೆಕ್ಕಚಾರ ಹಾಕಿ ಯಾರನ್ನು ಆಯ್ಕೆ ಮಾಡಬೇಕು, ಯಾರನ್ನು ಕೈಬಿಡಬೇಕು ಎನ್ನುವ ಸವಾಲು ಎದುರಾಗಿದೆ' ಎಂದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ, 'ಜೀವನದಲ್ಲಿ ಸಾಧನೆ ಮಾಡಿದ ಕಲಾವಿದರು, ಸಾಹಿತಿಗಳಿಗೆ ಇಳಿವಯಸ್ಸಿನಲ್ಲಿ ಆರ್ಥಿಕವಾಗಿ ಅನುಕೂಲವಾಗುವ ಯೋಜನೆ ಸರ್ಕಾರ ರೂಪಿಸಬೇಕು' ಎಂದರು.

ಇದೇ ಸಂದರ್ಭದಲ್ಲಿ ಹಿ.ಚಿ. ಬೋರಲಿಂಗಯ್ಯ (ಜಾನಪದ ಸಾಹಿತ್ಯ), ಎ.ವಿ. ನಾವಡ (ದಾಸ ಸಾಹಿತ್ಯ), ನರಸಿಂಹಲು ವಡವಾಟಿ (ಸಂಗೀತ ಕ್ಷೇತ್ರ) ಅವರ ಜೀವಮಾನ ಸಾಧನೆಯನ್ನು ಗುರುತಿಸಿ 'ಸಂಸ್ಕೃತಿ ಸಂಗಮ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಸಾಹಿತಿ ಹಂ.ಪ. ನಾಗರಾಜಯ್ಯ ಅವರು ಸಂಸ್ಕೃತಿ ಸಂಗಮ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಮೈಸೂರಿನ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಪ್ರತಿಷ್ಠಾನದ ಅಧ್ಯಕ್ಷ ಸಿ. ಸೋಮಶೇಖರ್, ಎನ್. ಸರ್ವಮಂಗಳ ಇದ್ದರು.

ಅಮೆರಿಕ ಪ್ರಜೆಗೆ ವಂಚನೆ: ₹7.7 ಕೋಟಿ ಕ್ರಿಪ್ಟೊ ಕರೆನ್ಸಿ ವಶ

ನವದೆಹಲಿ (ಪಿಟಿಐ): ಬಹುರಾಷ್ಟ್ರೀಯ ಕಂಪನಿ 'ಅಮೆಜಾನ್'ನ ವಂಚನೆ ಪತ್ತೆ ವಿಭಾಗದ ಹಿರಿಯ ಕಾರ್ಯನಿರ್ವಾಹಕನೆಂದು ನಂಬಿಸಿ ಅಮೆರಿಕದ ವ್ಯಕ್ತಿಗೆ ವಂಚಿಸಿದ ಅಹಮದಾಬಾದ್ ಮೂಲದ ವ್ಯಕ್ತಿಯಿಂದ ₹7.7 ಕೋಟಿಗೂ (9.30 ಲಕ್ಷ ಡಾಲರ್) ಹೆಚ್ಚು ಮೌಲ್ಯದ ಕ್ರಿಪ್ಟೊ ಕರೆನ್ಸಿಯನ್ನು ಸಿಬಿಐ ವಶಪಡಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕದ ಎಫ್‌ಬಿಐ (ಫೆಡರಲ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್) ನೀಡಿದ ಮಾಹಿತಿ ಆಧರಿಸಿ ಸಿಬಿಐ, ರಾಮವತ್ ಶೈಶವ್ ವಿರುದ್ಧ ಎಫ್‌ಐಆರ್ ದಾಖಲಿಸಿದೆ. ಆರೋಪಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಸಿಬಿಐ ಶೋಧ ನಡೆಸಿದಾಗ, ಶೈಶವ್ ಅವರ ಇ-ವ್ಯಾಲೆಟ್‌ನಲ್ಲಿ 28 ಬಿಟ್‌ಕಾಯಿನ್, 55 ಎಥೇರಿಯಮ್, 25,572 ರಿಪ್ಪಲ್ ಮತ್ತು 77 ಯುಎಸ್‌ಡಿಟಿ ಪತ್ತೆಯಾಗಿವೆ. ಕ್ರಿಪ್ಟೊ ಕರೆನ್ಸಿಗಳನ್ನು ಜಪ್ತಿ ಮಾಡಿ, ಸರ್ಕಾರದ ವಶಕ್ಕೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಯು, ಅಮೆರಿಕದ ಪ್ರಜೆಯನ್ನು ದೂರವಾಣಿ ಮೂಲಕ ಸಂಪರ್ಕಿಸಿ, 'ತಾನು ಅಮೆಜಾನ್ ಕಂಪನಿಯ ವಂಚನೆ ಪತ್ತೆ ಹಚ್ಚುವ ವಿಭಾಗದ ಹಿರಿಯ ಕಾರ್ಯನಿರ್ವಾಹಕ ಜೇಮ್ಸ್ ಕಾರ್ಲ್ಸನ್' ಎಂಬುದಾಗಿ ಪರಿಚಯಿಸಿಕೊಂಡು, ಅವರಿಗೆ ತಮ್ಮ ಖಾತೆಯಲ್ಲಿದ್ದ ಹಣ ಹಿಂತೆಗೆದುಕೊಂಡು ಕ್ರಿಪ್ಟೊ ಕರೆನ್ಸಿಯಲ್ಲಿ ರೇವಣಿ ಇಡಲು ಪುಸಲಾಯಿಸಿ ವಂಚಿಸಿರುವ ಆರೋಪವನ್ನು ಎದುರಿಸುತ್ತಿದ್ದಾನೆ.

ಲಂಚ: ಲೋಕಾಯುಕ್ತ ಬಲೆಗೆ ಬಿದ್ದ ಕೃಷಿ ಉಪ ನಿರ್ದೇಶಕಿ

ಪ್ರಜಾವಾಣಿ ವಾರ್ತೆ



ಭಾರತಮ್ಮ

ಮಂಗಳೂರು: ಬಿಲ್ ಪಾವತಿಸಲು ಲಂಚ ಪಡೆಯುತ್ತಿದ್ದ ಕೃಷಿ ಇಲಾಖೆಯ ಉಪ ನಿರ್ದೇಶಕರನ್ನು ಲೋಕಾಯುಕ್ತ ಪೊಲೀಸರು ಮಂಗಳೂರಿನಲ್ಲಿ ಬಂಧಿಸಿದ್ದಾರೆ.

ಮಂಗಳೂರು ಕೃಷಿ ಉಪ ನಿರ್ದೇಶಕಿ ಭಾರತಮ್ಮ ಬಂಧಿತರು. ಕೃಷಿ ಇಲಾಖೆಯಲ್ಲಿ ವಲಯ ಅರಣ್ಯ ಅಧಿಕಾರಿಯಾಗಿದ್ದ ಪರಮೇಶ್ ಎಂ.ಪಿ ಎಂಬುವರು ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ₹50 ಲಕ್ಷ ಮೌಲ್ಯದ ವಿವಿಧ ಜಾತಿಯ ಅರಣ್ಯ, ತೋಟಗಾರಿಕೆ ಸಸಿಗಳನ್ನು ಬಂಟ್ವಾಳ ತಾಲ್ಲೂಕಿಗೆ ಸರಬರಾಜು ಮಾಡಿಸಿದ್ದರು. ನಂತರ ಅವರು ವೃತ್ತಿಯಿಂದ ನಿವೃತ್ತರಾಗಿದ್ದರು. ಕಾಮಗಾರಿ ನಡೆಸಿದ ಬಿಲ್ ಪಾವತಿಸಲು ಅರಣ್ಯ ಗುತ್ತಿಗೆದಾರರು ಪರಮೇಶ್ ಅವರಿಗೆ ಒತ್ತಡ ಹಾಕುತ್ತಿದ್ದರು. ಬಿಲ್ ಪಾವತಿಸಬೇಕಾಗಿದ್ದ ಅಧಿಕಾರಿ ಭಾರತಮ್ಮ ಅವರು ಬಿಲ್ ಪಾವತಿಸಲು ₹1 ಲಕ್ಷ ಲಂಚ ಬೇಡಿಕೆ ಇಟ್ಟಿದ್ದ ಬಗ್ಗೆ ಪರಮೇಶ್ ದೂರು ನೀಡಿದ್ದರು. ಅದರಂತೆ ಶನಿವಾರ ಮಂಗಳೂರಿನ ಕಚೇರಿಯಲ್ಲಿ ಲಂಚ ಪಡೆಯುತ್ತಿದ್ದ ವೇಳೆ ದಾಳಿ ನಡೆಸಿ ಭಾರತಮ್ಮ ಅವರನ್ನು ಬಂಧಿಸಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿ.ಎಸ್. ಸೈಮನ್ ಅವರ ಮಾರ್ಗದರ್ಶನದಲ್ಲಿ, ಡಿವೈಎಸ್ಪಿ ಕಲಾವತಿ. ಕೆ, ಚೆಲುವರಾಜು.ಬಿ, ಇನ್‌ಸ್ಪೆಕ್ಟರ್ ಸುರೇಶ್ ಕುಮಾರ್ ಪಿ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ವಿಮ್ಸ್ ನೇಮಕಾತಿಯಲ್ಲಿ ಭ್ರಷ್ಟಾಚಾರ ಆರೋಪ

ಪ್ರಜಾವಾಣಿ ವಾರ್ತೆ



ಬಳ್ಳಾರಿ: 'ಕಲ್ಯಾಣ ಕರ್ನಾಟಕದ ಪ್ರತಿಷ್ಠಿತ 'ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ'ಯ (ವಿಮ್ಸ್) ನೇಮಕಾತಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ನಡೆದಿದೆ' ಎಂಬ ದೂರು ವಿಧಾನಸೌಧಕ್ಕೆ ತಲುಪಿರುವ ಹಿನ್ನೆಲೆಯಲ್ಲಿ 93 ಹುದ್ದೆಗಳ ನೇಮಕಾತಿ ಪಟ್ಟಿಯನ್ನು ಸರ್ಕಾರ ತಡೆಹಿಡಿದಿದೆ.

ಹಿಂದಿನ ಬಿಜೆಪಿ ಸರ್ಕಾರ ವಿಮ್ಸ್‌ನಲ್ಲಿ 93 ಹುದ್ದೆಗಳ ನೇಮಕಾತಿಗೆ ಒಪ್ಪಿಗೆ ನೀಡಿತ್ತು. ಜೂನ್‌ನಲ್ಲಿ ಸಂದರ್ಶನ ನಡೆಸಿ, ಜುಲೈನಲ್ಲಿ ಆಯ್ಕೆ ಪಟ್ಟಿಯನ್ನು ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿತ್ತು. ಬದಲಾದ ಪರಿಸ್ಥಿತಿಯಲ್ಲಿ ಅಧಿಕಾರ ಹಿಡಿದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಆಯ್ಕೆ ಪಟ್ಟಿಗೆ ತಡೆ ನೀಡಿದೆ.

6 ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳು, 7 ಪ್ರಾಧ್ಯಾಪಕರು, 24 ಸಹ ಪ್ರಾಧ್ಯಾಪಕರು ಹಾಗೂ 56 ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಕರೆಯಲಾಗಿತ್ತು. 200ಕ್ಕೂ ಹೆಚ್ಚು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಈ ಪೈಕಿ 93 ಹೆಸರನ್ನು ಅಂತಿಮಗೊಳಿಸಿ, ಒಪ್ಪಿಗೆಗೆ ಸರ್ಕಾರಕ್ಕೆ ಕಳುಹಿಸಲಾಗಿತ್ತು.

ನೇಮಕಾತಿಗೆ ಅನುಮತಿ ಪಡೆಯಲು ವಿಮ್ಸ್ ನಿರ್ದೇಶಕ ಡಾ. ಟಿ. ಗಂಗಾಧರಗೌಡ ಬೆಂಗಳೂರಿಗೆ ಭೇಟಿ ನೀಡಿದ್ದರು. 'ಆಯ್ಕೆ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ದೂರುಗಳಿವೆ. ಹೀಗಾಗಿ ನೇಮಕಾತಿ ಪಟ್ಟಿಗೆ ಅನುಮೋದನೆ ಕೊಡಲು ಸಾಧ್ಯವಿಲ್ಲ' ಎಂದು ಸರ್ಕಾರ ತಿಳಿಸಿದೆ. ಇದರ ಕುರಿತು ವಿಮ್ಸ್ ನಿರ್ದೇಶಕರು ಪ್ರತಿಕ್ರಿಯೆ ನೀಡಲಿಲ್ಲ.

ವಿಮ್ಸ್ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರತಿನಿಧಿ, ವಿಶ್ವವಿದ್ಯಾಲಯದ ಪ್ರತಿನಿಧಿ, ವಿಷಯ ತಜ್ಞರು ಹಾಗೂ ವಿಮ್ಸ್ ಮುಖ್ಯ ಆಡಳಿತಾಧಿಕಾರಿಗಳನ್ನು ಒಳಗೊಂಡ ಸಮಿತಿ ಸಂದರ್ಶನ ನಡೆಸಿ ಅಂತಿಮ ಆಯ್ಕೆ ಪಟ್ಟಿ ಸಿದ್ಧಪಡಿಸಿತ್ತು.

ಬೊಮ್ಮಾಯಿ ಆರೋಗ್ಯ ಚೇತರಿಕೆ

ಪ್ರಜಾವಾಣಿ ವಾರ್ತೆ



ಆಸ್ಪತ್ರೆಗೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಪರಮೇಶ್ವರ ಅವರು ಬಸವರಾಜ ಬೊಮ್ಮಾಯಿ ಅವರ ಆರೋಗ್ಯ ವಿಚಾರಿಸಿದರು. ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಇದ್ದರು

ಬೆಂಗಳೂರು: ಹೃದಯಸಂಬಂಧಿ ಸಮಸ್ಯೆ ಕಾರಣ ಬನ್ನೇರುಘಟ್ಟದ ಫೋರ್ಟಿಸ್ ಆಸ್ಪತ್ರೆಯಲ್ಲಿ ಪರಿಧಮನಿಯ ಬೈಪಾಸ್ ಶಸ್ತ್ರಚಿಕಿತ್ಸೆಗೆ (ಸಿಎಬಿಜಿ) ಒಳಗಾಗಿದ್ದ ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡಿದೆ.

ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ಅವರು ಅ.15ರಂದು ಆಸ್ಪತ್ರೆಗೆ ತೆರಳಿದ್ದರು. ಆಸ್ಪತ್ರೆಯ ಹೃದ್ರೋಗ ತಜ್ಞ ಡಾ. ವಿವೇಕ್ ಜವಳಿ ಮೇಲ್ವಿಚಾರಣೆಯಲ್ಲಿ ಅವರಿಗೆ ಆಂಜಿಯೊಗ್ರಾಂ ಸೇರಿ ವಿವಿಧ ಪರೀಕ್ಷೆಗಳನ್ನು ನಡೆಸಲಾಗಿತ್ತು. ಪರಿಧಮನಿಯಲ್ಲಿ ಸಮಸ್ಯೆ ಇರುವುದು ದೃಢಪಟ್ಟಿದ್ದರಿಂದ ಅವರಿಗೆ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಈಗ ಅವರು ಚೇತರಿಸಿಕೊಂಡಿದ್ದಾರೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

'ಬೊಮ್ಮಾಯಿ ಅವರು ಚಿಕಿತ್ಸೆಗೆ ಸ್ಪಂದಿಸಿದ್ದು ಚೇತರಿಕೆಗೆ ಸಹಕಾರಿಯಾಯಿತು. ಒಂದೆರಡು ವಾರದಲ್ಲಿ ಈ ಮೊದಲಿನಂತೆ ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಹುದು' ಎಂದು ಡಾ.ವಿವೇಕ್ ಜವಳಿ ಹೇಳಿದ್ದಾರೆ.

ಬಸವರಾಜ ಬೊಮ್ಮಾಯಿ, 'ಇಲ್ಲಿನ ವೈದ್ಯರು ಅಪಾಯ ತಡೆದು, ಉತ್ತಮವಾಗಿ ಆರೈಕೆ ಮಾಡಿದ್ದಾರೆ. ಇದರಿಂದಾಗಿ ಚೇತರಿಸಿಕೊಳ್ಳುತ್ತಿದ್ದೇನೆ' ಎಂದು ತಿಳಿಸಿದ್ದಾರೆ.

ಸಿ.ಎಂ ಭೇಟಿ: ಫೋರ್ಟಿಸ್ ಆಸ್ಪತ್ರೆಗೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಬೊಮ್ಮಾಯಿಯವರ ಆರೋಗ್ಯ ವಿಚಾರಿಸಿದರು.

ಕಾರವಾರ ವಾಯುನೆಲೆ ನಿರ್ಮಾಣ, ವಿಸ್ತರಣೆ ಯೋಜನೆ

'ಭೂಸ್ವಾಧೀನ ಕಾಯ್ದೆಯನ್ವಯ ಪರಿಹಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರವಾರದಲ್ಲಿ ಸೀಬರ್ಡ್ ನೌಕಾನೆಲೆಯು ನಿರ್ಮಿಸುತ್ತಿರುವ ವಾಯುನೆಲೆಯನ್ನು ವಿಸ್ತರಿಸಿ, ಸಿವಿಲ್ ಎನ್‌ಕ್ಲೇವ್ ನಿರ್ಮಿಸುವ ಯೋಜನೆಗೆ ವಶಪಡಿಸಿಕೊಂಡ ಭೂಮಿಗೆ 2013ರ ಭೂಸ್ವಾಧೀನ ಕಾಯ್ದೆ ಅನ್ವಯ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ನಡೆದಿರುವ ತಾರತಮ್ಯ ಕುರಿತು ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಮತ್ತು ಕಾರವಾರ ಶಾಸಕ ಸತೀಶ್ ಸೈಲ್ ನೇತೃತ್ವದ ನಿಯೋಗವು ಮುಖ್ಯಮಂತ್ರಿಯನ್ನು ಶನಿವಾರ ಭೇಟಿ ಮಾಡಿ ಚರ್ಚೆ ನಡೆಸಿತು.

'ಪರಿಹಾರ ನೀಡುವ ವಿಚಾರದಲ್ಲಿ ಬಿಜೆಪಿ ಸರ್ಕಾರ ಮಾಡಿದ ಅನ್ಯಾಯ ಮತ್ತು ಮೋಸ ಸರಿಪಡಿಸಿ' ಎಂದು ಮೂರು ಗ್ರಾಮಗಳ ನಿರಾಶ್ರಿತ ಕುಟುಂಬಗಳು ಸಭೆಯಲ್ಲಿ ಮಾಡಿದ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ, ವೈಜ್ಞಾನಿಕವಾಗಿ, ನಿಯಮಬದ್ಧವಾಗಿ ಪರಿಹಾರ ಕೊಡಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಭೂಸ್ವಾಧೀನ ಪರಿಹಾರ ನಿಗದಿ, ಭೂಮಿ ಕಳೆದುಕೊಂಡವರಿಗೆ ಉದ್ಯೋಗ ಮತ್ತು ಸೂಕ್ತ ನಿವೇಶನ ನೀಡುವ ಕುರಿತಂತೆ ಮುಖ್ಯ ಕಾರ್ಯದರ್ಶಿ ಮತ್ತು ಸಂಬಂಧಿಸಿದ ಇತರ ಅಧಿಕಾರಿಗಳ ಜೊತೆ ಚರ್ಚಿಸುವಂತೆ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲರಿಗೆ ಮುಖ್ಯಮಂತ್ರಿ ಸೂಚಿಸಿದರು.

ಸೀಬರ್ಡ್ ಮೊದಲ ಹಂತದ ಯೋಜನೆಯಡಿ ಭೂಮಿ ಕಳೆದುಕೊಂಡ ಕುಟುಂಬದವರಿಗೂ ಉದ್ಯೋಗ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗುವುದು ಎಂದೂ ಮುಖ್ಯಮಂತ್ರಿ ತಿಳಿಸಿದರು.

ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಮುಖ್ಯಮಂತ್ರಿಯ ಕಾರ್ಯದರ್ಶಿ ಜಿಯಾವುಲ್ಲಾ, ಹಣಕಾಸು ಇಲಾಖೆ ಕಾರ್ಯದರ್ಶಿ ಪಿ.ಸಿ. ಜಾಫರ್, ಮೂಲಸೌಕರ್ಯ ಇಲಾಖೆ ಜಂಟಿ ಕಾರ್ಯದರ್ಶಿ ಹೆಫ್ಸಿಬಾ ರಾಣಿ ಕೊರ್ಲಪಾಟಿ ಸಭೆಯಲ್ಲಿ ಇದ್ದರು.



ಭೂಸ್ವಾಧೀನ ಪ್ರಕ್ರಿಯೆ ಹಾಗೂ ವಿವಿಧ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಸಭೆ ನಡೆಸಿದರು. ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ, ಮೀನುಗಾರಿಕೆ ಮತ್ತು ಬಂದರು ಸಚಿವ ಮಂಕಾಳ ವೈದ್ಯ, ಕಾರವಾರ ಶಾಸಕ ಸತೀಶ್ ಸೈಲ್ ಇದ್ದರು

ನವವರ್ಣ

ನವರಾತ್ರಿಯ ಒಂಬತ್ತನೆಯ ದಿನ ಜಗನ್ಮಾತೆಯನ್ನು 'ಕಾಳರಾತ್ರಿ'ಯ ರೂಪದಲ್ಲಿ ಪೂಜಿಸಲಾಗುತ್ತದೆ. ಈ ದೇವಿಯ ಮೈಬಣ್ಣ ಕಪ್ಪು; ಅವಳಿಗೆ ಮೂರು ಕಣ್ಣುಗಳು. ನೋಡಲು ಭಯಂಕರವಾಗಿದ್ದಾಳೆ. ಹೀಗಿದ್ದರೂ ತಾಯಿಯು ಒಳ್ಳೆಯ ಫಲಗಳನ್ನೇ ಕೊಡುವವಳು. ಹೀಗಾಗಿ ಅವಳನ್ನು 'ಶುಭಂಕರಿ' ಎಂದೂ ಕರೆಯಲಾಗುತ್ತದೆ. ನಮಗೆ ಪೂರ್ಣ ಬಿಳುಪನ್ನು ನೋಡಲೂ ಅಥವಾ ಪೂರ್ಣ ಕಪ್ಪುಬಣ್ಣವನ್ನು ನೋಡಲೂ ಸಾಧ್ಯವಿಲ್ಲ; ನಮಗೊಂದು 'ಮಧ್ಯಮಮಾರ್ಗ' ಬೇಕು. ಇದರ ಸಂಕೇತವೇ ಬೂದುಬಣ್ಣ. ಈ ಬಣ್ಣದಲ್ಲಿ ದೇವಿಯ ಉಪಾಸನೆಯನ್ನು ಮಾಡಿದ ಕೆಲವರ ಚಿತ್ರಗಳು ಇಲ್ಲಿವೆ...

ಗುಲಾಬಿ ಬಣ್ಣದ ಧಿರಿಸನ್ನು ಧರಿಸಿ ತೆಗೆಸಿಕೊಂಡ ಚಿತ್ರಗಳನ್ನು ಭಾನುವಾರ ಸಂಜೆ 4 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ... 7338018541


ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯ ಮಹಿಳಾ ಸಿಬ್ಬಂದಿ, ಬೆಂಗಳೂರು


ಇಂಡಿಯಾ ಹೈಸ್ಕೂಲ್‌ನ ಶಿಕ್ಷಕಿಯರು, ಬೆಂಗಳೂರು


ದನಿತಾ ಮತ್ತು ಗೆಳತಿಯರು, ಸದಾಶಿವನಗರ


ಎನ್ ಪದ್ಮ ಮಂಜುನಾಥ್; ಸುಮುಖ ವೃಂದ, ಉತ್ತರಹಳ್ಳಿ ಮುಖ್ಯರಸ್ತೆ, ಬೆಂಗಳೂರು


ಜಯಂತಿ ಮತ್ತು ಸಂಗಡಿಗರು, ಗುಲಾಬಿ ನಗೆ ಕೂಟ, ವಿಜಯನಗರ, ಬೆಂಗಳೂರು


ಅಲಮೇಲು ಮತ್ತು ಪುತ್ರಿಯರಾದ ಯಶಸ್ವಿನಿ, ಕಲ್ಪನಾ, ವಿಜಯನಗರ


ತ್ರಿವೇಣಿ ಮತ್ತು ಗೆಳತಿಯರು, ವಿಶ್ವೇಶ್ವರಯ್ಯ ಬಡಾವಣೆ


ಚಂದನಾ ಮತ್ತು ಸಂಗಡಿಗರು, ಅತ್ತಿಗುಪ್ಪೆ, ಬೆಂಗಳೂರು


ವೀಣಾ ಮತ್ತು ಗೆಳತಿಯರು, ಜಯನಗರ


ನಂದಿನಿ ಮತ್ತು ಗೆಳತಿಯರು, ಎಂಪಿಎಂ ಬಡಾವಣೆ, ಬೆಂಗಳೂರು


ಎಂಇಎಸ್ ಕಿಶೋರ ಕೇಂದ್ರದ ಮಕ್ಕಳು, ಮಲ್ಲೇಶ್ವರ


ಶ್ವೇತ, ಬೆಂಗಳೂರು


ಪ್ರತಿಮ ಮತ್ತು ಸ್ನೇಹಿತೆಯರು, ಮಲ್ಲೇಶ್ವರ, ಬೆಂಗಳೂರು


ಶ್ವೇತಾ.ಎಂ.ಪೈ ಮತ್ತು ಶಿಕ್ಷಕರ ವೃಂದ, ಕಾರ್ ಸ್ಟ್ರೀಟ್, ಮಂಗಳೂರು


ಬೆಂಗಳೂರು ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯದ ಅಧಿಕಾರಿಗಳು


ರಮ್ಯಾ ಮತ್ತು ಸಹೋದರಿಯರು, ರಾಜರಾಜೇಶ್ವರಿ ನಗರ, ಬೆಂಗಳೂರು


ಡಾ. ರಕ್ಷಿತಾ ಮತ್ತು ಸ್ನೇಹಿತೆಯರು, ತುಮಕೂರು


ಬಿಟಿಎಂ ಬಡಾವಣೆಯ ಗೆಳತಿಯರು


ದರ್ಶನ್ ಕಾಲೇಜಿನ ಉಪನ್ಯಾಸಕಿಯರು, ಕೆಂಗೇರಿ


ಮಹಾಲಕ್ಷ್ಮಿ ಗೂಳಿಗೌಡ ಮತ್ತು ಸ್ನೇಹಿತೆಯರು, ರಾಮನಗರ


ಸೃಜನಾ ಮತ್ತು ಸ್ನೇಹಿತೆಯರು, ಬಸವೇಶ್ವರ ನಗರ, ಬೆಂಗಳೂರು


ಗಗನ ಪೂಣಚ್ಚ, ಆರ್‌ಟಿ ನಗರ, ಬೆಂಗಳೂರು


ಅನುರಾಧಾ ಹೋಮಿಯೋಪಥಿಕ್ ಮತ್ತು ಮೆಡಿಕಲ್ ಕಾಲೇಜ್ ಸಿಬ್ಬಂದಿ, ಶ್ರೀಗಂಧಕಾವಲ್, ಬೆಂಗಳೂರು


ಖಜಾನೆ ಇಲಾಖೆ ಸಿಬ್ಬಂದಿ, ಬೆಂಗಳೂರು


ದಿ ಮಾಸ್ಟರ್ ಪಿಯು ಕಾಲೇಜ್ ಉಪನ್ಯಾಸಕಿಯರು, ತುಮಕೂರು


ಸ್ಮಾರ್ಟ್ ಕಿಟ್ಟಿ ಗೆಳತಿಯರು, ರಾಣೆಬೆನ್ನೂರು

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Commercial Building

Basaveshwaranagar

COMMERCIAL PROPERTY FOR SALE KAMALA NAGAR ROAD 96D BUS STOP BASAVESHWARA NAGAR CONTACT: 7975463324

Commercial Land

Nelamangala

BANGALORE-SOLUR HIGHWAY 2 acres 17 guntas Commercial Land for SALE. CONTACT: 9845780996

Commerical

General

TENANTED SHOWROOM Richmond Road 5000 Sft 6.25 Cr with Rental Income 4.25 Lakhs & 2500 Sft 3.25 Cr with Rental Income 2.15 Lakhs. 9845311141

Farm House/ Land/ Resorts

Kanakapura Road

KANAKAPURA TOWN: Land for Sale 1 Acre & 2 Acres with Water, Electricity, Suitablefor Farm-House & Layout Ravi Kumar: 9945928994.

Out-Station

NILGIRIS 3.75 ACRES TEA ESTATE FOR SALE/ JV. COONOOR BUNGLOW @ RS. 55L, 10 MIN FROM TOWN, CT. 7604 939393

Flat

Basaveshwaranagar

"MAGADI MAIN Road 2BHK Flat Ready to occupy with occupancy certificate A-Katha. Call: 9845286505"

Rajarajeshwari Nagar

R.R.NAGAR POSH Location BBMP 'A'Khata FLATS 3-BHK N/F-1685Sqft 1.10Cr 3-BHK N/F-1615Sqft 1.05Cr Including Bescom/BWSSB/ Parking Call-9731614500/ 9886026969

Indiranagar

INDIRANAGAR 2ND Stage, 3 BHK 1650 sqft. Flat with car park, north facing for sale. Rs 2.65 CR. Call: 9901778787

Majestic And Around

PARK WEST adjoining ETA Mall Tower 10 Oak 30th Level 2 Bedroom 1300 sqft N/E corner apartment for sale. Contact: 7975201911.

Out-Station



Basavanagudi

2BHK FLAT +1 Room, Carpet Area 1000 sqft, 1.3Cr. 1 Carparking, Bull Temple Road, Bangalore. Contact: 9663890570.

Devanahalli

2 BHK flat for sale in Brigade orchards juniper, B block, 2nd floor, 1241 sqft, semi furnished, premium parking in basement. Contact- 9113278432

General

South

AVAILABLE/ WANTED 30x40 30x50,40x60,80x50- Residential Commercial Sites PG-Buildings Basavanagudi Jayanagar J.P.Nagar Chamarajpet Girinagar Hanumanthnagar Kanakapura/ Bannnnarghatta Road For RENT/LEASE/Sale 2-3-4-5 BHK Houses/Flats/ Office Space/Godown Spaces Call-9900399006

House

R T Nagar

RT.NAGAR SALE NORTH FACING 30x40 with Duplex House Beautiful Location Behind BDA Complex Rs.32000 Negotiable SHIVU: 9880004149

Basaweshwaranagar

TWO FLOOR HOUSE WITH BANK LOAN FOR INVESTMENT Or STAY Rs. 1CR 82 LAKHS: 9019394110

Jayanagar

FOR SALE Available JAYANAGAR 2nd BLOCK 40x80 East Site 60ft Road 6 BHK Duplex House SHIVAS REALTY- 9341248044/ 9900123798

Banashankari

BDA NORTH/EAST Corner Site Banashankari 6th Stage 2nd`Block 850`sft New`1+3 BHK Triplex 1.80cr. Negotiable 8618421606

Vishweshwariah Layout

SALE BDA 30x40 N/F INDIPENDENT 6 BHK TRIPLEX HOUSE 5000 Sft G+4 Sir.M.V LAYOUT 8TH BLOCK: 7760623953

Sites

Sahakarnagar

SAHAKARANAGAR 1620 sft Site North West Corner Top Location For Sale Contact: 9738111222 7829203369

Banashankari

BDA SITES BANASHANKARI 6TH STAGE 10th Block-30x40 N/F 11th Block-20x30 W/F 6th Block-20x30 E/F Contact Owner: 9343668888

BANASHANKARI 6TH Stage, 40x60, 60' Road. 20x30,30x40,North Near 100' Road .RV College :9916817739

Electronic City

"ELECTRONIC-CITY 30X40 DC.conversion Gated Community 38sites Sale-total 1.5acres with-Basic Amenities,Bank Loan Available,near VIBGYOR School, 1.75kms from Hosa Road, Metro Station. 9108283841/ 9448670671"

Jakkur

GKVK LAYOUT JAKUR HEBBAL 30X40 SITE For Sale 50 Feet Road Excellent Location, 9341260828 7829203369

Rajarajeshwari Nagar

40X60 'A'KHATA East Facing Site for Sale attached to BEML 3rd Stage RajarajeshwariNagar. 9448288522

Arkavathi Layout

ARKAVATHI LAYOUT 2 block sampigehalli 30x30 Corner north west, Genuine Buyers Call: USR- 7019770736/ 8951614989.

Tumkur Road

SALE, SITE #555, BDA Approved W/F, 40X60 Prime Location, HMT Layout, Nelagadaranahalli Nagasandra, Bangalore-73 Rate: 15000/- sqft Negotiable. Contact OWNER 9448483407

Vishweshwariah Layout

"20X30, 30X40, NF, WF BDA NOC, DC.Conversion 'A'Katha Sites for sale Vishveshwaraiah 1st Block. 9964583909"

Ramamurthy Nagar

SITE 44*80 East facing, Laxmi Tent Road, Ramamurthynagar, Bangalore. Sft Rs.9000.00, Negotiable. Brokers Excuse. 9342624288/ 9341064007. Bank loan available.

Villas/Bunglows

Thanisandra

SOBHA CITY.5BHK vastu compliant furnished villa.for price 9901587535/9341846801

Industrial & Factory

Jigani

"JIGANI INDUSTRIAL Area Industrial plots 5acre & 4acre and 6000.Sq.ft, for-sale full cheque payment, Genuine buyers Contact: 9845286505"

Multiple Locations

ANJANAPURA- ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

Agricultural Land

Yelahanka

BUYING CLEAN, compounded Agricultural or Converted land. Fast closure, full payment. 1-5,Acres.MVIT College road, Chapparakallu rd, Tharahunise Village area only. Call/WhatsApp 9972247220.



REAL ESTATE BUYING

Sites

Banashankari

BDA SITES Wanted Banashankari 6th Stage, Anjanapura, JPNagar 8th,9th Phase BCC Layout Immediate Settlement: 9845444588

Mysore

GSS:SITES @ Mysore Fully Completed DTCP 'A' Khata,RERA, 90% Bank Loan, Immediate Regn. off Hunsur Road, 5Minutes: NH,Yelwala 10Minutes: Ring Road, Infosys, Vijayanagar, 15Minutes: Palace/ Railway Station. www.gssprojects.in 9845287802/ 8050001571.

WANTED BDA Site's BSK 6th stage, Anjanpura, JP Nagar 8th and 9th Phase, Vishweshwaraiah layout, Kempegowda, Arkavathy 20x30, 30x40, 40x60, 50x80. NRI buyers registration within 15 days. Contact Surya Properties:- 9880659939/ 9916759939

Mandya

40X60 NORTH Mandya MUDA Site Sale Vivekandand A Block Nagamangala Road @ 3500/- Negotiable: 9731652042

Anjanapura

WANTED BDA sites Anjanapura, Banshabkari 6th stage, Vishweshwaraiah Layout, JPNagar 8 and 9th phase and any BDA katha & Mysore MUDA sites any measurement, Immediate settlement Genuine sellers, Contact: 9902038118; 9449060605; 7338328728.

Nagarabhavi

SITES FOR SALE COMMERCIAL AND RESIDENTIAL SITES 0.5 k.m. from Ambedkar Institute of Technology, Adjacent to NGEF Layout, MALLATAHALLI, NAAGARABHAVI, CLEAR TITLES, Rs. 7750/- onwards, AGENTS WELCOME. Contact: 9880236074

Vishweshwariah Layout

"BUYING/ SELLING" 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

RENTAL PROPERTIES

Accommodation Available

Commercial

"OFFICE SPACE for Rent- 500 Sq.ft, 1st Floor, 24th cross, Kumaraswamy Layout, Bangalore. Call: 9449835750"

600SFT CARPET area GF. available for rent near msramiah hospital for office, stocking 9845164591

House

FOR RENT: EAST Facing 3 BHK House, 2nd Floor in 1st Block Jayanagar. Vasthu Compliant Call: 9742344983/ 9886273736.

Flats

SESHADRIPURAM 2 BHK, car parking, Lift, Security, 24 hr water, Vastu, excellent ventilation. 9663587845

Industrial And Factory

RENT, PEENYA 2nd Stage, Industrial Shed, 12400 sqft builtup, 65 HP power. Contact: 9448654450, 9019526108

AVAILABLE INDUSTRIAL Shed for Rent 95000 sqft at Soukya Road, Whitefield. Commercial 1750sqft x3 Floors, K.R.Road, Banashankari. Contact: 9341234288/ 9663224953/ 9845417487.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

HEAT PROOFING CUM - WATER PROOFING SPECIALISTS. Since 1979 Residential / Industrial / Commercial. ANY ROOF. RCC / ASBESTOS/ SURKI/ CEMENT/ TILES/ METAL. Rate: Rs. 25/- per Sft + GST. Guarantee 2 yrs. Agents Welcome. Good Commission. Ph. 9886053425

JOB OPPORTUNITIES

Drivers

REQUIRED MALE Tata Ace Vehicle Driver And Store Incharge for Swathik Airconditioners Jayanagar Appointment: 9686700081/ 9663668811

Accounts & Finance

WANTED SENIOR ACCOUNTANT with minimum 15years experience preferably Construction Salary Rs.40,000/- SRS Engineers Pvt.Ltd.#446, 44th,Cross, Jayanagar 8th Block, Bangalore- 560070. Phone: 080- 26652223,Email: srsharma_engineers @yahoo.co.in

Engg/ Production Technical

SITE SUPERVISORS required at Peenya Candidates Should be (Diploma in Civil) Minimum Experience 3 Yrs. Contact: 9632579017

General

BHUMIKA BUILDERS requires experienced SITE SUPERVISOR Call : 9480316868

MALE OFFICE Asst Bcom/ Diploma computer or well-versed in computer operating Balija Sangha near Attiguppe metro. Contact 9448476465

Marketing & Sales

REQUIRED SALES Executive for reputed electric vehicle showroom in Jayanagar. Attractive salary, incentive and TA/ DA. Call 9164705777.

WEEKEND CORNER



Manager

WANTED OPERATIONS MANAGER
(Ex-servicemen can apply)
For Maintainance, Safety Implementation, Monitoring and Conflict Management of Personnel.
Apply to cbbjcmtnc@gmail.com before 26.10.2023
Mobile No- 8951556740

Teachers/ Professors

St. Benedict's Academy Nursing College
Asirvanam, Anchepalya, Kengeri, Mysore Road, Bangalore-74
Requires Trained
NURSING TUTORS
M.Sc in Pediatric Nursing
B.Sc Nursing Tutors
Call: 9886812398
Mail your resume to: jeromeosb@gmail.com

IMPACT COLLEGE of Engineering and Applied Sciences invites applications from candidates eligible for the following positions for BE-ECE (updated in emerging areas). 1.Professor, 2.Associate Professor 3.Assistant Professor, 4.Lab Instructors/ Foreman/ Assistants Walk-in between 10:00 am to 03:00 pm to IMPACT Campus, Kodigehalli, Sahakarnagar, Bangalore-560092. 080-23334101. [AICTE rules apply for eligibility and compensation]'

Wanted

WANTED SITE ENGINEER with 3yrs. Exp.
ACHAL DEVELOPERS
7996639393

Walk-in

B.SC.(AGRI/ HORTI) Graduates required for Landscape works and garden maintenance. Fresh graduates may also apply. Send resume to sigasmail@gmail.com

Part-Time Jobs

TOP MNC COMPANY Licensed By Central Govt. Retired/ VRS Persons 2nd Career Opportunity Age above 45 Years 35K to 40K: 7019215243/ 9886641282

AUTOMOTIVE

Four Wheelers Selling

Toyota

NEED SALVAGE Quotation of vehicle No.KA-08 M-4396 Acc Damage Vehicle-Toyota Innova, 2015, (Without R.C) NIC Claim. Contact- 9845002975.

BUSINESS

Business to Business

Finance

WANTED: FINANCE/ LOAN/ MORTGAGE ON 2 FLOOR HOUSE A KATHA NEAR BASAVESHWARANAGAR CALL: 9008330487

Business Offers

General

WHEN YOUR family is not interested in your business, Why chasing money and getting stressed? For Sale/Takeover or to find partners to run your Business. Call Arun 9845077299.

MATRIMONIAL

Brides Wanted

Hindu

HIGH PROFILE Working Management Specialist (70+) own bungalow/ cars at Bangalore. Wanted a middle aged lady partner as companian (Reddy/ Naidu/ Raju/ Gowda prefered). Dr. Swamy:- 9342247637.

Kannada

HINDU BOY 32 Years /Only son/ Moderate Family /Doctor /Divorced/ Bangalore settled is Looking for a Suitable match/ Caste no bar (080-69072058)

Muslim

SUNNI MUSLIM Bangalore Based Affluent Family is Looking for an Alliance for their 1995 Born Son Handling Family Business. Contact (080-69103140)

Telugu

BRIDE FROM South India for Telugu Boy of affluent family Bangalore, 32 5'7' posted in USA (2.5 CR LPA). (080-69103116)

Grooms Wanted

Christian

GROOM WANTED
Beautiful Anglo Indian Catholic Girl 22 Years Old. Born in Australia Looking for alliance from suitable good Christian Boy 23 to 30 year old. Must come from a God fearing good christain family and prepared to migrate to Australia. Apply with Biodate & Photo.
Whatsapp: +61 492 807 411

Hindu

WANTED GROOM (South Indian) for a Lady Entrepreneur 40+ living in Bangalore with house/ car/ grownup child- Divorcee. Contact:- Father:- Dr. Swamy:- 9342247637.

Muslim

DUBAI BASED Sunni Muslim Family is Seeking for a UK Based Boy (Any Professional or Businessman) for their 1997 Born Daughter (MBBS). Contact (080-69072053)

PERSONAL

Lost

Lost of Document
I SUDHA RANI S.D R/a Anand Residency, 18th Cross, Muthyalanagar, B'lore-54, have lost the original Katha for the site **No-1302**, Katha No - **075351** while shifting the house.
Finders please contact
9686766335
or inform nearby police station

I, NARESH Kashyap, Secretary of St. Stephen College of Education (B.Ed), residing at No. 9/2, State Bank of India, Behind India Garage, Bengaluru- 560001, have lost 1. NCTE Copy 2. GOK Order Copy 3. Bangalore University Affliation Copy 4. Building Plan Copy 5. Society Registration Certificate 6. Society PAN Card 7. Bangalore University Correspondent Documents 8. NCET Correspondent Documents while in transit. Finders please contact: 9845069056

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru



ನವವರ್ಣ


ಉಷಾ ಮತ್ತು ಸ್ನೇಹಿತೆಯರು, ಡಿಐಟಿಇ, ಬೆಂಗಳೂರು


ಬಿಷಪ್ ಕಾಟನ್ ವುಮೆನ್ಸ್ ಕ್ರಿಶ್ಚಿಯನ್ ಕಾಲೇಜಿನ ಸಿಬ್ಬಂದಿ


ಗೀತಾ ಮತ್ತು ಗೆಳತಿಯರು, ನಾಗರಬಾವಿ


ಪುಷ್ಪ ಶರಣ್ಯ ಮತ್ತು ಸಂಗಡಿಗರು, ಜೆ.ಪಿ ನಗರ, ಬೆಂಗಳೂರು


ಕ್ವೀನ್ ಬೀಸ್ ತಂಡ, ಜಯನಗರ


ವೈಶಾಲಿ ಮತ್ತು ಸ್ನೇಹಿತೆಯರು,
ಬಸವೇಶ್ವರ ನಗರ


ವಾಸವಿ ವನಿತಾ ಸಂಘ, ರಾಮನಗರ


ಶ್ರೀನಿಧಿ ವಿದ್ಯಾಸಂಸ್ಥೆ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ, ಶ್ರೀನಗರ, ಬೆಂಗಳೂರು


ಐಟಿ ವಿಭಾಗದ ಸಿಬ್ಬಂದಿ, ಬೆಸ್ಕಾಂ,
ಕೆ.ಆರ್. ವೃತ್ತ, ಬೆಂಗಳೂರು



ಡಾ. ಅನಿತಾ ಮತ್ತು ಸ್ನೇಹಿತೆಯರು,
ಹೊಸಕೋಟೆ


ರಾಶಿ ಗೇಟ್‌ವೇ
ಗೆಳತಿಯರು, ನೆಲಮಂಗಲ


ರಾಧಾ ಮತ್ತು ಸಂಗಡಿಗರು, ಬೆಂಗಳೂರು


ಭುವನೇಶ್ವರಿ ಮತ್ತು ಸಹೋದ್ಯೋಗಿಗಳು, ವೀಡಿಯಾ ಪೂರ್ಣಪ್ರಜ್ಞ ಶಾಲೆ, ನಾಗಸಂದ್ರ, ಬೆಂಗಳೂರು


ತರಳಬಾಳು ಎನ್‌ಕ್ಲೇವ್‌ನ ಸಂಗಡಿಗರು, ಯಲಹಂಕ


ಸಹನಾ, ಅನಿತಾ ಮತ್ತು ಸ್ನೇಹಿತೆಯರು, ಆನೇಕಲ್


ಭುವನೇಶ್ವರಿ ಮಹಿಳಾ ಸಮಾಜ, ಕನಕ ಬಡಾವಣೆ, ಬೆಂಗಳೂರು


ವಸುಮತಿ ಮತ್ತು ಗೆಳತಿಯರು, ಕಣ್ವ ಡಯಾಗ್ನೋಸ್ಟಿಕ್ಸ್
ಸೆಂಟರ್, ನಾಗರಬಾವಿ, ಬೆಂಗಳೂರು


ಪ್ರತಿಭಾ ಮತ್ತು ಸಹೋದ್ಯೋಗಿಗಳು, ಬೈರಸಂದ್ರ, ಬೆಂಗಳೂರು


ಶ್ರೀ ಅಂಕಿಣಿ ಮಹಿಳಾ ಸಂಘಟನೆಯ ಸದಸ್ಯೆಯರು, ಬೆಂಗಳೂರು


ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಮುದ್ರಣಾಲಯ ಸಿಬ್ಬಂದಿ, ಬೆಂಗಳೂರು


ಜಿಲ್ಲಾ ಪಂಚಾಯಿತಿ ಸಿಬ್ಬಂದಿ, ರಾಮನಗರ


ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಿಬ್ಬಂದಿ, ಹೊಸಕೋಟೆ


ಸೌಂದರ್ಯ ಲಹರಿ ಸಮೃದ್ಧಿ ತಂಡ, ಸಹಕಾರನಗರ, ಬೆಂಗಳೂರು


ಲೀಲಾವತಿ ಮತ್ತು ಗೆಳತಿಯರು, ಇಂಡಸ್ಟ್ರಿಯಲ್ ಟ್ರೈನಿಂಗ್ ಆ್ಯಂಡ್
ಎಂಪ್ಲಾಯ್‌ಮೆಂಟ್ ಡಿಪಾರ್ಟ್‌ಮೆಂಟ್


ಸುಜಾತಾ ಮತ್ತು ಸ್ನೇಹಿತೆಯರು, ಕಗ್ಗದಾಸಪುರ ಮುಖ್ಯರಸ್ತೆ, ಬೆಂಗಳೂರು


ಸಂಧ್ಯಾ, ಕೆಂಗೇರಿ,
ಬೆಂಗಳೂರು


ನವರಸ ನಟನಾ ಅಕಾಡೆಮಿ,
ಸದಾಶಿವ ನಗರ


ಯೂನಿವರ್ಸಲ್ ಪಬ್ಲಿಕ್ ಸ್ಕೂಲ್, ರಾಮನಗರ ಟೌನ್


ಸುಮಾ ಮತ್ತು ಗೆಳತಿಯರು, ಪೀಣ್ಯ ದಾಸರಹಳ್ಳಿ, ಬೆಂಗಳೂರು


ಜ್ಯೋತಿ ಮತ್ತು ಸಂಗಡಿಗರು, ಉತ್ತರಹಳ್ಳಿ

ಐಟಿಎಫ್ ಟೂರ್ನಿ: ಪುರುಷರ ಡಬಲ್ಸ್‌ನಲ್ಲಿ ಪ್ರಜ್ವಲ್–ನಿತಿನ್ ಜೋಡಿಗೆ ಪ್ರಶಸ್ತಿ

ಫೈನಲ್‌ಗೆ ರಾಮ್– ದಿಗ್ವಿಜಯ್

• ಬಿ.ಜೆ.ಧನ್ಯಪ್ರಸಾದ್



ಐಟಿಎಫ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ (ಎಡದಿಂದ) ನಿತಿನ್ ಕುಮಾರ್ ಸಿನ್ಹಾ ಮತ್ತು ಎಸ್‌.ಡಿ.ಪ್ರಜ್ವಲ್ ದೇವ್ ಹಾಗೂ ರನ್ನರ್ ಅಪ್ ಪಡೆದ ಸಾಯಿ ಕಾರ್ತಿಕ್ ರೆಡ್ಡಿ ಮತ್ತು ಮನೀಶ್ ಸುರೇಶ್‌ಕುಮಾರ್ –ಪ್ರಜಾವಾಣಿ ಚಿತ್ರ/ ಬಿ.ಎಂ.ಕೇದಾರನಾಥ

ಧಾರವಾಡ: ನಿರೀಕ್ಷೆಯಂತೆ ತೀವ್ರ ಹೋರಾಟ ಕಂಡುಬಂದ ಸೆಮಿಫೈನಲ್ ಪಂದ್ಯಗಳಲ್ಲಿ ಅಂತರರಾಷ್ಟ್ರೀಯ ಆಟಗಾರ ರಾಮಕುಮಾರ್ ರಾಮನಾಥನ್ ಮತ್ತು ಮೂರನೇ ಶ್ರೇಯಾಂಕದ ದಿಗ್ವಿಜಯ ಪ್ರತಾಪ್ ಸಿಂಗ್ ಅವರು ತಮ್ಮ ವಿದೇಶಿ ಎದುರಾಳಿಗಳನ್ನು ಸೋಲಿಸಿ ಐಟಿಎಫ್ ಟೂರ್ನಿಯ ಸಿಂಗಲ್ಸ್ ಫೈನಲ್ ತಲುಪಿದರು. ಇದರೊಂದಿಗೆ ಪ್ರಶಸ್ತಿ ಭಾರತೀಯ ಆಟಗಾರರ ಪಾಲಾಗುವುದು ಖಚಿತವಾಯಿತು.

ಪುರುಷರ ಡಬಲ್ಸ್‌ನಲ್ಲಿ ಮೂರನೇ ಶ್ರೇಯಾಂಕದ ಎಸ್‌.ಡಿ. ಪ್ರಜ್ವಲ್ ದೇವ್ ಮತ್ತು ನಿತಿನ್‌ಕುಮಾರ್ ಸಿನ್ಹಾ ಜೋಡಿ ಪ್ರಶಸ್ತಿ ಗೆದ್ದುಕೊಂಡಿತು. ಈ ಜೋಡಿ 6-4, 6-3 ರಿಂದ ಶ್ರೇಯಾಂಕರಹಿತ ಜೋಡಿಯಾದ ಸಾಯಿ ಕಾರ್ತಿಕ್ ರೆಡ್ಡಿ ಗಂಟಾ–ಮನೀಶ್ ಸುರೇಶ್ ಕುಮಾರ್ ಜೋಡಿಯನ್ನು ಸೋಲಿಸಿತು. ವಿಜೇತ ಜೋಡಿ ₹1,25,000 ಬಹುಮಾನ ಪಡೆದರೆ, ರನ್ನರ್ ಅಪ್ ಜೋಡಿ ₹75,000 ಬಹುಮಾನ ಪಡೆಯಿತು.

ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ರಾಮಕುಮಾರ್ ರಾಮನಾಥನ್ ಹಿನ್ನಡೆಯಿಂದ ಅಮೋಘವಾಗಿ ಚೇತರಿಸಿ 3-6, 6-3, 7-6 (2) ರಿಂದ ಅಗ್ರ ಶ್ರೇಯಾಂಕದ ನಿಕ್ ಚಾಪೆಲ್ ಅವರನ್ನು ಸೋಲಿಸಿದರು. ಇನ್ನೊಂದು ಪಂದ್ಯದಲ್ಲಿ ದಿಗ್ವಿಜಯ ಪ್ರತಾಪ್ ಸಿಂಗ್ ಒಂದು ಸೆಟ್ ಕಳೆದುಕೊಂಡರೂ ಅಂತಿಮವಾಗಿ ಎರಡನೇ ಶ್ರೇಯಾಂಕದ ಬೊಬ್ರೊವ್ ಬೊಗ್ದಾನ್ (ರಷ್ಯಾ) ಅವರನ್ನು 6-4, 6-7 (2), 6-4 ರಿಂದ ಸೋಲಿಸಿದರು. ಫೈನಲ್ ಪಂದ್ಯ ಭಾನುವಾರ ಬೆಳಿಗ್ಗೆ 10 ಗಂಟೆಗೆ ಆರಂಭವಾಗಲಿದೆ.

ಧಾರವಾಡ ಜಿಲ್ಲಾ ಲಾನ್ ಟೆನಿಸ್ ಸಂಸ್ಥೆ ಕೋರ್ಟ್‌ನಲ್ಲಿ ಸೇರಿದ್ದ ಪ್ರೇಕ್ಷಕರಿಗೆ ರಾಮಕುಮಾರ್–ಚಾಪೆಲ್ ಸೆಣಸಾಟ ನಿರಾಸೆ ಮೂಡಿಸಲಿಲ್ಲ. ನಿಕ್ ಚಾಪೆಲ್, ಎದುರಾಳಿಯ ಮೂರನೇ ಗೇಮ್ ಬ್ರೇಕ್ ಮಾಡಿ ಮೊದಲ ಸೆಟ್‌ನಲ್ಲಿ 4-1 ಮುನ್ನಡೆ ಸಾಧಿಸಿದರಲ್ಲದೇ ಅಂತಿಮವಾಗಿ 6-3ರಲ್ಲಿ ಸೆಟ್ ಗೆದ್ದರು. ಪ್ರಬಲ ಸರ್ವ್ ಜೊತೆಗೆ ಬೇಸ್‌ಲೈನ್‌ನಲ್ಲಿ ಚುರುಕಿನಿಂದ ಓಡಾಡಿದ ಅಮೆರಿಕದ ಆಟಗಾರನ ಎದುರು ಭಾರತದ ಡೇವಿಸ್ ಕಪ್ ಆಟಗಾರ ಹಿನ್ನಡೆ ಕಂಡರು. ಆದರೆ ಎರಡನೇ ಸೆಟ್‌ನಲ್ಲಿ 28 ವರ್ಷದ ರಾಮನಾಥನ್, ಪ್ರೇಕ್ಷಕರ ಬೆಂಬಲದ ನಡುವೆ ಪ್ರತಿಹೋರಾಟ ಸಂಘಟಿಸಿದರು. ನಾಲ್ಕನೇ ಗೇಮ್‌ನಲ್ಲಿ ದೊರೆತ ಬ್ರೇಕ್ ಅವರಿಗೆ ಸೆಟ್ ಗೆಲ್ಲಲು ನೆರವಾಯಿತು.

ಮೂರನೇ ಸೆಟ್‌ನ ಒಂದು ಹಂತದಲ್ಲಿ ರಾಮಕುಮಾರ್ ಸೋಲಿನತ್ತ ಸಾಗಿದ್ದರು. ಆದರೆ 2-5 ಹಿನ್ನಡೆಯಿಂದ ಅವರು ಚೇತರಿಸಿಕೊಂಡ ರೀತಿ ರೋಚಕವಾಗಿತ್ತು. ಈ ಸೆಟ್ ಟೈಬ್ರೇಕರ್‌ಗೆ ಹೋಗಿ ಅಂತಿಮವಾಗಿ ರಾಮಕುಮಾರ್ 7-2ರಲ್ಲಿ ಗೆದ್ದರು. ಇತ್ತೀಚೆಗಷ್ಟೇ ಚೀನಾದ ಹಾಂಗ್‌ಝೌನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದ ಡಬಲ್ಸ್‌ನಲ್ಲಿ ಅವರು ಚಿನ್ನ ಗೆದ್ದಿದ್ದ ರಾಮನಾಥನ್, ಈ ಪಂದ್ಯದ ಕೊನೆಯ ಕ್ಷಣಗಳಲ್ಲಿ ಎದುರಾಳಿಯ ಹೊಡೆತ ಹೊರಹೋಗುತ್ತಿದ್ದಂತೆ, ಪ್ರೇಕ್ಷಕರತ್ತ ತಿರುಗಿ ಬೆಂಬಲಕ್ಕೆ ಧನ್ಯವಾದ ಸೂಚಿಸಿದರು.

ಹಾಕಿ: ಒಲಿಂಪಿಕ್ಸ್ ಅರ್ಹತಾ ಟೂರ್ನಿ ರಾಂಚಿಗೆ ಸ್ಥಳಾಂತರ

ನವದೆಹಲಿ (ಪಿಟಿಐ): ಭಾರತ ಮಹಿಳೆಯರ ಹಾಕಿ ತಂಡವು ಏಷ್ಯನ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದುಕೊಂಡರೂ 2023ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ನೇರ ಅರ್ಹತೆ ಪಡೆಯಲು ವಿಫಲವಾಗಿತ್ತು. ಇದೀಗ ಭಾರತ ತಂಡಕ್ಕೆ ಮತ್ತೊಂದು ಅವಕಾಶ ಸ್ವದೇಶದಲ್ಲೇ ಲಭಿಸಿದೆ.

ಅಂತರರಾಷ್ಟ್ರೀಯ ಹಾಕಿ ಫೆಡರೇಶನ್ (ಎಫ್‌ಐಎಚ್) ಒಲಿಂಪಿಕ್ಸ್ ಅರ್ಹತಾ ಪಂದ್ಯಗಳನ್ನು ಚೀನಾದ ಚಾಂಗ್‌ಝೌನಿಂದ ರಾಂಚಿಗೆ ಸ್ಥಳಾಂತರಿಸಿದೆ. ಮುಂಬರುವ ಜನವರಿ 13ರಿಂದ 19ರವರೆಗೆ ಜಾರ್ಖಂಡ್‌ನ ರಾಂಚಿಯ ಮರಂಗ್ ಗೊಮ್ಕೆ ಜೈಪಾಲ್ ಸಿಂಗ್ ಆಸ್ಟ್ರೋ ಟರ್ಫ್ ಹಾಕಿ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ.

ಭಾರತ ಸೇರಿದಂತೆ ಒಟ್ಟು ಎಂಟು ದೇಶಗಳು ಈ ಟೂರ್ನಿಯಲ್ಲಿ ಪಾಲ್ಗೊಳ್ಳಲಿವೆ. ಅಗ್ರ ಮೂರು ಸ್ಥಾನಗಳನ್ನು ಪಡೆಯುವ ತಂಡಗಳು ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲಿವೆ.

ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ತಂಡವು ಸೆಮಿಫೈನಲ್‌ನಲ್ಲಿ 0-4ರಿಂದ ಚೀನಾ ವಿರುದ್ಧ ಮುಗ್ಗರಿಸಿತ್ತು. ಕಂಚಿನ ಪದಕಕ್ಕೆ ನಡೆದ ಪಂದ್ಯದಲ್ಲಿ 2-1ರಿಂದ ಜಪಾನ್ ತಂಡವನ್ನು ಮಣಿಸಿತ್ತು.

ಭಾರತ ತಂಡವು ರಾಂಚಿಯಲ್ಲಿ ಇದೇ 27ರಿಂದ ನ. 5ರವರೆಗೆ ಮಹಿಳಾ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯನ್ನು ಆಡಲಿದೆ. ಅಲ್ಲಿ ಜಪಾನ್, ಚೀನಾ, ಕೊರಿಯಾ, ಮಲೇಷ್ಯಾ ಮತ್ತು ಥಾಯ್ಲೆಂಡ್ ತಂಡಗಳನ್ನು ಎದುರಿಸಲಿದೆ.

ಭಾರತಕ್ಕೆ ಪದಕಗಳ ಶತಕದ ನಿರೀಕ್ಷೆ

ಹಾಂಗ್‌ಝೌ: ಪ್ಯಾರಾ ಏಷ್ಯನ್ ಕ್ರೀಡಾಕೂಟ ಇಂದಿನಿಂದ

ಹಾಂಗ್‌ಝೌ (ಚೀನಾ), (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ದಾಖಲೆಯ 107 ಪದಕಗಳನ್ನು ಗೆದ್ದು ಬೀಗಿದ್ದ ಭಾರತವು, ಅ. 22ರಿಂದ (ಭಾನುವಾರ) 28ರವರೆಗೆ ಇಲ್ಲಿ ನಡೆಯುವ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲೂ ದಾಖಲೆ ಸಂಖ್ಯೆಯಲ್ಲಿ ಪದಕ ಬಾಚಿಕೊಳ್ಳುವ ವಿಶ್ವಾಸದಲ್ಲಿದೆ.

ಪ್ಯಾರಾ ಶೂಟರ್ ಅವನಿ ಲೆಖರಾ ಮತ್ತು ಪ್ಯಾರಾ ಜಾವೆಲಿನ್ ಥ್ರೋಪಟು ಸುಮಿತ್ ಅಂತಿಲ್ ಅವರು ಭಾರತ ತಂಡವನ್ನು ಮುನ್ನಡೆಸಲಿದ್ದಾರೆ. 2021ರ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಅವನಿ ಚಿನ್ನ ಮತ್ತು ಕಂಚಿನ ಪದಕ ಗೆದ್ದಿದ್ದರೆ, ಸುಮಿತ್ ಬಂಗಾರದ ಸಾಧನೆ ಮಾಡಿದ್ದರು.

ಕಳೆದ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿರುವ ಶೂಟರ್ ಮನೀಶ್ ನರ್ವಾಲ್ ಹಾಗೂ ಬ್ಯಾಡ್ಮಿಂಟನ್‌ಪಟುಗಳಾದ ಪ್ರಮೋದ್ ಭಗತ್ ಮತ್ತು ಕೃಷ್ಣ ನಗರ್ ಸೇರಿದಂತೆ 313 ಅಥ್ಲೀಟ್‌ಗಳು ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ.

ಒಟ್ಟು 22 ಕ್ರೀಡೆಗಳಲ್ಲಿ 17ರಲ್ಲಿ ಭಾರತದ ಸ್ಪರ್ಧಿಗಳು ಪಾಲ್ಗೊಳ್ಳುವರು. ರೋಯಿಂಗ್, ಕೆನೋಯಿಂಗ್, ಲಾನ್‌ಬೌಲ್, ಟೇಕ್ವಾಂಡೊ ಮತ್ತು ಅಂಧರ ಫುಟ್‌ಬಾಲ್ ಸ್ಪರ್ಧೆಗಳಲ್ಲಿ ಇದೇ ಮೊದಲ ಬಾರಿ ಭಾರತದ ಕ್ರೀಡಾಪಟುಗಳು ಸ್ಪರ್ಧಿಸಲಿದ್ದಾರೆ.

22 ಕ್ರೀಡೆಗಳ ವಿವಿಧ ವಿಭಾಗಗಳಲ್ಲಿ 566 ಚಿನ್ನದ ಪದಕಗಳಿಗೆ ನಡೆಯುವ ಸ್ಪರ್ಧೆಗಳಲ್ಲಿ 43 ದೇಶಗಳ 4,000ಕ್ಕೂ ಅಧಿಕ ಅಥ್ಲೀಟ್‌ಗಳು ಭಾಗವಹಿಸಲಿದ್ದಾರೆ. ಪ್ಯಾರಾ ಏಷ್ಯನ್ ಗೇಮ್ಸ್ 2022ರ ಅ.9ರಿಂದ 15ರವರೆಗೆ ನಡೆಯಬೇಕಿತ್ತು. ಕೋವಿಡ್–19 ಕಾರಣದಿಂದ ಒಂದು ವರ್ಷ ಮುಂದೂಡಲಾಯಿತು.

ಈವರೆಗೆ ನಡೆದ ಮೂರು ಆವೃತ್ತಿಗಳ ಪದಕ ಪಟ್ಟಿಯಲ್ಲಿ ಚೀನಾ ಅಗ್ರಸ್ಥಾನ ಕಾಯ್ದುಕೊಂಡಿದೆ. 2018ರ ಆವೃತ್ತಿಯಲ್ಲಿ 172 ಚಿನ್ನ, 88 ಬೆಳ್ಳಿ, 59 ಕಂಚು ಸೇರಿದಂತೆ 319 ಪದಕಗಳನ್ನು ಬಾಚಿಕೊಂಡಿತ್ತು. ಆತಿಥೇಯ ದೇಶವು ಈ ಬಾರಿಯೂ 439 ಕೀಡಾಪಟುಗಳನ್ನು ಕಣಕ್ಕೆ ಇಳಿಸಲಿದೆ.

ಮೊದಲ ಪ್ಯಾರಾ ಏಷ್ಯನ್ ಕ್ರೀಡಾಕೂಟ 2010ರಲ್ಲಿ ಚೀನಾದ ಗುವಾಂಗ್‌ಝೌನಲ್ಲಿ ನಡೆದಿತ್ತು. ಅಲ್ಲಿ ಭಾರತವು ಒಂದು ಚಿನ್ನ ಸೇರಿದಂತೆ 14 ಪದಕಗಳೊಂದಿಗೆ 15ನೇ ಸ್ಥಾನವನ್ನು ಗಳಿಸಿತ್ತು. 2014ರಲ್ಲೂ 15ನೇ ಸ್ಥಾನ ಪಡೆದಿತ್ತು. ಆದರೆ, 2018ರ ಆವೃತ್ತಿಯಲ್ಲಿ ಭಾರತವು 72 ಪದಕಗಳನ್ನು ಗೆದ್ದುಕೊಂಡು 9ನೇ ಸ್ಥಾನಕ್ಕೆ ಏರಿತ್ತು.

ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದ ಭಾರತದ 54 ಕ್ರೀಡಾಪಟುಗಳ ಪೈಕಿ 51 ಮಂದಿ ಹ್ಯಾಂಗ್‌ಝೌನಲ್ಲೂ ಸ್ಪರ್ಧಿಸುತ್ತಿದ್ದಾರೆ. ಈ ಬಾರಿ 100 ಪದಕಗಳ ಗಡಿ ಮುಟ್ಟುವ ನಿರೀಕ್ಷೆಯನ್ನು ಭಾರತ ಪ್ಯಾರಾಲಿಂಪಿಕ್ ಸಮಿತಿ ಹೊಂದಿದೆ.

ಕಳೆದ ಬಾರಿ ಅಥ್ಲೆಟಿಕ್ಸ್‌ನಲ್ಲಿ ಭಾರತವು 36 ಪದಕಗಳನ್ನು (7 ಚಿನ್ನ, 13 ಬೆಳ್ಳಿ, 16 ಕಂಚು) ಬಾಚಿಕೊಂಡಿತ್ತು. ಈ ಬಾರಿ ಅಥ್ಲೆಟಿಕ್ಸ್‌ನಲ್ಲಿ ಕನಿಷ್ಠ 45 ಪದಕಗಳ ನಿರೀಕ್ಷೆಯಿದೆ. ಶೂಟಿಂಗ್ ಮತ್ತು ಆರ್ಚರಿ ಸ್ಪರ್ಧೆಗಳಲ್ಲೂ ಭಾರತದ ಸ್ಪರ್ಧಿಗಳು ಉತ್ತಮ ಪ್ರದರ್ಶನ ತೋರುವ ವಿಶ್ವಾಸವಿದೆ.

'ಈ ಬಾರಿ ನಾವು 100 ಪದಕಗಳ ನಿರೀಕ್ಷೆಯಲ್ಲಿದ್ದೇವೆ' ಎಂದು ಭಾರತದ ಪ್ಯಾರಾಲಿಂಪಿಕ್ ಸಮಿತಿ ಪ್ರಧಾನ ಕಾರ್ಯದರ್ಶಿ ಗುರುಶರಣ್ ಸಿಂಗ್ ತಿಳಿಸಿದ್ದಾರೆ.

ಚೆಸ್ ಸ್ಪರ್ಧೆಯಲ್ಲಿ ಕರ್ನಾಟಕದ ಕಿಶನ್, ವೃತಿ

ಬೆಂಗಳೂರು: ಪ್ಯಾರಾ ಏಷ್ಯನ್ ಕ್ರೀಡಾಕೂಟದ ಚೆಸ್ ಸ್ಪರ್ಧೆಯಲ್ಲಿ ಶಿವಮೊಗ್ಗದ ನಳಂದಾ ಚೆಸ್ ಅಕಾಡೆಮಿಯ ಕಿಶನ್ ಗಂಗೊಳ್ಳಿ ಮತ್ತು ವೃತಿ ಜೈನ್ ಅವರು ಭಾರತವನ್ನು ಪ್ರತಿನಿಧಿಸಲಿದ್ದಾರೆ. ಇದೇ ಕ್ರೀಡಾಕೂಟದಲ್ಲಿ ನಳಂದಾ ಚೆಸ್ ಅಕಾಡೆಮಿಯ ಎಂ. ಮಂಜುನಾಥ್ ಅವರು ತೀರ್ಪುಗಾರರಾಗಿ (ಆರ್ಬಿಟರ್) ಆಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪ್ಯಾರಾ ಏಷ್ಯನ್ ಕ್ರೀಡಾಕೂಟ ಭಾರತದ ಪದಕ ಸಾಧನೆ

ವರ್ಷ	ಚಿನ್ನ	ಬೆಳ್ಳಿ	ಕಂಚು	ಒಟ್ಟು ಪದಕ	ಸ್ಥಾನ
2010	1	4	9	14	15
2014	3	14	16	33	15
2018	15	24	33	72	9

ಡೆನ್ಮಾರ್ಕ್ ಓಪನ್: ಸೆಮಿಯಲ್ಲಿ ಮತ್ತೆ ಮುಗ್ಗರಿಸಿದ ಪಿ.ವಿ. ಸಿಂಧು



ಪಿ.ವಿ. ಸಿಂಧು

ಒಡೆನ್ಸ್, ಡೆನ್ಮಾರ್ಕ್ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಅವರು ಇಲ್ಲಿ ನಡೆದ ಡೆನ್ಮಾರ್ಕ್ ಓಪನ್ ಸೂಪರ್ 750 ಟೂರ್ನಿಯ ಸೆಮಿಫೈನಲ್‌ನಲ್ಲಿ ಸೋಲು ಅನುಭವಿಸಿದರು. ಮೂರು ಗೇಮ್‌ಗಳ ಹೋರಾಟದಲ್ಲಿ ಅವರು ಸ್ಪೇನ್‌ನ ಕರೋಲಿನಾ ಮರಿನ್ ಅವರಿಗೆ ಶರಣಾಗುವ ಮೊದಲು ಪೈಪೋಟಿ ನೀಡಿದರು.

ವಿಶ್ವದ 12ನೇ ಕ್ರಮಾಂಕದ ಸಿಂಧು ಶನಿವಾರ ನಡೆದ ಮಹಿಳೆಯರ ಸಿಂಗಲ್ಸ್‌ನ ನಾಲ್ಕರ ಘಟ್ಟದ ಪಂದ್ಯದಲ್ಲಿ 18-21, 21-19, 7-21 ರಿಂದ ಆರನೇ ಕ್ರಮಾಂಕದ ಕರೋಲಿನಾ ವಿರುದ್ಧ ಪರಾಭವಗೊಂಡರು. ಮೊದಲ ಗೇಮ್‌ನಲ್ಲಿ ಹಿನ್ನಡೆ ಅನುಭವಿಸಿದ್ದ ಸಿಂಧು ನಂತರ ಪುಟಿದೆದ್ದು ಎರಡನೇ ಗೇಮ್‌ನಲ್ಲಿ ಪಾರಮ್ಯ ಮೆರೆದರು. ಆದರೆ, ನಿರ್ಣಾಯಕ ಗೇಮ್‌ನಲ್ಲಿ ಬಿಗಿಹಿಡಿತ ಸಾಧಿಸಿದ ಕರೋಲಿನಾ ಫೈನಲ್‌ಗೆ ಲಗ್ಗೆಯಿಟ್ಟರು.

ಒಂದು ಗಂಟೆ 13 ನಿಮಿಷಗಳ ಕಾಲ ನಡೆದ ಪಂದ್ಯದ ವೇಳೆ ಉಭಯ ಆಟಗಾರರ ಮಧ್ಯೆ ಮಾತಿನ ಚಕಮಕಿ ನಡೆಯಿತು. ಹೀಗಾಗಿ, ಅಂಪೈರ್ ಇಬ್ಬರಿಗೂ ಹಳದಿ ಕಾರ್ಡ್ ತೋರಿಸಿ ಎಚ್ಚರಿಕೆ ನೀಡಿದರು.

2016ರ ರಿಯೊ ಒಲಿಂಪಿಕ್ಸ್ ಫೈನಲ್ ಮತ್ತು 2018ರ ವಿಶ್ವ ಚಾಂಪಿಯನ್‌ಷಿಪ್‌ನ ಪಂದ್ಯ ಸೇರಿದಂತೆ ಸಿಂಧು ಅವರಿಗೆ ಮರಿನ್ ವಿರುದ್ಧ ಇದು ಐದನೇ ಸೋಲಾಗಿದೆ.

ಸಿಂಧು ಕಳೆದ ವಾರ ನಡೆದಿದ್ದ ಆರ್ಕ್‌ಟಿಕ್ ಓಪನ್ ಟೂರ್ನಿಯಲ್ಲೂ ಸೆಮಿಫೈನಲ್‌ನಲ್ಲಿ ಮುಗ್ಗರಿಸಿದ್ದರು.

ಫಿಡೆ ರೇಟೆಡ್ ಚೆಸ್ ಟೂರ್ನಿ: ಲೋಕೇಶ್ ರನ್ನರ್ ಅಪ್

ಪ್ರಶಸ್ತಿ ಗೆದ್ದ ಕೊಡಗಿನ ಆಗಸ್ಟಿನ್

ಪ್ರಜಾವಾಣಿ ವಾರ್ತೆ



ಪ್ರಶಸ್ತಿಯೊಂದಿಗೆ ಆಗಸ್ಟಿನ್

ಮಂಗಳೂರು: ಕರ್ನಾಟಕದ ಎ.ಆಗಸ್ಟಿನ್, ಕುತೂಹಲಕರ ತಿರುವುಗಳನ್ನು ಕಂಡ ಫಿಡೆ ರೇಟೆಡ್ ಅಖಿಲ ಭಾರತ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಶನಿವಾರ ನಡೆದ 9ನೇ ಹಾಗೂ ಅಂತಿಮ ಸುತ್ತಿನಲ್ಲಿ ತಮಿಳುನಾಡಿನ ಇಂಟರ್‌ನ್ಯಾಷನಲ್ ಮಾಸ್ಟರ್ ರಾಮನಾಥನ್ ಬಾಲಸುಬ್ರಮಣ್ಯಂ ಅವರನ್ನು ಮಣಿಸುವ ಮೂಲಕ ಆಗಸ್ಟಿನ್ ಎಂಟು ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನ ಪಡೆದರು.

ದಕ್ಷಿಣ ಕನ್ನಡ ಜಿಲ್ಲಾ ಚೆಸ್ ಸಂಸ್ಥೆ, ನಗರದ ಪುರಭವನದಲ್ಲಿ ಆಯೋಜಿಸಿದ್ದ ಟೂರ್ನಿಯಲ್ಲಿ, ತಮಿಳುನಾಡಿನ ಲೋಕೇಶ್ ಎನ್., ಸ್ವರ್ಣಮಾಲಾ, ರಾಹುಲ್ ಕೆ., ಮಹಾರಾಷ್ಟ್ರದ ಇಂದ್ರಜೀತ್ ಮಹೀಂದ್ರಕರ್, ಆದಿತ್ಯ ಸಾವಳ್ಕರ್ ಮತ್ತು ಕರ್ನಾಟಕದ ಸುಶಾಂತ್ ವಾಮನ್ ಶೆಟ್ಟಿ ತಲಾ 7.5 ಪಾಯಿಂಟ್ ಗಳಿಸಿದರು.

ಉತ್ತಮ ಟೈ ಬ್ರೇಕರ್ ಆಧಾರದಲ್ಲಿ ಲೋಕೇಶ್ ಮತ್ತು ಇಂದ್ರಜೀತ್ ಮಹೀಂದ್ರಕರ್ ಕ್ರಮವಾಗಿ ರನ್ನರ್ ಅಪ್ ಮತ್ತು 3ನೇ ಸ್ಥಾನ ಗಳಿಸಿದರು. ಶುಕ್ರವಾರ ಎಂಟನೇ ಸುತ್ತಿನ ನಂತರ ಆಗಸ್ಟಿನ್, ರಾಮನಾಥನ್ ಮತ್ತು ಲೋಕೇಶ್ ಅಗ್ರಸ್ಥಾನದಲ್ಲಿದ್ದರು. ಹೀಗಾಗಿ ಕೊನೆಯ ದಿನದ ಪಂದ್ಯಗಳು ಕುತೂಹಲ ಕೆರಳಿಸಿದ್ದವು. ತಮಗಿಂತ ಹೆಚ್ಚು ರೇಟಿಂಗ್ ಹೊಂದಿರುವ ರಾಮನಾಥನ್ ವಿರುದ್ಧ ಜಯ ಸಾಧಿಸುವುದರೊಂದಿಗೆ ಆಗಸ್ಟಿನ್ ಹಾದಿ ಸುಗಮವಾಯಿತು. ರಾಮನಾಥನ್‌ಗೆ ಐದನೇ ಮತ್ತು ಆಗಸ್ಟಿನ್‌ಗೆ ಏಳನೇ ಶ್ರೇಯಾಂಕದ ಪಡೆದಿದ್ದರು.

ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರರಲ್ಲಿ ಒಬ್ಬರಾಗಿದ್ದ ಎರಡನೇ ಶ್ರೇಯಾಂಕದ ಲೋಕೇಶ್‌ಗೆ, ಅಗ್ರ ಶ್ರೇಯಾಂಕದ ಸ್ಥಳೀಯ ಆಟಗಾರ ಗಹನ್ ಎಂ.ಜಿ (7) ಎದುರಿನ ಪಂದ್ಯವನ್ನು ಡ್ರಾ ಮಾಡಿಕೊಳ್ಳಲಷ್ಟೇ ಸಾಧ್ಯವಾಯಿತು.

ಪ್ರಶಸ್ತಿ ಗೆದ್ದ ಆಗಸ್ಟಿನ್ ಟ್ರೋಫಿ ಜೊತೆಗೆ ₹ 50,000 ಬಹುಮಾನ ಪಡೆದರೆ, ರನ್ನರ್ ಅಪ್ ಲೋಕೇಶ್ ₹35,000, ಮಹೇಂದ್ರಕರ್ ₹25,000 ಬಹುಮಾನ ಪಡೆದರು. ಆರ್ಯ ಜಿ.ಮಲ್ಲರ್ (6 ಪಾಯಿಂಟ್ಸ್) ಉತ್ತಮ ಮಹಿಳಾ ಆಟಗಾರ್ತಿ ಪ್ರಶಸ್ತಿ ಪಡೆದರು.

ಏಷ್ಯನ್ ಶೂಟಿಂಗ್ ಕೂಟ ಇಂದಿನಿಂದ

ನವದೆಹಲಿ (ಪಿಟಿಐ): ದಕ್ಷಿಣ ಕೊರಿಯಾದ ಚಾಂಗ್ವೊನ್‌ನಲ್ಲಿ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್ ಭಾನುವಾರ ಆರಂಭವಾಗಲಿದ್ದು, ಭಾರತದ ಶೂಟರ್‌ಗಳಿಗೆ, ವಿಶೇಷವಾಗಿ ಪಿಸ್ತೂಲ್ ಶೂಟರ್‌ಗಳಿಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಕೋಟಾ ಪಡೆಯುವ ಸುವರ್ಣ ಅವಕಾಶ ಇದೆ.

ಇತ್ತೀಚೆಗೆ ಹಾಂಗ್‌ಝೌನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಶೂಟರ್‌ಗಳ ಪ್ರದರ್ಶನ ಗಮನ ಸೆಳೆದಿತ್ತು. ಈಗಾಗಲೇ ಭಾರತದ ಏಳು ಮಂದಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದಾರೆ. ಆದರೆ ಪಿಸ್ತೂಲ್ ವಿಭಾಗದಲ್ಲಿ ಯಾರಿಗೂ ಕೋಟಾ ದೊರಕಿಲ್ಲ. ಹೀಗಾಗಿ ಇಲ್ಲಿ ಮನು ಭಾಕರ್, ಇಶಾ ಸಿಂಗ್, ರಿದಮ್ ಸಂಗ್ವಾನ್, ಪಲಕ್, ಅನಿಶ್ ಭಾನಾವಾಲಾ, ವಿಜಯವೀರ್ ಸಿಧು ಮತ್ತು ಶಿವ ನರ್ವಾಲ್ ಅವರ ಮೇಲೆ ಹೆಚ್ಚಿನ ಗಮನ ಇದೆ.

12 ಸ್ಪರ್ಧೆಗಳಲ್ಲಿ ಒಟ್ಟು ಒಲಿಂಪಿಕ್ಸ್‌ನ 24 ಕೋಟಾಗಳನ್ನು ಪಡೆಯಲು ಇಲ್ಲಿ ಗುರಿಕಾರರಿಗೆ ಅವಕಾಶವಿದೆ.

ಬ್ಯಾಡ್ಮಿಂಟನ್: ಫೈನಲ್‌ಗೆ ತನ್ವಿ, ಆಕಾಶ್

ನವದೆಹಲಿ (ಪಿಟಿಐ): ಭಾರತದ ತನ್ವಿ ಶರ್ಮಾ ಮತ್ತು ಬೋರ್ನಿಲ್ ಆಕಾಶ್ ಚಂಗ್ಮಾಯಿ ಅವರು ಚೀನಾದ ಚೆಂಗ್ಡುವಿನಲ್ಲಿ ನಡೆಯುತ್ತಿರುವ ಬ್ಯಾಡ್ಮಿಂಟನ್ ಏಷ್ಯಾ 17 ಮತ್ತು 15 ವರ್ಷದೊಳಗಿನವರ ಟೂರ್ನಿಯ ಸಿಂಗಲ್ಸ್ ಫೈನಲ್ ಪ್ರವೇಶಿಸಿದರು.

ಬಾಲಕಿಯರ 17 ವರ್ಷದೊಳಗಿನವರ ವಿಭಾಗದ ಸೆಮಿಫೈನಲ್‌ನಲ್ಲಿ ತನ್ವಿ 21-19, 16-21, 21-11 ರಿಂದ ಎರಡನೇ ಶ್ರೇಯಾಂಕದ ಆಟಗಾರ್ತಿ ಥಾಯ್ಲೆಂಡ್‌ನ ಅನ್ಯಾಪತ್ ಫಿಚಿತ್‌ಪ್ರೀಚಸಕ್ ಅವರನ್ನು ಮಣಿಸಿದರು.

ಬಾಲಕರ 15 ವರ್ಷದೊಳಗಿನವರ ವಿಭಾಗದ ನಾಲ್ಕರಘಟ್ಟದ ಹಣಾಹಣಿಯಲ್ಲಿ ಆಕಾಶ್ 21-16, 21-12 ರಿಂದ ಭಾರತದವರೇ ಆದ ಜಗಶೇರ್ ಸಿಂಗ್ ಖನ್ನುರಾ ವಿರುದ್ಧ ಗೆದ್ದರು. ಸೋಲು ಅನುಭವಿಸಿದ ಜಗಶೇರ್ ಕಂಚು ಪಡೆದರು.

ಭಾನುವಾರ ಫೈನಲ್‌ನಲ್ಲಿ ತನ್ವಿ ಅವರು ಥಾಯ್ಲೆಂಡ್‌ನ ಯಾತವೀಮಿನ್ ಕೆತ್ಕ್ಲಿಯೆಂಗ್ ವಿರುದ್ಧ ಹಣಾಹಣಿ ನಡೆಸಲಿದ್ದರೆ, ಆಕಾಶ್ ಅವರು ಚೀನಾದ ಫಾನ್ ಹಾಂಗ್ ಕ್ಸುವಾನ್ ಅವರನ್ನು ಎದುರಿಸುವರು.

ಬ್ಯಾಡ್ಮಿಂಟನ್ ಏಷ್ಯಾ ಟೂರ್ನಿಯ ಬಾಲಕಿಯರ 17 ವರ್ಷದೊಳಗಿನವರ ವಿಭಾಗದ ಪ್ರಶಸ್ತಿ ಸುತ್ತು ತಲುಪಿದ ಭಾರತದ ಎರಡನೇ ಆಟಗಾರ್ತಿ ಎಂಬ ಗೌರವಕ್ಕೆ ತನ್ವಿ ಪಾತ್ರರಾದರು. ಕಳೆದ ವರ್ಷ ಉನ್ನತಿ ಹೂಡಾ ಫೈನಲ್ ಪ್ರವೇಶಿಸಿ, ಬೆಳ್ಳಿ ಜಯಿಸಿದ್ದರು.

ಕುಸ್ತಿ: ಸುನಿಲ್ 'ದಸರಾ ಕಂಠೀರವ'

ಪ್ರಜಾವಾಣಿ ವಾರ್ತೆ



ಮೈಸೂರು ದಸರಾ ಕುಸ್ತಿ ಟೂರ್ನಿ ವಿಜೇತರು (ಎಡದಿಂದ): ಸುನಿಲ್ ಪಡುತಾರೆ (ದಸರಾ ಕಂಠೀರವ), ರೋಹನ್ ಗಬಾಡೆ (ದಸರಾ ಕೇಸರಿ), ಸಂಜೀವ್ ಕೊರವರ (ದಸರಾ ಕಿಶೋರ) ಹಾಗೂ ಲಕ್ಷ್ಮಿ ಪಾಟೀಲ (ದಸರಾ ಕಿಶೋರಿ)

ಮೈಸೂರು: ಮುಧೋಳದ ಸುನಿಲ್ ಪಡತಾರೆ ಅವರು ಶನಿವಾರ ಇಲ್ಲಿ ಮುಕ್ತಾಯಗೊಂಡ ಕುಸ್ತಿ ಟೂರ್ನಿಯಲ್ಲಿ 'ದಸರಾ ಕಂಠೀರವ' ಪ್ರಶಸ್ತಿ ತಮ್ಮದಾಗಿಸಿಕೊಂಡರು. ಹಳಿಯಾಳದ ರೋಹನ್ ಗಬಾಡೆ 'ದಸರಾ ಕೇಸರಿ' ಪ್ರಶಸ್ತಿ ಮುಡಿಗೇರಿಸಿಕೊಂಡರು.

ದಸರಾ ಅಂಗವಾಗಿ ಇಲ್ಲಿನ ವಸ್ತುಪ್ರದರ್ಶನ ಪ್ರಾಧಿಕಾರದ ಡಿ. ದೇವರಾಜ ಅರಸು ಕ್ರೀಡಾಂಗಣದ ಅಖಾಡದಲ್ಲಿ ಸಂಜೆ ನಡೆದ ಅಂತಿಮ ಹಣಾಹಣಿಗಳು ಪ್ರೇಕ್ಷಕರನ್ನು ತುದಿಗಾಲಲ್ಲಿ ನಿಲ್ಲಿಸಿದವು. ದಸರಾ ಕಂಠೀರವ ಪ್ರಶಸ್ತಿಗಾಗಿ (86 ಕೆ.ಜಿ. ಮೇಲ್ಪಟ್ಟವರು) ಮುಧೋಳದ ಸುನಿಲ್ ಪಡತಾರೆ ಮತ್ತು ಜಮಖಂಡಿಯ ಗೋಪಾಲ ಕೋಳಿ ನಡುವೆ ಹಣಾಹಣಿ ಏರ್ಪಟ್ಟಿತು. ಪಂದ್ಯ ಅರ್ಧಕ್ಕೆ ಸಾಗಿದ್ದ ವೇಳೆ ಗೋಪಾಲ ಅವರು ಅನಾರೋಗ್ಯದ ಕಾರಣಕ್ಕೆ ಹೋರಾಟ ಮುಂದುವರಿಸದೇ ಬಿಟ್ಟುಕೊಟ್ಟರು. ಹೀಗಾಗಿ ಸುನಿಲ್ ಅವರನ್ನು ವಿಜೇತರೆಂದು ಘೋಷಿಸಲಾಯಿತು.

ದಸರಾ ಕೇಸರಿ ಪ್ರಶಸ್ತಿಗೆ (74ರಿಂದ 86 ಕೆ.ಜಿ) ನಡೆದ ಪೈಪೋಟಿಯಲ್ಲಿ ರೋಹನ್, 10–2 ರಿಂದ ಮಂಜುನಾಥ ಗೌಡಪ್ಪನವರ ವಿರುದ್ಧ ಗೆದ್ದರು.

ದಸರಾ ಕಿಶೋರ (57ರಿಂದ 65 ಕೆ.ಜಿ) ಪ್ರಶಸ್ತಿಗಾಗಿ ನಡೆದ ಹಣಾಹಣಿಯಲ್ಲಿ ದಾವಣಗೆರೆಯ ಕೊರವರ ಸಂಜೀವ 8-4 ರಿಂದ ದಾವಣಗೆರೆಯ ಪಿ. ಮಹೇಶ್ ಅವರನ್ನು ಸೋಲಿಸಿದರು. ಮಹಿಳೆಯರ ವಿಭಾಗದಲ್ಲಿ 'ದಸರಾ ಕಿಶೋರಿ' (52 ರಿಂದ 67 ಕೆ.ಜಿ) ಪ್ರಶಸ್ತಿಯನ್ನು ಹಳಿಯಾಳದ ಲಕ್ಷ್ಮಿ ಪಾಟೀಲ ಅವರು ತಮ್ಮದಾಗಿಸಿಕೊಂಡರು.

ಫುಟ್‌ಬಾಲ್: ದಿಗ್ಗಜ ಆಟಗಾರ ಚಾರ್ಲ್‌ಟನ್ ನಿಧನ

ಮ್ಯಾಂಚೆಸ್ಟರ್ (ಎಪಿ): ಇಂಗ್ಲೆಂಡ್‌ನ ದಿಗ್ಗಜ ಫುಟ್‌ಬಾಲ್ ಆಟಗಾರ ಬಾಬಿ ಚಾರ್ಲ್‌ಟನ್ (86) ಅವರು ಶನಿವಾರ ನಿಧನರಾದರು.

ಇಂಗ್ಲೆಂಡ್ ರಾಷ್ಟ್ರೀಯ ತಂಡ (49 ಗೋಲುಗಳು) ಮತ್ತು ಮ್ಯಾಂಚೆಸ್ಟರ್ ಯುನೈಟೆಡ್ (249) ಪರ ಅತಿಹೆಚ್ಚು ಗೋಲು ಗಳಿಸಿದ್ದ ದಾಖಲೆ 40 ವರ್ಷಗಳ ಕಾಲ ಅವರ ಹೆಸರಿನಲ್ಲಿತ್ತು. ವೇಯ್ನ್ ರೂನಿ ಈ ದಾಖಲೆ ಮುರಿದಿದ್ದರು.

ಶಿಸ್ತಿನ ಆಟಕ್ಕೆ ಹೆಸರುವಾಸಿಯಾಗಿದ್ದ ಬಾಬಿ, ಮ್ಯಾಂಚೆಸ್ಟರ್ ಯುನೈಟೆಡ್ ಪರ ಆಡಿದ್ದ 758 ಪಂದ್ಯಗಳು (1956–73ರ ಅವಧಿ) ಮತ್ತು ಇಂಗ್ಲೆಂಡ್ ಪರ ಆಡಿದ್ದ 106 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ (1958–70) ಒಮ್ಮೆಯೂ ಕೆಂಪು ಕಾರ್ಡ್ ಪಡೆದಿಲ್ಲ.

1966 ರಲ್ಲಿ ಫಿಫಾ ವಿಶ್ವಕಪ್ ಟೂರ್ನಿ ಜಯಿಸಿದ್ದ ಇಂಗ್ಲೆಂಡ್ ತಂಡದಲ್ಲಿ ಅವರು ಇದ್ದರು.

ಸಿ.ಎಂ. ಕಪ್ ರಾಜ್ಯಮಟ್ಟದ ದಸರಾ ಕ್ರೀಡಾಕೂಟಕ್ಕೆ ತೆರೆ

ಕಪಿಲ್ ಆನಂದ್, ಸ್ನೇಹಾ ಚಾಂಪಿಯನ್ಸ್

• ಆರ್. ಜಿತೇಂದ್ರ



ದಸರಾ ಕ್ರೀಡಾಕೂಟದ ಪುರುಷರ 110 ಮೀಟರ್ಸ್ ಹರ್ಡಲ್ಸ್ ಓಟದಲ್ಲಿ ಗುರಿಯತ್ತ ಮುನ್ನುಗ್ಗಿದ ಉಡುಪಿಯ ಎಂಡಿ. ಸುಶಾಂತ್ –ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ.



ಸ್ನೇಹಾ



ಸಿ. ಅಂಜಲಿ



ಗುರುಪ್ರಸಾದ್

ಮೈಸೂರು: ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಕಪಿಲ್ ಆನಂದ್ ಹಾಗೂ ಮಂಗಳೂರಿನ ವಾಣಿಜ್ಯ ತೆರಿಗೆ ವಿಭಾಗದ ಸ್ಪರ್ಧಿ ಎಸ್.ಎಸ್. ಸ್ನೇಹಾ ಅವರು ಶನಿವಾರ ಇಲ್ಲಿ ಮುಕ್ತಾಯಗೊಂಡ ಸಿ.ಎಂ. ಕಪ್ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದ ಅಥ್ಲೆಟಿಕ್ಸ್ ವಿಭಾಗದಲ್ಲಿ ಕ್ರಮವಾಗಿ ಪುರುಷ ಹಾಗೂ ಮಹಿಳೆಯರ ವಿಭಾಗದಲ್ಲಿ ವೈಯಕ್ತಿಕ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಪುರುಷರ ವಿಭಾಗದ ಟ್ರಿಪಲ್ ಜಂಪ್‌ನಲ್ಲಿ 15.52 ಮೀಟರ್ಸ್ ಜಿಗಿಯುವ ಮೂಲಕ ಬಂಗಾರಕ್ಕೆ ಕೊರಳೊಡ್ಡಿದ್ದ ಕಪಿಲ್ ಆನಂದ್ ಒಟ್ಟು 1007 ಅಂಕಗಳೊಂದಿಗೆ ಚಾಂಪಿಯನ್ ಪಟ್ಟ ಗಳಿಸಿದರು. 100 ಮೀಟರ್ಸ್ ಓಟವನ್ನು 11.73 ಸೆಕೆಂಡುಗಳಲ್ಲಿ ಕ್ರಮಿಸಿ ಚಿನ್ನ ಗೆದ್ದ ಸ್ನೇಹಾ ಒಟ್ಟು 1008 ಅಂಕಗಳೊಂದಿಗೆ ಮಹಿಳಾ ವಿಭಾಗದ ಚಾಂಪಿಯನ್ ಆದರು.

ಹಾಸನ, ಮೈಸೂರಿಗೆ ಪ್ರಶಸ್ತಿ: ಪುರುಷರ ಹಾಕಿ ಫೈನಲ್‌ನಲ್ಲಿ ಹಾಸನ ತಂಡವು 4-1 ಗೋಲುಗಳಿಂದ ಧಾರವಾಡವನ್ನು ಮಣಿಸಿ ಪ್ರಶಸ್ತಿ ಎತ್ತಿ ಹಿಡಿಯಿತು. ಮಹಿಳೆಯರ ಫೈನಲ್ಸ್‌ನಲ್ಲಿ ಮೈಸೂರಿನ ವನಿತೆಯರು 3-0 ಗೋಲುಗಳಿಂದ ದಕ್ಷಿಣ ಕನ್ನಡ ವಿರುದ್ಧ ಗೆಲುವು ದಾಖಲಿಸಿದರು.

ಬ್ಯಾಸ್ಕೆಟ್‌ಬಾಲ್‌ನ ಪುರುಷರ ಫೈನಲ್ಸ್‌ನಲ್ಲಿ ಯಂಗ್ ರೆಯಾನ್ಸ್ ತಂಡವು 96-71 ಅಂಕಗಳಿಂದ ಬ್ಯಾಂಕ್ ಆಫ್ ಬರೋಡಾ ವಿರುದ್ಧ; ಮಹಿಳೆಯರ ಫೈನಲ್ಸ್‌ನಲ್ಲಿ ಮೌಂಟ್ಸ್ ಕ್ಲಬ್ ತಂಡವು 52-44ರಿಂದ ಡಿವೈಇಎಸ್ ವಿರುದ್ಧ ಗೆದ್ದು ಚಾಂಪಿಯನ್ ಆದವು. ಪುರುಷರ ವಿಭಾಗದ ಫುಟ್‌ಬಾಲ್ ಫೈನಲ್‌ನಲ್ಲಿ ಮೈಸೂರು ತಂಡವು ಹಾಸನವನ್ನು 5-1 ಗೋಲುಗಳಿಂದ ಮಣಿಸಿತು.

ಕೊನೆಯ ದಿನದ ಫಲಿತಾಂಶ: **ಅಥ್ಲೆಟಿಕ್ಸ್: ಪುರುಷರು:** 200 ಮೀ. ಓಟ: ಸಿ.ಜಿ. ಗುರುಪ್ರಸಾದ್ (ಮೈಸೂರು)–1, ವೈ.ಎ. ಶಶಿಕಾಂತ್ (ಬೆಳಗಾವಿ)–2, ನಿಖಿಲ್ ಸಿದ್ದರಾಮ (ಉಡುಪಿ)–3. ಕಾಲ; 22.09 ಸೆ; 10,000 ಮೀ. ಓಟ: ವೈಭವ್ ಮಾರುತಿಪಾಟೀಲ (ಡಿವೈಇಎಸ್, ಬೆಂಗಳೂರು)–1 ಗುರುಪ್ರಸಾದ್ (ಕೆಎಸ್‌ಪಿ)–2, ಎ.ಆರ್. ರೋಹಿತ್ (ಬೆಂಗಳೂರು)–3. ಕಾಲ: 33ನಿ.00.31 ಸೆ; 110 ಮೀ. ಹರ್ಡಲ್ಸ್: ಎಂ.ಡಿ. ಸುಶಾಂತ್ (ಉಡುಪಿ)–1, ಕೆ. ಹರೀಶ (ಯಂಗ್‌ಸ್ಟರ್ ಎಸ್.ಪಿ)–2, ಎಂ.ಪಿ. ಪ್ರಜ್ವಲ್ ದ್ರಾವಿಡ್ (ಮೈಸೂರು)–3. ಸಮಯ: 14.56 ಸೆ; 400 ಮೀ. ಹರ್ಡಲ್ಸ್: ಎಂ.ಡಿ. ಅಮರನಾಥ್ (ಉಡುಪಿ)–1, ರಕ್ಷಿತ್ ರವೀಂದ್ರ (ಸಾಯ್)–2, ಸೂರಜ್ ಬಾಳೆಕುಂದ್ರಿ (ಬೆಳಗಾವಿ)–3. ಕಾಲ: 53.71 ಸೆ; ಹೈಜಂಪ್: ಬಿ. ಚೇತನ್ (ನಾಸಾ)–1, ಅನಿಲ್‌ಕುಮಾರ್ (ಆಳ್ವಾಸ್)–2, ಆರ್. ಲೋಕೇಶ್ (ಬೆಂಗಳೂರು)–3. ಎತ್ತರ: 2.03 ಮೀ; ಜಾವೆಲಿನ್ ಥ್ರೋ: ಶಾರುಖ್ ತಾರಿಹಾಳ (ಕೆಎಸ್‌ಪಿ)–1, ಎಂ. ವಿಜಯ್ (ಬೆಳಗಾವಿ)–2, ಎಂ.ಸಿ. ರಾಕೇಶ್ (ಹಾಸನ)–3. ದೂರ: 60.95 ಮೀ.

ಮಹಿಳೆಯರು: 200 ಮೀ. ಓಟ: ಜ್ಯೋತಿಕಾ (ಎಎಸ್‌ಎಫ್)–1, ಶ್ರದ್ಧಾ (ಉಡುಪಿ)–2, ಎಚ್. ಆರ್.ನವಮಿ (ಮೈಸೂರು)–3.ಸಮಯ: 24.96ಸೆ; 10,000 ಮೀ. ಓಟ: ಕೆ.ಎಂ. ಅರ್ಚನಾ (ಮೈಸೂರು)–1, ಎನ್.ಎಲ್.ತೇಜಸ್ವಿನಿ (ಕೆಎಸ್‌ಪಿ)–2, ಶಾಹಿನ್ ಶಂಶುದ್ದೀನ್ (ಧಾರವಾಡ)–3. ಕಾಲ: 37ನಿ.44.03 ಸೆ; 100 ಮೀ. ಹರ್ಡಲ್ಸ್: ಸಿ. ಅಂಜಲಿ (ಆಳ್ವಾಸ್, ಮೂಡಬಿದಿರೆ)–1, ಮೇಧಾ ಕಾಮತ್ (ಫ್ಯೂಶನ್ ಕ್ಲಬ್)–2, ದೀಕ್ಷಿತಾ (ಬೆಂಗಳೂರು)–3. ಸಮಯ: 14.18 ಸೆ; 400 ಮೀ. ಹರ್ಡಲ್ಸ್: ಶ್ರೇಯಾ ರಾಜೇಶ್ (ಬೆಂಗಳೂರು)–1, ದೀಕ್ಷಿತಾ (ಬೆಂಗಳೂರು)–2, ಜಿ.ಎಂ. ಲಕ್ಷ್ಮಿ (ಫ್ಯೂಷನ್ ಕ್ಲಬ್)–3. ಕಾಲ: 1ನಿ. 09.83 ಸೆ; ಶಾಟ್‌ಪಟ್: ವಿ. ಅಂಬಿಕಾ (ಮೈಸೂರು)–1, ಬೃಂದಾ ಗೌಡ (ಮೈಸೂರು)–2, ಟಿ. ನಿವಿತಾ (ಕೆಎಫ್‌ಡಿ)–3. ದೂರ: 14.20 ಮೀ.

ಗುಂಪು ಸ್ಪರ್ಧೆಗಳು: ಪುರುಷರು: ಬ್ಯಾಡ್ಮಿಂಟನ್ ಸಿಂಗಲ್ಸ್: ಪ್ರತೀಕ್ ಕೌಂಡಿಲ್ಯ–1, ಆರ್.ಎಂ. ಪ್ರವರ್ಚಿತ್–2. ಟೇಬಲ್ ಟೆನಿಸ್ ಸಿಂಗಲ್ಸ್: ಶ್ರೀನಿವಾಸ ಕಾರ್ತಿಕ್ (ಮಣಿಪಾಲ)–1, ಸುದರ್ಶನ್ ಕುಮಾರ್ (ಬೆಂಗಳೂರು)–2

ಮಹಿಳೆಯರು: ಟೇಬಲ್ ಟೆನಿಸ್ ಸಿಂಗಲ್ಸ್: ಪ್ರೇಕ್ಷಾ ಕರ್ಕೇರ (ದಕ್ಷಿಣ ಕನ್ನಡ)–1, ಇರೇನ್ ಸುಭಾಷ್–2. ಡಬಲ್ಸ್: ನಹ್ಲಾ ಫಾತಿಮಾ, ಪ್ರೇಕ್ಷಾ ಕರ್ಕೇರ (ದ.ಕನ್ನಡ)–1, ಲಾವಣ್ಯ ರಾವ್, ಇರೇನ್ ಸುಭಾಷ್ (ಬೆಂಗಳೂರು)–2.

ಹಾರ್ದಿಕ್ ಸ್ಥಾನಕ್ಕೆ ಬದಲಿ ಸವಾಲು • ಇತ್ತಂಡಗಳಿಗೆ ಪ್ರತಿಷ್ಠೆಯ ಪಂದ್ಯ

ಭಾರತಕ್ಕೆ ಇಂದು ನ್ಯೂಜಿಲೆಂಡ್ ಪರೀಕ್ಷೆ



ಭಾರತ ತಂಡದ ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ



ನ್ಯೂಜಿಲೆಂಡ್‌ನ ಟಾಮ್ ಲಥಾಮ್ –ಪಿಟಿಐ ಚಿತ್ರ

ಧರ್ಮಶಾಲಾ: ಹಾಲಿ ವಿಶ್ವಕಪ್‌ನ ಎರಡು ಅಜೇಯ ತಂಡಗಳಾದ ಭಾರತ ಮತ್ತು ನ್ಯೂಜಿಲೆಂಡ್, ಹಿಮಾಲಯದ ತಪ್ಪಲಲ್ಲಿರುವ ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆಯ ನಯನಮನೋಹರ ಕ್ರೀಡಾಂಗಣದಲ್ಲಿ ಭಾನುವಾರ ಮುಖಾಮುಖಿಯಾಗಲಿವೆ. ಎರಡೂ ತಂಡಗಳಿಗೆ ಇದು ಪ್ರತಿಷ್ಠೆಯ ಪಂದ್ಯವಾಗಿದೆ.

ತವರಿನಲ್ಲಿ ಆಡುತ್ತಿರುವ ಮತ್ತು ಇತ್ತೀಚಿನ ದಿನಗಳಲ್ಲಿ ಏಕದಿನ ಮಾದರಿಯಲ್ಲಿ ಉತ್ತಮ ಫಾರ್ಮ್‌ನಲ್ಲಿರುವ ಭಾರತ ಅಜೇಯವಾಗಿರುವುದು ಅಚ್ಚರಿಯ ವಿಷಯವಲ್ಲ. ಆದರೆ ನ್ಯೂಜಿಲೆಂಡ್ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವುದು ಸ್ವಲ್ಪಮಟ್ಟಿಗೆ ಅನಿರೀಕ್ಷಿತ. ಅದೂ ಪೂರ್ಣ-ಪ್ರಮಾಣದ ನಾಯಕ ಕೇನ್ ವಿಲಿಯಮ್ಸನ್ ಅವರ ಅನುಪಸ್ಥಿತಿಯಲ್ಲಿ ತಂಡ ಈ ಸಾಧನೆ ಮಾಡಿರುವುದು ಹೆಚ್ಚುಗಾರಿಕೆಯೇ ಸರಿ. ಆದರೆ ಹಿಂದಿನ ದಾಖಲೆಗಳನ್ನು ಗಮನಿಸಿದರೆ ದೊಡ್ಡ ಟೂರ್ನಿಗಳಲ್ಲಿ ನ್ಯೂಜಿಲೆಂಡ್ ಉತ್ತಮ ಪ್ರದರ್ಶನ ನೀಡುವುದು ಹೊಸದೇನಲ್ಲ.

ಬಹುತೇಕ ಇದೇ ಆಟಗಾರರಿದ್ದ ನ್ಯೂಜಿಲೆಂಡ್ ತಂಡ, ಈ ಹಿಂದಿನ ವಿಶ್ವಕಪ್‌ನ ಸೆಮಿಫೈನಲ್‌ನಲ್ಲಿ ಭಾರತ ತಂಡವನ್ನು ಸೋಲಿಸಿತ್ತು ಎಂಬುದನ್ನು ಮರೆಯುವಂತಿಲ್ಲ. ಆ ಸೋಲಿಗೆ ಟೀಕೆಗಳನ್ನು ಎದುರಿಸಿದ್ದ ಭಾರತ ತಂಡ, ನಂತರ ದಿನಗಳಲ್ಲಿ ಬಲಗೊಳ್ಳುತ್ತ ಬಂದಿದೆ. ತಂಡಕ್ಕೆ ಸಮತೋಲನ ನೀಡುವ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಪಾದದ ಗಾಯದಿಂದ ಈ ಪಂದ್ಯದಿಂದ ಹೊರಬೀಳದೇ ಇದ್ದಲ್ಲಿ ಭಾರತ ಪಂದ್ಯ ಗೆಲ್ಲುವ ನೆಚ್ಚಿನ ತಂಡ ಎಂದು ಸುಲಭಕ್ಕೆ ಹೇಳಬಹುದಿತ್ತು.

ವೇಗದ ಬೌಲರ್ ಟಿಮ್ ಸೌಥಿ ಅವರ ಲಭ್ಯತೆಯಿಂದ ನ್ಯೂಜಿಲೆಂಡ್ ಬೌಲಿಂಗ್ ಬಲ ಹೆಚ್ಚಿದೆ. ಆದರೆ ಅವರಿಗೆ ಅವಕಾಶ ನೀಡಲು ಯಾರನ್ನು ಕೈಬಿಡಬಹುದು ಎಂಬುದು ಕುತೂಹಲಕರ. ಟ್ರೆಂಟ್ ಬೌಲ್ಟ್, ಮ್ಯಾಟ್ ಹೆನ್ರಿ ಮತ್ತು ಲಾಕಿ ಫರ್ಗ್ಯುಸನ್ ಅವರ ದಾಳಿ ಪರಿಣಾಮಕಾರಿ ಆಗಿಯೇ ಇದೆ. ಆದರೆ ಸೌಥಿ ಅವರ ಅನುಭವಕ್ಕೆ ಬೆಲೆಯೂ ಇರುವುದರಿಂದ ಅವರಿಗೆ ಅವಕಾಶ ಒಲಿಯಬಹುದು.

ಆದರೆ ಹಾರ್ದಿಕ್ ಪಾಂಡ್ಯ ಅವರ ಅಲಭ್ಯತೆಯಲ್ಲಿ ತಂಡದ ಸಂಯೋಜನೆ ಹೇಗಿರಲಿದೆ ಎನ್ನುವುದು ಹೆಚ್ಚು ಕುತೂಹಲಕರ. ಅವರಿಗೆ ಸೂಕ್ತ ಬದಲಿ ಆಟಗಾರನಿಲ್ಲದ ಕಾರಣ ಹೊಸ ಸಂಯೋಜನೆ ರೂಪಿಸುವುದು ಅನಿವಾರ್ಯ. ಶಮಿ ಅವರನ್ನು ಆಡಿಸುವ ಆಯ್ಕೆ ತಂಡದ ಮುಂದಿದೆ. ಪುಣೆಯಲ್ಲಿ ಬಾಂಗ್ಲಾದೇಶ ವಿರುದ್ಧದ ಪಂದ್ಯದಲ್ಲಿ ಬೌಲಿಂಗ್ ವೇಳೆ ನೇರ ಡ್ರೈವ್ ತಡೆಯುವ ಯತ್ನದಲ್ಲಿ ಪಾಂಡ್ಯ ಅವರ ಕಾಲಿಗೆ ಚೆಂಡು ತಾಗಿ ಗಾಯವಾಗಿತ್ತು. ಅವರು ಬಿಸಿಸಿಐ ವೈದ್ಯಕೀಯ ತಂಡದ ನಿಗಾದಲ್ಲಿದ್ದಾರೆ. ಬ್ಯಾಟಿಂಗ್ ಬಲಪಡಿಸಲು ಸೂರ್ಯಕುಮಾರ್ ಯಾದವ್ ಅವರನ್ನೂ ಆಡಿಸಿದರೆ, ಈಗಿನ ತಂಡದ ಇನ್ನೊಬ್ಬರನ್ನು ಕೈಬಿಡಬೇಕಾಗುತ್ತದೆ. ಆಗ ಶಾರ್ದೂಲ್ ಠಾಕೂರ್ ಸ್ಥಾನ ಅಲುಗಾಡಬಹುದು.

ಭಾರತಕ್ಕೆ ಬ್ಯಾಟಿಂಗ್ ವಿಭಾಗದಲ್ಲಿ ತಲೆನೋವು ಇಲ್ಲ. ಸ್ಕೋರ್ ಬೆನ್ನಟ್ಟುವಲ್ಲಿ ವಿರಾಟ್ ಕೊಹ್ಲಿ ಗಮನ ಸೆಳೆದಿದ್ದಾರೆ. ನಾಯಕ ರೋಹಿತ್ ಶರ್ಮಾ ಮತ್ತು ಶುಭಮನ್ ಗಿಲ್ ರನ್ ಹರಿಸುತ್ತಿರುವುದರ ಜೊತೆಗೆ ಒಳ್ಳೆಯ ಲಯದಲ್ಲಿರುವ ವಿರಾಟ್ ಟೂರ್ನಿಯ ಆರಂಭದಲ್ಲೇ ಆಡುತ್ತಿರುವ ರೀತಿ ಎದುರಾಳಿ ತಂಡಗಳಿಗೆ ಅಪಾಯದ ಸಂದೇಶ ರವಾನಿಸಿದೆ. ಬಾಂಗ್ಲಾದೇಶ ವಿರುದ್ಧ ಕೊನೆಯ ಎಸೆತದಲ್ಲಿ ಅವರು ಶತಕ ಪೂರೈಸಿದ್ದರು.

ಬೌಲಿಂಗ್‌ನಲ್ಲಿ ಬೂಮ್ರಾ ಹೊಸ ಚೆಂಡಿನಲ್ಲಿ ಮತ್ತು ನಂತರದಲ್ಲಿ ಕುಲದೀಪ್ ಯಾದವ್ ಯಶಸ್ಸು ಗಳಿಸುತ್ತಿದ್ದಾರೆ. ಸಿರಾಜ್ ಸಹ ನಿಧಾನವಾಗಿ ಲಯಕ್ಕೆ ಮರಳುತ್ತಿದ್ದಾರೆ.

ಕೇನ್ ವಿಲಿಯಮ್ಸನ್ ಅನುಪಸ್ಥಿತಿ ಕಿವೀಸ್ ಬ್ಯಾಟಿಂಗ್ ಮೇಲೆ ಪರಿಣಾಮ ಬೀರಿದಂತಿಲ್ಲ. ಡೆವಾನ್ ಕಾನ್ವೆ, ರಚಿನ್ ರವೀಂದ್ರ, ಡೇರಿಲ್ ಮಿಚೆಲ್ ಅದನ್ನು ಸರಿದೂಗಿಸುವಂತೆ ಆಡುತ್ತಿದ್ದಾರೆ.

ಆದರೆ ಸ್ಪಿನ್ನರ್‌ಗಳ ಪರಿಣಾಮದ ಬಗ್ಗೆ ನಿರ್ಲಕ್ಷ್ಯ ವಹಿಸುವಂತಿಲ್ಲ. ಮಿಚೆಲ್ ಸ್ಯಾಂಟ್ನರ್ ಅವರ ಪ್ರದರ್ಶನ ನ್ಯೂಜಿಲೆಂಡ್ ಪಾಲಿಗೆ ನಿರ್ಣಾಯಕವಾಗಲಿದೆ. ಕೌಶಲಗಳಿಗಾಗಿ ಅವರನ್ನು ಮಾಜಿ ನಾಯಕ ಡೇನಿಯಲ್ ವೆಟೋರಿ ಅವರಿಗೆ ಹೋಲಿಸಲಾಗುತ್ತಿದೆ. ಟೂರ್ನಿಯಲ್ಲಿ ಅತಿ ಹೆಚ್ಚಿನ ವಿಕೆಟ್ ಗಳಿಸಿದವರಲ್ಲಿ ಅವರು ಮುಂಚೂಣಿಯಲ್ಲಿದ್ದಾರೆ. ನ್ಯೂಜಿಲೆಂಡ್ ಇದುವರೆಗೆ ಐಸಿಸಿ ವಿಶ್ವಕಪ್ ಗೆದ್ದಿಲ್ಲ. ಭಾರತ 12 ವರ್ಷಗಳಿಂದ ಐಸಿಸಿ ಟ್ರೋಫಿ ಬರ ಎದುರಿಸುತ್ತಿದೆ.

ಮುಖಾಮುಖಿ

ಭಾರತ ಗೆಲುವು	58
ನ್ಯೂಜಿಲೆಂಡ್ ಗೆಲುವು	50
ಟೈ	1
ಫಲಿತಾಂಶವಿಲ್ಲ	7
ಕೊನೆಯ 10 ಪಂದ್ಯಗಳಲ್ಲಿ ನ್ಯೂಜಿಲೆಂಡ್ ಪಂದ್ಯಗಳಲ್ಲಿ ಜಯಗಳಿಸಿದೆ. ಭಾರತ ಕೊನೆಯ ಪಂದ್ಯಗಳಲ್ಲಿ ಜಯ ಗಳಿಸಿದೆ. ಎರಡು ಪಂದ್ಯಗಳಲ್ಲಿ ಫಲಿತಾಂಶ ಬಂದಿಲ್ಲ.	5 3
ಪಂದ್ಯ ಆರಂಭ: ಮಧ್ಯಾಹ್ನ 2	
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್	

ಸೂರ್ಯಕುಮಾರ್ ತೋಳಿಗೆ ಗಾಯ

ಧರ್ಮಶಾಲಾ (ಪಿಟಿಐ): ನ್ಯೂಜಿಲೆಂಡ್ ವಿರುದ್ಧ ಭಾನುವಾರ ಹಾಲಿ ವಿಶ್ವಕಪ್‌ನ ಮೊದಲ ಪಂದ್ಯ ಆಡುವ ನಿರೀಕ್ಷೆಯಲ್ಲಿದ್ದ ಭಾರತ ತಂಡದ ಪ್ರಮುಖ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರಿಗೆ ಶನಿವಾರ ನೆಟ್ ಪ್ರಾಕ್ಟೀಸ್ ವೇಳೆ ಬಲ ತೋಳಿಗೆ ಬಲವಾದ ಪೆಟ್ಟುಬಿದ್ದಿದೆ.

ಪ್ರಾಕ್ಟೀಸ್ ವೇಳೆ ಥ್ರೊಡೌನ್ ಪರಿಣತ ರಾಘವೇಂದ್ರ ಅವರ ಶರವೇಗದ ಎಸೆತದಲ್ಲಿ ಚೆಂಡು ಮಣಿಗಂಟಿನ ಸ್ವಲ್ಪ ಮೇಲೆ ಬಡಿದಿದೆ. ಅವರು ಅತೀವ ನೋವಿನಿಂದ ನರಳಿ ತಕ್ಷಣ ನೆಟ್ಸ್‌ನಿಂದ ನಿರ್ಗಮಿಸಿದರು.

ಅವರು ಭಾನುವಾರದ ಪಂದ್ಯಕ್ಕೆ ಲಭ್ಯರಿರುವ ಬಗ್ಗೆ ಸ್ಪಷ್ಟತೆಯಿಲ್ಲ. ಅವರಿಗೆ ಸಮಸ್ಯೆಯಾಗಿಲ್ಲ ಎಂದು ತಂಡದ ಮೂಲಗಳು ತಿಳಿಸಿವೆ. ಅವರಿಗೆ ಐಸ್ ಪ್ಯಾಕ್‌ಗಳ ಮೂಲಕ ತಕ್ಷಣಕ್ಕೆ ನೋವುಶಮನದ ಪ್ರಕ್ರಿಯೆ ನಡೆಸಲಾಗಿದೆ.

ಇದು ಸಾಲದು ಎಂಬಂತೆ, ತಾಲೀಮಿನ ವೇಳೆ ಎಡಗೈ ಬ್ಯಾಟರ್– ವಿಕೆಟ್ ಕೀಪರ್ ಇಶಾನ್ ಕಿಶನ್ ಅವರ ಕುತ್ತಿಗೆಗೆ ಜೇನ್ನೊಣ ಕಚ್ಚಿದೆ. ಈ ಆಕಸ್ಮಿಕಕ್ಕೆ ಮೊದಲು ಅವರು ಸಾಕಷ್ಟು ಸಮಯ ಬ್ಯಾಟ್ ಮಾಡಿದ್ದರು. ಜೇನ್ನೊಣ ಕಚ್ಚಿದ ತೀವ್ರತೆಗೆ ಅವರು ಕ್ಷಣಕಾಲ ಹೌಹಾರಿದರು.



ಶ್ರೀಲಂಕಾ ತಂಡದ ಸದೀರ ಸಮರವಿಕ್ರಮ ಅವರ ಬ್ಯಾಟಿಂಗ್ –ಪಿಟಿಐ ಚಿತ್ರ

ಗೆಲುವಿನ ಖಾತೆ ತೆರೆದ ಲಂಕಾ

ಲಖನೌ (ಎಎಫ್‌ಪಿ/ ಪಿಟಿಐ): ಸದೀರ ಸಮರವಿಕ್ರಮ ಅವರ ಅಜೇಯ 91 ರನ್‌ಗಳ ನೆರವಿನಿಂದ ಶ್ರೀಲಂಕಾ ತಂಡ, ವಿಶ್ವಕಪ್ ಟೂರ್ನಿಯಲ್ಲಿ ಗೆಲುವಿನ ಖಾತೆ ತೆರೆಯಿತು.

ಏಕನಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಕುಶಾಲ್ ಮೆಂಡಿಸ್ ಬಳಗ ಐದು ವಿಕೆಟ್‌ಗಳಿಂದ ನೆದರ್ಲೆಂಡ್ಸ್ ತಂಡವನ್ನು ಮಣಿಸಿತು. ತನ್ನ ಹಿಂದಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾಕ್ಕೆ ಆಘಾತ ನೀಡಿದ್ದ ಡಚ್ ತಂಡ, ಲಖನೌದ ಅತಿಯಾದ ಸೆಕೆಯಲ್ಲಿ ಲಂಕಾ ಒಡ್ಡಿದ ಸವಾಲು ಬದಿಗೊತ್ತಲು ವಿಫಲವಾಯಿತು.

ಮೊದಲು ಬ್ಯಾಟ್ ಮಾಡಿದ ನೆದರ್ಲೆಂಡ್ಸ್ ತಂಡ, ದಕ್ಷಿಣ ಆಫ್ರಿಕಾ ಮೂಲದ ಸೈಬ್ರಾಂಡ್ ಇಂಗೆಲ್‌ಬ್ರೆಕ್ಟ್ (70; 82 ಎ) ಮತ್ತು ಲೋಗನ್ ವಾನ್ ಬೀಕ್ (59; 75 ಎ.) ಅವರ ಅರ್ಧಶತಕಗಳ ನೆರವಿನಿಂದ 49.4 ಓವರ್‌ಗಳಲ್ಲಿ 262 ರನ್ ಗಳಿಸಿತು.

ಸಾಧಾರಣ ಗುರಿ ಬೆನ್ನಟ್ಟಿದ ಲಂಕಾ ತಂಡಕ್ಕೆ ಆರ್ಯನ್ ದತ್ (44ಕ್ಕೆ 3) ಅವರು ಆರಂಭಿಕ ಆಘಾತ ನೀಡಿದ್ದರು. ಕುಶಾಲ್ ಪೆರೇರಾ (5) ಮತ್ತು ನಾಯಕ ಮೆಂಡಿಸ್ (8) ಅವರನ್ನು 'ಪವರ್ ಪ್ಲೇ' ಅವಧಿಯೊಳಗೆ ದತ್ ಪೆವಿಲಿಯನ್‌ಗಟ್ಟಿದ್ದರು. ಆ ಬಳಿಕ ಲಯ ಕಂಡುಕೊಂಡ ಲಂಕಾ ಬ್ಯಾಟರ್‌ಗಳು, ಒತ್ತಡಕ್ಕೆ ಒಳಗಾಗದೆ ತಂಡವನ್ನು ಗೆಲುವಿನ ಗಡಿ ದಾಟಿಸಿದರು. ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಶತಕ ಗಳಿಸಿದ್ದ ಸದೀರ, ಮಧ್ಯಮ ಕ್ರಮಾಂಕದಲ್ಲಿ ಸೊಗಸಾದ ಆಟವಾಡಿದರು. ಆರಂಭಿಕ ಬ್ಯಾಟರ್ ಪಥುಮ್ ನಿಸಾಂಕ (54; 52 ಎ., 4X9) ಸತತ ಮೂರನೇ ಅರ್ಧಶತಕದ ಮೂಲಕ ಆಸರೆಯಾದರು. ಇವರಿಬ್ಬರು 3ನೇ ವಿಕೆಟ್‌ಗೆ 52 ರನ್ ಸೇರಿಸಿದರು.

ನಿಸಾಂಕ ಔಟಾದ ಬಳಿಕ ಬಂದ ಚರಿತ್ ಅಸಲಂಕ (44; 66 ಎ., 4X2, 6X1) ತಾಳ್ಮೆಯಿಂದ ಬ್ಯಾಟ್ ಮಾಡಿ, ಸದೀರ ಅವರೊಂದಿಗೆ ನಾಲ್ಕನೇ ವಿಕೆಟ್‌ಗೆ 77 ರನ್ ಸೇರಿಸಿದರು. ಸದೀರ ಆ ಬಳಿಕ ಧನಂಜಯ ಡಿಸಿಲ್ವಾ (30; 37 ಎ., 4X1, 6X2) ಅವರೊಂದಿಗೆ ಐದನೇ ವಿಕೆಟ್‌ಗೆ 76 ರನ್‌ಗಳನ್ನು ಸೇರಿಸಿ ಗೆಲುವಿನ ಹಾದಿ ಸುಗಮಗೊಳಿಸಿದರು.

ಇದಕ್ಕೂ ಮುನ್ನ ಲಂಕಾ ತಂಡ, ದಿಲ್ಶಾನ್ ಮದುಶಂಕ (49ಕ್ಕೆ 4) ಮತ್ತು ಕಸುನ್ ರಜಿತ (50ಕ್ಕೆ 4) ಅವರ ಪ್ರಭಾವಿ ಬೌಲಿಂಗ್ ನೆರವಿನಿಂದ ಎದುರಾಳಿ ತಂಡವನ್ನು ಸಾಧಾರಣ ಮೊತ್ತಕ್ಕೆ ನಿಯಂತ್ರಿಸಿತು. 91 ರನ್ ಗಳಿಸುವಷ್ಟರಲ್ಲಿ ಆರು ವಿಕೆಟ್ ಕಳೆದುಕೊಂಡ ಸ್ಕಾಟ್ ಎಡ್ವರ್ಡ್ಸ್ ಬಳಗ ಅಲ್ಪ ಮೊತ್ತಕ್ಕೆ ಕುಸಿಯುವ ಆತಂಕ ಎದುರಿಸಿತ್ತು. ಆದರೆ ಏಳನೇ ವಿಕೆಟ್‌ಗೆ ಜತೆಯಾದ ಇಂಗೆಲ್‌ಬ್ರೆಕ್ಟ್ ಮತ್ತು ವಾನ್ ಬೀಕ್ ಛಲದ ಆಟವಾಡಿದ್ದರಿಂದ ಸ್ಕೋರ್ 250ರ ಗಡಿ ದಾಟಿತು.

ಸಂಕ್ಷಿಪ್ತ ಸ್ಕೋರ್: ನೆದರ್ಲೆಂಡ್ಸ್ 49.4 ಓವರ್‌ಗಳಲ್ಲಿ 262 (ಕಾಲಿನ್ ಆ್ಯಕರ್‌ಮನ್ 29, ಸೈಬ್ರಾಂಡ್ ಇಂಗೆಲ್‌ಬ್ರೆಕ್ಟ್ 70, ಲೋಗನ್ ವಾನ್ ಬೀಕ್ 59, ದಿಲ್ಶಾನ್ ಮದುಶಂಕ 49ಕ್ಕೆ 4, ಕಸುನ್ ರಜಿತ 50ಕ್ಕೆ 4): ಶ್ರೀಲಂಕಾ 48.2 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 263 (ಪಥುಮ್ ನಿಸಾಂಕ 54, ಸದೀರ ಸಮರವಿಕ್ರಮ ಔಟಾಗದೆ 91, ಚರಿತ್ ಅಸಲಂಕಾ 44, ಆರ್ಯನ್ ದತ್ 44ಕ್ಕೆ 3) **ಫಲಿತಾಂಶ:** ಶ್ರೀಲಂಕಾಕ್ಕೆ 5 ವಿಕೆಟ್ ಗೆಲುವು

ದಾಖಲೆ ಜತೆಯಾಟ

ನೆದರ್ಲೆಂಡ್ಸ್ ತಂಡದ ಸೈಬ್ರಾಂಡ್ ಇಂಗೆಲ್‌ಬ್ರೆಕ್ಟ್ ಮತ್ತು ಲೋಗನ್ ವಾನ್ ಬೀಕ್ ಅವರು ಸೇರಿಸಿದ 130 ರನ್‌ಗಳು ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಏಳನೇ ವಿಕೆಟ್‌ಗೆ ದಾಖಲಾದ ಅತಿದೊಡ್ಡ ಜತೆಯಾಟ ಎನಿಸಿತು.

ಭಾರತದ ಕಪಿಲ್‌ದೇವ್ ಮತ್ತು ಸೈಯದ್ ಕಿರ್ಮಾನಿ ಅವರು 1983ರ ಟೂರ್ನಿಯಲ್ಲಿ ಜಿಂಬಾಬ್ವೆ ವಿರುದ್ಧ ಏಳನೇ ವಿಕೆಟ್‌ಗೆ 126 ರನ್‌ಗಳನ್ನು ಸೇರಿಸಿದ್ದು ಇದುವರೆಗಿನ ದಾಖಲೆಯಾಗಿತ್ತು.

ದಕ್ಷಿಣ ಆಫ್ರಿಕಾಕ್ಕೆ ಭಾರಿ ಜಯ; ಹಾಲಿ ಚಾಂಪಿಯನ್ನರಿಗೆ ಮುಖಭಂಗ

ಕ್ಲಾಸೆನ್, ಜಾನ್ಸೆನ್ ಬೀಸಾಟ



ಶತಕ ಗಳಿಸಿದ ಸಂಭ್ರಮದಲ್ಲಿ ಹೆನ್ರಿಕ್ ಕ್ಲಾಸೆನ್ –ಎಎಫ್‌ಪಿ ಚಿತ್ರ

ಮುಂಬೈ (ಪಿಟಿಐ): ದಕ್ಷಿಣ ಆಫ್ರಿಕಾ ತಂಡದವರು ವಾಂಖೆಡೆ ಕ್ರೀಡಾಂಗಣದಲ್ಲಿ ಶನಿವಾರ ನಡೆದ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಅಧಿಕಾರಯುತ ಪ್ರದರ್ಶನ ನೀಡಿ, ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವನ್ನು 229 ರನ್‌ಗಳಿಂದ ಬಗ್ಗುಬಡಿದರು.

ಮೊದಲು ಬ್ಯಾಟ್ ಮಾಡಿದ ದಕ್ಷಿಣ ಆಫ್ರಿಕಾ ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 399 ರನ್ ಕಲೆಹಾಕಿದರೆ, ಜೋಸ್ ಬಟ್ಲರ್ ಬಳಗ 22 ಓವರ್‌ಗಳಲ್ಲಿ 170 ರನ್‌ಗಳಿಗೆ ಆಲೌಟಾಯಿತು.

ತನ್ನ ಏಕದಿನ ಕ್ರಿಕೆಟ್ ಇತಿಹಾಸದಲ್ಲಿ ಅತಿದೊಡ್ಡ ಸೋಲು ಅನುಭವಿಸಿದ ಇಂಗ್ಲೆಂಡ್, ಪಾಯಿಂಟ್ ಪಟ್ಟಿಯಲ್ಲಿ ಒಂಬತ್ತನೇ ಸ್ಥಾನಕ್ಕೆ ಕುಸಿತ ಕಂಡಿತು. ನಾಲ್ಕು ಪಂದ್ಯಗಳನ್ನು ಆಡಿರುವ ಜೋಸ್ ಬಟ್ಲರ್ ಬಳಗಕ್ಕೆ ಎದುರಾದ ಮೂರನೇ ಸೋಲು ಇದು. ಪ್ರಶಸ್ತಿಯನ್ನು ತನ್ನಲ್ಲೇ ಉಳಿಸಿಕೊಳ್ಳಬೇಕೆಂಬ ಇಂಗ್ಲೆಂಡ್ ತಂಡದ ಕನಸಿಗೆ ತೆಂಬಾ ಬವುಮಾ ಬಳಗ ಬಲವಾದ ಪೆಟ್ಟು ಕೊಟ್ಟಿತು.

ಬಿರುಸಿನ ಶತಕ ಗಳಿಸಿದ ಹೆನ್ರಿಕ್ ಕ್ಲಾಸೆನ್ (109; 67 ಎ., 4X12, 6X4), ಬೀಸಾಟದ ಮೂಲಕ ಅಜೇಯ ಅರ್ಧಶತಕ ದಾಖಲಿಸಿದ ಮಾರ್ಕೊ ಜಾನ್ಸೆನ್ (ಔಟಾಗದೆ 75; 42 ಎ., 4X3, 6X6) ಹಾಗೂ ಶಿಸ್ತಿನ ದಾಳಿ ನಡೆಸಿದ ಬೌಲರ್‌ಗಳು ದಕ್ಷಿಣ ಆಫ್ರಿಕಾ ತಂಡದ ಗೆಲುವಿಗೆ ಕಾರಣರಾದರು. ರೀಜಾ ಹೆಂಡ್ರಿಕ್ಸ್ (85; 75 ಎ., 4X9, 6X3) ಹಾಗೂ ರಸಿ ವ್ಯಾನ್ ಡೆರ್ ಡಸೆ (60; 61ಎ., 4X8) ಅವರೂ ಉಪಯುಕ್ತ ಕೊಡುಗೆ ನೀಡಿದರು.

ಎದುರಾಳಿ ನೀಡಿದ ದೊಡ್ಡ ಗುರಿಯನ್ನು ನೋಡಿಯೇ ಇಂಗ್ಲೆಂಡ್ ಅರ್ಧ ಸೋತುಹೋಗಿತ್ತು. ಗಾಯ ಗೊಂಡಿದ್ದ ರೀಸ್ ಟೋಪ್ಲಿ ಅವರು ಬ್ಯಾಟ್ ಮಾಡಲಿಲ್ಲ.

ಮೂರನೇ ಓವರ್‌ನಲ್ಲಿ ಜಾನಿ ಬೆಸ್ಟೋ (10) ಅವರನ್ನು ಔಟ್ ಮಾಡಿದ ಲುಂಗಿ ಗಿಡಿ, ವಿಕೆಟ್ ಬೇಟೆಗೆ ಚಾಲನೆ ನೀಡಿದರು. ಬ್ಯಾಟಿಂಗ್‌ನಲ್ಲಿ ಅಬ್ಬರಿಸಿದ್ದ ಜಾನ್ಸೆನ್ (35ಕ್ಕೆ 2) ಬೌಲಿಂಗ್‌ನಲ್ಲೂ ಸಾಮರ್ಥ್ಯ ತೋರಿ ಡೇವಿಡ್ ಮಲಾನ್ (6) ಹಾಗೂ ಜೋ ರೂಟ್ (2) ಅವರನ್ನು ಪೆವಿಲಿಯನ್‌ಗೆ ಕಳುಹಿಸಿದರು. 38 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಾಗಲೇ ಇಂಗ್ಲೆಂಡ್, ಗೆಲುವಿನ ಆಸೆ ಕೈಬಿಟ್ಟಿತು.

ಮಧ್ಯಮ ಕ್ರಮಾಂಕಕ್ಕೆ ಪೆಟ್ಟು ನೀಡಿದ ಜೆರಾಲ್ಡ್ ಕೊಯೆಟ್ಜಿ (35ಕ್ಕೆ 3) ಅವರು ಹ್ಯಾರಿ ಬ್ರೂಕ್, ಬಟ್ಲರ್ ಮತ್ತು ಆದಿಲ್ ರಶೀದ್ ವಿಕೆಟ್ ಪಡೆದರು. ಮಾರ್ಕ್ ವುಡ್ (ಅಜೇಯ 43; 17 ಎ., 4X2, 6X) ಮತ್ತು ಗಸ್ ಅಟ್ಕಿನ್ಸನ್ (35; 21 ಎ.) ಅವರು 9ನೇ ವಿಕೆಟ್‌ಗೆ 70 ರನ್ ಸೇರಿಸದೇ ಇರುತ್ತಿದ್ದರೆ, ಇಂಗ್ಲೆಂಡ್ ಸೋಲಿನ ಅಂತರ ಇನ್ನಷ್ಟು ಹೆಚ್ಚುತ್ತಿತ್ತು.

77 ಎಸೆತಗಳಲ್ಲಿ 151 ರನ್ ಜತೆಯಾಟ: ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳು ಇಂಗ್ಲೆಂಡ್‌ನ ಎಲ್ಲ ಬೌಲರ್‌ಗಳನ್ನು ಚೆನ್ನಾಗಿ ದಂಡಿಸಿದರು. ಕ್ವಿಂಟನ್ ಡಿ ಕಾಕ್ (4) ವಿಫಲರಾದರೂ, ರೀಜಾ ಮತ್ತು ಡಸೆ ಎರಡನೇ ವಿಕೆಟ್‌ಗೆ 121 ರನ್ ಸೇರಿಸಿ ಆಸರೆಯಾದರು. ಏಡನ್ ಮರ್ಕರಮ್ (42) ಕೂಡಾ ರನ್ ರೇಟ್ 7ರ ಆಸುಪಾಸು ಇರುವಂತೆ ನೋಡಿಕೊಂಡರು.

ಕ್ಲಾಸೆನ್ ಮತ್ತು ಜಾನ್ಸೆನ್ ಜತೆಗೂಡಿದ ಬಳಿಕ ವಾಂಖೆಡೆಯಲ್ಲಿ ಸಿಕ್ಸರ್, ಬೌಂಡರಿಗಳ ಮಳೆ ಸುರಿಯಿತು. ಇವರು 6ನೇ ವಿಕೆಟ್‌ಗೆ 77 ಎಸೆತಗಳಲ್ಲಿ 151 ರನ್ ಕಲೆಹಾಕಿದರು. ಕೊನೆಯ 10 ಓವರ್‌ಗಳಲ್ಲಿ 143 ರನ್‌ಗಳು ಹರಿದು ಬಂದವು.

ಸಂಕ್ಷಿಪ್ತ ಸ್ಕೋರ್: ದಕ್ಷಿಣ ಆಫ್ರಿಕಾ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 399 (ರೀಜಾ ಹೆಂಡ್ರಿಕ್ಸ್ 85, ರಸಿ ವ್ಯಾನ್ ಡೆರ್ ಡಸೆ 60, ಏಡನ್ ಮರ್ಕರಮ್ 42, ಹೆನ್ರಿಕ್ ಕ್ಲಾಸೆನ್ 109, ಮಾರ್ಕೊ ಜಾನ್ಸೆನ್ ಔಟಾಗದೆ 75, ರೀಸ್ ಟೋಪ್ಲಿ 88ಕ್ಕೆ 3)

ಇಂಗ್ಲೆಂಡ್ 22 ಓವರ್‌ಗಳಲ್ಲಿ 170 (ಹ್ಯಾರಿ ಬ್ರೂಕ್ 17, ಜೋಸ್ ಬಟ್ಲರ್ 15, ಡೇವಿಡ್ ವಿಲಿ 12, ಗಸ್ ಅಟ್ಕಿನ್ಸನ್ 35, ಮಾರ್ಕ್ ವುಡ್ 43, ಜೆರಾಲ್ಡ್ ಕೊಯೆಟ್ಜಿ 35ಕ್ಕೆ 3, ಲುಂಗಿ ಗಿಡಿ 26ಕ್ಕೆ 2, ಮಾರ್ಕೊ ಜಾನ್ಸೆನ್ 35ಕ್ಕೆ 2) **ಫಲಿತಾಂಶ:** ದಕ್ಷಿಣ ಆಫ್ರಿಕಾಕ್ಕೆ 229 ರನ್ ಗೆಲುವ

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ನ್ಯೂಜಿಲೆಂಡ್	4	4	0	0	8	1.923
ಭಾರತ	4	4	0	0	8	1.659
ದಕ್ಷಿಣ ಆಫ್ರಿಕಾ	4	3	1	0	6	2.212
ಆಸ್ಟ್ರೇಲಿಯಾ	4	2	2	0	4	-0.193
ಪಾಕಿಸ್ತಾನ	4	2	2	0	4	-0.456
ಬಾಂಗ್ಲಾದೇಶ	4	1	3	0	2	-0.784
ನೆದರ್ಲೆಂಡ್ಸ್	4	1	3	0	2	-0.790
ಶ್ರೀಲಂಕಾ	4	1	3	0	2	-1.048
ಇಂಗ್ಲೆಂಡ್	4	1	3	0	2	-1.248
ಅಫ್ಗಾನಿಸ್ತಾನ	4	1	3	0	2	-1.250

ಕ್ರಿಕೆಟ್: ದೆಹಲಿಗೆ ಮಣಿದ ಕರ್ನಾಟಕ ತಂಡ

ಡೆಹ್ರಾಡೂನ್: ಆಫ್ ಸ್ಪಿನ್ನರ್ ಲಲಿತ್ ಯಾದವ್ (19ಕ್ಕೆ3) ಮತ್ತು ಆರಂಭ ಆಟಗಾರ ಪ್ರಿಯಾನ್ಶ್ ಆರ್ಯ (58, 24ಎ) ಅವರ ಬಿರುಸಿನ ಅರ್ಧ ಶತಕದ ಬಲದಿಂದ ದೆಹಲಿ ತಂಡ ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿ 'ಇ' ಗುಂಪಿನ ಪಂದ್ಯದಲ್ಲಿ ಕರ್ನಾಟಕ ತಂಡದ ಮೇಲೆ ಎಂಟು ವಿಕೆಟ್‌ಗಳ ಸುಲಭ ಗೆಲುವು ದಾಖಲಿಸಿತು.

ಅಭಿಮನ್ಯು ಕ್ರಿಕೆಟ್ ಅಕಾಡೆಮಿ ಮೈದಾನದಲ್ಲಿ ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಕರ್ನಾಟಕ ಆರಂಭದಲ್ಲೇ ಪರದಾಡಿತು. ದೇವದತ್ತ ಪಡಿಕ್ಕಲ್ ಮೊದಲ ಓವರ್‌ನಲ್ಲೇ ಇಶಾಂತ್ ಶರ್ಮಾ (19ಕ್ಕೆ1) ಬೌಲಿಂಗ್‌ನಲ್ಲಿ ನಿರ್ಗಮಿಸಿದರು. ನಾಯಕ ಮಯಂಕ್ ಅಗರವಾಲ್ (15) ಕೂಡ ಹೆಚ್ಚು ಹೊತ್ತು ನಿಲ್ಲಲಿಲ್ಲ. 14ನೇ ಓವರ್‌ನಲ್ಲಿ ಮನಿಷ್ ಪಾಂಡೆ (17) ಅವರನ್ನು ಕಳೆದುಕೊಂಡಾಗ ಕರ್ನಾಟಕದ ಮೊತ್ತ 5 ವಿಕೆಟ್‌ಗೆ 78. ಈ ಹಂತದಲ್ಲಿ ಅಭಿನವ್ ಮನೋಹರ್ (44, 35ಎ) ಮತ್ತು ಮನೋಜ್ ಭಾಂಡಗೆ (21, 15ಎ) ಅವರು ಮುರಿಯದ ಆರನೇ ವಿಕೆಟ್‌ಗೆ 58 ರನ್ ಸೇರಿಸಿದ್ದರಿಂದ ಕರ್ನಾಟಕ 136 ರನ್‌ಗಳ ಸಾಧಾರಣ ಮೊತ್ತ ಗಳಿಸಲು ಸಾಧ್ಯವಾಯಿತು.

ಈ ಮೊತ್ತ ಬೆನ್ನಟ್ಟಿದ ದೆಹಲಿ ತಂಡಕ್ಕೆ ಪ್ರಿಯಾನ್ಶ್ ಆರ್ಯ ಮತ್ತು ಅನುಜ್ ರಾವತ್ (38, 32ಎ, 4x5) ಅವರು ಮೊದಲ ವಿಕೆಟ್‌ಗೆ ಬರೇ 6.3 ಓವರುಗಳಲ್ಲಿ 72 ರನ್ ಸೇರಿಸಿ ಬಿರುಸಿನ ಆರಂಭ ನೀಡಿದರು. ಆರ್ಯ ಅವರ ಇನಿಂಗ್ಸ್‌ನಲ್ಲಿ ಏಳು ಬೌಂಡರಿ, ಮೂರು ಸಿಕ್ಸರ್‌ಗಳಿದ್ದವು. ದೆಹಲಿ 19 ಎಸೆತಗಳಿರುವಂತೆ ಗುರಿತಲುಪಿತು. ನಾಯಕ್ ಯಶ್ ಧುಲ್ ಔಟಾಗದೇ 26 ರನ್ ಗಳಿಸಿದರು.

ಸ್ಕೋರುಗಳು: ಕರ್ನಾಟಕ: 20 ಓವರುಗಳಲ್ಲಿ 5 ವಿಕೆಟ್‌ಗೆ 136 (ಕೃಷ್ಣನ್ ಶ್ರೀಜಿತ್ 24, ಅಭಿನವ್ ಮನೋಹರ್ ಔಟಾಗದೇ 44, ಮನೋಜ್ ಭಾಂಡಗೆ ಔಟಾಗದೇ 21; ಲಲಿತ್ ಯಾದವ್ 19ಕ್ಕೆ3); ದೆಹಲಿ: 16.5 ಓವರುಗಳಲ್ಲಿ 2 ವಿಕೆಟ್‌ಗೆ 137 (ಪ್ರಿಯಾನ್ಶ್ ಆರ್ಯ 58, ಅನುಜ್ ರಾವತ್ 38, ಯಶ್ ಧುಲ್ ಔಟಾಗದೇ 26, ಆಯುಷ್ ಬದೋನಿ ಔಟಾಗದೇ 14).

ಪವರ್‌ಲಿಫ್ಟಿಂಗ್: 4 ಬೆಳ್ಳಿ ಪದಕ ಗೆದ್ದ ಲತಾ

ಬೆಂಗಳೂರು: ನಗರದ ಪವರ್‌ಲಿಫ್ಟರ್ ಲತಾ ಜಿ.ನಾಗರಾಜ್ ಅವರು ಮಂಗೋಲಿಯಾದ ಉಲಾನ್‌ಬತಾರ್‌ನಲ್ಲಿ ಇತ್ತೀಚೆಗೆ ನಡೆದ ವಿಶ್ವ ಮಾಸ್ಟರ್ಸ್ ಪವರ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ ಇಕ್ವಿಪ್ಡ್ ವಿಭಾಗದಲ್ಲಿ ಒಟ್ಟು 4 ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.

ರಾಜಾಜಿನಗರದಲ್ಲಿ ಜಿಮ್ ಟ್ರೇನರ್, ನ್ಯೂಟ್ರಿಷನಿಸ್ಟ್ ಆಗಿರುವ ಲತಾ ಅವರು 84 + ಕೆ.ಜಿ. ವಿಭಾಗದಲ್ಲಿ ಬೆಳ್ಳಿಯ ಪದಕ ಗಳಿಸಿದ್ದಾರೆ. ಇದರ ಜೊತೆಗೆ ಇದೇ ವಿಭಾಗದ ಸ್ಕ್ವಾಟ್, ಬೆಂಚ್‌ಪ್ರೆಸ್, ಡೆಡ್‌ಲಿಫ್ಟ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ. ಅವರು ಮಲೇಷ್ಯಾದಲ್ಲಿ ನಡೆಯಲಿರುವ ಏಷ್ಯನ್ ಕ್ಲಾಸಿಕ್ ಪವರ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲಿದ್ದಾರೆ.



ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 22 ಅಕ್ಟೋಬರ್ 2023



ಆಸ್ಕರ್ ಕದ ತಟ್ಟಿದ '2018' 2



ರೈತರ ಬವಣೆ ನೀಗುವ ಬೆಟ್ಟದ ಹುಲ್ಲು 4

ಮಂಗಳೂರು ಹುಲಿಗಳ ಸೀಮೋಲ್ಲಂಘನ

ಧಾರ್ಮಿಕ ಹಿನ್ನೆಲೆಯಲ್ಲೇ ಶುರುವಾದ ಹುಲಿವೇಷ ಕಾಲಾಂತರದಲ್ಲಿ ರೂಪಾಂತರಗಳನ್ನು ಕಂಡಿದೆ. ಧರ್ಮಾತೀತವೂ ಆಗಿ ಈಗ ಆಚರಣೆಗೊಳ್ಳುತ್ತಿರುವ ಹುಲಿವೇಷಕ್ಕೆ ವಿದೇಶದ ನಂಟೂ ಇದೆಯೆನ್ನುವುದು ವಿಶೇಷ.



ಮಂಗಳೂರಿನ ಕೇಂದ್ರ ಮೈದಾನದಲ್ಲಿ ನಡೆದ 'ಪಿಲಿ ಪರ್ಬ' ಹೆಸರಿನ ಹುಲಿವೇಷ ಸ್ಪರ್ಧಾಕೂಟದ ನೋಟ. ಪ್ರಜಾವಾಣಿ ಚಿತ್ರಗಳು: ಫಕ್ರುದ್ದೀನ್ ಎಚ್.



ಉದಯ ಯು.

ಅಲಂಕರಿಸಿದ್ದ ರಥದ ಮೇಲೆ ಮಂಗಳಾದೇವಿಯ ಪ್ರತಿಷ್ಠಾಪನೆಯಾಗಿತ್ತು. ರಥೋತ್ಸವ ಇನ್ನೇನು ಆರಂಭವಾಗುವುದರಲ್ಲಿತ್ತು, ತನ್ನ ಅಂಗವಿಕಲ ಮಗುವಿನೊಂದಿಗೆ ಹಠಾತ್ತನೆ ರಥದ ಮುಂದೆ ಬಂದ ಮಹಿಳೆಯೊಬ್ಬಳು ಮೊಣಕಾಲೂರಿ, 'ತಾಯಿ, ನನ್ನ ಮಗುವಿಗೆ ಕಾಲು ಸರಿ ಇಲ್ಲ, ಚರ್ಮರೋಗವಿದೆ. ನಡೆದಾಡಲು ಆಗುತ್ತಿಲ್ಲ, ಮಾತೂ ಬರುವುದಿಲ್ಲ, ಮಗುವನ್ನು ಆಶೀರ್ವದಿಸಿ ಆರೋಗ್ಯವಂತನನ್ನಾಗಿಸಿದರೆ, ಮುಂದಿನ ವರ್ಷ ರಥೋತ್ಸವದ ಸಂದರ್ಭದಲ್ಲಿ ನಿನ್ನ ರಥದ ಮುಂದೆ ಆತನನ್ನು ಕುಣಿಸುತ್ತೇನೆ' ಎಂದು ಹರಕೆ ಹೊರುತ್ತಾಳೆ. ಕೆಲವೇ ದಿನಗಳಲ್ಲಿ ಮಗು ಗುಣಮುಖವಾಗುತ್ತದೆ. ತಾನು ಹೊತ್ತ ಹರಕೆಯಂತೆ, ಮಹಿಳೆಯು ಮುಂದಿನ ವರ್ಷದ ರಥೋತ್ಸವದ ಸಂದರ್ಭದಲ್ಲಿ ಮಗುವಿಗೆ ಹುಲಿಯ ವೇಷ ಹಾಕಿಸಿ, ಮಂಗಳಾದೇವಿಯ ರಥದ ಮುಂದೆ ಕುಣಿಸುತ್ತಾಳೆ...

ಅಲ್ಲಿಂದ ಮಂಗಳೂರಿನಲ್ಲಿ 'ಪಿಲಿ ನಲಿಕೆ' (ಹುಲಿ ಕುಣಿತ) ಆರಂಭವಾಯಿತು ಎಂಬುದು ಐತಿಹ್ಯ.

ಈ ಕತೆಗೆ ಹಲವು ರೂಪಾಂತರಗಳಿವೆ. ಇಂಥ ಇನ್ನೂ ಅನೇಕ ಐತಿಹ್ಯಗಳೂ ಇವೆ. ಆದರೆ, ಒಟ್ಟು ಸಾರ ಇದೇ. 'ಹುಲಿವೇಷ ಹಾಕಿ ದೇವಿಯ ಮುಂದೆ ಕುಣಿದರೆ ದೇವಿಯನ್ನೇ ಹೊತ್ತು ಮೆರೆದಷ್ಟು ಸಂತಸವಾಗುತ್ತದೆ, ದೇವಿಯೂ ಪ್ರಸನ್ನಳಾಗಿ ಹರಸುತ್ತಾಳೆ' ಎಂಬ ನಂಬಿಕೆ ಕರಾವಳಿ ಜಿಲ್ಲೆಗಳಲ್ಲಿ ದಟ್ಟವಾಗಿದೆ. ಆ ಕಾರಣಕ್ಕಾಗಿಯೇ ಪ್ರತಿ ವರ್ಷ ನೂರಾರು ಮಂದಿ ಹರಕೆ ಹೊತ್ತು, ಹುಲಿವೇಷ ಹಾಕಿ ದೇವಿಯ ಮುಂದೆ ಕುಣಿಯುತ್ತಾರೆ. 'ಪಿಲಿ ನಲಿಕೆ' ಎಂಬುದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ನವರಾತ್ರಿ ಸಂದರ್ಭದ ವಿಶೇಷಗಳಲ್ಲಿ ಒಂದಾಗಿದೆ.

ಧಾರ್ಮಿಕ ಹಿನ್ನೆಲೆಯಲ್ಲಿ ಆರಂಭವಾದ ಈ ಕುಣಿತವು ಕಾಲಾಂತರದಲ್ಲಿ ರೂಪಾಂತರಗೊಂಡಿದೆ. ಧಾರ್ಮಿಕತೆಯ ಸಣ್ಣ ಎಳೆಯನ್ನಷ್ಟೇ ಇಟ್ಟುಕೊಂಡು ಪ್ರದರ್ಶನ ಕಲೆಯಾಗಿ ಬದಲಾದ ಯಕ್ಷಗಾನ, ಭೂತಾರಾಧನೆ, ನಾಗಾರಾಧನೆಯಂತೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಅಸ್ಮಿತೆಯಾಗಿದೆ ಹುಲಿವೇಷ. ಜಿಲ್ಲೆಗೆ ಹೊಂದಿಕೊಂಡಂತಿರುವ ಕೇರಳದ ಕಾಸರಗೋಡು ಜಿಲ್ಲೆಯ ಜೊತೆಗೂ ನಂಟು ಇಟ್ಟುಕೊಂಡಿದೆ.

ದಸರಾ ಹಬ್ಬದ ಮಾರ್ನಮಿಯಂದು (ಮಹಾನವಮಿ) ಮಂಗಳಾದೇವಿ ದೇವಸ್ಥಾನದ ಮುಂದೆ ತಾಸೆ ಪೆಟ್ಟುಗಳ ಗೌಜಿ, ಹುಲಿಗಳ ಕುಣಿತ ಜೋರಾಗಿರುತ್ತದೆ. ಮಹಾನವಮಿಯಿಂದ ಆರಂಭಿಸಿ, ಮೂರು ದಿನಗಳ ಕಾಲ ಹುಲಿವೇಷಕ್ಕೆ ಅವಕಾಶ ಎಂಬುದು ಹಿಂದಿನ ಸಂಪ್ರದಾಯ. ಆದರೆ, ಕಳೆದ ಕೆಲವು ದಶಕಗಳಿಂದ 'ಪಿಲಿ ನಲಿಕೆ' ಸೀಮೋಲ್ಲಂಘನ ಮಾಡಿದೆ. ವೇಷ–ಭೂಷಣ, ನಲಿಕೆಯ ಶೈಲಿಯ ಜೊತೆಗೆ, ಜಿಲ್ಲೆ– ರಾಜ್ಯದ ಗಡಿಯನ್ನೂ ಈ ಕಲೆಯು ಲಂಘಿಸಿದೆ.

ದಸರಾ ಸಮಯದಲ್ಲಿ ಮಾತ್ರ ಕಾಣಿಸುತ್ತಿದ್ದ ಹುಲಿಗಳು, ಕೃಷ್ಣ ಜನ್ಮಾಷ್ಟಮಿ, ಗಣೇಶ ಚೌತಿ ಸಂದರ್ಭಗಳಲ್ಲೂ ಕಾಣಸಿಗುತ್ತವೆ. ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ವ್ಯಾಪ್ತಿಯಲ್ಲೇ ಓಡಾಡಿಕೊಂಡಿದ್ದ ಹುಲಿಗಳೀಗ ದೇಶದ ವಿವಿಧ ಮೂಲೆಗಳಲ್ಲಿ ಮಾತ್ರವಲ್ಲ, ಫ್ರಾನ್ಸ್ ಮತ್ತು ಜರ್ಮನಿಯಲ್ಲೂ (2000ನೇ ಸಾಲಿನಲ್ಲಿ) ಕುಣಿದುಬಂದಿವೆ.

ಮಂಗಳಾದೇವಿಯಲ್ಲಿ ಆರಂಭವಾದ ಈ ಆಚರಣೆ, ಧರ್ಮಾತೀತವೂ ಆಗಿದೆ. ಮುಸ್ಲಿಂ ಯುವಕರೇ ಹುಲಿವೇಷದ ತಂಡಗಳನ್ನು ಕಟ್ಟಿಕೊಂಡು ಮೊಹರಂ ಹಬ್ಬದ ಸಮಯದಲ್ಲಿ ಪ್ರದರ್ಶನ ನೀಡಿದ ಉದಾಹರಣೆಗಳು ಇವೆ. ಧಾರ್ಮಿಕ ಆಚರಣೆಯಲ್ಲದಿದ್ದರೂ, ಮನರಂಜನೆಗಾಗಿ, ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅಥವಾ ಹಣ ಸಂಪಾದನೆಗಾಗಿ ಹಿಂದೂಗಳಂತೆ ಅನ್ಯ ಧರ್ಮೀಯ ಯುವಕರು ಸಹ ಹುಲಿವೇಷ ಹಾಕುವುದಿದೆ.

ಬೆರಳೆಣಿಕೆಯಷ್ಟಿದ್ದ ಹುಲಿವೇಷ ತಂಡಗಳ ಸಂಖ್ಯೆ ಈಗ ನೂರರ ಗಡಿ ದಾಟಿದೆ. ಗಣೇಶ ಚೌತಿಯ ಸಂದರ್ಭದಲ್ಲಿ ಮುಂಬೈ, ಬೆಂಗಳೂರು ಹಾಗೂ ಇತರ ನಗರಗಳಿಂದ ಈ ತಂಡಗಳಿಗೆ ಬೇಡಿಕೆ ಬರುತ್ತದೆ.

ಅಲಿಖಿತ ಶಾಸ್ತ್ರೀಯತೆ

ಭರತನಾಟ್ಯಕ್ಕೆ ಇರುವಂತೆ ಹುಲಿವೇಷ ಕುಣಿತಕ್ಕೆ ಇದಮಿತ್ಥಂ ಎಂಬ ಶಾಸ್ತ್ರೀಯತೆ ಇಲ್ಲ. ಆದರೆ, ಕಾಲಾಂತರದಲ್ಲಿ ಒಂದು ಸಂಪ್ರದಾಯ, ಶೈಲಿ ರೂಪುಗೊಂಡಿದೆ. ತಾಸೆಯ ಪೆಟ್ಟಿಗೆ ಸರಿಯಾಗಿ ಹಾಕುವ ಹೆಜ್ಜೆ, ಹುಲಿಗಳು ಕುಳಿತುಕೊಳ್ಳುವ ಶೈಲಿ, ಮೈಗೆ ಹಚ್ಚಿಕೊಳ್ಳುವ ಬಣ್ಣ, ಪ್ರೇಕ್ಷಕರು ಕೊಡುವ ಹಣವನ್ನು ಬಾಯಿಯಿಂದ ಮಾತ್ರ ಎತ್ತುವ ಸಂಪ್ರದಾಯ, ಅಕ್ಕಿಯ ಮುಡಿಯನ್ನು ಎತ್ತಿ ಎಸೆಯುವುದು... ಹೀಗೆ ಒಂದಿಷ್ಟು ರೀತಿ–ನೀತಿಗಳಿವೆ. ಹುಲಿವೇಷಕ್ಕೆ ಇದೇ 'ಶಾಸ್ತ್ರೀಯತೆ' ಎಂದು ಗುರುತಿಸಿ ಒಪ್ಪಲಾಗಿದೆ. ಈ ಸಂಪ್ರದಾಯಗಳು ಈಚಿನ ದಿನಗಳಲ್ಲಿ ತೆಳುಗೊಳ್ಳುತ್ತಿರುವ ಬಗ್ಗೆ ಹಿರಿಯ ಹುಲಿವೇಷಧಾರಿಗಳಿಗೆ ಬೇಸರವಿದೆ.

'ಧಾರ್ಮಿಕ ಆಚರಣೆಯೊಂದು ಮನರಂಜನಾ ಮಾಧ್ಯಮವಾಗಿ ರೂಪಾಂತರವಾದಾಗ ಸಂಪ್ರದಾಯ, ಆಚರಣೆ ತಿಳಿಗೊಳ್ಳುವುದು ಸಹಜ. ಹುಲಿವೇಷ ಧಾರ್ಮಿಕ ಆಚರಣೆಯ ಗಡಿ ದಾಟಿದ್ದರಿಂದ ವೇಷ ಹಾಕುವ ತಂಡಗಳ ಸಂಖ್ಯೆ ಹೆಚ್ಚಾಗಿದೆ. ಸಾವಿರಾರು ಮಂದಿ ಈಗ ಹುಲಿವೇಷ ಹಾಕುತ್ತಾರೆ. ಇದೆಲ್ಲ ಬೇಡವೆಂದಲ್ಲ ಆದರೆ, ಸಂಪ್ರದಾಯ, ವೇಷಭೂಷಣ ತಿಳಿಗೊಳ್ಳುತ್ತಿರುವುದು ಸರಿಯಲ್ಲ' ಎಂಬುದು 55 ವರ್ಷಗಳಿಂದ 'ಮಂಗಳಾದೇವಿ ಹುಲಿವೇಷ ತಂಡ' ನಡೆಸುತ್ತಿರುವ ದಿನೇಶ್ ಕುಂಪಲ ಅವರ ನೋವು.

4ನೇ ಪುಟಕ್ಕೆ...

ಸ್ಪರ್ಧೆಗಿಳಿದ ಹುಲಿಗಳು

ಕಳೆದ ಒಂದು ದಶಕದಲ್ಲಿ ದಕ್ಷಿಣ ಕನ್ನಡದಲ್ಲಿ ಸಾಂಪ್ರದಾಯಿಕ 'ಪಿಲಿ ನಲಿಕೆಯ' ಜೊತೆಗೆ ಹುಲಿವೇಷ ಸ್ಪರ್ಧೆಗಳೂ ಜನರನ್ನು ಸೆಳೆಯುತ್ತಿವೆ. 2014ರಿಂದ 'ಪಿಲಿನಲಿಕೆ ಪ್ರತಿಷ್ಠಾನ'ವು ನಗರದಲ್ಲಿ ಹುಲಿವೇಷ ಸ್ಪರ್ಧೆಗಳನ್ನು ಆಯೋಜಿಸುತ್ತಾ, ತಂಡಗಳಿಗೆ ಬಹುಮಾನ ನೀಡುತ್ತಾ ಬಂದಿದೆ. ಕಳೆದ ವರ್ಷದಿಂದ ಕುಡ್ಲ ಸಾಂಸ್ಕೃತಿಕ ಪ್ರತಿಷ್ಠಾನವೂ ಹುಲಿವೇಷ ಸ್ಪರ್ಧೆ ಆಯೋಜಿಸುತ್ತಿದೆ. ಐದಾರು ಸಾವಿರ ಮಂದಿ ಕುಳಿತು ವೀಕ್ಷಿಸಲು ವ್ಯವಸ್ಥೆ, ಊಟ– ತಿಂಡಿ, ಡಿಜಿಟಲ್ ಪರದೆಗಳು, ಥರ್ಡ್ ಅಂಪೈರ್ ವ್ಯವಸ್ಥೆ (ಈ ವರ್ಷದಿಂದ ಜಾರಿಯಾಗಿದೆ), ತುಳುನಾಡಿನ ಚಿತ್ರ ನಟ–ನಟಿಯರು, ರಾಜಕಾರಣಿಗಳು, ಗಣ್ಯರ ಪಾಲ್ಗೊಳ್ಳುವಿಕೆಯು ಈ ಸ್ಪರ್ಧೆಗಳ ರಂಗು ಹೆಚ್ಚಿಸಿದೆ. ಜೊತೆಗೆ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ತಂಡಗಳ ಸಂಖ್ಯೆಯೂ ಹೆಚ್ಚುತ್ತಿದೆ. ಬಹುಮಾನದ ಮೊತ್ತವೂ ಭರ್ಜರಿಯಾಗಿದೆ.

ಕರೇಜ್ ಅಂತರ್ಜಲಾಶಯದ ವಿಸ್ಮಯ

ಬೀದರ್‌ನಲ್ಲಿ ಸುಮಾರು 3 ಕಿ.ಮೀಗೂ ಹೆಚ್ಚು ವಿಸ್ತೀರ್ಣದಲ್ಲಿ ನೀರು ಸಾಗಬಹುದಾದ ಅಂಕುಡೊಂಕು ಸುರಂಗ ಮಾರ್ಗವಿದೆ. 2015ರಲ್ಲಿ ಅದರ ಉತ್ಖನನವಾದ ನಂತರ ಆ ಪ್ರದೇಶದಲ್ಲಿ ಜಲಮೂಲದಲ್ಲಿ ಆಗಿರುವ ಬದಲಾವಣೆ ಗಮನಾರ್ಹ.



'ಕರೇಜ್'ನಲ್ಲಿ ಸ್ವಚ್ಛತೆ ಕೈಗೊಂಡಿರುವ 'ಟೀಮ್ ಯುವ' ಸದಸ್ಯರು

ಶಶಿಕಾಂತ ಎಸ್. ಶೆಂಬೆಳ್ಳಿ

ಕೋಟೆ ಕೊತ್ತಲ, ಝರಿಗಳ ನಾಡೆಂದೆ ಬೀದರ್ ಹೆಸರುವಾಸಿ. ಆದರೆ, ಇದರ ನೆಲದಾಳದಲ್ಲೊಂದು ವಿಸ್ಮಯವಿದೆ.

ಹದಿನೈದನೇ ಶತಮಾನದಲ್ಲಿ ಬಹಮನಿ ಅರಸರ ಕಾಲದಲ್ಲಿ ನಿರ್ಮಾಣಗೊಂಡ ನೀರಿನ ಸುರಂಗ ಮಾರ್ಗವೊಂದು ಈಗಲೂ ಸಕ್ರಿಯವಾಗಿದೆ. ಸುಮಾರು 60ರಿಂದ 70 ಅಡಿ ನೆಲದಾಳದಲ್ಲಿ ಅಂಕುಡೊಂಕಾದ ನೀರಿನ ಸುರಂಗವದು. ವರ್ಷದ ಎಲ್ಲಾ ದಿನಗಳಲ್ಲೂ ಸದಾ ಒಂದೇ ಮಟ್ಟದಲ್ಲಿ ಶುದ್ಧವಾದ ನೀರು ಅದರಲ್ಲಿ ಹರಿಯುತ್ತ ಇರುವುದು ವಿಶೇಷ.

ಬೀದರ್‌ನ ಅಲಿಯಾಬಾದ್, ನೌಬಾದ್, ಕೊಳಾರ ಪರಿಸರದಲ್ಲಿ ಸುಮಾರು 3 ಕಿ.ಮೀಗೂ ಹೆಚ್ಚು ವಿಸ್ತೀರ್ಣದಲ್ಲಿ ಈ ಸುರಂಗ ಹರಡಿಕೊಂಡಿದೆ. ಇದು ಬಹುತೇಕ ನೆಲದಲ್ಲಿ ಹೂತುಹೋಗಿತ್ತು. ಆದರೆ, 2015–16ರಲ್ಲಿ ಉತ್ಖನನ ಕಾರ್ಯ ಕೈಗೆತ್ತಿಕೊಂಡ ನಂತರ 'ಕರೇಜ್' ಏನೆಂಬುದು ಹೊರಜಗತ್ತಿಗೆ ಗೊತ್ತಾಯಿತು. ಜಿಲ್ಲಾಡಳಿತದ ಮೂಲಗಳ ಪ್ರಕಾರ, ಸುಮಾರು 13 ಸಾವಿರ ಮೆಟ್ರಿಕ್ ಟನ್ ತ್ಯಾಜ್ಯ, ಮಣ್ಣನ್ನು 'ಕರೇಜ್'ನಿಂದ ಹೊರತೆಗೆಯಲಾಗಿದೆ. ಇದರಿಂದಾಗಿ ಅದರಲ್ಲಿ ನೀರು ಇನ್ನಷ್ಟು ಸರಾಗವಾಗಿ ಹರಿಯಲು ಆರಂಭಿಸಿದೆ. ಅನಂತರ ಸುತ್ತಮುತ್ತಲಿನ ಪ್ರದೇಶದಲ್ಲಿ ಅಂತರ್ಜಲ ಮಟ್ಟ ಕೂಡ ಹೆಚ್ಚಾಗಿದೆ. ಬತ್ತಿಹೋಗಿದ್ದ ಬಾವಿ, ಕೊಳವೆಬಾವಿಗಳಲ್ಲಿ ನೀರು ಚಿಮ್ಮಿದೆ. ನೂರಾರು ಅಡಿ ಆಳಕ್ಕೆ ಹೋಗಿದ್ದ ಬಾವಿಗಳಲ್ಲಿ ನೀರು ಸಾಕಷ್ಟು ಮೇಲೆ ಬಂದಿದೆ. ಇದನ್ನು ಸ್ವತಃ ಸ್ಥಳೀಯರು, ವಿಜ್ಞಾನಿಗಳೇ ದೃಢೀಕರಿಸಿದ್ದಾರೆ. ಈ ನೀರಿನಿಂದಲೇ ಈ ಭಾಗದ ಕೆಲವು ರೈತರು 365 ದಿನವೂ ಕೃಷಿ ಮಾಡುತ್ತಿದ್ದಾರೆ. ಕೆಲವು ರೈತರ ಹೊಲಗಳಲ್ಲಿ ಪ್ರಾಚೀನ ಬಾವಿಗಳಿದ್ದು, ಅವುಗಳು 'ಕರೇಜ್'ನ ಭಾಗ ಎನ್ನುವುದು ಗೊತ್ತಾಗಿದೆ.

'ಕರೇಜ್' ನಿರ್ವಹಣೆಗೆ ಹಾಗೂ ಗಾಳಿ, ಬೆಳಕಿನ ವ್ಯವಸ್ಥೆಗೆ 27 ತೆರೆದ ಬಾವಿಗಳನ್ನು (ವೆಂಟ್ಸ್) ಬಹಮನಿ ಅರಸರ ಕಾಲದಲ್ಲೇ ಕಟ್ಟಿಸಲಾಗಿತ್ತು. ಈ ಪೈಕಿ ಏಳು 'ವೆಂಟ್'ಗಳನ್ನು ಈಗ ಪತ್ತೆಹಚ್ಚಿ, ಅವುಗಳ ಸುತ್ತಲೂ ಗೋಡೆ ಕಟ್ಟಿ, ಗ್ರಿಲ್ ಅಳವಡಿಸಿ ರಕ್ಷಿಸಲಾಗಿದೆ. 'ವೆಂಟ್ಸ್' ಹಾಗೂ 'ಕರೇಜ್' ಹಾದು ಹೋಗಿರುವ 100 ಮೀಟರ್ ಸುತ್ತಮುತ್ತಲಿನ ಪ್ರದೇಶವನ್ನು 'ಬಫರ್ ಜೋನ್' ಎಂದು ಗುರುತಿಸಿ, ಕಲ್ಲುಗಳನ್ನು ನೆಡಲಾಗಿದೆ. ಎಲ್ಲಾ ರೀತಿಯ ನಿರ್ಮಾಣ ಚಟುವಟಿಕೆಗಳಿಗೆ ನಿರ್ಬಂಧ ಹೇರಲಾಗಿದೆ.

'ಕರೇಜ್' ಪ್ರಸ್ತಾಪ ಎಲ್ಲೆಲ್ಲಿ?

ಇರಾನ್‌ನಲ್ಲಿ ಕುಡಿಯುವ ನೀರಿಗೆ ತೀವ್ರ ಸಮಸ್ಯೆ ಇರುವುದರಿಂದ ಆ ದೇಶದಲ್ಲಿ 'ಕನ್ವೇಯರ್ ಸಿಸ್ಟಂ' ಮಾದರಿಯಲ್ಲಿ ಒಂದು ನೀರಿನ ಮೂಲ ಆಧರಿಸಿ ಆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅಲ್ಲಿ ಬಿಟ್ಟರೆ 'ಕರೇಜ್' ವ್ಯವಸ್ಥೆ ಇರುವುದು ಬೀದರ್‌ನಲ್ಲಷ್ಟೇ. ಆದರೆ, ಬೀದರ್‌ನಲ್ಲಿರುವ 'ಕರೇಜ್'ಗೆ ಹಲವು ನೀರಿನ ಮೂಲ, ಝರಿಗಳಿರುವುದು ವಿಶೇಷ. ಬಹಮನಿ ಸಾಮ್ರಾಜ್ಯದ ಆಳ್ವಿಕೆಯಲ್ಲಿ, ಅದರಲ್ಲೂ ಮಹಮೂದ್ ಗವಾನ್ ಕಾಲದಲ್ಲಿ ಇರಾನ್‌ನಿಂದ ಎಂಜಿನಿಯರ್‌ಗಳನ್ನು ಕರೆಸಿ, ಅವರ ಸಲಹೆ ಆಧರಿಸಿ 'ಕರೇಜ್' ಮಾಡಿಸಿದ್ದಾರೆ ಎಂಬ ಅಭಿಪ್ರಾಯಗಳಿವೆ. 'ಕರೇಜ್'ಗಳು ಬಹಮನಿ ವಾಸ್ತುಶಿಲ್ಪದ ಪ್ರಕಾರ ಕೆತ್ತನೆ ಮಾಡಿರುವುದು ಅದನ್ನು ಪುಷ್ಟೀಕರಿಸುತ್ತವೆ ಎನ್ನುತ್ತಾರೆ ಇತಿಹಾಸಕಾರರು. ಬೀದರ್ ಮಣ್ಣಿನಲ್ಲಿ 'ಲ್ಯಾಟ್ರೈಟ್' ಅಂಶ ಹೆಚ್ಚಿಗೆ ಇರುವುದರಿಂದ 'ಕರೇಜ್' ಮಾಡಲು ಮುಖ್ಯ ಕಾರಣ ಎನ್ನುವುದು ಗೊತ್ತಾಗಿದೆ.

'ಬೀದರ್ ನಗರದಲ್ಲಿ ಒಟ್ಟು ಏಳು 'ಕರೇಜ್'ಗಳಿವೆ' ಎಂದು 'ಬೀದರ್ ಹಿಸ್ಟರಿ ಆ್ಯಂಡ್ ಇಟ್ಸ್ ಮಾನ್ಯುಮೆಂಟ್ಸ್' ಪುಸ್ತಕದಲ್ಲಿ ದಖನ್ ಪ್ರಸ್ಥಭೂಮಿಯ ಇತಿಹಾಸಕಾರರೆಂದೆ ಹೆಸರಾಗಿರುವ ಇತಿಹಾಸಕಾರ ಗುಲಾಂ ಯಜದಾನಿ ಅವರು ದಾಖಲಿಸಿದ್ದಾರೆ. ಅಂದರೆ, ಬೀದರ್‌ನಲ್ಲಿ ಈಗ ಪತ್ತೆಯಾಗಿರುವುದು ಒಂದು 'ಕರೇಜ್' ಮಾತ್ರ. ಇನ್ನೂ ಆರು 'ಕರೇಜ್'ಗಳು ಬೀದರ್ ನಗರದ ನೆಲದಾಳದಲ್ಲಿದ್ದು, ಅವುಗಳ ಶೋಧಕಾರ್ಯ ನಡೆಯಬೇಕಿದೆ. ಇತ್ತೀಚೆಗೆ ಹೈದರಾಬಾದ್‌ನ ಐಐಟಿ ತಂಡ ಕೂಡ ಭೇಟಿ ನೀಡಿ ಪರಿಶೀಲಿಸಿದೆ. ಇದರ ಬಗ್ಗೆ ಆಳವಾದ ಅಧ್ಯಯನ ಮುಂದುವರೆದಿದೆ. ಅತ್ಯಾಧುನಿಕ ತಂತ್ರಜ್ಞಾನದ ಸಹಾಯದಿಂದ 'ಕರೇಜ್'ನ ಸಂಪೂರ್ಣ ಜಾಲ ಪತ್ತೆಹಚ್ಚುವ ಕಾರ್ಯ ಭರದಿಂದ ನಡೆಯುತ್ತಿದೆ.

3ನೇ ಪುಟಕ್ಕೆ...



ಮುಂಗಾರು ಕೊರತೆಯಿಂದಾಗಿ ಕಾಳುಕಟ್ಟದಿರುವುದನ್ನು ತೋರಿಸುತ್ತಿರುವ ರೈತ ರಾಜು ಹೊನ್ನಕ್ಕಳವರ್ ಚಿತ್ರ:ಸತೀಶ್ ಬಡಿಗೇರ

ಯಾಕಾದರೂ ಮಳೆ ಹೋದವ್ರೋ...

ಸಿದ್ದಯ್ಯ ಹಿರೇಮಠ

ನಾಡಿನ ಹಲವು ಜಿಲ್ಲೆಗಳಲ್ಲಿ ಬರ ಆವರಿಸಿದೆ. ಮುಂಗಾರು ಕೈಕೊಟ್ಟ ನಂತರದ ಕಾಲದಲ್ಲಿ ರೈತರ ಆಚರಣೆಗಳಲ್ಲಿ ಎಂದಿನ ಸಂಭ್ರಮ ಇಲ್ಲವಾಗಿದೆ.

'ನೌಕರಿ ಮಾಡೌರು ಪಗಾರ ಬರೋದು ಒಂದೆರ್ಡ್ ದಿನಾ ತಡಾ ಆದ್ರೂ ಪರದಾಡ್ತಾರೆ. ನಾವು ಎಂಟು ತಿಂಗಳಿಂದ ಹೊಲದಲ್ಲಿ ಸತತ ಕೆಲಸ ಮಾಡ್ತಾ ಅದವಿ. ಆದ್ರೂ ನಮಗೆ ಪ್ರತಿಫಲ ಸಿಗುತ್ತೆ ಅನ್ನೂ ಗ್ಯಾರಂಟಿ ಇಲ್ಲ. ಮಳೆ ಕೈಕೊಟ್ಟು ಹೋಯ್ತು. ಇನ್ನೇನು ಕೈಗೆ ಬಂದೇಬಿಟ್ತು ಅನ್ಕಂಡಿರೋ ಬೆಳೀ ಎಲ್ಲಾ ಒಣಗಿದ್ವು. ಇನ್ನೆಲ್ಲಿ ಪ್ರತಿಫಲ?'

ಭರಪೂರ ಹಸಿರಿನಿಂದ ಕೂಡಿದ್ದ ಮೆಕ್ಕೆಜೋಳ ಕೇವಲ ಎರಡೇ ಎರಡು ವಾರಗಳ ಅವಧಿಯಲ್ಲಿ ಸಂಪೂರ್ಣ ಒಣಗಿ ನಿಂತಿದ್ದಲ್ಲದೇ, ತನ್ನೆಲ್ಲ ಭರವಸೆಯನ್ನೂ ಒಣಗಿಸಿಬಿಟ್ಟಿದ್ದಕ್ಕೆ ನಸೀಬನ್ನೇ ಹಳಿದುಕೊಳ್ಳುತ್ತ ಮಾತಿಗೆ ಇಳಿದಿದ್ದು ಹರಿಹರ ಸಮೀಪದ ಚಳಗೇರಿಯ ರೈತ ರಾಜು ಹೊನ್ನಕ್ಕಳವರ್.

'ಮಾರ್ಚ್ ತಿಂಗಳಿಂದ ಬಿಟ್ರೂ ಬಿಡದೇ ದಿನವೂ ಹೊಲದಲ್ಲಿ ಕೆಲಸ ಮಾಡ್ತಾ ಅದವಿ. ಬೇಸಿಗೆಯಲ್ಲಿ ರಂಟೆ ಹೊಡೆಯೋ ಮೂಲಕ ನಮ್ಮ ಈ ವರ್ಷದ ಕೆಲಸ ಶುರು ಆಗೇತಿ. ಆಮೇಲೆ ಬಿತ್ತನೆ, ಕಳೇವು, ಎಡೆಕುಂಟೆ ಅಂತೆಲ್ಲ ಮುಗಿಸಿ ಗೊಬ್ಬರನೂ ಇಟ್ಟೇವಿ. ಮೇ, ಜೂನ್‌ನ್ಯಾಗ ಮಳೀ ಬರಬೇಕಿತ್ತು, ಬರಲಿಲ್ಲ. ಜುಲೈನಲ್ಲಿ ಹದಿನೈದ್ ಇಪ್ಪತ್ ದಿನ ಬಿಡದೇ ಸುರಿದು ನಮ್ಮಲ್ಲಿ ಭರವಸೆಯನ್ನೇನೋ ಮೂಡಿಸಿತ್ತು. ನಡನಡುವೆ ಮಳೆ ಕಣ್ಣಾಮುಚ್ಚಾಲೆ ಆಡಕಂತ ಹೋಯ್ತು. ಈ ವರ್ಸದ್ ಕತೀ ಇನ್ನೇನ್ ಮುಗೀತು ಅಂತ ಕೈ ಬಿಡಾಣ ಅನ್ನಷ್ಟರಾಗ ಮತ್ ಮಳೀ ಸುರೀತಿತ್ತು. ಹಿಂಗೆ ಬೆಳೀ ಒಣಗದು, ಚಿಗೀಯದು, ಒಣಗದು ಚಿಗೀಯದು ನಡದೇ ಇತ್ತು. ಕೆಲವರು ಮೊಳಕಾಲುದ್ದ ಬೆಳೆದು ಒಣಗಿದ್ದ ಮೆಕ್ಕೆಜೋಳದ ಹೊಲವನ್ನು ಹರಗಿ ಸಾಫ್ ಮಾಡಿದ್ರು. ನಾವು ಹಂಗೆ ಬಿಟ್ವಿ. ಬೆಳೀಗೆ ಒಂದಷ್ಟು ಕೀಡಿ (ಕೀಟ) ಹಿಡಕಂಡ್ವು ಅಂತ ಎಣ್ಣೀ (ಕೀಟನಾಶಕ) ಹೊಡದ್ವಿ. ಕೀಡಿ ಸತ್ವು. ಮತ್ತ ಗಿಡಾ ಚಿಗತ್ವು. ಸೂಲಂಗಿನೂ ಬಂತು. ಇನ್ನೇನು ಕಾಳ್ ಕಟ್ಟಬೇಕು, ತ್ಯನೀ ಹಿಡೀಬೇಕು ಅನ್ನುವಾಗ ಮಳೆ ಕೈಕೊಡ್ತು. ಬಹುಶಃ ಸೆಪ್ಟೆಂಬರ್ ಎರಡನೇ ವಾರ. ಆಗ ಕಣ್ಮರೆಯಾದ ಮಳೆ ಮತ್ತ ಬರಲಿಲ್ಲ. ಮೆಕ್ಕೆಜೋಳ ತ್ಯಲಿಮಟ ಬೆಳೆದು ಬಾಡಿ ಹೋಯ್ತು. ಕೆಲವು ಕಡೆ ತ್ಯನಿ ಹಿಡಕಂಡ್ರೂ ಭರಪೂರ ಕಾಳು ಹಿಡೀಲಿಲ್ಲ. ಕಣ್ ಹಾಯಿಸಿದಷ್ಟೂ ಹಸಿರೇ ಹಸಿರು ಕಾಣುತ್ತಿತ್ತು. ಈಗ ಎಲ್ಲ ಒಣಗಿಹೋಯ್ತು. ನಮ್ಮೂರ ರೈತರೆಲ್ಲ ಬೆಳೆಯುವ ಮುಖ್ಯಬೆಳೆ ಮೆಕ್ಕೆಜೋಳ. ಏನಿಲ್ಲ ಅಂದ್ರೂ 2,500 ಎಕರೆ ಭೂಮ್ಯಾಗ ಬೆಳೆದಿದ್ರು. ಒಬ್ಬರ ಮನೀಗೂ ಒಂದ್ ಕಾಳ್ ಬರಲಿಲ್ಲ.'

ರಾಜು ಎಲ್ಲವನ್ನೂ ಎಳೆಎಳೆಯಾಗಿ ವಿವರಿಸುತ್ತ ಹೋದರು. ಅವರ ಕಣ್ಣುಗಳಲ್ಲಿ ವಿಷಾದ ಮಡುಗಟ್ಟಿತ್ತು. 'ಇನ್ನೊಂದು ದೊಡ್ಡ ಮಳೆ ಆಗಿದ್ರೆ...' ಎನ್ನುತ್ತಾ ಕೈಕೈ ಹಿಸುಕಿಕೊಂಡಿದ್ದನ್ನು ನೋಡಿದರೆ, ಸದ್ಯದ ಮಟ್ಟಿಗೆ ಮಳೆ ಮರೀಚಿಕೆ ಆಗಿದ್ದು ತೀವ್ರ ನಿರಾಸೆ ಮೂಡಿಸಿತ್ತು. ಅಂತೆಯೇ ಅವರಲ್ಲಿ ಹಿಂಗಾರು ಹಂಗಾಮಿನ ಬಗೆಗೂ ಯಾವುದೇ ವಿಶ್ವಾಸ ಉಳಿದಂತೆ ಕಾಣಲಿಲ್ಲ.

ಮೆಕ್ಕೆಜೋಳ ಕಾಳು ಕಟ್ಟುವ ಹಂತದಲ್ಲಿ ಒಂದೆರಡು ಬಾರಿ ಹದ ಮಳೆ ಸುರೀಬೇಕು. ಜಮೀನಿನ ತುಂಬ ನೀರು ಹರಿಯಬೇಕು.

2ನೇ ಪುಟಕ್ಕೆ...

ಆಸ್ಕರ್ ಕದ ತಟ್ಟಿದ '2018'

2018ರ ಮುಂಗಾರು ಮಳೆಯ ದುರಂತಗಳನ್ನು ನೆನಪಿಸುವ ಈ ಮಲಯಾಳಂ ಸಿನಿಮಾ, 2024ರ ಅಕಾಡೆಮಿ (ಆಸ್ಕರ್) ಪುರಸ್ಕಾರಕ್ಕೆ ನಾಮ ನಿರ್ದೇಶನಗೊಂಡಿದೆ. ಆ ಸಿನಿಮಾದಲ್ಲಿ ಏನೆಲ್ಲ ಇದೆ?

ಪ್ರೇಮಕುಮಾರ್ ಹರಿಯಬ್ಬೆ

2018ರಲ್ಲಿ ಕೇರಳದ ಇಡುಕ್ಕಿ ಮತ್ತಿತರ ಜಿಲ್ಲೆಗಳಲ್ಲಿ ಸುರಿದ ಮುಂಗಾರು ಮಳೆ ಸೃಷ್ಟಿಸಿದ ಅವಾಂತರಗಳನ್ನೇ ಇಟ್ಟುಕೊಂಡು ನಿರ್ಮಾಣವಾಗಿರುವ ಮಲಯಾಳಂ ಸಿನಿಮಾ '2018'. ಇದೇ ವರ್ಷದ ಮೇ ತಿಂಗಳಲ್ಲಿ ಸಿನಿಮಾ ತೆರೆಕಂಡಿತು. ಅಪಾರ ಜನಮನ್ನಣೆಯ ಜತೆಗೆ ಹಣ ಗಳಿಕೆಯಲ್ಲೂ ಯಶಸ್ಸು ಕಂಡಿದೆ. ಅಷ್ಟೇ ಅಲ್ಲ, 2024ರ ಅಕಾಡೆಮಿ (ಆಸ್ಕರ್) ಪುರಸ್ಕಾರಕ್ಕೆ ನಾಮ ನಿರ್ದೇಶನಗೊಂಡು ಸಿನಿಮಾಸಕ್ತರ ಗಮನ ಸೆಳೆದಿದೆ. ಈ ವರ್ಷ ನಡೆಯುವ ಹಲವು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಳ್ಳಲು ಸಜ್ಜಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಜಗತ್ತಿನ ಹಲವು ದೇಶಗಳಲ್ಲಿ ಅತಿಯಾದ ಮಳೆ, ಪ್ರವಾಹ, ಸುನಾಮಿ, ಚಂಡಮಾರುತ, ಬರ ಇತ್ಯಾದಿ ಪದೇ ಪದೇ ಸಂಭವಿಸುತ್ತಿವೆ. ನಮ್ಮ ದೇಶದ ಒಂದಲ್ಲ ಒಂದು ರಾಜ್ಯದಲ್ಲಿ ಪ್ರತಿವರ್ಷ ಮಳೆ ಮತ್ತು ಪ್ರವಾಹಗಳಿಂದ ಅಸಂಖ್ಯ ಜನ ಪ್ರಾಣ ಕಳೆದುಕೊಳ್ಳುತ್ತಾರೆ. ಅಪಾರ ಪ್ರಮಾಣದ ಸಾರ್ವಜನಿಕ ಆಸ್ತಿ ಪಾಸ್ತಿ ನಷ್ಟವಾಗುತ್ತದೆ. ಸಾವಿರಾರು ಜನ ಆಶ್ರಯ ಕಳೆದುಕೊಳ್ಳುತ್ತಾರೆ. ಯಾವುದೇ ಮೂಲೆಯಲ್ಲಿ ಸಂಭವಿಸುವ ನಿಸರ್ಗದ ವೈಪರೀತ್ಯಗಳನ್ನು ಕೆಲ ಗಂಟೆಗಳಲ್ಲಿ ಇಡೀ ಜಗತ್ತಿಗೆ ತೋರಿಸುವ ವಿಷಯದಲ್ಲಿ ಸುದ್ದಿ ಮಾಧ್ಯಮಗಳ ನಡುವೆ ಪೈಪೋಟಿ ನಡೆಯುತ್ತಿದೆ. ಐದು ವರ್ಷಗಳ ಹಿಂದಿನ ಕೇರಳದ ಮಳೆ ಅವಾಂತರಗಳನ್ನೆಲ್ಲ ದೇಶದ ಜನ ಟೀವಿ ಚಾನಲ್‌ಗಳ ಮೂಲಕ ನೋಡಿದ್ದಾರೆ. ಅನೇಕರು ಮರೆತೂ ಇದ್ದಾರೆ. ಮಳೆ ದುರಂತಗಳನ್ನು '2018' ಸಿನಿಮಾ ಮತ್ತೆ ನೆನಪಿಸುತ್ತಿದೆ. ಮಳೆಯ ಅಬ್ಬರ ಹಾಗೂ ಅದರ ದುರಂತ ಮುಖಗಳನ್ನು ಇಟ್ಟುಕೊಂಡು ಸಿನಿಮಾ ನಿರ್ಮಿಸುವ ಮಾತುಗಳು '2018'ರಲ್ಲಿ ಕೇಳಿಬಂದರೂ ಅದು ಕಾರ್ಯರೂಪಕ್ಕೆ ಬರಲು ಐದು ವರ್ಷಗಳು ಬೇಕಾಯಿತು.

ಸರ್ಕಾರ ಸೋತ ಕಡೆ ಸಮಾಜ ಗೆಲ್ಲುತ್ತದೆ ಎಂಬ ಮಾತಿದೆ. ಅತಿಯಾದ ಮಳೆ ತಂದೊಡ್ಡಿದ ಸಾಲು ಸಾಲು ಸವಾಲುಗಳನ್ನು ಎದುರಿಸುವ ಮಾರ್ಗ ಕಾಣದೆ ಅತಂತ್ರ ಸ್ಥಿತಿಗೆ ತಲುಪಿದ ನೂರಾರು ಜನರ ರಕ್ಷಣೆಗೆ ಸ್ಥಳೀಯರು ಒಂದಾಗಿ ಧಾವಿಸಿ, ದಿಟ್ಟತನದಿಂದ ಪರಿಸ್ಥಿತಿಯನ್ನು ನಿಭಾಯಿಸುವುದು '2018' ಸಿನಿಮಾದ ಒಂದು ಸಾಲಿನ ಕಥೆ.

2018 ಚಿತ್ರದ ಪೋಸ್ಟರ್



ಜ್ಯೂಡ್ ಅಂಟನಿ ಜೋಸೆಫ್ ಈ ಸಿನಿಮಾದ ನಿರ್ದೇಶಕರು. ನೂರೈವತ್ತು ನಿಮಿಷಗಳ ಈ ಸಿನಿಮಾ 2018ರ ಮುಂಗಾರು ಮಳೆ ದುರಂತಗಳ ದೃಶ್ಯ ದಾಖಲೆಯಾಗಿ ಗಮನ ಸೆಳೆಯುವುದಲ್ಲದೆ, ಪ್ರವಾಹವನ್ನು ಎದುರಿಸುವ ವಿಷಯದಲ್ಲಿ ಜನರು ತೋರಿದ ಸಂಯಮ, ಧೈರ್ಯ, ಸಾಹಸಗಳ ಜತೆಗೆ ಮಾನವೀಯತೆಯನ್ನೂ ಎತ್ತಿಹಿಡಿಯುತ್ತದೆ.

ಚಿತ್ರಪಟ

'2018'ರ ಜುಲೈ ತಿಂಗಳಲ್ಲಿ ಕರ್ನಾಟಕದ ಕೊಡಗಿನಲ್ಲೂ ಮುಂಗಾರು ಮಳೆ ಸಾಲು ಸಾಲು ಅವಾಂತರಗಳನ್ನು ಸೃಷ್ಟಿಸಿತ್ತು. ಹಲವಾರು ಮನೆಗಳು, ಹತ್ತಾರು ಎಕರೆಗಳ ಕಾಫಿ ತೋಟಗಳು ಪ್ರವಾಹದಲ್ಲಿ ಕೊಚ್ಚಿಹೋದವು. ಸಂಪರ್ಕ ವ್ಯವಸ್ಥೆ ಹಾಳಾಯಿತು. ಕೊಡಗು ಎಲ್ಲವನ್ನೂ ಕೊಡವಿಕೊಂಡು ಮೇಲಕ್ಕೆದ್ದು ಸಹಜ ಸ್ಥಿತಿಗೆ ಮರಳಿದೆ. ಆದರೆ ಮಳೆಯಿಂದಾಗಿ ಸಾವಿನ ಸಮೀಪಕ್ಕೆ ಹೋಗಿ ಬಂದ ಜನರಿಗೆ 2018ರ ಮಳೆ ಇಂದಿಗೂ ದುಃಸ್ವಪ್ನ.

2018ರ ಜುಲೈ 21ರಂದು ಕೇರಳದ ಕೊಲ್ಲಂ, ಅಲುವಾ ಸುತ್ತಮುತ್ತಲಿನ ಪ್ರದೇಶದಲ್ಲಿ ಸತತ ಮಳೆ ಸುರಿಯಿತು. ಮಳೆಯ ನೀರಿನ ಜತೆಗೆ ಪೆರಿಯಾರ್ ನದಿಯಲ್ಲಿ ಪ್ರವಾಹ ಬಂತು. ಮುಲ್ಲಪೆರಿಯಾರ್ ಅಣೆಕಟ್ಟೆಯಿಂದ ಭಾರಿ ಪ್ರಮಾಣದ ನೀರನ್ನು ಹೊರಬಿಡಲಾಯಿತು. ಪ್ರವಾಹದ ನೀರು ಹತ್ತಾರು ಗ್ರಾಮಗಳಿಗೆ, ನಂತರ ಮನೆಗಳಿಗೂ ನುಗ್ಗಿತು. ನೂರಾರು ಜನ ಪ್ರವಾಹದ ನಡುವೆ ಸಿಲುಕಿದರು. ಅವರನ್ನು ರಕ್ಷಿಸಿ, ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಿಸುವುದು ಸರ್ಕಾರಕ್ಕೆ ಸವಾಲಾಯಿತು.

ಸಿನಿಮಾದ ಮೊದಲ ಭಾಗದಲ್ಲಿ ನಿರಂತರವಾಗಿ ಸುರಿಯುವ ಮಳೆಯ ನಡುವೆಯೂ ಜನ ನಿರಾತಂಕವಾಗಿ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿರುವುದನ್ನು ಹೇಳಿದರೆ, ಎರಡನೇ ಭಾಗದಲ್ಲಿ ಹಠಾತ್ ಪ್ರವಾಹದ ಪರಿಣಾಮಗಳನ್ನು ತೋರಿಸುತ್ತ ರಕ್ಷಣಾ ಕಾರ್ಯಾಚರಣೆಯ ಸಾಹಸಗಳನ್ನು ಕಟ್ಟಿಕೊಡುತ್ತದೆ. ಮಳೆ ಬಗ್ಗೆ ಟಿವಿ ಚಾನಲ್ ಒಂದು ಸರ್ಕಾರ ಮತ್ತು ಜನರನ್ನು ಎಚ್ಚರಿಸುತ್ತದೆ. ಪ್ರವಾಹ ಹೆಚ್ಚಾದಂತೆ ನೆರವಿನ ನಿರೀಕ್ಷೆಯಲ್ಲಿರುವ ಜನರ ಬಳಿಗೆ ಹೋಗಲಾಗದ ಅಸಹಾಯಕತೆ ಸರ್ಕಾರಿ ಯಂತ್ರದ್ದು. ಈ ಸಂದರ್ಭದಲ್ಲಿ ಕೊಲ್ಲಂ, ಅಲುವಾ ಮತ್ತಿತರ ಪ್ರದೇಶಗಳ ಮೀನುಗಾರರು, ಯುವಕರು ದೋಣಿ, ತೆಪ್ಪ ಇತ್ಯಾದಿಗಳನ್ನು ಪ್ರವಾಹ ಪ್ರದೇಶಕ್ಕೆ ಒಯ್ದು, ಅವನ್ನು ನೀರಿಗಿಳಿಸಿ ಸಂತ್ರಸ್ತರನ್ನು ರಕ್ಷಿಸುತ್ತಾರೆ. ಎಲ್ಲರನ್ನೂ ಪುನರ್ವಸತಿ ಕೇಂದ್ರಗಳಿಗೆ ಸುರಕ್ಷಿತವಾಗಿ ಸೇರಿಸುತ್ತಾರೆ. ನಿಸರ್ಗದ ಎದುರು ಮನುಷ್ಯ ಅಸಹಾಯಕತೆಯನ್ನೂ ಸಂಘಟಿತ ಪ್ರಯತ್ನಗಳಿಂದ ಎಂಥದೇ ಪರಿಸ್ಥಿತಿಯನ್ನೂ ನಿಭಾಯಿಸಲು ಸಾಧ್ಯ ಎನ್ನುವುದನ್ನು ಸಾದರಪಡಿಸುವ '2018' ನೋಡುಗರಿಗೆ ಆಪ್ತವಾಗುತ್ತದೆ.

ಮಳೆಗಾಲದ ಆರಂಭದಲ್ಲಿ ಜನಜೀವನ ಎಂದಿನ ಲಯದಲ್ಲೇ ಸಾಗುತ್ತದೆ. ಮಳೆಯಲ್ಲೇ ಶಾಲೆಗಳು ನಡೆಯುತ್ತವೆ. ಭವಿಷ್ಯರೂಪಿಸಿಕೊಳ್ಳುವಧಾವಂತದಲ್ಲಿರುವ ಯುವಜನರು ಹಲವು ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಮಳೆಯ ನಡುವೆ ಮದುವೆ ಪ್ರಸ್ತಾಪಗಳು, ವ್ಯಾಪಾರ, ವಹಿವಾಟುಗಳೂ ನಡೆಯುತ್ತವೆ. ಮಳೆಯಲ್ಲೇ ಕೇರಳ ನೋಡಲು ಪೋಲೆಂಡ್‌ನ ಪ್ರವಾಸಿ ದಂಪತಿ ಬರುತ್ತಾರೆ. ಮಳೆ ಹೆಚ್ಚಾದಂತೆ ಜನಜೀವನದ ಮೇಲೆ ಪ್ರವಾಹದ ದಾಳಿ ಆರಂಭವಾಗುತ್ತದೆ. ಕೆಲವೇ ಗಂಟೆಗಳಲ್ಲಿ ಪರಿಸ್ಥಿತಿ ಕೈಮೀರುತ್ತದೆ. ಪ್ರವಾಹ ನಿಯಂತ್ರಣಕ್ಕೆ ಇಡುಕ್ಕಿ ಜಿಲ್ಲಾಡಳಿತದ ವಾರ್–ರೂಮ್‌ನಲ್ಲಿ ಅಧಿಕಾರಿಗಳು ಮಳೆಯ ಮಾಹಿತಿಗಾಗಿ ಟಿವಿ ಚಾನಲನ್ನೇ ಅವಲಂಬಿಸುತ್ತಾರೆ. ಯಾಂತ್ರಿಕ ದೋಣಿಗಳು ಮತ್ತಿತರ ಸೌಲಭ್ಯಗಳ ಕೊರತೆಯಿಂದ ಸಕಾಲದಲ್ಲಿ ಸಂತ್ರಸ್ತರಿಗೆ ನೆರವಾಗಲು ಸಾಧ್ಯವಾಗುವುದಿಲ್ಲ. ಸೇನೆಯಿಂದ ನಿವೃತ್ತಿ ಪಡೆದು ಸಣ್ಣ ಅಂಗಡಿ ಇಟ್ಟುಕೊಂಡ ಯುವಕ ಅನೂಪ್, ಮೀನುಗಾರ ಮಾಥಚ್ಚನ್, ಅವನ ಕುಟುಂಬದವರು ಸೇರಿ ಅನೇಕರು ಸಂತ್ರಸ್ತರ ರಕ್ಷಣೆಗೆ ಮುಂದಾಗುತ್ತಾರೆ. ಪ್ರವಾಹದಲ್ಲಿ ಸಿಕ್ಕಿಕೊಂಡ ಗರ್ಭಿಣಿಯ ರಕ್ಷಣೆಗೆ ಸೇನಾ ಹೆಲಿಕಾಪ್ಟರ್ ಬರುವ ವೇಳೆಗೆ ಸ್ಥಳೀಯರೇ ಬಹುತೇಕ ಸಂತ್ರಸ್ತರನ್ನು ರಕ್ಷಿಸಿ, ಪುರ್ನವಸತಿ ಕೇಂದ್ರಗಳಿಗೆ ಕಳಿಸುತ್ತಾರೆ.

ಇತ್ತೀಚಿನ ಹಲವು ಸಿನಿಮಾಗಳ ಮೂಲಕ ಮುನ್ನೆಲೆಗೆ ಬಂದಿರುವ ನಟ ಟೊವಿನೊ ಥಾಮಸ್ (ಅನೂಪ್) ಮಾಜಿ ಯೋಧನಾಗಿ, ಸರ್ಕಾರದ ವಾರ್–ರೂಮ್ ಅಧಿಕಾರಿಯಾಗಿ ಕೊಂಚಾಕೊ ಬೂಬನ್, ಮೀನುಗಾರ ಕುಟುಂಬ ಹಿರಿಯ ಮಾಥಚ್ಚನ್ ಪಾತ್ರದಲ್ಲಿ ಹಿರಿಯ ನಟ ಲಾಲ್, ತಾಯಿಯನ್ನು ನೋಡಲು ದುಬೈನಿಂದ ಬರುವ ಯುವಕನಾಗಿ ವಿನೀತ್ ಶ್ರೀನಿವಾಸ್, ಲಾರಿ ಚಾಲಕ ಸೇತುಪತಿಯಾಗಿ ಕಲೈ ಅರಸನ್ ಮತ್ತು ತನ್ವಿ ರಾಂ ಅಸಿಫ್ ಅಲಿ, ಇಂದ್ರನ್, ಅಪರ್ಣಾ ಬಾಲಮುರಳಿ, ಅಜು ವರ್ಗಿಸ್, ಆಸಿಫ್ ಅಲಿ ಸೇರಿ ಮೂವತ್ತಕ್ಕೂ ಹೆಚ್ಚು ಪಾತ್ರಗಳು ಈ ಸಿನಿಮಾದಲ್ಲಿವೆ. ಪ್ರತಿಯೊಂದು ಪಾತ್ರವೂ ನಾಯಕನಂತೆ ವಿಜೃಂಭಿಸಿದರೂ ಸಿನಿಮಾದ ನಿಜವಾದ ಹೀರೊ ಮಳೆ.

2018ರ ಪ್ರವಾಹ ಸಂದರ್ಭದಲ್ಲಿ ಚಿತ್ರಿಸಿಕೊಂಡ ಹಲವು ಫೂಟೇಜುಗಳ ಜತೆಗೆ ಪ್ರವಾಹ ಸನ್ನಿವೇಶಗಳನ್ನು ಹೈದರಾಬಾದ್‌ನ ಸ್ಟುಡಿಯೊ ಒಂದರಲ್ಲಿ ಸೃಷ್ಟಿಸಿ ಚಿತ್ರೀಕರಣ ಮಾಡಲಾಗಿದೆ. ಅಖಿಲ್ ಜಾರ್ಜ್ ಈ ಸಿನಿಮಾದ ಛಾಯಾಚಿತ್ರಗ್ರಾಹಕರು.

ತಂಗಳು (ರಾಟನ್ ಸ್ಟಫ್) ಸರಕಿನ ಸಿನಿಮಾ ಎಂಬ ಟೀಕೆಯ ನಡುವೆಯೂ ಕೇರಳದ ಸಿನಿಮಾಸಕ್ತರು '2018' ಸಿನಿಮಾವನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡಿದ್ದಾರೆ.

ಹಣ್ಣಾಗದೆ ಮಣ್ಣಾದ ಬದುಕುಗಳ ಕಥನ

ರಘುನಾಥ ಚ.ಹ.

ಹೊಸ ನೀರು ರಭಸದಿಂದ ಕೂಡಿಕೊಳ್ಳುತ್ತಿರುವ ಕನ್ನಡ ಕಾದಂಬರಿ ಲೋಕಕ್ಕೆ ಮತ್ತೊಂದು ಸೇರ್ಪಡೆ 'ಧಾವತಿ.' ಇದು ಹೊಸತಷ್ಟೇ ಅಲ್ಲ, ಗಮನಾರ್ಹ ಸೇರ್ಪಡೆಯೂ ಹೌದು.

ಕೋಲಾರ ಜಿಲ್ಲೆಯ ಲಕ್ಕೂರಿನ ಗಂಗಪ್ಪ ತಳವಾರ್ ಕವಿತೆಗಳ ಮೂಲಕ ಓದುಗರಿಗೆ ಪರಿಚಿತರು. 'ಧಾವತಿ' ಕಾದಂಬರಿಯ ಮೂಲಕ ತುಸು ದೀರ್ಘ ಕಥನ ಪ್ರಯೋಗಕ್ಕೆ ಅವರು ತಮ್ಮನ್ನೊಡ್ಡಿಕೊಂಡಿರುವುದು ಕುತೂಹಲಕರ. ಚೊಚ್ಚಿಲ ಪ್ರಯತ್ನದಲ್ಲೇ ಕಾದಂಬರಿ ಪ್ರಕಾರದ ಸಾಧ್ಯತೆಗಳನ್ನು ಒಲಿಸಿಕೊಳ್ಳಲು ಅವರು ನಡೆಸಿರುವ ಪ್ರಯತ್ನ ಗಮನಸೆಳೆಯುವಂತಿದೆ.

ವಿಮರ್ಶೆ

ಚಂದ್ರಿ ಹಾಗೂ ಅವಳ ತಾಯಿ ದುರ್ಗಿ ಎನ್ನುವ ಇಬ್ಬರು ನತದೃಷ್ಟ ಹೆಣ್ಣುಮಕ್ಕಳ ಕಥೆ 'ಧಾವತಿ'ಯಲ್ಲಿದೆ. ಈ ಕಾದಂಬರಿಯನ್ನು ಎರಡು ರೂಪದಲ್ಲಿ ನೋಡಬಹುದು. ಒಂದು, ಚಂದ್ರಿ ಎನ್ನುವ ಪುಟ್ಟ ಹುಡುಗಿಯ ಕಣ್ಣುಗಳ ಮೂಲಕ ಕಾಣುವ ಹಳ್ಳಿಯೊಂದರ, ಕೇರಿಯೊಂದರ ಅಸಹಾಯಕ ಬದುಕುಗಳ ಚಿತ್ರಣ. ಎರಡನೆಯದು, ಬೆಳೆದ ಚಂದ್ರಿಯ ಬದುಕಿನ ತಲ್ಲಣಗಳು ಹಾಗೂ ದುರಂತ.

ಅಕ್ಕಮಹಾದೇವಿಯ ವಚನದಿಂದ ಕಡ ತೆಗೆದುಕೊಂಡ 'ಧಾವತಿ' ಎನ್ನುವ ಪದಕ್ಕೆ ಧಾವಂತ ಎನ್ನುವ ಅರ್ಥವನ್ನು ಕಾದಂಬರಿಕಾರರು ಹಚ್ಚಿದ್ದಾರೆ. ಸಮೃದ್ಧ ಬದುಕಿಗೆ ಹಂಬಲಿಸಿ ಅತೃಪ್ತಗೊಂಡ ಮನಸ್ಥಿತಿಯನ್ನೂ ಧಾವತಿ ಎನ್ನಬಹುದು. ಇಲ್ಲಿನ ಚಂದ್ರಿಯ ಅಮ್ಮನಿಗೆ ಸಮೃದ್ಧ ಬದುಕಿನ ಹಂಬಲವೇನೂ ಇಲ್ಲ. ಬದುಕನ್ನು ಅದು ಬಂದಂತೆಯೇ ಸ್ವೀಕರಿಸುವ ಮನಸ್ಥಿತಿ ಅವಳದು. ಅಮ್ಮನ ಬದುಕಿನ ದುರಂತಗಳನ್ನು ಕಣ್ಣಾರೆ ಕಂಡ ಚಂದ್ರಿಗೆ ಚಂದದೊಂದು ಬದುಕು ಕಟ್ಟಿಕೊಳ್ಳುವ ಆಸೆ ಸುಪ್ತವಾಗಿದೆ. ಆದರೆ, ಅವಳ ಬದುಕಿನಲ್ಲಿ ಪ್ರವೇಶಿಸುವ ಗಂಡುಗಳಿಗೆ ಚಂದ್ರಿ ತಮ್ಮ ಕಾಮನೆಗಳನ್ನು ತೀರಿಸುವ ದೇಹವಾಗಿ ಕಾಣುತ್ತಾಳೆಯೇ ಹೊರತು, ಆ ದೇಹದೊಳಗಿನ ಮನಸ್ಸನ್ನು ಒಬ್ಬರೂ ಸ್ಪರ್ಶಿಸುವುದೇ ಇಲ್ಲ. ಚಂದ್ರಿ ಹಾಗೂ ಅವಳ ಮಗಳನ್ನು ಅನಾರೋಗ್ಯದ ಸಂದರ್ಭದಲ್ಲಿ ಪೊರೆಯುವ ಮೈದುನನೂ, ಅತ್ತಿಗೆಯನ್ನು ಒಲಿಸಿಕೊಂಡ ನಂತರ 'ಅಪ್ಪಟ ಗಂಡಸಾಗಿ' ಬದಲಾಗುತ್ತಾನೆ. ಆಸರೆಯೆಂದು ಭಾವಿಸಿದ್ದೆಲ್ಲ ಸೆರೆಯಾಗಿ ಪರಿಣಮಿಸಿ, ಕೊನೆಗೆ ಚಂದ್ರಿಯ ಬದುಕು ಅವಳ ಅಮ್ಮನ ಸಾವಿನ ಬೆನ್ನಿಗೇ ಕೊನೆಗೊಳ್ಳುತ್ತದೆ.

ಇದು ಮಗಳ ಕಥೆಯೋ ತಾಯಿಯದೋ ಎಂದು ಗೆರೆ ಎಳೆಯುವುದು ಕಷ್ಟವೆನ್ನಿಸುವ ಮಟ್ಟಿಗೆ ಇಬ್ಬರು ಹೆಣ್ಣುಮಕ್ಕಳ ಬದುಕುಗಳು ಕಾದಂಬರಿಯಲ್ಲಿ ಬೆರೆತುಹೋಗಿವೆ. ತಾಯಿ ಮಗಳ ಹೆಸರುಗಳನ್ನು ಪಕ್ಕಕ್ಕಿಟ್ಟು ನೋಡಿದರೆ, ತಳವರ್ಗದ ಬಹುತೇಕ ಹೆಣ್ಣುಮಕ್ಕಳ ಸಂಕಟಗಳನ್ನು ಕಾಣಿಸುವ ಸಾಧ್ಯತೆಯಾಗಿಯೂ 'ಧಾವತಿ'ಯನ್ನು ನೋಡಬಹುದು. ಚಂದ್ರಿಯ ಬಾಳು ಓದುಗರ ಎಣಿಕೆಯನ್ನು ಎಲ್ಲೂ ತಲೆಕೆಳಗು ಮಾಡುವುದಿಲ್ಲ. ಓದುಗನನ್ನು ರೋಮಾಂಚನಗೊಳಿಸುವ ಹುಕಿ ಕಾದಂಬರಿಕಾರರಿಗಿಲ್ಲ. ತನ್ನ ಅನುಭವಲೋಕದ ತುಣುಕೊಂದನ್ನು ಅದು ಇರುವಂತೆಯೇ ಓದುಗರ ಮುಂದಿಟ್ಟು, ಎದೆಯೊಳಗಿನ ನಿಟ್ಟುಸಿರನ್ನು ಹೊರಹಾಕುವ ಪ್ರಯತ್ನ ಇಲ್ಲಿಯದು. ಆ ನಿಟ್ಟುಸಿರು ಓದುಗರ ಎದೆಯನ್ನು ತಾಕಿ ತಲ್ಲಣಗೊಳ್ಳುವಂತೆ ಮಾಡುವುದರಲ್ಲಿ 'ಧಾವತಿ'ಯ ಯಶಸ್ಸಿದೆ.

ಬಯಸಿದ ಬದುಕು ಸಿಗದೆ, ಸಿಕ್ಕ ಬದುಕೂ ಅಸಹನೀಯವಾಗಿ, ಅವಸರದಲ್ಲಿ ಮುಗಿದುಹೋಗುವ ಚಂದ್ರಿಯ ಬದುಕಿಗೆ 'ಧಾವತಿ' ಎನ್ನುವ ರೂಪಕ ಹೊಂದುವಂತಹದ್ದು. ಆದರೆ, 'ಧಾವತಿ'ಯನ್ನು ರೂಪಿಸುವಾಗ ಕಾದಂಬರಿಕಾರರೂ ಅವಸರಕ್ಕೆ ಬಿದ್ದಂತೆ ಕಾಣಿಸುತ್ತದೆ. ಚಂದ್ರಿಯ ಸಂಕಷ್ಟಗಳನ್ನು ಲಂಬಿಸದೆ, ಭಾವುಕವಾಗಿಸದೆ ಒಂದು ಅಂತರದಲ್ಲಿ ನಿಂತು ಕಥೆ ಹೇಳುವ ತಂತ್ರ ಚೆನ್ನಾಗಿದೆ. ಚಂದ್ರಿ ತನ್ನ ಕಥೆಯನ್ನು ತಾನೇ ಹೇಳಿಕೊಳ್ಳುವ ನಿರೂಪಣೆಯ ತಂತ್ರ ಕಾದಂಬರಿಕಾರರಿಗೆ ಅನುಕೂಲಕರವಾಗಿಯೂ ಇದೆ. ಆದರೆ, ಪಾತ್ರವೇ ಮಾತನಾಡತೊಡಗಿದಾಗ, ಅದಕ್ಕೊಂದು ಚೌಕಟ್ಟು ಸಹಜವಾಗಿಯೇ ಒದಗಿಬಿಡುವುದರಿಂದ, ಚಂದ್ರಿಯ ಪಾತ್ರಕ್ಕೆ ಸಹಜವಾಗಿ ದಕ್ಕಬೇಕಾದ ವಿಸ್ತಾರ ದೊರೆತಿಲ್ಲ ಅನ್ನಿಸುತ್ತದೆ. ಎಂಬತ್ತು ಪುಟಗಳಲ್ಲಿಯೇ ಎರಡು ಬದುಕುಗಳ ಕಥೆ ಕೊನೆಗೊಳ್ಳುತ್ತದೆ. ಶಾಲೆಯಲ್ಲಿನ ಕಲಿಕೆಯ ದಿನಗಳು, ಜಾನುವಾರುಗಳನ್ನು ಮೇಯಿಸುವುದು, ಹೂವು ಬಿಡಿಸಲು ಹೋಗುವುದು, ಜಾತ್ರೆಯ ಸಂಭ್ರಮ ಹಾಗೂ ನಿಟ್ಟುಸಿರು, ಬಾಡಿನ ಸಂಭ್ರಮ, ಮದ್ಯದ ಗಮಲು, ಜಾತೀಯತೆಯ ಸ್ವರೂಪ–ಹೀಗೆ, ಕಥನದ ವಿಸ್ತಾರಕ್ಕೆ ಪೂರಕವಾದ ಅನೇಕ ಸನ್ನಿವೇಶಗಳು ಕಾದಂಬರಿಯಲ್ಲಿವೆ. ಇಂಥ ಸನ್ನಿವೇಶಗಳು ಚಂದ್ರಿಯ ಬದುಕಿನ ಚೆಲುವು ಹಾಗೂ ದುರಂತವನ್ನು ಹೇಗೆ ಧ್ವನಿಸಬಲ್ಲವು ಎನ್ನುವುದನ್ನು ಕಾದಂಬರಿ ಪ್ರಕಾರದ ಸ್ವಾತಂತ್ರ್ಯವನ್ನು ಬಳಸಿಕೊಂಡು ವಿಸ್ತರಿಸಲು ಅವಕಾಶವಿತ್ತು.



ಧಾವತಿ
ಲೇ: ಗಂಗಪ್ಪ ತಳವಾರ್
ಪ್ರ: ತಮಟೆ ಪ್ರಕಾಶನ, ಬೆಂಗಳೂರು.
ಫೋನ್: 9945430119
ಪು: 104 ₹120

ಸಣ್ಣಕಥೆಯ ಬಿಗುವಿನಲ್ಲಿ ಕಥೆ ಹೇಳಿರುವ ಗಂಗಪ್ಪ, ವಿವರಗಳ ಚಿತ್ರಣದಲ್ಲಿ ಗಮನಸೆಳೆದರೂ ಧಾರಾಳಿಯಂತೇನೂ ಕಾಣಿಸುವುದಿಲ್ಲ. ಚಂದ್ರಿ ಮತ್ತು ಅವಳ ಅವ್ವನ ಪಾತ್ರಗಳನ್ನು ಹೊರತುಪಡಿಸಿದರೆ, ಕಾದಂಬರಿಯಲ್ಲಿ ಮತ್ತೊಂದು ಗಟ್ಟಿ ಪಾತ್ರವಿಲ್ಲ. ಮನೆಗೆ ಆಗಾಗ ಬಂದುಹೋಗುವ ಅತಿಥಿಯಂತೆ ಮಗಳ ಕಣ್ಣಿಗೆ ಕಾಣಿಸುವ ಪ್ಯಾಂಟಪ್ಪನ ಪಾತ್ರಪೋಷಣೆ ಮತ್ತಷ್ಟು ಅಗತ್ಯವಾಗಿತ್ತು.

'ಧಾವತಿ' ಕಾದಂಬರಿಯ ಶಕ್ತಿಯಿರುವುದು ಅದರ ಭಾಷೆಯಲ್ಲಿ. ಗದ್ಯದಲ್ಲಿ ಬಳಕೆಯಾಗುವ ಆಡುಮಾತು ಬಹುತೇಕ ಸಂದರ್ಭಗಳಲ್ಲಿ ಬಿಡುಬೀಸಾಗಿ, ಒರಟಾಗಿ, ವಾಚ್ಯವಾಗಿ ಬಳಕೆಯಾಗುವ ಸಾಧ್ಯತೆ ಹೆಚ್ಚು. ಆಡುಮಾತಿನಿಂದ ಕಥನಕ್ಕೆ ಪ್ರಾದೇಶಿಕ ಚೆಲುವು ಒದಗಿಬರುತ್ತದೆನ್ನುವುದು ನಿಜವಾದರೂ, ತನ್ನ ಲಯ ಹಾಗೂ ಸೂಕ್ಷ್ಮಗಳನ್ನು ಉಳಿಸಿಕೊಳ್ಳದ ಸಂದರ್ಭದಲ್ಲದು ಬರಹದ ದೌರ್ಬಲ್ಯವಾಗಿಬಿಡುತ್ತದೆ. ತನ್ನ ಮಾತು ಓದುಗನಿಗೆ ಅನ್ಯವೆನ್ನಿಸದಂತೆ ಬರೆಯುವುದು ಬರಹಗಾರ ಎದುರಿಸುವ ಬಹುದೊಡ್ಡ ಸವಾಲು. ಈ ಸವಾಲನ್ನು ನಿಭಾಯಿಸುವಲ್ಲಿ ಗಂಗಪ್ಪ ಯಶಸ್ವಿಯಾಗಿದ್ದಾರೆ. ಕೋಲಾರ ಸೀಮೆಯ ಅವರ ಭಾಷೆ ಮಣ್ಣಿನ ಗುಣದೊಂದಿಗೆ ತನ್ನ ಲಯ ಹಾಗೂ ಕಾವ್ಯದ ಬಿಗು ಉಳಿಸಿಕೊಂಡಿರುವ ಕಾರಣದಿಂದಲೇ ಅದು ಕಾದಂಬರಿಗೆ ಶಕ್ತಿಯಾಗಿ ಪರಿಣಮಿಸಿದೆ. 'ಧಾವತಿ'ಯಂತೆ, ಕಥೆ ಘಟಿಸುವ ಆವರಣದ ನುಡಿ ಪರಿಣಾಮಕಾರಿಯಾಗಿ ಬಳಕೆಯಾಗಿರುವ ಉದಾಹರಣೆಗಳು ಸದ್ಯದ ಸಂದರ್ಭದಲ್ಲಿ ವಿರಳ.

ಯಾಕಾದರೂ ಮಳೆ...

1ನೇ ಪುಟದಿಂದ...

ಉತ್ತರೀ ಬಿಸಿಲಿನ ಚುರುಗುಟ್ಟುವಿಕೆಯನ್ನು ತಡೆದುಕೊಂಡು, ತೆನೆಯ ತುಂಬ ಕಾಳುಗಳನ್ನು ತುಂಬಿಸಿಕೊಳ್ಳಲು ತಲೆಯಮಟ್ಟಕ್ಕೆ ಬೆಳೆದ ಬೆಳೆಗೆ ಅಂಥದ್ದೊಂದು ಮಳೆ ಬೇಕೇಬೇಕು. ಅದೇ ಕೈಕೊಟ್ಟಿದ್ದಕ್ಕೆ ರಾಜು ಅವರಂತಹ ರೈತರೆಲ್ಲ ಕೈಕೈ ಹಿಸುಕಿಕೊಳ್ಳುವಂತಾಗಿದೆ. ಇದು ಬರೀ ಚಳಗೇರಿಯ ರೈತರ ನಿಟ್ಟುಸಿರಲ್ಲ. ಚಾಮರಾಜನಗರದಿಂದ ಬೀದರ್‌ವರೆಗಿನ ಅನೇಕ ಹಳ್ಳಿಗಳ ರೈತರ ನಿಟ್ಟುಸಿರು. 'ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ' ಅನ್ನೋದಕ್ಕೆ ಈ ವರ್ಷದ ಮುಂಗಾರು ಒಂದು ಉದಾಹರಣೆಯಷ್ಟೆ.

ಮೆಕ್ಕೆಜೋಳ ಮಾತ್ರವಲ್ಲದೆ ಹೆಸರು, ಶೇಂಗಾ, ಹತ್ತಿ, ಮೆಣಸಿನಕಾಯಿ, ಉಳ್ಳಾಗಡ್ಡಿ ಮತ್ತಿತರ ಬೀಜಗಳನ್ನು ಬಿತ್ತಿ ಪ್ರತಿಫಲಕ್ಕೆ ಕಾಯುತ್ತಿದ್ದ ರೈತರು ಬರಗಾಲದ ಹೊಡೆತಕ್ಕೆ ಸಿಲುಕಿದ್ದಾರೆ.

ಕೆಲವು ನದಿ ಪಾತ್ರದ ಪ್ರದೇಶಗಳಲ್ಲಿ ಕಬ್ಬು, ತೋಟಗಾರಿಕೆ ಬೆಳೆ ಬೆಳೆಯುವ ಪಂಪ್‌ಸೆಟ್ ಅವಲಂಬಿತ ರೈತರಿಗೂ ನೀರಿನ ಕೊರತೆ ಕಾಡಿದೆ. 15ರಿಂದ 18 ಗಣಿಕೆ ಇರುತ್ತಿದ್ದ ಪ್ರತಿ ಕಬ್ಬಿನ ಜಲ್ಲೆಯಲ್ಲಿ ಈ ಬಾರಿ ಕೇವಲ ಎಂಟ್ಹತ್ತು ಗಣಿಕೆ ಕಾಣಿಸಿಕೊಂಡಿದೆ. ತೂಕವೂ ಇಲ್ಲ. ಕಬ್ಬು ಅರೆಯುವ ಕಾರ್ಖಾನೆಗಳಿಗೆ ಈ ಬಾರಿ ಅರ್ಧದಷ್ಟು ಮಾತ್ರ ಕೆಲಸ ಇರಲಿದೆ. ಮಧ್ಯ ಕರ್ನಾಟಕ ಮತ್ತು ಮಲೆನಾಡಿನ ಅಡಿಕೆ ಬೆಳೆಗಾರರದ್ದೂ ಇದೇ ಗೋಳು. ಅಡಿಕೆ ತೂಕವಿಲ್ಲ. ಬೇಸಿಗೆ ವೇಳೆ ಅಡಿಕೆ ಗಿಡ ಉಳಿಸಿಕೊಳ್ಳಲು ಆಗುವುದೇ ಎಂಬ ಪ್ರಶ್ನೆ ಕಾಡುತ್ತಿದೆ. ಆದರೆ, ಮಳೆಯಾಶ್ರಿತ ಬೆಳೆಗಾರರಂತೆ ಇವರಿಗೆ ದಿಢೀರ್ ಸಮಸ್ಯೆ ತಲೆದೋರುವುದಿಲ್ಲ ಎಂಬುದು ನೆಮ್ಮದಿಯ ಸಂಗತಿಯಾಗಿದೆ.

ಹಬ್ಬದ ಹುರುಪಿಲ್ಲ

ಹಬ್ಬಗಳ ಸಾಲು ಶುರುವಾಗಿದೆ. ಶ್ರಾವಣದಲ್ಲಿ ವರಮಹಾಲಕ್ಷ್ಮಿ ಪೂಜೆ ಆಯ್ತು, ಗೌರಿ- ಗಣೇಶೋತ್ಸವ ಮುಗಿಯಿತು. ಈದ್ ಮಿಲಾದ್ ಆಚರಿಸಿಯಾಯ್ತು. ನವರಾತ್ರಿಯ (ದಸರಾ) ದುರ್ಗಾಪೂಜೆ ಕಳೆಗಟ್ಟುತ್ತಿದೆ. ಮುಂದೆ ಹಟ್ಟಿಹಬ್ಬ (ದೀಪಾವಳಿ) ಇದೆ. ಮುಂಗಾರು ಕೈಹಿಡಿದಿದ್ದರೆ ಹಬ್ಬದ ಕಥೆಯೇ ಬೇರೆ ಇರುತ್ತಿತ್ತು. ನವರಾತ್ರಿ ಕಳೆಯುವುದರೊಳಗೆ ಅಥವಾ ದೀಪಾವಳಿಯ ಆಸುಪಾಸಿನಲ್ಲಿ ಸುಗ್ಗಿಯ ಕಾಲ. ಕೃಷಿ ನಂಬಿದವರಲ್ಲಿ ಹುರುಪು ಸಹಜವಾಗಿ ಕಂಡುಬರುತ್ತಿತ್ತು. ಅದೀಗ ಮಾಯವಾಗಿದೆ. ಭರಪೂರ ಮಳೆಗಾಲದಲ್ಲೂ ಬಿರುಬಿಸಿಲು ಕಾಡಿತ್ತು. ಈಗ ಚಳಿಯ ಸುಳಿವೇ ಇಲ್ಲದಂತಾಗಿದೆ. ಇಬ್ಬನಿಗೆ ಚಿಗಿತುಕೊಳ್ಳುತ್ತಿದ್ದ ಫಸಲನ್ನೂ ಈ ಬಾರಿ ನೆಚ್ಚಿಕೊಳ್ಳುವಂತಿಲ್ಲ ಎಂಬಂತಾಗಿದೆ.



ಮುಂಗಾರು ಕೊರತೆಯಿಂದ ಹರಿಹರದ ಬಳಿ ಒಣಗಿ ಹೋಗಿರುವ ಮೆಕ್ಕೆಜೋಳ ಬೆಳೆ

ಗ್ರಾಮೀಣರಿಗೂ, ಪಟ್ಟಣವಾಸಿಗಳಿಗೂ ಅವಿನಾಭಾವ ಸಂಬಂಧವಿದೆ. ಹಳ್ಳಿಗಳಲ್ಲಿ ಸೊಬಗಿದ್ದರೆ ಪಟ್ಟಣದಲ್ಲಿ ಸಡಗರವಿರುತ್ತದೆ. ಆದರೀಗ ಗ್ರಾಮಗಳಲ್ಲಿನ ಬಹುತೇಕರ ಮುಖಗಳಲ್ಲಿ ಮಂದಹಾಸವಿಲ್ಲ. ಬಿಕೋ ಎನ್ನುತ್ತಿರುವ ಪೇಟೆಬೀದಿಗಳೂ ಹೆಚ್ಚಾಗಿವೆ. ಮಾರುಕಟ್ಟೆಗಳಲ್ಲಿ ಆಸೆಗಣ್ಣಿನಿಂದ ಕಾಯುತ್ತಿರುವ ವ್ಯಾಪಾರಿಗಳನ್ನು ಕೇಳುವವರ ಸಂಖ್ಯೆ ಕ್ಷೀಣಿಸಿದೆ. ಕೊಳ್ಳುವವರಿಲ್ಲದಿದ್ದರೆ ಹುರುಪು ಇರುವುದಾದರೂ ಹೇಗೆ? ಕೃಷಿಯನ್ನೇ ನೆಚ್ಚಿಕೊಂಡಿರುವ ಬಹುತೇಕ ಗ್ರಾಮೀಣರಲ್ಲಿ ದಸರಾ, ದೀಪಾವಳಿಗೆ ಖರೀದಿ ಭರಾಟೆ ಮೊದಲಿನಂತೆ ಇಲ್ಲ.

'ದಸರಾ ಮತ್ತು ದೀಪಾವಳಿ ಹಬ್ಬಗಳ ನಡುವೆ ಭೂಮಿ (ಸೀಗಿ) ಹುಣ್ಣಿಮೆ ಇದೆ. ಭೂಮಿತಾಯಿಯನ್ನು ಮನದುಂಬಿ ಪೂಜಿಸುವ ದಿನ ಅದು. ಹಸಿರುಟ್ಟು ನಲಿಯುವ ಭೂತಾಯಿ ಆ ಹಬ್ಬಕ್ಕೆ ಪುಟವಿಟ್ಟಂತೆ. ಮುಂಗಾರು ಉತ್ಪನ್ನವನ್ನು ಮನೆ ತುಂಬಿಸಿಕೊಂಡು, ಹಿಂಗಾರು ಬೆಳೆಯ ನಿರೀಕ್ಷೆಯಲ್ಲಿರುವ ಕೃಷಿಕರ ಹೃದಯ ತುಂಬಿಬರುವ ದಿನವೂ ಅದೇ. ಆದರೆ, ಈ ವರ್ಷ ಭೂಮಿ ಹುಣ್ಣಿಮೆಗೆ ರೈತರ ಜೇಬು ಮಾತ್ರವಲ್ಲ ಮನಸ್ಸೂ ಖಾಲಿಯಾಗಿದೆ' ಎಂದು ಜಗಳೂರು ಬಳಿಯ ಅಣಜಿಯ ರೈತ ಶ್ರೀನಿವಾಸ ಮಾತು ಮುಂದುವರಿಸಿದರು.

'ಮಕ್ಕಳಿಗೆ ಹಬ್ಬಕ್ಕೆ ಹೊಸ ಬಟ್ಟೆ ಕೊಡಿಸಬೇಕು. ಕೈಯಲ್ಲಿ ದುಡ್ಡಿಲ್ಲ. ಸಾಲದ ಹೊರೆ ಹೆಚ್ಚುತ್ತಿದೆ. ಮತ್ತೆ ಸಾಲ ಹುಟ್ಟುವುದಿಲ್ಲ. ಮುಂದೇನು ಎಂಬ ಪ್ರಶ್ನೆ ಕಾಡುತ್ತಿದೆ. ಇದೇ ರೀತಿ ಆದರೆ ಜೀವನ ನಡೆಸುವುದೇ ಕಷ್ಟ' ಎಂದು ಹೇಳುವಾಗ ಅವರ ಧ್ವನಿಯಲ್ಲಿ ಆತಂಕ ಬೆರೆತಿತ್ತು.

'ಭೂಮಿ ಹುಣ್ಣಿಮೆಯಂದೇ ಮಹರ್ಷಿ ವಾಲ್ಮೀಕಿ ಜಯಂತಿಯೂ ಇರುತ್ತದೆ. ಅವತ್ತು ರಜಾ ದಿನ. ನಮ್ಮವರೊಂದಿಗೆ ಬೆರೆತು, ಹಳ್ಳಿಗಳಲ್ಲಿನ ಹೊಲಗಳಿಗೆ ಹೋಗಿ ಸಂಭ್ರಮಿಸುವ, ಜೊತೆಗೆ ಕುಳಿತು ಭೋಜನ ಸವಿಯುವ ದಿನ. ಈ ಬಾರಿ ಆ ಸಂಭ್ರಮಕ್ಕೆ ಸಕಾರಣವೇ ಇಲ್ಲ. ತೀವ್ರ ಬರ ಆ ಎಲ್ಲ ಸಂಭ್ರಮಕ್ಕೂ ತೆರೆ ಎಳೆದಿದೆ' ಎಂಬ ಅವರ ಮಾತು ಆ ಭಾಗದ ಬಹುತೇಕ ರೈತರ ಅನಿಸಿಕೆ ಎಂಬಂತೆ ಭಾಸವಾಯಿತು.

ಇವರಿಗೆ ಬರ ಹೊಸದಲ್ಲ

ಉತ್ತರ ಕರ್ನಾಟಕದ ಬಹುತೇಕ ಪ್ರದೇಶಗಳ ರೈತರಿಗೆ ಬರಗಾಲ ಹೊಸದಲ್ಲ. ಅವರು ಬೆಳೆಯುವ ಹೆಸರು ಕಾಳು 10 ವರ್ಷಗಳಲ್ಲಿ ಸರಾಸರಿ ನಾಲ್ಕು ವರ್ಷ ಮುದುರಿಕೊಳ್ಳುತ್ತದೆ. ಹತ್ತಿ ಬೀಜವನ್ನು ಬಿತ್ತಿದರೂ ಮೇಲಕ್ಕೇಳುವುದಿಲ್ಲ. ಉಳ್ಳಾಗಡ್ಡಿ ಹೆಚ್ಚು ಖರ್ಚನ್ನು ಅಪೇಕ್ಷಿಸುತ್ತದೆಯಾದರೂ, ಅದರ ಲಾಭ ರೌದಿಯಲ್ಲೇ ಕೊನೆಗೊಳ್ಳುತ್ತದೆ. ಆದರೆ, ದಟ್ಟ ಮಲೆನಾಡು ಪ್ರದೇಶಗಳಾದ ಶಿವಮೊಗ್ಗ, ಚಿಕ್ಕಮಗಳೂರು ಅರೆಮಲೆನಾಡು ಪ್ರದೇಶಗಳನ್ನು ಒಳಗೊಂಡಿರುವ ಹಾವೇರಿ, ಕಾರವಾರ, ಉಡುಪಿ, ಕೊಡಗು ಮಾತ್ರವಲ್ಲ ನೀರಾವರಿಗೆ ಹೆಸರಾಗಿರುವ ಮಂಡ್ಯ ಜಿಲ್ಲೆಯ ರೈತರ ಸ್ಥಿತಿ ಉತ್ತರ ಕರ್ನಾಟಕದ ರೈತರ ಸ್ಥಿತಿಗೆ ಭಿನ್ನವೆಂಬಂತೆ ಕಾಣುತ್ತಿಲ್ಲ.

ಒಮ್ಮೆ ಬೀಜ ಬಿತ್ತಿ ಬಂದರೆ ಅಲ್ಲಿಂದ ಖರ್ಚಿನ ಸರಣಿ ಶುರುವಾದಂತೆಯೇ. ಬಿತ್ತನೆಗೂ ಮೊದಲಿನ ಖರ್ಚು ರೈತರನ್ನು ಅಷ್ಟಾಗಿ ಬಾಧಿಸುವುದಿಲ್ಲ. ನಂತರದ ವೆಚ್ಚವೇ ಅವರ ಕಿಸೆಯನ್ನೆಲ್ಲ ಖಾಲಿ ಮಾಡುವಂಥದ್ದು. ಒಂದರ ಹಿಂದೆ ಒಂದರಂತೆ ಖರ್ಚು ತಪ್ಪಿದ್ದಲ್ಲ. ಬಿತ್ತನೆ ಮಾಡಿದರೆ ಸಾಕು ಮುಂದಿನ ಪರಿಸ್ಥಿತಿ ಖರ್ಚು ಮಾಡಲು ಹಚ್ಚಿಸುತ್ತದೆ. ಒಂದು ಕೆಲಸವನ್ನೂ ಅಲಕ್ಷಿಸುವಂತಿಲ್ಲ. ಬಿಟ್ಟರೆ ಇಳುವರಿ ಬರದು. ಏನೆಲ್ಲ ಖರ್ಚು ಮಾಡಿದರೂ ಮಳೆ ಬೇಕೇಬೇಕು. ಬರದಿದ್ದರೆ ಎಲ್ಲವೂ ನಿಷ್ಪ್ರಯೋಜಕ. ಈಗ ಇವರ ಸ್ಥಿತಿಗೆ ಕಾರಣವೂ ಅದೇ.

ಮೊದಲ ಓದು


ಸ್ವಾರಸ್ಯಕರ ಘಟನೆಗಳೂ, ಪಾಠವೂ

ಅರಣ್ಯ ಇಲಾಖೆಯೊಳಗೆ ನಡೆದಾಡಿದ ಲೇಖಕರ ಬದುಕಿನ ಅನುಭವಗಳು, ಚಾರಣಗಳ ನೆನಪುಗಳ ಬುತ್ತಿಯೊಳಗಿನ ಘಟನೆಗಳ ಲಲಿತ ಪ್ರಬಂಧಗಳ ಗುಚ್ಛವಿದು. ಒಟ್ಟು 20 ಲೇಖನಗಳಿವೆ. ಲೇಖಕರ ಸಾಹಿತ್ಯ ಪ್ರೀತಿಯನ್ನು ಅವರ ಬರವಣಿಗೆಯಲ್ಲೇ ಕಾಣಬಹುದಾಗಿದೆ. ಬಳಸಿರುವ ಭಾಷೆ ಆಕರ್ಷಕವಾಗಿದೆ. ಮಲೆನಾಡು–ಬಯಲುಸೀಮೆ ಜೋಡಿಯ ಸ್ವಾರಸ್ಯಕರ ಘಟನೆಗಳಿಂದಲೇ ಕೃತಿ ಆರಂಭವಾಗುತ್ತದೆ. ಲೇಖಕರ ಬರವಣಿಗೆ ಒಂದು ರೀತಿಯಲ್ಲಿ ಅನುಕ್ರಮಣಿಕೆ ಚಿತ್ರಕಥೆಯಂತಿದೆ. ಹಲವು ನೆನಪುಗಳನ್ನು ಮೆಲುಕು ಹಾಕುತ್ತಾ, ಅದರೊಳಗೆ ಹಿಂದಿನ ಘಟನೆಗಳನ್ನು ಉಲ್ಲೇಖಿಸುತ್ತಾ ಸಾಗುತ್ತಾರೆ ಪುರುಷೋತ್ತಮ ರಾವ್. ಉದಾಹರಣೆಗೆ, ಹೆಂಡತಿ ನೀಡಿದ ಕಷಾಯವೊಂದನ್ನು ಎದುರಿಗಿಟ್ಟುಕೊಂಡು ಬಯಲುಸೀಮೆಯ ಎಮ್ಮೆಯ ವಿವರಣೆಯತ್ತ ಸಾಗುತ್ತಾರೆ. ಅವುಗಳು ಕಲಗಚ್ಚು ಕುಡಿಯುವ ರೀತಿಯನ್ನು ಇವರು ಅಕ್ಷರಗಳಲ್ಲಿ ವರ್ಣಿಸುವುದೇ ಚೆಂದ. ಸಂದರ್ಭಕ್ಕೆ ತಕ್ಕಂತೆ ಹಲವು ವಿಷಯಗಳ ಜೋಡಣೆಗಳನ್ನು ಇಲ್ಲಿ ಕಾಣಬಹುದು. ತಮ್ಮ ಅನುಭವಗಳ ಜೊತೆಗೆ ಇತರರ(ಪಾತ್ರಗಳ) ಅನುಭವಗಳ ಸಾರವೂ ಇಲ್ಲಿದೆ. ಹಳ್ಳಿಗಾಡಿನ ಕಥನಗಳನ್ನು ಸ್ವಾರಸ್ಯಕರ ನಿರೂಪಣೆಯಲ್ಲಿ ಓದುಗರ ಎದುರಿಗೆ ಇರಿಸಿದ್ದಾರೆ ಲೇಖಕರು.



ಪೆದ್ದನ್ನನ ಇಕಾಲಜಿ ಮತ್ತು ಪರಿಸರ ಲೇಖನಗಳು
ಲೇ: ಎಚ್.ಎ.ಪುರುಷೋತ್ತಮ ರಾವ್
ಪ್ರ: ನಿವೇದಿತ ಪ್ರಕಾಶನ
ಸಂ: 9448733323
ಪು: 180 ₹200

ಅನುವಾದ ಸಾಹಿತ್ಯದ ಮೌಲಿಕ ವಿಶ್ಲೇಷಣೆ



ಕನ್ನಡಕ್ಕಾಗಿ ಹೊಲಿದುಕೊಂಡ ದಿರಿಸುಗಳು
ಲೇ: ಡಾ.ಆರ್. ತಾರಿಣಿ ಶುಭದಾಯಿನಿ
ಪ್ರ:ಶ್ರೀ ಸಿದ್ಧಲಿಂಗೇಶ ಪ್ರಕಾಶನ, ಕಲಬುರಗಿ
ಸಂ:9448124431
ಪು: 232 ₹240

ಕನ್ನಡದಲ್ಲಿ ಬಂದ ಅನುವಾದಗಳ ಸಾಂಸ್ಕೃತಿಕ ಅಧ್ಯಯನ ಎಂಬ ಅಡಿಬರಹ ಇರುವ ಈ ಪುಸ್ತಕದಲ್ಲಿ 13 ಬಿಡಿ ಲೇಖನಗಳಿವೆ. ಶೇಕ್ಸ್‌ಪಿಯರ್‌ನಿಂದ ಗಾಂಧೀಜಿವರೆಗೂ ಕನ್ನಡದಲ್ಲಿ ಪಾಶ್ಚಿಮಾತ್ಯದಿಂದ ಪೌರ್ವಾತ್ಯ ಸಾಹಿತ್ಯ ದಕ್ಕಿಸಿಕೊಂಡ ಬಗೆಯನ್ನು ತಾರಿಣಿ ಅವರು ವಿಶ್ಲೇಷಿಸಿದ್ದಾರೆ. ಅಲ್ಲಿಂದ ಇಲ್ಲಿಗೆ ಬರುವ ಪ್ರಕ್ರಿಯೆಗೆ ಒಂದು ಶತಮಾನದ ಇತಿಹಾಸವಿದೆ. ಆದರೆ ಇಲ್ಲಿಂದ ಅಲ್ಲಿಗೆ ಹೋಗಿದ್ದೆಷ್ಟು ಎಂಬ ಪ್ರಶ್ನೆಯನ್ನು ಲೇಖಕಿ ಎತ್ತುತ್ತಾರೆ. ರಷ್ಯನ್ ಸಾಹಿತ್ಯ ಜಗತ್ತಿಗೆ ಪರಿಚಯವಾಗಲಿ, ರಷ್ಯನ್ ಸಿದ್ಧಾಂತಗಳು ಜನರಿಗೆ ತಲುಪಲಿ ಎಂದು ಆ ಕಾಲದ ಸೋವಿಯತ್ ರಷ್ಯಾ ಒಕ್ಕೂಟ ಅನುವಾದಕ್ಕೆ ಹೆಚ್ಚು ಪ್ರೋತ್ಸಾಹ ನೀಡಿತ್ತು. ವಿದೇಶಿ ಭಾಷೆಗಳನ್ನು ಕಲಿತವರು, ಆಯಾ ಭಾಷೆಯ ಕ್ಲಾಸಿಕ್‌ಗಳನ್ನು ಕನ್ನಡಕ್ಕೆ ತರಲು ಇಂಗ್ಲಿಷ್ ಮೊರೆಹೋಗಿದ್ದು, ಆ ಓದು ಹೇಗೆಲ್ಲ ಸಾಂಸ್ಕೃತಿಕ ವಲಯದಲ್ಲಿ ಸ್ವೀಕೃತವಾಗಿದೆ ಎಂಬುದನ್ನೂ ವಿವರಿಸಲಾಗಿದೆ. ಕನ್ನಡದಲ್ಲಿ ಅನುವಾದ ಸಾಹಿತ್ಯವನ್ನು ಮೂರು ಘಟ್ಟಗಳಲ್ಲಿ ವಿವರಿಸಲಾಗಿದೆ. ಕನ್ನಡ ನವೋದಯ ಸಾಹಿತ್ಯ ಪ್ರಕಾರದ ಜೊತೆಗೆ ಮತ್ತೆ ಮತ್ತೆ ಟಾಲ್‌ಸ್ಟಾಯ್ ಹಾಗೂ ಗಾಂಧೀಜಿಯವರ ನೈತಿಕ ಸಿದ್ಧಾಂತಗಳು, ಧೋರಣೆಗಳು ಅನುಸಂಧಾನವಾಗುವ ಬಗೆಯನ್ನು ಲೇಖಕಿ ಪ್ರತಿಪಾದಿಸುತ್ತ ಹೋಗುತ್ತಾರೆ. ಕನ್ನಡದ ಜಾಯಮಾನಕ್ಕೆ ಒಗ್ಗುವ ಅನುವಾದ, ಕನ್ನಡತನದೊಂದಿಗೆ ಅನುಸಂಧಾನವಾಗುವ ಬಗೆಯನ್ನು ಪುಸ್ತಕ ಸರಳವಾಗಿ, ಉದಾಹರಣೆಗಳೊಂದಿಗೆ ವಿವರಿಸುತ್ತ ಹೋಗುತ್ತದೆ. ಸಾಹಿತ್ಯ ಸಂಶೋಧಕರಿಗೆ ಒಂದು ಆಕರ ಗ್ರಂಥದಂತೆ ಇರುವ ಕೃತಿಯಲ್ಲಿ ಪ್ರತಿ ಲೇಖನದೊಂದಿಗೆ ನೀಡಿರುವ ಆಕರಗ್ರಂಥಗಳ ಪಟ್ಟಿಯೂ ಸಹಾಯಕವಾಗಿದೆ.

ಸಶಕ್ತ ವ್ಯಕ್ತಿಗಳ ದರ್ಶನ

ಕರ್ನಾಟಕದ ತೆಲುಗಿನ ಗಡಿನಾಡನ್ನು–ಕೋಲಾರಕ್ಕೆ ಹೊಂದಿಕೊಂಡ ಪ್ರದೇಶ–'ಮೊರಸುನಾಡು' ಎಂದು ಕರೆಯುತ್ತಾರೆ. ಇಂತಹ ಪ್ರದೇಶಗಳಲ್ಲಿ ನಿತ್ಯದ ಬದುಕಿನಲ್ಲಿ ಸಹಜ ಎನ್ನುವಂತೆಯೇ ವಿಶೇಷತೆ ಉಳಿಸಿಕೊಂಡಿರುವ ಅನೇಕರಿದ್ದಾರೆ. ಅಂಥವರನ್ನು ಸ.ರಘುನಾಥ ಗುರುತಿಸಿದ್ದಾರೆ. ಅವರೇ ಬರೆದುಕೊಂಡಂತೆ, 'ಇವನ್ನು ಬರೆದವನು ನಾನಲ್ಲ. ಅವರ ವ್ಯಕ್ತಿತ್ವಗಳು ಬರೆಸಿದವು.' ನಲವತ್ತು ವ್ಯಕ್ತಿಚಿತ್ರಗಳು ಈ ಸಣ್ಣ ಪುಸ್ತಕದಲ್ಲಿವೆ. ಒಂದೊಂದೂ ಒಂದೆರಡು ನಿಮಿಷಗಳ ಓದನ್ನಷ್ಟೆ ಬಯಸುತ್ತದೆ. ಆದರೆ, ಅಷ್ಟರಲ್ಲೆ ಆ ವ್ಯಕ್ತಿಗಳು ನಮ್ಮ ಮನದಲ್ಲಿ ಅಲೆಗಳನ್ನು ಎಬ್ಬಿಸಬಲ್ಲಷ್ಟು ಶಕ್ತರು. 'ಊರವರ ಮನೆಗಳಲ್ಲಿ ಕಾಲುಕಡಿ ಕೇರುವುದು–ಮಾಡುವುದು ಕಕ್ಕಮ್ಮ ಮಾಡುತ್ತಿದ್ದ ಕೆಲಸಗಳು. ಅದಕ್ಕೆ ಸಿಗುತ್ತಿದ್ದುದು ತಂಗಳು ಮುದ್ದೆಗಳು. ಬೆಳಗಿನ ಹೊತ್ತು ಮನೆಮನೆ ತಿರುಗಿ ತಂಗಳು ಮುದ್ದೆಗಳನ್ನು ಸೆರಗಿಗೆ ಹಾಕಿಸಿಕೊಂಡು ಗುಡಿಸಲಿಗೆ ಬರುತ್ತಿದ್ದರು. ಬೀದಿಗಳಲ್ಲಿ ಆಡುವ, ಕೂಲಿನಾಲಿಗೆ ಹೋದವರ ಮಕ್ಕಳನ್ನು ಹುಡುಕಿ ಕರೆತಂದು ಸಾರಿನಲ್ಲೋ ಉಪ್ಪಿನಕಾಯಲ್ಲೋ ಅದ್ದಿ ಕೈತುತ್ತು ಹಾಕುತ್ತಿದ್ದರು.'– ಇದು ಪುಸ್ತಕದ ಮೊದಲ ಅಗುಳು. ಓದುತ್ತಾ ಹೋದಂತೆ ಇಂತಹ ಇನ್ನಷ್ಟು ಸಶಕ್ತ ಮನಸ್ಸುಗಳು ನಮ್ಮ ಎದೆಗೆ ಇಳಿಯುತ್ತವೆ.



ಮೊರಸುನಾಡಿಗರು– ವ್ಯಕ್ತಿ ಚಿತ್ರಗಳು
ಲೇ: ಸ. ರಘುನಾಥ
ಪ್ರ: ನಿವೇದಿತ ಪ್ರಕಾಶನ, ಬೆಂಗಳೂರು
ಸಂ: 9448733323
ಪು: 160 ₹200

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕಬ್ಬದಂಗನೆ

'ಕಬ್ಬ'ವೆಂದರೆ ಕಾವ್ಯ, ಕವನ. ಅಂಗನೆ-ಹೆಂಗಸು.
ಕುವೆಂಪು ಅವರು ಕಾವ್ಯ ಕನ್ನಿಕೆಯನ್ನು 'ಕಬ್ಬದಂಗನೆ' ಎಂಬ ಪದ ಸೃಷ್ಟಿಸಿ ಪ್ರಯೋಗಿಸಿದ್ದಾರೆ. ಅವರ ಪ್ರಥಮ ಕವನ ಸಂಕಲನ 'ಕೊಳಲು'ವಿನಲ್ಲಿ ಮುಗ್ಧ ಬಾಲಕನಾದ ಅವರು ಮಲೆನಾಡಿನ ಬನಗಳಲ್ಲಿ ಅಲೆಯುತ್ತಿರಲು.

'ಅರಿಯದಂತೆ ಹೆಜ್ಜೆಯಿಟ್ಟು
ಬೆನ್ನಹಿಂದೆ ನೀನು ಬಂದೆ
ಕಬ್ಬದಂಗನೆ!'

(ಕವಿತೆಗೆ) ಎಂದು ತನ್ನನ್ನು ಹಿಂಬಾಲಿಸಿದ ಕಾವ್ಯ ಸ್ಫೂರ್ತಿ ಚೇತನವನ್ನು ಬಣ್ಣಿಸಿದ್ದಾರೆ.

ದೊರೆವಟ್ಟೆ

ದೊರೆವಟ್ಟೆ (ನಾ). ರಾಜಮಾರ್ಗ; ರಾಜಬೀದಿ.
(ದೊರೆ + ಬಟ್ಟೆ)
ದಶರಥನ ನಾಲ್ಕು ಪುತ್ರರ ವಿವಾಹ ಮೆರವಣಿಗೆ ಮಿಥಿಲೆಯಿಂದ ಅಯೋಧ್ಯೆಗೆ ಸಕಲ ವೈಭವದೊಡನೆ ಸಾಗಿತು. ಅದು ಮಂಗಳನಾದಗಳೊಡನೆ ಕ್ರಮಿಸಿದ ಮಾರ್ಗವನ್ನು ಹೇಳುವಾಗ ಕವಿಯು ಹೊಸಪದ 'ದೊರೆವಟ್ಟೆ'ಯನ್ನು ರೂಪಿಸಿ ಪ್ರಯೋಗಿಸಿದ್ದಾರೆ. ರಾಜಮಾರ್ಗವು ಕನ್ನಡನುಡಿ 'ದೊರೆವಟ್ಟೆ'ಯಲ್ಲಿ ಕಂಗೊಳಿಸಿದೆ.

ಜನಕನೃಪನಂ ಮರಳಿ
ಮಿಥಿಳಾಪುರಿಗೆ ಬೀಳುಕೊಟ್ಟು, ದೊರೆವಟ್ಟೆಯಂ
ಪಿಡಿದು ಮಂಗಳವರೆಯ ನಾದಕ್ಕೆ ನಡೆನಡೆಯೆ
ನಿಡುವೊಸಗೆ.

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಮೇರು ಗಾಯಕಿಯಾಗಿರುವ ವಿದುಷಿ ಪದ್ಮಾಮೂರ್ತಿ ಅವರಿಗೆ ಮೈಸೂರು ಆಸ್ಥಾನ ವಿದ್ವಾನ್ ಪುರಸ್ಕಾರ ಒಲಿದಿದೆ. ಈ ಹಿನ್ನೆಲೆಯಲ್ಲಿ ಸುಮಾರು ಎಂಟು ದಶಕಗಳ ತಮ್ಮ ಸಂಗೀತಯಾನವನ್ನು ಅವರು ಹಂಚಿಕೊಂಡಿದ್ದಾರೆ...

‘ನಾದಮಯ ಈ ಜೀವನವೆಲ್ಲ...’



ವಿದುಷಿ ಪದ್ಮಾಮೂರ್ತಿ

ಉಮಾ ಅನಂತ್

ಸ್ವರ ಸಾರ

ವಾಗ್ಗೇಯಕಾರ ಮೈಸೂರು ವಾಸುದೇವಾಚಾರ್ಯರು ರಚಿಸಿದ ‘ಕಮಾಜ್’ ರಾಗದ ‘ಬ್ರೋಚೆವಾರೆವರುರಾ ನಿನ್ನು ವಿನಾ..’ ಸುಪ್ರಸಿದ್ಧ ಕೃತಿಯನ್ನು ಆಸ್ವಾದಿಸದ ಸಂಗೀತ ರಸಿಕರು ಯಾರಿದ್ದಾರೆ ಹೇಳಿ? ಸಂತ ತ್ಯಾಗರಾಜರ ಶಿಷ್ಯಪರಂಪರೆಗೆ ಸೇರಿದ ವಾಸುದೇವಾಚಾರ್ಯರು ಇಂತಹ ಹಲವಾರು ಕೀರ್ತನೆಗಳನ್ನು ರಚಿಸಿದ್ದು, ಎಲ್ಲವೂ ಸಂಗೀತ ಕ್ಷೇತ್ರದಲ್ಲಿ ಅಮೂಲ್ಯ ರತ್ನಗಳೆನಿಸಿವೆ. ಇಂಥ ಮಹಾನ್ ವಾಗ್ಗೇಯಕಾರರು ತಾವಾಗಿಯೇ ಬಂದು ‘ನೀನು ನನ್ನ ಶಿಷ್ಯಳಾಗು’ ಎಂದು ಹೇಳಿದರೆ ಅದಕ್ಕಿಂತ ದೊಡ್ಡ ಸೌಭಾಗ್ಯ ಇನ್ನೇನಿದೆ? ಇಂಥ ಸದವಕಾಶವನ್ನು ತಮ್ಮದಾಗಿಸಿಕೊಂಡವರು ಈ ಬಾರಿಯ ಮೈಸೂರು ದಸರಾದಲ್ಲಿ ‘ರಾಜ್ಯ ಆಸ್ಥಾನ ವಿದ್ವಾನ್’ ಪುರಸ್ಕಾರ ಸ್ವೀಕರಿಸಿದ ವಿದುಷಿ ಪದ್ಮಾಮೂರ್ತಿ.

ತಮ್ಮ ಮೂರನೇ ವಯಸ್ಸಿನಲ್ಲೇ ಸಂಗೀತ ಕಲಿಯಲಾರಂಭಿಸಿ ಆರನೇ ವಯಸ್ಸಿಗೇ ವಾಸುದೇವಾಚಾರ್ಯರ ಶಿಷ್ಯೆಯಾದ, ಸದ್ಯ ತೊಂಬತ್ತೊಂದು ವಯಸ್ಸಿನ ಪದ್ಮಾಮೂರ್ತಿ ಅವರ ಸುಮಾರು ಎಂಟು ದಶಕಗಳ ಸಂಗೀತ ಜೀವನಯಾನವೇ ರೋಚಕ. ಸಂಗೀತದ ಬಗೆಗಿನ ಅದ್ಭುತ ಅನುಭವಗಳನ್ನು ಅವರದೇ ಮಾತುಗಳಲ್ಲಿ ಕೇಳೋಣ.

‘ನನಗೀಗ ತೊಂಬತ್ತೊಂದು ವರ್ಷ. ಕೊಂಚವೂ ಧ್ವನಿ ಅಡಗದೆ ಈಗಲೂ ಹಾಡುತ್ತೇನೆ, ಸಂಗೀತ ಕಲಿಸುತ್ತೇನೆ, ಕಛೇರಿ ಕೊಡುತ್ತೇನೆ. ಸಂಗೀತದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೇನೆ. ಈಚೆಗೆ ‘ಆಸ್ಥಾನ ವಿದ್ವಾನ್’ ಪುರಸ್ಕಾರ ಸ್ವೀಕರಿಸಿದ್ದು ನನ್ನ ಜೀವನದಲ್ಲಿ ಮರೆಯಲಾಗದ ದಿನ.

ಹುಟ್ಟಿದ್ದು, (1932, ಜುಲೈ 24) ಬೆಳೆದಿದ್ದು, ಓದಿದ್ದು ಎಲ್ಲ ಮೈಸೂರಿನಲ್ಲೇ. ತಂದೆ ಟಿ.ಎಸ್. ರಾಜಗೋಪಾಲ ಅಯ್ಯಂಗಾರ್ ಸಂಗೀತಗಾರರೇ. ಕೆಂಗಲ್ ಹನುಮಂತಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ಎಂಎಲ್‌ಸಿ ಆಗಿದ್ರು. ನಂತರ ಕಾನೂನು ಕಾಲೇಜಿನ ಪ್ರಿನ್ಸಿಪಾಲ್ ಆದ್ರು. ತಾಯಿ ಜಯಲಕ್ಷ್ಮಿ ಕೀರ್ತನೆ ಹಾಡೋರು. ಅಡುಗೆ ಮಾಡುವಾಗಲೂ ಶಾಸ್ತ್ರೀಯ ಸಂಗೀತವನ್ನೇ ಹಾಡ್ತಿದ್ರು. ತ್ಯಾಗರಾಜರ ಪಂಚರತ್ನ ಕೃತಿಗಳಲ್ಲಿ ಒಂದಾದ ‘ಎಂದರೊಮಹಾನುಭಾವುಲು’ ಎಂದರೆ ಅವರಿಗೆ ಬಹಳ ಇಷ್ಟ. ದಿನಾ ಇದನ್ನೇ ಹಾಡ್ತಿದ್ರು. ಅತ್ಯಂತ ಚಿಕ್ಕ ವಯಸ್ಸಿನಲ್ಲೇ ನನಗೂ ಅದು ಬಾಯಿಪಾಠ ಆಗಿತ್ತು. ಮೈಸೂರಿನಲ್ಲಿ ಅರಮನೆ ವಿದುಷಿ ನಾಗಮ್ಮ ಹಿಂದೂಸ್ತಾನಿ ಸಂಗೀತ ಹಾಡ್ತಿದ್ರು. ಅವರಿಂದ ಹಿಂದೂಸ್ತಾನಿ ಸಂಗೀತವನ್ನೂ ಕಲಿತೆ. ವೀಣೆ ಸುಬ್ಬಣ್ಣನವರ ಶಿಷ್ಯ ವಿದ್ವಾನ್ ಕೃಷ್ಣಮೂರ್ತಿ ಅವರ ಬಳಿ ವೀಣೆ ನುಡಿಸಾಣಿಕೆ ಕಲಿತೆ. ಆರನೇ ವಯಸ್ಸಿನಲ್ಲೇ 20 ಕೃತಿಗಳನ್ನು ವೀಣೆಯಲ್ಲಿ ನುಡಿಸುತ್ತಿದ್ದೆ. ಮೈಸೂರು ವಾಸುದೇವಾಚಾರ್ಯದ ಸುಪ್ರಸಿದ್ಧ ಕೃತಿಗಳಾದ ‘ರಾ ರಾ ರಾಜೀವಲೋಚನ’, ‘ಶ್ರೀ ಚಾಮುಂಡೇಶ್ವರಿ ಪಾಲಯಮಾಂ’, ‘ಬ್ರೋಚೆವಾರೆವರುರಾ ನಿನ್ನು ವಿನಾ’ ಸ್ವರಪ್ರಸ್ತಾರ ಸಮೇತ ಹಾಡುತ್ತಿದ್ದೆ.

ನನ್ನ ಸಂಗೀತ ಜೀವನ ಒಂದು ಮಹತ್ವದ ತಿರುವು ಪಡೆದುಕೊಂಡದ್ದು ಇದೇ ಸಂದರ್ಭದಲ್ಲಿ. ಒಮ್ಮೆ ನಾನು ಮೈಸೂರು ವಾಸುದೇವಾಚಾರ್ಯರ ಕೃತಿಯನ್ನು ಮನೆಯೊಳಗೆ ಜೋರಾಗಿ ಹಾಡುತ್ತಿದ್ದೆ. ಅವರು ಮನೆ ಮುಂದೆ ವಾಕಿಂಗ್ ಹೋಗ್ತಾ ಇದ್ದಾಗ ನನ್ನ ಕೀರ್ತನೆ ಕೇಳಿ, ಮನೆಯೊಳಗೆ ಬಂದು ತಂದೆಯವರ ಬಳಿ, ‘ಅದು ಯಾರು ನನ್ನ ಕೃತಿಯನ್ನು ಹಾಡ್ತಾ ಇದ್ದಿದ್ದು?’ ಅಂತ ಕೇಳಿದ್ರು. ಆಗ ತಂದೆಯವರು, ಅದು ನನ್ನ ಮಗಳು ಎಂದಾಗ ಅವರು ಬಹಳ ಖುಷಿಪಟ್ಟು, ‘ಇನ್ನು ಮುಂದೆ ನಾನೇ ಇವಳ ಗುರು, ನನ್ನ ಮನೆಗೆ ಬಾ, ಸಂಗೀತ ಹೇಳಿಕೊಡ್ತೇನೆ’ ಅಂದ್ರು. ಇಷ್ಟು ದೊಡ್ಡ ವಿದ್ವಾಂಸರು, ವಾಗ್ಗೇಯಕಾರರು ನನ್ನನ್ನು ಶಿಷ್ಯೆ ಎಂದು ಅವರಾಗಿಯೇ ಸ್ವೀಕರಿಸಿದ್ದು ನನ್ನ ಸೌಭಾಗ್ಯ. ಸರಳೆ, ಜಂಟಿ ಸರಳೆ ಹೇಳಿಕೊಟ್ಟ ಮೇಲೆ ಪುರಂದರದಾಸರ ಪಿಳ್ಳಾರಿ ಗೀತೆ ‘ಲಂಬೋದರ ಲಕುಮಿಕರ’ ಹಾಡಿಸುವಾಗ ಇದಕ್ಕೆ ಅವರದೇ ಸ್ವರ ಹಾಕಿ ಹಾಡಿಸೋರು. ತ್ಯಾಗರಾಜರ ಕೃತಿ, ರಾಗ-ತಾನ-ಪಲ್ಲವಿ ಎಲ್ಲವನ್ನೂ ಹಾಡಿ ತೋರಿಸೋರು. ಈ ದೊಡ್ಡ ವಿಚಾರಗಳೆಲ್ಲ ನನಗೆ ಏನೂ ಅರ್ಥವಾಗದೆ ನಗ್ತಾ ಇದ್ದೆ. ಆಗ ಅವರು ‘ಏ ಪದ್ದಮ್ಮ, ಯಾಕೆ ನಗ್ತಿಯಾ, ಮುಂದೆ ನಿನಗೆ ಇದೆಲ್ಲ ಬೇಕಾಗುತ್ತೆ’ ಅಂತಿದ್ರು.

ಸರಣಿ ಕಛೇರಿಯ ಸಂಭ್ರಮ

ದೇಶದಾದ್ಯಂತ ನೂರಾರು ಕಛೇರಿ ಕೊಟ್ಟಿದ್ದೇನೆ. ಮದ್ರಾಸ್, ಅನಂತಪುರ, ಮುಂಬೈ, ದೆಹಲಿ... ಹೀಗೆ ನಿತ್ಯವೂ ಕಛೇರಿಗಳೇ. 1945-46ರಲ್ಲಿ ಮೈಸೂರು ಆಕಾಶವಾಣಿ ಶುರುವಾಯ್ತು. ಮೊದಲ ಬಾರಿಗೆ ಖರಹರಪ್ರಿಯ ರಾಗ, ಕಾಂಬೋಧಿ ರಾಗಗಳನ್ನು ಆಕಾಶವಾಣಿಗೆ ಹಾಡಿದೆ. 1950ರಲ್ಲಿ ಬೆಂಗಳೂರಿನ ಮಲ್ಲೇಶ್ವರಂ ಸಂಗೀತ ಸಭಾದಲ್ಲಿ ಕಛೇರಿ. ಚೌಡಯ್ಯ ಅವರ ಪಿಟೀಲು, ವೀರಭದ್ರಯ್ಯ ಅವರ ಮೃದಂಗ. ಸಂಗೀತ ರಸಿಕರ ಪ್ರಶಂಸೆಗೆ ಪಾತ್ರವಾಗಿದ್ದೇ ಅಲ್ಲದೆ ‘ಮೈಸೂರಿನ ಎಂ.ಎಸ್. ಸುಬ್ಬುಲಕ್ಷ್ಮಿ’ ಅಂತ ಕರೆಯೋದಕ್ಕೆ ಶುರುಮಾಡಿದ್ರು.

1953ರಲ್ಲಿ ಟಿ.ಎಸ್. ಮೂರ್ತಿ ಅವರೊಂದಿಗೆ ಮದುವೆ ಆಯ್ತು. ಅವರು ಪಿಟೀಲು ವಾದಕರು. ಭಾರತೀಯ ವಾಯುಸೇನೆಯಲ್ಲಿ ಎಂಜಿನಿಯರ್ ಆಗಿದ್ರು. ಅವರಿಗೆ ಉತ್ತರ ಭಾರತದ ವಿವಿಧ ಭಾಗಗಳಿಗೆ ವರ್ಗಾವಣೆ ಆಗೋದು. ಎಲ್ಲ ಕಡೆ ಹೋಗಬೇಕಿತ್ತು. ಅಲ್ಲೆಲ್ಲ ಕರ್ನಾಟಕ ಸಂಗೀತ ಇಲ್ಲ. ಹೀಗಾಗಿ ಸುಮಾರು 20 ವರ್ಷ ಸಂಗೀತ ದೂರ ಆಯ್ತು. ತುಂಬ ಬೇಸರ ಆಗೋದು. ಕಾನ್ಪುರಕ್ಕೆ ವರ್ಗ ಆದಾಗ ಅಲ್ಲಿ ಕಾಲೇಜು ಸೇರಿ ಸೈಕಾಲಜಿಯಲ್ಲಿ ಎಂ.ಎ ಮಾಡಿ ಹೈದರಾಬಾದ್‌ನಲ್ಲಿ ಪಿಎಚ್.ಡಿಯನ್ನೂ ಮುಗಿಸಿದೆ. 1972ರಲ್ಲಿ ಬೆಂಗಳೂರಿಗೆ ಬಂದೆವು. ಅದಾಗಿ ನಿಮ್ಹಾನ್ಸ್‌ನಲ್ಲಿ ‘ಮನಸ್ಸಿನ ಮೇಲೆ ಸಂಗೀತದಿಂದಾಗುವ ಪ್ರಭಾವ’ ವಿಷಯ ಕುರಿತು ಮಹಾಪ್ರಬಂಧ ಬರೆದೆ. 1973-80ರವರೆಗೆ ಮತ್ತೆ ಕಛೇರಿ ನೀಡಿದೆ.

1994ರಲ್ಲಿ ಇಟಲಿಯಲ್ಲಿ ವಿಶ್ವ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಿದ್ದೆ. ನೆದರ್ಲೆಂಡ್, ಜರ್ಮನಿ, ಅಮೆರಿಕ, ಅಟ್ಲಾಂಟ, ಲಂಡನ್, ವೆಸ್ಟ್‌ಇಂಡೀಸ್‌ಗಳಲ್ಲಿ ಕಛೇರಿ ನೀಡಿದ್ದೇನೆ. ಸಂಗೀತದ ಬಗ್ಗೆ 10 ಪುಸ್ತಕ ಬರೆದಿದ್ದೇನೆ. ಹಲವಾರು ಪ್ರಶಸ್ತಿ-ಪುರಸ್ಕಾರಗಳೂ ಬಂದಿವೆ. ಆದರೆ ನಮ್ಮದೇ ಊರಿನಲ್ಲಿ ನಮ್ಮವರ ಕೈಯಲ್ಲಿ ಭೇಷ್ ಅನಿಸಿಕೊಂಡಿದ್ದು ಬಹಳ ಸಂತೃಪ್ತಿ ತಂದಿದೆ..’ ಎನ್ನುತ್ತಾ ಈ ವಿದುಷಿ ಮಾತಿಗೆ ಮಂಗಳ ಹಾಡಿದರು.

ಮೊದಲ ಕಛೇರಿ ಪುಳಕ!

ನನ್ನ ಮೊದಲ ಕಛೇರಿ 8ನೇ ವಯಸ್ಸಿಗೆ. ಮೈಸೂರಿನ ಗಾಂಧಿ ಸ್ಕ್ವೇರ್‌ನಲ್ಲಿ ಕೋ-ಆಪರೇಟಿವ್ ಸೊಸೈಟಿಯವರು ನಡೆಸಿದ ಗಣೇಶ ಹಬ್ಬದಲ್ಲಿ ಏರ್ಪಾಡಾಗಿತ್ತು. ಚೆನ್ನಾಗಿ ತಯಾರಿ ನಡೆಸಿ ವೇದಿಕೆ ಏರಿದಾಗ ಅಲ್ಲೊಂದು ಅಚ್ಚರಿ ಕಾದಿತ್ತು. ನನಗೆ ಪಕ್ಕವಾದ್ಯದಲ್ಲಿ ಪಿಟೀಲು ನುಡಿಸಲು ಟಿ. ಚೌಡಯ್ಯನವರು, ಮೃದಂಗಕ್ಕೆ ಟಿ.ಎನ್. ಪುಟ್ಟಸ್ವಾಮಯ್ಯನವರು. ವೇದಿಕೆ ಮುಂಭಾಗದಲ್ಲಿ ಗುರು ವಾಸುದೇವಾಚಾರ್ಯರು! ನನಗೆ ಬಹಳ ಹೆದರಿಕೆ ಆಯ್ತು, ಇವರೆಲ್ಲರನ್ನೂ ನೋಡಿ. ಆಗ ನನ್ನ ಗುರು, ‘ಹಾಡು ಮರಿ, ಹಾಡು, ಹೆದರಿಕೊಳ್ಳಬೇಡ’ ಎಂದರು. ಆಗ ನಾನು ಧೈರ್ಯವಾಗಿ ‘ಸಿಂಹೇಂದ್ರ ಮಧ್ಯಮ’ ರಾಗದ ಕೀರ್ತನೆಯನ್ನು ಆಲಾಪ, ನೆರವಲ್, ಸ್ವರಪ್ರಸ್ತಾರ ಸಹಿತ ಹಾಡಿದೆ. ಮತ್ತೆ ಕೆಲವು ಕೃತಿ, ದೇವರನಾಮ ಸೇರಿ ಒಂದು ಗಂಟೆ ಕಾಲ ಹಾಡಿದೆ. ಕೇಳುಗರು ತುಂಬ ಖುಷಿಪಟ್ಟರು. ’ಚೈಲ್ಡ್ ಪ್ರಾಡಿಜಿ‘ ಅಂತ ಮರುದಿನ ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅಲ್ಲಿಂದ ಮುಂದೆ ‘ಆರೋಹಣ’ ಕಾಲ.

ರಘು ಎಂಬ ಬೆರಗು

ಗಾಣಧಾಳು ಶ್ರೀಕಂಠ

ನುಡಿ ನಮನ

ಸುಮಾರು 17 ವರ್ಷಗಳ ಹಿಂದೆ, ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆಯುತ್ತಿದ್ದ ‘ಸಾವಯವ ಸಂತೆ'ಯಲ್ಲಿ ಗೆಳೆಯರೆಲ್ಲ ಗುಂಪು ಕಟ್ಟಿಕೊಂಡು ಹರಟುತ್ತಿದ್ದೆವು. ಅಲ್ಲಿ ಕಂಡ ಹೊಸ ಮುಖವೇ ಕೆ.ಸಿ.ರಘು.

ಅಂದು ಝೆನ್ ಕಥೆ ಹೇಳುತ್ತಾ, ನಗಿಸುತ್ತ, ನಗುತ್ತಲೇ ಪರಿಚಯವಾದರು ರಘು. ಮೊದಲ ಭೇಟಿಯ ಮಾತುಗಳೇ ಅವರಲ್ಲಿದ್ದ ‘ಜ್ಞಾನದ ಅಗಾಧತೆ‘ಯನ್ನು ತೆರೆದಿಟ್ಟಿದ್ದವು. ಆ ಮಾತುಗಳು ಕೂಡ ಝೆನ್ ಕಥೆಗಳಂತೆ, ಮೊದಲು ನಗು ಉಕ್ಕಿಸಿ, ನಂತರ ಚಿಂತನೆಯ ಆಳಕ್ಕೆ ಇಳಿಸುತ್ತಿದ್ದವು. ಮುಂದೆ ಭೇಟಿಯಾದಾಗಲ್ಲೆಲ್ಲ ಹೀಗೆಯೇ ನಗುತ್ತಾ, ನಗಿಸುತ್ತಾ ನಮಗೆಲ್ಲರಿಗೂ 'ಜ್ಞಾನದ ರಸಗವಳ' ನೀಡುತ್ತಿದ್ದರು.

ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಕಲ್ಮನೆಯ ಕೃಷಿಕ ದಂಪತಿ ತಂದೆ ಚಂದ್ರೇಗೌಡ-ಕೆಂಚಮ್ಮ ದಂಪತಿ ಪುತ್ರ ರಘು. ಪ್ರಾಥಮಿಕ ಶಿಕ್ಷಣವನ್ನು ಹಳ್ಳಿಗಳ ಸರ್ಕಾರಿ ಶಾಲೆಗಳಲ್ಲೇ ಕಲಿತಿದ್ದು, ಮುಂದೆ ಚಿಕ್ಕಮಗಳೂರು ಜೂನಿಯರ್ ಕಾಲೇಜಿನಲ್ಲಿ ಪ್ರೌಢಶಿಕ್ಷಣ, ಅಲ್ಲಿಯ ಐಡಿಎಸ್‌ಜಿ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪೂರೈಸಿದರು. ಮೈಸೂರು ಸಿಎಫ್‌ಟಿಆರ್‌ಐನಲ್ಲಿ ಆಹಾರ ಸಂರಕ್ಷಣೆ ವಿಷಯದಲ್ಲಿ ಹೆಚ್ಚಿನ ಅಧ್ಯಯನ ನಡೆಸಿದರು. ಓದಿನ ನಂತರ ಬೆಂಗಳೂರಿನಲ್ಲಿ ಆಹಾರ ಪರೀಕ್ಷೆಯ ಸಣ್ಣ ಲ್ಯಾಬೊರೇಟರಿಯಲ್ಲಿ ₹800 ವೇತನಕ್ಕೆ ಕೆಲಸಕ್ಕೆ ಸೇರಿದರು. ಕೆಲವೇ ವರ್ಷಗಳಲ್ಲಿ ಅವರೇ ಆಹಾರ ಪದಾರ್ಥಗಳ ಗುಣಮಟ್ಟ ಪರೀಕ್ಷಿಸುವ 'ಪ್ರಿಸ್ಟೀನ್ ಲ್ಯಾಬೊರೇಟರಿ' ತೆರೆದರು.

1992ರಲ್ಲಿ ‘ಪ್ರಿಸ್ಟೀನ್ ಆರ್ಗಾನಿಕ್ಸ್’ ಎಂಬ ಸಾವಯವ ಆಹಾರ ಉತ್ಪನ್ನ ತಯಾರಿಕೆ ಕಂಪನಿ ಸ್ಥಾಪಿಸಿದರು. ಸಿರಿಧಾನ್ಯಗಳಿಂದ ಬ್ರೆಡ್, ಬಿಸ್ಕತ್ತು, ನವಜಾತ ಶಿಶುಗಳಿಗೆ ಪೌಷ್ಟಿಕ ಆಹಾರ ತಯಾರಿಸಿ ಮಾರಾಟ ಆರಂಭಿಸಿದರು. ಸಿರಿಧಾನ್ಯಗಳ ಹೊಸ ಬ್ರಾಂಡ್ ಹೊರತಂದರು. ಬಹುಶಃ ಇಡೀ ಭಾರತದಲ್ಲಿ ಸಿರಿಧಾನ್ಯಗಳ ಬ್ರಾಂಡ್ ಅನ್ನು ಮಾರುಕಟ್ಟೆಗೆ ಪರಿಚಯಿಸಿದ ಮೊದಲಿಗರಲ್ಲಿ ರಘು ಅವರೂ ಒಬ್ಬರಿದ್ದರಿರಬಹುದು.

ರಘು ಅವರಿಗೆ ಸಿರಿಧಾನ್ಯಗಳನ್ನು ಜನಪ್ರಿಯಗೊಳಿಸುವ ಕುರಿತು ತುಂಬ ಸ್ಪಷ್ಟತೆ ಇತ್ತು. ಈ ಧಾನ್ಯಗಳ ಉತ್ಪಾದನೆ ಪ್ರಮಾಣ, ಬಳಸುವ ವಿಧಾನ, ಸರ್ಕಾರ ಹೇಗೆ ಜನರಿಗೆ ಇವುಗಳನ್ನು ತಲುಪಿಸಬಹುದು ಎಂಬುದನ್ನು ನನ್ನಂಥ ಮಾಧ್ಯಮದ ಗೆಳೆಯರೊಂದಿಗೆ ಮಾನಾಡುತ್ತಿದ್ದರು. ಕೆಲವು ಭಾಷಣಗಳಲ್ಲೂ ಈ ವಿಚಾರ ಪ್ರಸ್ತಾಪಿಸಿದ್ದನ್ನು ಕೇಳಿದ ನೆನಪು.



ಮೈಸೂರಿನ ಕಾರ್ಯಕ್ರಮವೊಂದರಲ್ಲಿ ಆಹಾರ ತಜ್ಞ ಕೆ.ಸಿ.ರಘು

ಕೃಷಿ , ಆಹಾರ, ರಾಜಕೀಯ, ವಾಣಿಜ್ಯ, ತರ್ಕಶಾಸ್ತ್ರ, ಸಾಹಿತ್ಯ, ಸಂಗೀತ, ಉಪನಿಷತ್, ಜಾಗತಿಕ ವಿದ್ಯಮಾನಗಳು, ವೈದ್ಯಕೀಯ ಕ್ಷೇತ್ರ... ಹೀಗೆ ಹಲವು ಕ್ಷೇತ್ರಗಳ ಬಗ್ಗೆ ರಘು ಅಧ್ಯಯನ ಮಾಡಿದ್ದರು. ಝೆನ್, ಬುದ್ಧಿಸಂ ಬಗ್ಗೆ ಆಗಾಗ್ಗೆ ಮಾತನಾಡುತ್ತಿದ್ದರು. ಆರೋಗ್ಯ-ಆಹಾರ ಸಂಬಂಧ, ಆಹಾರ ರಾಜಕೀಯದ ಬಗ್ಗೆ ಅಪಾರ ಜ್ಞಾನವಿತ್ತು. ಎಲ್ಲವೂ ಅಪ್‌ಡೇಟೆಡ್ ಮಾಹಿತಿಗಳೇ. ಎಲ್ಲವೂ ಸ್ಪಷ್ಟ ಮತ್ತು ನಿಖರ. ಯಾವುದೇ ವಿಚಾರಗಳಾಗಲಿ, ವೈಜ್ಞಾನಿಕ ತಳಹದಿಯೊಂದಿಗೆ ವಿಶ್ಲೇಷಿಸಿ, ಅಂಕಿ ಅಂಶಗಳೊಂದಿಗೆ ಅಚ್ಚುಕಟ್ಟಾಗಿ ಮಂಡಿಸುತ್ತಿದ್ದರು.

‘ನೀವು ಬಹಳ ಬುದ್ಧಿವಂತರು ಸರ್. ಬಹುಶಃ ಚಿಕ್ಕವರಿಂದ್ದಾಗಿನಿಂದಲೂ ಚೆನ್ನಾಗಿ ಓದಿದ್ದೀರಿ ಅಲ್ಲವಾ‘ ಅಂತ ಒಮ್ಮೆ ರಘು ಅವರನ್ನು ಕುತೂಹಲದಿಂದ ಕೇಳಿದ್ದೆ. ಅದಕ್ಕವರು ‘ನಾನು ಪ್ರೈಮರಿ ಸ್ಕೂಲ್ ಓದಿದ್ದು ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳಲ್ಲಿ. ಶಾಲೆಗೆ ಹೋಗುತ್ತಿದ್ದದ್ದೇ ಕಡಿಮೆ’ ಅಂತ ನಕ್ಕಿದ್ದರು. ಇದೇ ವೇಳೆ, ಶಾಲಾ ದಿನಗಳಲ್ಲಿಯೇ ಓದುವ ಅಭ್ಯಾಸವಿತ್ತು ಎಂದು ಹೇಳುತ್ತಿದ್ದರು. ಕಾಲೇಜು ದಿನಗಳಲ್ಲಿ ಚಿಕ್ಕಮಗಳೂರಿನ ಸಾರ್ವಜನಿಕ ಗ್ರಂಥಾಲಯ ಅವರ ನಿತ್ಯದ ಅಧ್ಯಯನ ತಾಣವಾಗಿತ್ತಂತೆ. ಹಾಗಾಗಿ, ಅಕಾಡೆಮಿಕ್ ಆಚೆಗಿನ ಓದು, ತಜ್ಞರ ಒಡನಾಟ, ಅಧ್ಯಯನ, ದೇಶ-ವಿದೇಶಗಳ ಸುತ್ತಾಟಗಳು ರಘು ಅವರನ್ನು ಈ ಹಂತಕ್ಕೆ ಬೆಳೆಸಿರಬೇಕು.

ರಘು ಅವರ ಇಷ್ಟೆಲ್ಲ, ಚಿಂತನೆ, ಜ್ಞಾನದ ಹಿಂದೆ ಇದ್ದಿದ್ದು ಅವರಲ್ಲಿದ್ದ ಪುಸ್ತಕ ಪ್ರೇಮ. ಅವರ ಮನೆಯಲ್ಲಿ ಸಾವಿರಾರು ಪುಸ್ತಕಗಳ ಭಂಡಾರವೇ ಇತ್ತು. ಒಮ್ಮೆ ನಾನು, ನನ್ನ ಶ್ರೀಮತಿ ಆ ಭಂಡಾರ ಕಂಡು ಚಕಿತರಾಗಿದ್ದೆವು. ಪುಸ್ತಕಗಳನ್ನು ಓದುವ ಜೊತೆಗೆ, ಆಸಕ್ತರಿಗೆ, ಸಂಘ-ಸಂಸ್ಥೆಗಳಿಗೆ ಪುಸ್ತಕಗಳನ್ನು ಉದಾರವಾಗಿ ನೀಡುತ್ತಿದ್ದರು.

‘ಲೋಕಲ್‌ನಿಂದ ಗ್ಲೋಬಲ್‌ವರೆಗೆ’ ಎಲ್ಲ ಪತ್ರಿಕೆಗಳನ್ನೂ ಓದುತ್ತಿದ್ದರು. ಹಲವಾರು ಅಂತರಾಷ್ಟ್ರೀಯ ಜರ್ನಲ್‌ಗಳ ಆನ್‌ಲೈನ್ ಆವೃತ್ತಿಗಳಿಗೆ ಚಂದಾದಾರರಾಗಿದ್ದರು. ದೇಶ-ವಿದೇಶಗಳ ಖ್ಯಾತ ಲೇಖಕರ ಹೆಸರು, ಅವರ ಕೃತಿಗಳು, ಅವುಗಳಲ್ಲಿನ ಪ್ರಮುಖ ಸಾಲುಗಳು.. ಎಲ್ಲವೂ ಅವರ ನಾಲಿಗೆಯ ತುದಿಯಲ್ಲಿರುತ್ತಿದ್ದವು.

ದೇಶಗಳನ್ನೂ ಸುತ್ತುತ್ತಾ, ಕೋಶಗಳನ್ನೂ ಓದುತ್ತಿದ್ದ ರಘು, ಅನುಭವಗಳನ್ನು ಆಸಕ್ತರಿಗೆ ದಾಟಿಸುತ್ತಿದ್ದರು. ಅವರೊಂದಿಗೆ ತುಸು ಹೊತ್ತು ಮಾತಾಡಿದರೂ ಸಾಕು, ಹಲವು ಪುಸ್ತಕಗಳ ರೆಫರೆನ್ಸ್ ಸಿಗುತ್ತಿತ್ತು. ಮಾತಿನ ನಡುವೆ ವಿಷಯ-ಸಂದರ್ಭಕ್ಕೆ ಅನುಸಾರವಾಗಿ ಕವಿ ಸಾಲುಗಳು, ಲೇಖಕರ ಮಾತುಗಳು ಚಿಂತಕರ ನುಡಿಗಟ್ಟುಗಳನ್ನು ಪೋಣಿಸುತ್ತಿದ್ದರು. ಮಾತು ಮುಗಿಸುವುದರೊಳಗೆ ಎದುರಿಗಿದ್ದವರು ಒಂದಾದರೂ ಪುಸ್ತಕ ಓದಲೇಬೇಕೆಂಬ ನಿರ್ಧಾರಕ್ಕೆ ಬರುತ್ತಿದ್ದರು. ಹಾಗಿತ್ತು, ಅವರಲ್ಲಿನ ಪುಸ್ತಕ ಓದಿಸುವ ಗುಣ.

ಇವರಷ್ಟು ಸರಳವಾಗಿ ಕನ್ನಡದಲ್ಲಿ ಆಹಾರ ವಿಜ್ಞಾನವನ್ನು ಅರ್ಥಮಾಡಿಸಿದವರು ತೀರಾ ಕಡಿಮೆ. ತಮ್ಮ ಜ್ಞಾನದ ಅರಿವನ್ನು ಸಮಾಜದ ಏಳಿಗೆಗಾಗಿ ಬಳಸಿಕೊಳ್ಳಲು ತವಕಿಸುತ್ತಿದ್ದ ಅವರು, ಕೃಷಿಕ ಪರ ವಿಚಾರಗಳಲ್ಲಿ ನೆರವಿನ ಹಸ್ತಚಾಚಲು ಸದಾ ಮುಂದು. ಅನೇಕ ಕೃಷಿ ಕಾರ್ಯಕ್ರಮಗಳಿಗೆ ಆರ್ಥಿಕವಾಗಿ ಸಹಾಯ ಮಾಡಿ, ಸಂಭಾವನೆಯನ್ನೂ ಪಡೆಯದೆ ಕಾರ್ಯಕ್ರಮಗಳಲ್ಲಿ ಉಪನ್ಯಾಸ ನೀಡಿದ ಉದಾಹರಣೆಗಳು ಸಾಕಷ್ಟಿವೆ.


ತಮ್ಮ ಕಂಪನಿಯ ಸಾವಯವ ಪದಾರ್ಥಗಳ ಬಗ್ಗೆ ರಘು ಯಾವತ್ತೂ ‘ಪ್ರಚಾರ‘ ಮಾಡಲಿಲ್ಲ. ಬದಲಿಗೆ ಎಷ್ಟೋ ಪರಿಚಿತರ ಮಕ್ಕಳಿಗೆ ತಮ್ಮ ಸಾವಯವ ಉತ್ಪನ್ನಗಳನ್ನು ಉಚಿತವಾಗಿ ನೀಡಿ, ‘ಮಕ್ಕಳು ಚೆನ್ನಾಗಿ ಬೆಳೆಯಲಿ’ ಎಂದು ಹರಸಿದ್ದರು.

ಅವರಲ್ಲಿನ ಮಾಹಿತಿ, ಒಳನೋಟಗಳನ್ನು ಕಂಡು ಬೆರಗಾಗಿ, ಪುಸ್ತಕ ಬರೆಯಿರಿ ಎಂದು ಒತ್ತಾಯಿಸಿದಾಗ ಪ್ರಕಟಣೆ ಕಂಡಿದ್ದು - 'ತುತ್ತು ತತ್ವ', 'ಆಹಾರ ರಾಜಕೀಯ' ಮತ್ತು 'ರಸ ತತ್ವ' ಕೃತಿಗಳು.

ಶಿಸ್ತುಬದ್ಧ ಜೀವನ, ಅಗಾಧ ಜ್ಞಾನ, ಸಾಮಾಜಿಕ ಕಳಕಳಿ.. ಸದಾ ಲವಲವಿಕೆಯಿಂದ ಇರುತ್ತಿದ್ದ ರಘು ಅವರಿಗೆ ಅದ್ಯಾವ ಮಾಯದಲ್ಲಿ ಕ್ಯಾನ್ಸರ್ ಕಾಣಿಸಿಕೊಂಡಿತೋ ತಿಳಿಯದು. ಸೋಂಕು ತಗುಲಿದ್ದರೂ, ಆಪ್ತರಿಗೂ ತಿಳಿಸದೆ ವರ್ಷಕಾಲ ರೋಗದ ಜೊತೆ ಹೋರಾಡಿದ್ದರು. ತಿಂಗಳ ಹಿಂದೆ ಚೇತರಿಸಿಕೊಂಡು, ಮತ್ತೆ ಲವಲವಿಕೆಯಿಂದ ಎಲ್ಲರಿಗೂ ಲಭ್ಯವಾದರು. ಆ ಚೇತರಿಕೆ ಮುಂದುವರಿಯಲಿಲ್ಲ. ರಘು, ಅ.15ರಂದು ನಮ್ಮನ್ನು ಅಗಲಿದರು. ಆಹಾರ, ಆರೋಗ್ಯ, ವಿಷಮುಕ್ತ ಕೃಷಿ ಕುರಿತು ಸಂದೇಹಗಳಿಗೆ ತಕ್ಷಣವೇ ಪರಿಹಾರ ಕೊಡುತ್ತಿದ್ದ ಅವರೀಗ ಭೌತಿಕವಾಗಿ ಇಲ್ಲ. ಜ್ಞಾನ ದೇಗುಲದ ಬಾಗಿಲೊಂದು ಮುಚ್ಚಿದಂತೆ ಭಾಸವಾಗುತ್ತಿದೆ.

ಕರೇಜ್ ಅಂತರ್ಜಲಾಶಯ...

1ನೇ ಪುಟದಿಂದ...



‘ಅಂತರ್ಜಲಾಶಯ’

‘ಕರೇಜ್’ಗೆ ‘ಅಂತರ್ಜಲಾಶಯ’ ಎಂದು ಹೆಸರಾಂತ ವಿಜ್ಞಾನಿ ಮಜೀದ್ ಲಭಾಫ್ ಖನೀಕಿ ಕರೆದಿದ್ದಾರೆ. ಇವರು ‘ಕರೇಜ್’ ಬಗ್ಗೆ ತಿಳಿದುಕೊಳ್ಳಲೆಂದೆ ಮೂರು ಸಲ ಬೀದರ್‌ಗೆ ಭೇಟಿ ನೀಡಿರುವುದು ವಿಶೇಷ. ಪ್ರಾಚೀನ ಜಲಮೂಲಗಳ ಬಗ್ಗೆ ಅಧ್ಯಯನ ನಡೆಸುತ್ತಿರುವ ಯುನೆಸ್ಕೊ ಅಂಗ ಸಂಸ್ಥೆಯಾಗಿರುವ ‘ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಕನ್ನಟ್ಸ್ ಅಂಡ್ ಹಿಸ್ಟೋರಿಕ್ ಹೈಡ್ರಾಲಿಕ್ ಸ್ಟ್ರಕ್ಚರ್’ನಲ್ಲಿ ಖನೀಕಿ ಅವರು ವಿಜ್ಞಾನಿ ಆಗಿ ಕೆಲಸ ಮಾಡುತ್ತಿದ್ದಾರೆ.

ಈ ಸ್ಥಳವೀಗ ಆಕರ್ಷಣೀಯ ಕೇಂದ್ರವಾಗಿದ್ದು, ಅನೇಕ ಜನ ಇತಿಹಾಸಕಾರರು, ಜಲಮೂಲಗಳ ರಕ್ಷಣೆಗೆ ಕೆಲಸ ಮಾಡುತ್ತಿರುವವರು, ಐಎಎಸ್ ಅಧಿಕಾರಿಗಳು, ಪತ್ರಕರ್ತರು, ವಿಜ್ಞಾನಿಗಳು ಸೇರಿ ಹಲವರು ಭೇಟಿ ಕೊಟ್ಟಿದ್ದಾರೆ.

ಆಗಬೇಕಾದದ್ದೇನು?

2012ರಲ್ಲಿ ಮೊದಲ ಬಾರಿಗೆ ‘ಇಂಡಿಯನ್ ಹೆರಿಟೇಜ್ ಸಿಟೀಸ್ ನೆಟ್‌ವರ್ಕ್’ ಇದರ ಸರ್ವೆ ಕಾರ್ಯ ನಡೆಸಿ, 2013ರಲ್ಲಿ ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಿತು. ಮುಳ್ಳು ಕಂಟಿ, ಪೊದೆ, ಮಣ್ಣಿನಿಂದ ಸಂಪೂರ್ಣ ಮರೆಯಾಗಿದ್ದ ‘ಕರೇಜ್’ನಲ್ಲಿ ಅನೇಕ ವಿಷಜಂತುಗಳು ಸೇರಿಕೊಂಡಿದ್ದವು. ಉತ್ಖನನ ಕಾರ್ಯ ಕೈಗೆತ್ತಿಕೊಳ್ಳಲು ಜಿಲ್ಲಾಡಳಿತ ಮುಂದಾದಾಗ ಕಾರ್ಮಿಕರು ಕೆಲಸ ನಿರ್ವಹಿಸಲು ನಿರಾಕರಿಸಿದ್ದರು. ಅಂದಿನ ಜಿಲ್ಲಾಧಿಕಾರಿ ಅನುರಾಗ್ ತಿವಾರಿ ಅವರು ವಿಶೇಷ ಕಾಳಜಿ ವಹಿಸಿ 2015ರಲ್ಲಿ ಗುತ್ತಿಗೆದಾರ ಅಬ್ದುಲ್ ಸಮದ್ ಎಂಬುವರ ಮನವೊಲಿಸಿದ್ದರು. 196 ಕಾರ್ಮಿಕರ ಸಹಾಯದಿಂದ ಸತತ 17 ತಿಂಗಳು ಕೆಲಸ ನಿರ್ವಹಿಸಿ 2.1 ಕಿ.ಮೀ ‘ಕರೇಜ್’ನಲ್ಲಿ ಸಂಗ್ರಹವಾಗಿದ್ದ ಹೂಳು ಹೊರತೆಗೆಸಿದರು. ಆ ಕೆಲಸ ಯಾವ ‘ಅಡ್ವೆಂಚರ್’ ಸಿನಿಮಾಕ್ಕಿಂತಲೂ ಕಡಿಮೆ ಇರಲಿಲ್ಲ. ಅವರ ಕೆಲಸಕ್ಕೆ ಬೀದರ್‌ನ ‘ಟೀಮ್ ಯುವ’ ಸದಸ್ಯರು ಕೂಡ ನೆರವಾಗಿದ್ದರು. ‘ಟೀಮ್ ಯುವ’ ಸದಸ್ಯರು ‘ಕರೇಜ್’ ಹಾದು ಹೋಗಿರುವ ಪ್ರದೇಶದ ಜನರಿಗೆ ತಿಳಿವಳಿಕೆ ಮೂಡಿಸಿ, ಅದರ ಸಂರಕ್ಷಣೆಗೆ ಶ್ರಮಿಸುತ್ತಿದ್ದಾರೆ.

‘ಮಳೆಗಾಲದಲ್ಲಿ ಪ್ರತಿದಿನ ‘ಕರೇಜ್’ ಮೂಲಕ 1.16 ಕೋಟಿ ಲೀಟರ್ ನೀರು ಹರಿದುಹೋಗುತ್ತದೆ. ಇನ್ನು, ಬೇಸಿಗೆಯಲ್ಲಿ ನಿತ್ಯ 33 ಲಕ್ಷ ಲೀಟರ್ ನೀರು ಹರಿಯುತ್ತದೆ. ಒಂದುವೇಳೆ ಈ ನೀರನ್ನು ಸಮರ್ಪಕವಾಗಿ ಬಳಸಿಕೊಂಡರೆ ಕುಡಿಯುವ ನೀರಿನ ಸಮಸ್ಯೆ ನೀಗಿಸಬಹುದು. ಮಳೆಯಾಶ್ರಿತ ಪ್ರದೇಶದ ರೈತರ ಜಮೀನಿಗೆ ನೀರು ಹರಿಸಬಹುದು. ಇಡೀ ಪ್ರದೇಶವನ್ನು ಹಸಿರುಮಯ ಮಾಡಬಹುದು. ಈ ಕಾರಣಕ್ಕಾಗಿ ಇದರ ಸಂರಕ್ಷಣೆ ಬಹಳ ಮುಖ್ಯ’ ಎನ್ನುತ್ತಾರೆ ‘ಟೀಮ್ ಯುವ’ ಸಂಯೋಜಕ ವಿನಯ್ ಮಾಳಗೆ.

‘ನಿರಂತರವಾಗಿ ಹರಿಯುವ ನೀರಿನ ಇಂತಹ ಮೂಲಗಳಿರುವುದು ಜಗತ್ತಿನ ಕೆಲವೇ ಭಾಗಗಳಲ್ಲಿ. ಅದರಲ್ಲಿ ಬೀದರ್ ಕೂಡ ಸೇರಿದೆ ಎಂದು ಸ್ವತಃ ವಿಜ್ಞಾನಿಗಳೇ ಹೇಳಿದ್ದಾರೆ. ಇದರ ಸಂರಕ್ಷಣೆ ಬಹಳ ಅತ್ಯಗತ್ಯ. ಇನ್ನುಳಿದ ‘ಕರೇಜ್’ಗಳ ಶೋಧ ಹಾಗೂ ಉತ್ಖನನ ಕಾರ್ಯವನ್ನು ಕೂಡ ಶೀಘ್ರ ಕೈಗೆತ್ತಿಕೊಳ್ಳಬೇಕು. ‘ಕರೇಜ್’ ಅನ್ನು ‘ಹೆರಿಟೇಜ್ ಸೈಟ್’ ಎಂದು ಗುರುತಿಸಿದರೆ ಬೀದರ್‌ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಸ್ಥಾನ ಸಿಗುತ್ತದೆ. ನೀರು, ಪ್ರವಾಸೋದ್ಯಮ ಹಾಗೂ ಸುಸ್ಥಿರತೆ ತಂತ್ರಜ್ಞಾನದ ಹಿನ್ನೆಲೆಯಲ್ಲಿ ಬಹಳ ಮಹತ್ವದ್ದು. ಮೇಲಿಂದ ಬೀದರ್‌ನಲ್ಲಿರುವ ಕೋಟೆ, ಮಹಮೂದ್ ಗವಾನ್ ಮದರಸಾ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಸಂರಕ್ಷಿತ ಸ್ಮಾರಕಗಳ ವ್ಯಾಪ್ತಿಗೆ ಸೇರಿವೆ. ಪ್ರವಾಸೋದ್ಯಮದ ದೃಷ್ಟಿಕೋನದಿಂದ ಬೀದರ್ ಜಿಲ್ಲೆಗೆ ವಿಪುಲ ಅವಕಾಶಗಳಿವೆ’ ಎನ್ನುವುದು ಅವರು ನೀಡುವ ಸಲಹೆ.

ಮುನ್ನೋಟ 22-10-2023 ರಿಂದ -28-10-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ನಡವಳಿಕೆಗಳಲ್ಲಿ ಸ್ವಲ್ಪ ಮುಂಗೋಪ ಕಂಡುಬರುತ್ತದೆ. ಸಂಗೀತ ಕಲಿಯಬೇಕೆನ್ನುವವರಿಗೆ ಉತ್ತಮ ಗುರುಗಳು ದೊರೆಯುವರು. ನಿಮ್ಮ ಆಹಾರ ಪದ್ಧತಿಗಳಿಂದ ಅನಾರೋಗ್ಯ ಉಂಟಾಗುವ ಸಾಧ್ಯತೆ ಇದೆ. ಅಪೇಕ್ಷಿಸಿದ್ದ ನಿವೇಶನವನ್ನು ಕೊಳ್ಳುವ ತಯಾರಿ ನಡೆಸುವಿರಿ. ನೃತ್ಯಪಟುಗಳಿಗೆ ನಿರೀಕ್ಷಿಸಿದ್ದ ಯಶಸ್ಸು ದೊರೆತು ಹೆಚ್ಚಿನ ಸಾಧನೆ ಮಾಡುವರು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿಮ್ಮ ವೃತ್ತಿಯಲ್ಲಿ ಉತ್ತಮ ಸ್ಥಾನಮಾನ ದೊರಕುವ ಸಾಧ್ಯತೆ ಇದೆ. ಸಂಗಾತಿಯ ಸಲಹೆಯಂತೆ ಮಾಡಿದ ವ್ಯವಹಾರಗಳಲ್ಲಿ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ನಿಮ್ಮ ನಡವಳಿಕೆಗಳ ಮೇಲೆ ಸಂಗಾತಿ ಹೆಚ್ಚು ಪ್ರಭಾವ ಬೀರುವರು. ವೃತ್ತಿಯಲ್ಲಿದ್ದ ಕಸಿವಿಸಿ ವಾತಾವರಣಗಳು ಈಗ ದೂರವಾಗುತ್ತವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸಾಕಷ್ಟು ಯಶಸ್ಸು ದೊರೆಯುತ್ತದೆ. ಆರೋಗ್ಯಕ್ಕಾಗಿ ಹಣ ಖರ್ಚಾಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿಮ್ಮ ಮಾತಿಗೆ ಹೆಚ್ಚು ಬೆಲೆ ಬಂದು ಕೆಲಸ ಕಾರ್ಯಗಳಾಗುತ್ತವೆ. ಸಹೋದರಿಯರಿಂದ ಹೆಚ್ಚಿನ ಸಹಾಯ ದೊರೆಯುತ್ತದೆ. ಕುಟುಂಬದಲ್ಲಿ ಸ್ವಲ್ಪ ಏರುಪೇರುಗಳಿದ್ದರೂ ಎಲ್ಲವೂ ಸರಿಯಾಗಿ ನಡೆಯುತ್ತದೆ. ಸ್ಥಿರಾಸ್ತಿಯ ವಿಚಾರದಲ್ಲಿ ಹೆಚ್ಚಿನ ಅನುಕೂಲಗಳನ್ನು ಕಾಣಬಹುದು. ಸಾಫ್ಟ್‌ವೇರ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿರುವವರಿಗೆ ಹೆಚ್ಚಿನ ಅನುಕೂಲಗಳು ಇರುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ವೃತ್ತಿಯಲ್ಲಿ ಸ್ವಲ್ಪಮಟ್ಟಿನ ಪ್ರಗತಿಯನ್ನು ಕಾಣಬಹುದು. ವಿದೇಶದಲ್ಲಿರುವವರಿಗೆ ಆದಾಯದ ಮೂಲ ಹೆಚ್ಚುತ್ತದೆ. ಹಣದ ಒಳಹರಿವು ಉತ್ತಮವಾಗಿರುತ್ತದೆ. ಬಂಧುಗಳು ಕೆಲವು ಸಮಯದಲ್ಲಿ ನಿಮಗೆ ಒತ್ತಾಸೆಯಾಗಿ ನಿಲ್ಲುವರು. ಸುಗಂಧ ದ್ರವ್ಯಗಳನ್ನು ತಯಾರಿಸಿ ಮಾರುವವರಿಗೆ ಹೆಚ್ಚಿನ ಲಾಭವಿರುತ್ತದೆ. ಸ್ತ್ರೀ ಪುರುಷರ ಅಲಂಕಾರಿಕ ವಸ್ತುಗಳನ್ನು ತಯಾರಿಸಿ ಮಾರುವವರಿಗೆ ಲಾಭವಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಬಟ್ಟೆಯ ಮೇಲೆ ಕಸೂತಿ ಕೆಲಸ ಮಾಡುವವರಿಗೆ ಹೆಚ್ಚಿನ ಕೆಲಸ ದೊರೆತು ಸಂಪಾದನೆಯಾಗುತ್ತದೆ. ಬೆಳ್ಳಿಯ ವಿಗ್ರಹಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ನಿಮ್ಮ ಕೆಲಸಕಾರ್ಯಗಳಿಗೆ ಬಂಧುಗಳಿಂದ ಅಡಚಣೆಯಾಗುವ ಸಾಧ್ಯತೆ ಇದೆ. ಒಟ್ಟು ಕುಟುಂಬದಲ್ಲಿ ನಡೆಯುವ ಕೃಷಿಯಿಂದ ನಿಮಗೆ ಆದಾಯವಿದೆ. ವಿದೇಶದಲ್ಲಿರುವ ಮಕ್ಕಳ ಬಗ್ಗೆ ಉತ್ತಮ ಸುದ್ದಿಗಳನ್ನು ಕೇಳಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮ ನಿರ್ಧಾರಗಳಲ್ಲಿ ಸಾಕಷ್ಟು ದ್ವಂದ್ವಗಳು ಇರುತ್ತವೆ. ಇದರಿಂದ ಕೆಲವು ಕೆಲಸಗಳಿಗೆ ಹಿನ್ನಡೆಯಾಗುವ ಸಾಧ್ಯತೆ ಇವೆ. ನಿಮ್ಮ ನಡವಳಿಕೆಗಳಿಗೆ ಒಬ್ಬಿಬ್ಬರು ವಿರೋಧಿಸಿದರೂ ಉಳಿದವರು ಸಹಕಾರ ನೀಡುವರು. ಕೃಷಿಯಿಂದ ಹೆಚ್ಚು ಆದಾಯವಿರುತ್ತದೆ. ಹೈನುಗಾರಿಕೆ ಮಾಡುವವರಿಗೆ ಆದಾಯವಿರುತ್ತದೆ. ನಿಮ್ಮ ಮಕ್ಕಳಿಂದ ಅಗೌರವ ಆಗುವಂಥ ಸಂದರ್ಭಗಳಿವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನೃತ್ಯ ಸಂಯೋಜನೆ ಮಾಡುವವರಿಗೆ ಆದಾಯ ಹೆಚ್ಚಬಹುದು. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿರುತ್ತದೆ. ನಿಮ್ಮ ತಾಯಿಯು ನಿಮಗೆ ಹೆಚ್ಚು ಸೌಕರ್ಯವನ್ನು ಮಾಡಿ ಕೊಡುತ್ತಾರೆ. ವಿದ್ಯಾಭ್ಯಾಸದಲ್ಲಿ ಸಾಮಾನ್ಯ ಯಶಸ್ಸನ್ನು ಕಾಣಬಹುದು. ಆಹಾರ ವ್ಯತ್ಯಾಸದಿಂದ ಅನಾರೋಗ್ಯ ಕಾಣಬಹುದು. ಆರ್ಥಿಕ ಸಹಾಯ ಮಾಡಿದ ನಂತರವೂ ಆಡುವ ಕೊಂಕು ಮಾತುಗಳು ನಿಮಗೆ ಬೇಸರ ತರಿಸಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಉದ್ಯೋಗ ಸ್ಥಳದಲ್ಲಿದ್ದ ಗೊಂದಲಮಯ ವಾತಾವರಣ ನಿವಾರಣೆಯಾಗುತ್ತದೆ. ಚಿನ್ನದ ಒಡವೆಗಳನ್ನು ತಯಾರಿಸುವವರಿಗೆ ವ್ಯವಹಾರ ವೃದ್ಧಿಸುತ್ತದೆ. ಮಹಿಳೆಯರಿಂದ ಹೆಚ್ಚಿನ ಸಹಕಾರಗಳು ದೊರೆಯುತ್ತವೆ. ಕೃಷಿ ಭೂಮಿಯನ್ನು ಅಭಿವೃದ್ಧಿಪಡಿಸುವ ಯೋಗವಿದೆ. ಮಕ್ಕಳಿಗಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ. ವ್ಯಾಪಾರ-ವ್ಯವಹಾರಗಳಲ್ಲಿ ಹೆಚ್ಚಿನ ಆದಾಯವಿರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ವೈರಿಗಳನ್ನು ಮಟ್ಟಹಾಕಲು ಬಳಸುವ ತಂತ್ರಗಳು ಸಾಕಷ್ಟು ಪರಿಣಾಮವನ್ನು ಬೀರುತ್ತವೆ. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ಇರುತ್ತದೆ. ಆಟೋಮೊಬೈಲ್ ಕ್ಷೇತ್ರದಲ್ಲಿ ದುಡಿಯುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ ಹಾಗೂ ಆದಾಯವು ಹೆಚ್ಚುತ್ತದೆ. ಮೂಳೆ ತಜ್ಞರಿಗೆ ಹೆಚ್ಚಿನ ಬೇಡಿಕೆ ಬರುತ್ತದೆ. ಸರ್ಕಾರಿ ಸಂಸ್ಥೆಗಳ ಜೊತೆಗಿನ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಕೆಲಸ ಮಾಡುವಾಗ ಬಹಳ ಶ್ರದ್ಧೆಯನ್ನು ತೋರುವಿರಿ. ಇದು ನಿಮ್ಮ ಹಿರಿಯ ಅಧಿಕಾರಿಗಳ ಗಮನಕ್ಕೆ ಬಂದು ಒಳಿತಾಗುತ್ತದೆ. ಮಾತನಾಡುವಾಗ ಎಚ್ಚರಿಕೆ ಇರಲಿ. ಯಾವುದೇ ಆಸ್ತಿ ಕೊಳ್ಳುವಾಗ ಅದರ ದಾಖಲೆಯ ಪರಿಶೀಲನೆಯು ಸರಿಯಾಗಿ ನಡೆಯಲಿ. ವಾಹನಗಳನ್ನು ದುರಸ್ತಿ ಮಾಡುವವರಿಗೆ ಬಿಡುವಿಲ್ಲದ ಕೆಲಸ ದೊರೆತು ಆದಾಯ ಹೆಚ್ಚುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಸಾಂಪ್ರದಾಯಿಕ ಕೃಷಿಯ ಕಡೆಗೆ ಅತಿ ಹೆಚ್ಚು ಆಸಕ್ತಿ ಮೂಡುತ್ತದೆ. ಹಿರಿಯರು ತಮ್ಮ ಎಲ್ಲಾ ಬಂಧುಗಳೊಂದಿಗೆ ಸಮಾಧಾನವಾಗಿ ಮಾತನಾಡಿ ಸಾಕಷ್ಟು ತಿಳಿವಳಿಕೆ ನೀಡುವರು. ವ್ಯಾಪಾರದಲ್ಲಿನ ಸರ್ಕಾರಿ ಕಾನೂನಿನ ತೊಡಕುಗಳು ಬಗೆಹರಿಯವತ್ತ ಹೊರಳುತ್ತವೆ. ಶೀತ ಬಾಧೆ ಇರುವವರು ಸಾಕಷ್ಟು ಎಚ್ಚರ ವಹಿಸಿರಿ. ಧನ ಆದಾಯವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ವಿದ್ಯಾರ್ಥಿಗಳಿಗೆ ಅವರ ಶ್ರಮಕ್ಕೆ ತಕ್ಕಂತೆ ಫಲ ದೊರೆಯುತ್ತದೆ. ಲೇವಾದೇವಿಯಂತಹ ಹಣಕಾಸಿನ ವ್ಯವಹಾರ ಮಾಡುವುದು ಅಷ್ಟು ಶ್ರೇಯಸ್ಕರವಲ್ಲ. ಕಾಲುನೋವಿನ ಬಗ್ಗೆ ಹೆಚ್ಚಿನ ಗಮನವಿರಲಿ. ಉದ್ಯೋಗ ಸ್ಥಳದಲ್ಲಿ ಸ್ವಲ್ಪ ಕಿರಿಕಿರಿ ಆಗುವಂತಹ ವಾತಾವರಣ ಇರುತ್ತದೆ. ವಿದೇಶಿ ಧನ ವಿನಿಮಯವನ್ನು ಮಾಡುವವರಿಗೆ ಹೆಚ್ಚಿನ ವ್ಯವಹಾರ ನಡೆಯುತ್ತದೆ.

ಪದಬಂಧ 2812



ಮೇಲಿನಿಂದ ಕೆಳಕ್ಕೆ

1. ಮದುವೆಯ ಹಸೆಮಣೆ ಏರಿರುವ ತನಯ 4
2. ತವಕದ ಹೃದಯ ಬಡಿತ 3
3. ಯೋಗದಲ್ಲಿ ಕುಳಿತುಕೊಳ್ಳುವ ಪೀಠ 3
5. ಕೆಲಸಮಾಡದ ವಸ್ತುಗಳಿಗೆ ಮಾಡಿಸಬೇಕಾದ ದುರಸ್ತಿ 3
7. ಜೇನುಂಟು ಮಾಡುವ ಭೃಂಗ 4
8. ನಮ್ಮ ದೇಶದಲ್ಲಿ ಹತ್ತುವರ್ಷಗಳಿಗೊಮ್ಮೆ ಮಂದಿಯ ಸಂಖ್ಯೆಯನ್ನು ಗುರುತಿಸುವ ಪ್ರಕ್ರಿಯೆ 5
9. ಹಾಡಿಗೆ ರಾಗವನ್ನು ರಚಿಸುವ ಗಾನಪಟು 5
10. ಕ್ಷಯವೇ ಇಲ್ಲದೆ ಸದಾ ವೃದ್ಧಿಸುವ ಅನ್ನ ದಾಸೋಹ ಕಾರ್ಯಕ್ರಮ 5
11. ದುಡಿಯಲೆಂದೇ ನೇಮಕಗೊಂಡ ಕಾರ್ಯನಿರತ 5
13. ನಾಟಕದಲ್ಲಿ ಅಧ್ಯಾಯವಾಗುವ ಘಟನೆ 4
16. ಪರೀಕ್ಷೆಯಲ್ಲಿ ಅತಿಯಿಲ್ಲದೆ ಹಿಡಿದು ಕೊಟ್ಟ ಸಂಖ್ಯೆ 3
17. ಭಾಗವತದ ಕತೆ ಹೇಳುತ್ತಾ ಹೋಗುವ ಮಿಶ್ರಕುಲದ ಮಹರ್ಷಿ 4
18. ಕರುಣಿಸಿ ಕೊಡುವವ 3
19. ಹವನಕ್ಕೆ ಹೆಸರಾದ ದಕ್ಷಿಣ ಪಂಗಡದವ 2

ಎಡದಿಂದ ಬಲಕ್ಕೆ

1. ವಿಶೇಷವಾದ ದಸರೆಯ ಒಂಭತ್ತನೆಯ ದಿನ 5
3. ಹೊರದೇಶಗಳಿಂದ ವಸ್ತುಗಳನ್ನು ತರಿಸಿಕೊಳ್ಳುವುದು 3
4. ವಿರಳವಾದ ಆಂಗ್ಲ ಪದವಿ 3
6. ಮನುಕುಲದಲ್ಲಿ ಹುಟ್ಟಿದವನ ವರ್ಣಾತೀತ ಧರ್ಮ 5
8. ಮಂದಿಯ ಜೊತೆ ಒಡನಾಟ, ಹಿಂದಿನ ರಾಜಕೀಯ ಪಕ್ಷವನ್ನು ನೆನಪಿಗೆ ತರುತ್ತದೆ 4
10. ತಿಳಿವಳಿಕೆಯಿಂದ ಕೂಡಿದ ಬಿನ್ನಹ 3
12. ಕೃಪೆಯ ನೋಟ 3
13. ಕುಲಗೋತ್ರಗಳ ವಿವರ 3
14. ಗಾಯವನ್ನುಂಟುಮಾಡುವ ಹಾಡುಗಾರ 3
15. ಭೂಮಿಯನ್ನು ಆವರಿಸುವ ಕತ್ತಲು 3
17. ಪಾತ್ರ ಮಾಡುವ ನಮ್ಮನ್ನು ದಾರದಲ್ಲಿ ಆಡಿಸುವವ 4
19. ದುಡ್ಡಿನ ವಿಷಯದಲ್ಲಿ ಮೋಸಹೋದವ 5
20. ಪ್ರಜ್ಞೆಯಿಂದ ಮಾಡುವ ಕೆಲಸ 3
21. ಸಂತೋಷದಿಂದಿರುವ ವಯೋವೃದ್ಧ 3
22. ಇದು ಮೋಸ ವಂಚನೆಗಳ ಕೊರಲ ಶಬ್ದ 5

ಪದಬಂಧ ಉತ್ತರ -2811

ಮೇಲಿಂದ ಕೆಳಕ್ಕೆ

1.ಸತಿ 2.ಮಹಾಕಟುಕ 3.ತಿರು 4.ಆಗರ 6.ನಹುಶ 7.ಪುತಿನ 8.ಮಿಲನ 10.ವಿಶೇಷಗುಣ 12.ಕುರಿಕಾಳಗ 14.ವರಾಳಿ 15.ವನಿಲಾ 16.ಬಿಗಿತ 17.ಗುಲಾಮಭಾವ 18.ಬಿಸಜ 19.ಒನಕೆ 21.ಮರುಕ 24.ದಿವ 25.ಕಂಬ

ಎಡದಿಂದ ಬಲಕ್ಕೆ

1.ಸಮಾನಮನಸ್ಥಿತಿ 4.ಆರತಿ 5.ರುಜಿನ 7.ಪುಸ್ತಕಪ್ರೇಮಿ 9.ರವಿಕಾಂತಿ 11.ಲವಕುಶ 13.ನವಕವನ 16.ಬಿಳಿಗುಲಾಬಿ 19.ಒಣರಾಗಿ 20.ಸಮಾಗಮ 22.ತಪ್ತಮನುಜ 23.ಕೆಳದಿ 25.ಕಂಟಕ 26.ವಸುದೈವಕುಟುಂಬ

ಮೇಘಾಲಯದ ಪ್ರಕೃತಿ ಪ್ರವಾಸಿಗರನ್ನು ಸೆಳೆಯುವುದು ಸಾಮಾನ್ಯ. ಇಲ್ಲಿ ಬೆಳೆಯುವ ಪೊರಕೆ ಹುಲ್ಲೂ ದೇಶವ್ಯಾಪಿ ಹರಡಿದೆ. ಈ ಹುಲ್ಲು ಅಲ್ಲಿನ ಆರ್ಥಿಕತೆಯ ಭಾಗವಾಗಿದೆ. ಪ್ರವಾಸಿಗರಿಗೆ ಬೆರೆಯದೇ ರೀತಿ ಕಾಣುವ ಅದರ ವ್ಯಾಪಕತೆ ಅಚ್ಚರಿ ಹುಟ್ಟಿಸುತ್ತದೆ.

ಇಲ್ಲಿ ಎಲ್ಲೆಲ್ಲೂ ಬೆಟ್ಟದ ಹುಲ್ಲು



ಚಿರಾಪುಂಜಿ ಸಮೀಪದ ಖಾಸಿ ಬೆಟ್ಟದಿಂದ ಧುಮುಕುವ ಜಲಪಾತ...




ಎಚ್‌.ಎಸ್‌. ನಂದಕುಮಾರ್‌

ಮೇಘಾಲಯ ರಾಜ್ಯ ಹೆಸರೇ ಸೂಚಿಸುವಂತೆ ಮೋಡಗಳಿಗೆ, ಅಧಿಕ ವರ್ಷಧಾರೆಗೆ, ಅಸದಳ ಸೌಂದರ್ಯದ, ಮೈ ನವಿರೇಳಿಸುವ ಜಲಪಾತಗಳಿಗೆ ಪ್ರಸಿದ್ಧವಾಗಿದೆ. ಆದರೆ ಇದಿಷ್ಟೇ ಅಲ್ಲದೆ ದೇಶದ ಹೆಚ್ಚಿನೆಲ್ಲ ಮನೆಗಳ ಸ್ವಚ್ಛತೆಗೂ ಮೇಘಾಲಯ ಕಾರಣವಾಗಿದೆ! ಮೇಘಾಲಯ ರಾಜ್ಯದೆಲ್ಲೆಡೆ ಎಲ್ಲೆಂದರಲ್ಲಿ ನಿರ್ದಿಷ್ಟ ಗಿಡಗಳನ್ನು ಕಾಣಬಹುದು. ಇದು ನಮ್ಮೆಲ್ಲರ ಮನೆಗಳಲ್ಲಿರುವ ಪೊರಕೆಗೆ ಬಳಸುವ ಪೊರಕೆ ಹುಲ್ಲಿನ ಗಿಡ. ನಮ್ಮ ಇತ್ತೀಚಿನ ಮೇಘಾಲಯ ಪ್ರವಾಸದ ಸಮಯದಲ್ಲಿ ಅನೇಕ ಕಡೆಗಳಲ್ಲಿ ಎಕರೆಗಟ್ಟಲೆ ಪ್ರದೇಶಗಳಲ್ಲಿ ಈ ಗಿಡಗಳನ್ನು ಕಂಡು ಕುತೂಹಲದಿಂದ ನಮ್ಮ ಕಾರಿನ ಚಾಲಕನನ್ನು ವಿಚಾರಿಸಿದೆ. ಈ ಗಿಡಗಳ 'ವ್ಯವಸ್ಥಿತ ವಾಣಿಜ್ಯ ಕೃಷಿ' ಮೇಘಾಲಯ ರಾಜ್ಯದಲ್ಲಿ ನಡೆಯುತ್ತಿದೆ ಎಂದು ತಿಳಿಯಿತು. ಹೀಗೆ ಪೊರಕೆ ಹುಲ್ಲಿನ ಕೃಷಿಯಲ್ಲಿ ತೊಡಗಲು ಒಂದು ರೈತ ಕುಟುಂಬಕ್ಕೆ ಒಂದು-ಎರಡು ಹೆಕ್ಟೇರ್ ಜಮೀನನ್ನು ಹಂಚುವ ಹಕ್ಕನ್ನು ಮೇಘಾಲಯ ರಾಜ್ಯ ಸರ್ಕಾರ ಗ್ರಾಮಗಳ ಮುಖ್ಯಸ್ಥರಿಗೆ ನೀಡಿದೆ. ಸಾಮಾನ್ಯವಾಗಿ ಮುಸುಕಿನ ಜೋಳ, ಭತ್ತ ಬೆಳೆಯುವ ಮೇಘಾಲಯದ ರೈತರು ಚಳಿಗಾಲದಲ್ಲಿ ಮಿಶ್ರ ಬೆಳೆಯಾಗಿ ಈ ಪೊರಕೆ ಹುಲ್ಲಿನ ಕೃಷಿ ಮಾಡುತ್ತಾರೆ. ಕೇವಲ ಮೂರೂವರೆ ದಶಲಕ್ಷ ಜನಸಂಖ್ಯೆ ಹೊಂದಿರುವ ಮೇಘಾಲಯ ರಾಜ್ಯದ ಸುಮಾರು ನಲವತ್ತು ಸಾವಿರ ಕುಟುಂಬಗಳು ಈ ಪೊರಕೆ ಕೃಷಿಯಲ್ಲಿ ತೊಡಗಿಕೊಂಡಿವೆ.

ಸುಮಾರು 5,600 ಅಡಿ ಎತ್ತರದವರೆಗಿನ ಬೆಟ್ಟಗಳ ಇಳಿಜಾರಿನಲ್ಲಿ ಬೆಳೆಯುವ ಈ ಪೊರಕೆ ಹುಲ್ಲಿನ ಗಿಡಗಳ ಮೂಲ ಭಾರತ, ಬಾಂಗ್ಲಾದೇಶ, ಭೂತಾನ್, ನೇಪಾಳ ಹಾಗೂ ಥಾಯ್ಲೆಂಡ್ ಗುಡ್ಡಗಾಡು ಪ್ರದೇಶಗಳು. ಭಾರತದಲ್ಲಿ ಮೇಘಾಲಯ ರಾಜ್ಯವಲ್ಲದೆ ಅಸ್ಸಾಂ ರಾಜ್ಯದ ಕರ್ಬಿ, ಆಂಗ್ಲಾಂಗ್ ಪ್ರದೇಶಗಳಲ್ಲಿ ಇದರ ವ್ಯವಸ್ಥಿತ ಕೃಷಿ ನಡೆಯುತ್ತಿದೆ. ತಿವಾ, ಕರ್ಬಿ ಹಾಗೂ ಖಾಸಿ ಸಮುದಾಯಗಳು ಈ ಪೊರಕೆ ಹುಲ್ಲಿನ ಕೃಷಿಯಲ್ಲಿ ತೊಡಗಿಕೊಂಡಿವೆ. ಮರಳು ಮಿಶ್ರಿತ ಮಣ್ಣು, ಆವೆಮಣ್ಣು, ಕಲ್ಲು ಮಿಶ್ರಿತ ಮಣ್ಣು... ಹೀಗೆ ಎಲ್ಲಾ ರೀತಿಯ ಮಣ್ಣಿನಲ್ಲೂ ಈ ಪೊರಕೆ ಹುಲ್ಲು ಬೆಳೆಯುತ್ತದೆ. ಫೆಬ್ರುವರಿ ತಿಂಗಳಿನಲ್ಲಿ ಪ್ರಾರಂಭವಾಗುವ ಇದರ ಕೃಷಿ ಮಾರ್ಚ್ ತಿಂಗಳ ಕೊನೆಯವರೆಗೆ ನಡೆಯುತ್ತದೆ. ಬೀಜ ಬಿತ್ತುವುದರಿಂದ ಹಾಗೂ ಗಿಡ ನೆಡುವುದರ ಮೂಲಕವೂ ಇದನ್ನು ಬೆಳೆಯಬಹುದು. 'ಥೈಸನೋಲೀನಾ ಮ್ಯಾಕ್ಸಿಮಾ' ಎಂಬ ವೈಜ್ಞಾನಿಕ ಹೆಸರಿನ ಈ ಪೊರಕೆ ಹುಲ್ಲನ್ನು 'ಟೈಗರ್ ಗ್ರಾಸ್' ಎನ್ನುತ್ತಾರೆ. 'ನೇಪಾಳೀಸ್ ಬ್ರೂಮ್ ಗ್ರಾಸ್', 'ಬ್ರೂಮ್ ಗ್ರಾಸ್', 'ಬ್ರೂಮ್ ಸ್ಟಿಕ್' ಮುಂತಾದ ಸಾಮಾನ್ಯ ಹೆಸರುಗಳಿಂದಲೂ ಗುರುತಿಸಲಾಗುತ್ತದೆ. ವಿಶೇಷವೆಂದರೆ, ಈ ಗಿಡದ ಹೂವುಗಳೇ ಪೊರಕೆಯಲ್ಲಿ ಬಳಸಲಾಗುವ ಹುಲ್ಲು. ಇದನ್ನು ನೇಪಾಳಿ ಭಾಷೆಯಲ್ಲಿ 'ಕುಚೊ' ಎಂದೂ, ಅಸ್ಸಾಮಿ ಭಾಷೆಯಲ್ಲಿ 'ಜಾರು' ಎಂದೂ, ಹಿಂದಿಯಲ್ಲಿ 'ಫೂಲ್ ಜಾಡೂ' ಎಂದೂ ಕರೆಯುತ್ತಾರೆ.

ಈ ಹುಲ್ಲಿನ ಕಸಪೊರಕೆಯಿಂದ ಗುಡಿಸಿದರೆ 'ಋಣಾತ್ಮಕ ಚಿಂತನೆಗಳು ದೂರಾಗುತ್ತವೆ ಹಾಗೂ ನಕಾರಾತ್ಮಕ ಶಕ್ತಿಗಳು ನಶಿಸುತ್ತವೆ' ಎಂಬ ನಂಬಿಕೆ ಅಸ್ಸಾಮಿಗರಲ್ಲಿದೆ.



'ಥೈಸನೋಲೀನಾ ಮ್ಯಾಕ್ಸಿಮಾ' ಎಂಬ ವೈಜ್ಞಾನಿಕ ಹೆಸರಿನ ಈ ಪೊರಕೆ ಹುಲ್ಲಿಗೆ ಮತ್ತೊಂದು ಹೆಸರು 'ಟೈಗರ್ ಗ್ರಾಸ್'

ಹುಬ್ಬಳ್ಳಿ ನಂಟು!

ಸಾಮಾನ್ಯವಾಗಿ ತೆಂಗಿನ ಗರಿ, ತಾಳೆ ಎಲೆಗಳಿಂದ ತಯಾರಿಸಿದ ಪೊರಕೆ ಬಳಸುತ್ತಿದ್ದ ಹೆಚ್ಚಿನ ಜನರು ಕ್ರಮೇಣ ಎಲ್ಲಾ ದಿನಸಿ, ಸ್ಟೇಷನರಿ ಅಂಗಡಿಗಳಲ್ಲಿ ಸಿಗುವ ಈ ಪೊರಕೆ ಹುಲ್ಲಿನಿಂದ ತಯಾರಾದ ಪೊರಕೆಗಳನ್ನು ಉಪಯೋಗಿಸಲು ಪ್ರಾರಂಭಿಸಿದರು. ಇದಕ್ಕೆ ಮುಖ್ಯ ಕಾರಣ ಇದರ ದೀರ್ಘ ಬಾಳಿಕೆ. ಈ ಪೊರಕೆ, ತೆಂಗಿನ ಗರಿ ಅಥವಾ ತಾಳೆ ಎಲೆಗಳಿಂದ ತಯಾರಿಸಿದ ಪೊರಕೆಗಳಿಗಿಂತಲೂ ಅಧಿಕ ಕಾಲ ಬಾಳಿಕೆ ಬರುತ್ತದೆ ಹಾಗೂ ಇದರಿಂದ ಸಣ್ಣ ಸಣ್ಣ ದೂಳಿನ ಕಣಗಳನ್ನು ತೆಗೆಯಲು ಸಹ ಸಾಧ್ಯ. ನಮಗೆಲ್ಲ ಚಿರಪರಿಚಿತ ಮಂಕಿ 555 ಬ್ರ್ಯಾಂಡಿನ ಪೊರಕೆಗಳು ತಯಾರಾಗುವುದು ನಮ್ಮ ರಾಜ್ಯದ ಹುಬ್ಬಳ್ಳಿಯಲ್ಲಿ. ಇದರಲ್ಲಿ ಬಳಸುವ 'ಟೈಗರ್ ಗ್ರಾಸ್' ಅನ್ನು ಅಸ್ಸಾಂ ರಾಜ್ಯದಿಂದ ಹುಬ್ಬಳ್ಳಿಗೆ ತಂದು 18 ಡಿಗ್ರಿ ತಾಪಮಾನದಲ್ಲಿ ಶೇಖರಿಸಿಟ್ಟು, ನಂತರ ಪೊರಕೆ ತಯಾರಿಸಲು ಬಳಸಲಾಗುತ್ತದೆ. ಅಂತೆಯೇ ಗಾಲಾ ಕಿಂಗ್ ಕಾಂಗ್ ಹಾಗೂ ಜೇಬಿ ಮಹಾಲಕ್ಷ್ಮಿ ಬ್ರ್ಯಾಂಡಿನ ಪೊರಕೆಗಳಲ್ಲಿ ಬಳಸುವುದು ಮೇಘಾಲಯದ ಪೊರಕೆ ಹುಲ್ಲು.

ದುರಿತ ಭವದ ಬವಣೆ ಮೆಟ್ಟಿ

ಬೇಸಿಗೆ ಬೆಳೆಗಳ ಮೇಲೆ ಅವಲಂಬಿತರಾಗಿರುವ, ಅತ್ಯಂತ ಕಡಿಮೆ ಆದಾಯವಿರುವ ಅಸ್ಸಾಂ ಹಾಗೂ ಮೇಘಾಲಯದ ರೈತ ಕುಟುಂಬಗಳು ಚಳಿಗಾಲದಲ್ಲಿ ವಾರಕ್ಕೆ ನೂರು ರೂಪಾಯಿ ಗಳಿಸುವುದೂ ಕಷ್ಟ. ಸಾಮಾನ್ಯವಾಗಿ ಉರುವಲು ಸಂಗ್ರಹ, ಬೇಟೆ ಮುಂತಾದ ಮೂಲಗಳಿಂದ ಅತ್ಯಲ್ಪ ಆದಾಯಗಳಿಸವ ರೈತರಿಗೆ ಆ ಸಮಯದಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿದ್ದರೆ ಮಾತ್ರ ಸ್ವಲ್ಪ ಮಟ್ಟಿನ ಆದಾಯವಿರುತ್ತದೆ. ಆದರೆ ತನ್ನಷ್ಟಕ್ಕೇ ತಾನೇ ಬೆಳೆಯುವ, ಹೆಚ್ಚಿನ ನಿಗಾ ಬಯಸದ ಹಾಗೂ ಕಳೆ ಕೀಳುವ ಖರ್ಚನ್ನು ಹೊರತುಪಡಿಸಿ ಇತರ ಯಾವ ಹೆಚ್ಚಿನ ಖರ್ಚಿಲ್ಲದ ಪೊರಕೆ ಹುಲ್ಲಿನ ಕೃಷಿ ಈ ಭಾಗದ ರೈತಾಪಿ ವರ್ಗಕ್ಕೆ ವಾರ್ಷಿಕ ಹತ್ತಾರು ಸಾವಿರ ಆದಾಯದ ಇತರ ಮೂಲವಾಗಿದೆ. ತನ್ಮೂಲಕ ಈ ಸಾಧಾರಣ ಪೊರಕೆ ಹುಲ್ಲು ಮನೆ ಮನೆಗಳ ಕಸವನ್ನು ಎತ್ತುವ ಜೊತೆಯಲ್ಲೇ ಈ ದುರಿತ ಕಾಲದಲ್ಲಿ ಪೂರ್ವೋತ್ತರ ರಾಜ್ಯಗಳ ಸಾವಿರಾರು ಬಡ ರೈತ ಕುಟುಂಬಗಳ ಆರ್ಥಿಕ ಬವಣೆಯನ್ನು ಸ್ವಲ್ಪ ಮಟ್ಟಿಗಾದರೂ ನೀಗಲು ಸಹಕಾರಿಯಾಗಿದೆ. ಒಂದರ್ಥದಲ್ಲಿ ಅವರ ಬದುಕನ್ನು 'ಪೊರೆ'ಯುತ್ತಿದೆ.

ಹೆಚ್ಚಿನ ಮಳೆ ಸುರಿಯುವ ಮೇಘಾಲಯದಲ್ಲಿ ಮಣ್ಣಿನ ಸವಕಳಿ ಒಂದು ದೊಡ್ಡ ಸಮಸ್ಯೆ. ಆದರೆ ಈ ಪೊರಕೆ ಹುಲ್ಲಿನ ಗಿಡಗಳು ಮಣ್ಣಿನ ಸವಕಳಿಯನ್ನು ತಡೆಗಟ್ಟುತ್ತವೆ. ದೊಡ್ಡ ಮಟ್ಟದ ಪೊರಕೆ ಹುಲ್ಲಿನ ಕೃಷಿಯಿಂದ ಮಣ್ಣಿನ ಸವಕಳಿಯಿಂದಾಗಿ ಆಗುವ ಅರಣ್ಯ ನಾಶ ಕಡಿಮೆಯಾಗಿದೆ. ನಿಸರ್ಗದತ್ತ ಹುಲ್ಲಿನ ಈ ಪೊರಕೆ ಪರಿಸರಸ್ನೇಹಿಯೂ ಆಗಿದೆ. ನಮ್ಮ ದೇಶ ವಿಶ್ವದಲ್ಲೇ ಎರಡನೇ ದೊಡ್ಡ ಪೊರಕೆ ಉತ್ಪಾದಿಸುವ ದೇಶವಾಗಿದೆ. ವಾರ್ಷಿಕ ಸುಮಾರು ₹650 ಕೋಟಿ ವ್ಯವಹಾರ ನಡೆಸುವ ಪೊರಕೆ ಉದ್ಯಮ ಸ್ಥಳೀಯವಾಗಿ ಸಾವಿರಾರು ಜನರಿಗೆ ಉದ್ಯೋಗ ನೀಡುತ್ತಿದೆ. ಹೀಗೆ ಈ 'ಬೆಟ್ಟದ ಹುಲ್ಲು' ಸಾವಿರಾರು ಬಡ ಕುಟುಂಬಗಳ ಬಾಳಿನ ಬೆಳಕಾಗಿದೆ.

ಸೀಮೋಲ್ಲಂಘನ

1ನೇ ಪುಟದಿಂದ...

'ಹುಲಿವೇಷ ಹಾಕಿ ಚಲನಚಿತ್ರ ಶೈಲಿಯಂತೆ ಡಾನ್ಸ್ ಮಾಡುವುದು ಸರಿಯಲ್ಲ. ಸಾಂಪ್ರದಾಯಿಕ ಬಣ್ಣಗಳ ಬದಲಿಗೆ ಪೇಂಟ್ ಬಳಿದುಕೊಳ್ಳುತ್ತಾರೆ, ಕೆಲವು ತಂಡಗಳವರು ಬಿಗಿಯಾದ ಬಟ್ಟೆ ಧರಿಸಿ ಅದರ ಮೇಲೆ ಪೇಂಟ್ ಮಾಡುತ್ತಾರೆ ಇವೆಲ್ಲವೂ ದೂರವಾಗಬೇಕು. ಕಾಲಕ್ಕೆ ತಕ್ಕಂತೆ ಸಣ್ಣಪುಟ್ಟ ಬದಲಾವಣೆಗಳಾಗುತ್ತವೆ. ಆದರೆ, ಸಂಪ್ರದಾಯವನ್ನು ಸಾರಾಸಗಟಾಗಿ ದೂರ ಸರಿಸಿದರೆ ಕಲೆಯು ಮಹತ್ವ ಕಳೆದು ಕೊಳ್ಳುತ್ತದೆ' ಎನ್ನುತ್ತಾರೆ ಅವರು. 'ಪಿಲಿ ನಲಿಕೆ' ಕಲಿಯಲು ಬಯಸುವ ಯುವಕರಿಗೆ ಸಾಂಪ್ರದಾಯಿಕ ಶೈಲಿ, ಬಣ್ಣಗಾರಿಕೆ ಯನ್ನು ಕಲಿಸುವ ವ್ಯವಸ್ಥೆಯಾಗಬೇಕು. ಅದಕ್ಕೆ ಎಲ್ಲಾ ಸಂಘಟನೆಗಳು ಒಂದಾಗಬೇಕು. ತುಳು ಸಾಹಿತ್ಯ ಅಕಾಡೆಮಿ ಈ ನಿಟ್ಟಿನಲ್ಲಿ ಹೆಜ್ಜೆ ಇಡಬೇಕು' ಎಂಬುದು ಅವರ ನಿರೀಕ್ಷೆ.

ವಿದೇಶಿ ನಂಟು

ಹುಲಿವೇಷ ಕಲಾವಿದರು ಧರಿಸುವ ಟೊಪ್ಪಿಯನ್ನು ಕುರಿಯ ಚರ್ಮದಿಂದ ತಯಾರಿಸಲಾಗುತ್ತದೆ. ಇದಕ್ಕೆ ಅಗತ್ಯವಿರುವ ಉತ್ತಮ ಗುಣಮಟ್ಟದ ಕುರಿ ಚರ್ಮವನ್ನು ಕೊಲ್ಲಿ ರಾಷ್ಟ್ರಗಳಿಂದ ಆಮದು ಮಾಡಲಾಗುತ್ತದೆ. ಮಂಗಳೂರು ಮೂಲದವರೇ ಆದ ಮೊಹಮ್ಮದ್ ಆಸಿಫ್ ಅವರು 13 ವರ್ಷಗಳಿಂದ ಇಂಥ ಚರ್ಮದ ಹಾಳೆಗಳನ್ನು ತರಿಸಿಕೊಡುತ್ತಿದ್ದಾರೆ.

'ಪಿಲಿ ನಲಿಕೆ'ಯ ಅಭಿಮಾನಿಯೂ ಆಗಿರುವ ಆಸಿಫ್, ಪ್ರತಿ ವರ್ಷ ಸ್ವಂತ ಖರ್ಚಿನಲ್ಲಿ ದುಬೈಗೆ ಹೋಗಿ ಅಲ್ಲಿಂದ 250 ಚರ್ಮದ ಹಾಳೆಗಳನ್ನು ಕಳುಹಿಸುತ್ತಾರೆ. ಪ್ರತಿ ಶೀಟ್ ಬೆಲೆ ಸುಮಾರು ₹6,250ರಷ್ಟಿದೆ. ಒಂದು ಶೀಟ್‌ನಿಂದ 12 ಟೊಪ್ಪಿ ತಯಾರಿಸಬಹುದು.

ಜಿಲ್ಲೆಯ ಸುಮಾರು 30 ತಂಡಗಳಿಗೆ ತಲಾ ಒಂದು ಚರ್ಮದ ಶೀಟ್ ಅನ್ನು ಆಸಿಫ್ ಅವರು ಉಚಿತವಾಗಿ ಕೊಡುತ್ತಾರೆ. ತಮ್ಮ ಮನೆಗೂ ಹುಲಿವೇಷ ತಂಡಗಳನ್ನು ಆಹ್ವಾನಿಸಿ ಪ್ರದರ್ಶನ ಏರ್ಪಡಿಸುತ್ತಾರೆ. 'ಹುಲಿವೇಷ ಎಂಬುದು ತುಳುನಾಡ ಮಣ್ಣಿನ ಶಕ್ತಿ. ಸೌಹಾರ್ದ ಮತ್ತು ಭ್ರಾತೃತ್ವ ಈ ಜಿಲ್ಲೆಯ ಭದ್ರ ತಳಪಾಯವಾಗಿದೆ' ಎಂದು ಆಸಿಫ್ ಹೆಮ್ಮೆಯಿಂದ ಹೇಳುತ್ತಾರೆ

* * *

ದುಬಾರಿ ಕಲೆ: ಹರಕೆ ತೀರಿಸಲು ಒಬ್ಬ ವ್ಯಕ್ತಿ ಹುಲಿವೇಷ ಹಾಕುವುದು ಒಂದು ಭಾಗ. ಆದರೆ, ತಂಡ ಕಟ್ಟಿಕೊಂಡು ಸೇವೆ ಸಲ್ಲಿಸಿ, ಅದರ ಪ್ರದರ್ಶನ ಏರ್ಪಡಿಸುವುದು ದುಬಾರಿಯಾಗುತ್ತದೆ. 10ರಿಂದ 15 ಮಂದಿಯ ತಂಡಕ್ಕೆ ವೇಷಭೂಷಣ, ವೇಷಧಾರಿಗಳ ಸಂಭಾವನೆ, ಓಡಾಟ ವೆಚ್ಚ ಎಲ್ಲಾ ಸೇರಿದರೆ ದಿನವೊಂದಕ್ಕೆ ಕನಿಷ್ಠ ಒಂದು ಲಕ್ಷ ರೂಪಾಯಿ ವೆಚ್ಚ ಬರುತ್ತದೆ.


'ಹಿಂದೆಲ್ಲ ತಂಡಗಳು ದೇವಿಯ ರಥದ ಮುಂದೆ ಪ್ರದರ್ಶನ ನೀಡಿದ ನಂತರ ಮನೆಮನೆಗೆ ಹೋಗಿ ಪ್ರದರ್ಶನ ನೀಡುತ್ತಿದ್ದವು. ಮನೆಯವರೇ ಆಹ್ವಾನಿಸುವ ಸಂಪ್ರದಾಯವೂ ಇತ್ತು. ಅವರು ಕೊಡುವ ಸಂಭಾವನೆಯನ್ನು ತಂಡದ ಒಬ್ಬ ಹುಲಿವೇಷಧಾರಿ ಹಿಮ್ಮುಖವಾಗಿ ಬಾಗಿ ಬಾಯಿಯಿಂದಲೇ ಎತ್ತಬೇಕು. ಈಗ ಮನೆಗೆ ಹುಲಿವೇಷಗಳನ್ನು ಆಹ್ವಾನಿಸುವವರ ಸಂಖ್ಯೆ ಕಡಿಮೆಯಾಗಿದೆ. ಐದುನೂರು–ಸಾವಿರ ರೂಪಾಯಿ ಕೊಡುವವರ ಮನೆಗೆ ಹೋಗಿ ಪ್ರದರ್ಶನ ಕೊಡಲು ಆಗುವುದೂ ಇಲ್ಲ. ಆದರೆ ಸಂಪ್ರದಾಯ ಬಿಡಬಾರದೆಂಬ ಉದ್ದೇಶದಿಂದ ನಾವು ಕೆಲವು ಮನೆಗಳಿಗೆ ಹೋಗುತ್ತೇವೆ. ಅನೇಕ ತಂಡಗಳು ಈ ಸಂಪ್ರದಾಯವನ್ನು ಬಿಟ್ಟಿವೆ' ಎನ್ನುತ್ತಾರೆ ಕುಂಪಲ.

ಈಗ ಸಿರಿವಂತರು ತಮ್ಮ ಮನೆಗೆ ತಂಡವನ್ನು ಆಹ್ವಾನಿಸಿ ದೊಡ್ಡ ಮೊತ್ತ ಕೊಡುತ್ತಾರೆ ಅಥವಾ ಕೆಲವು ಉದ್ಯಮಿಗಳು ತಮ್ಮ ಸಂಸ್ಥೆಗೆ, ಕಚೇರಿ ಆವರಣಕ್ಕೆ ತಂಡಗಳನ್ನು ಆಹ್ವಾನಿಸಿ ಅರ್ಧ ಗಂಟೆ– ಒಂದು ಗಂಟೆ ಪ್ರದರ್ಶನ ಏರ್ಪಡಿಸುತ್ತಾರೆ. ಆದರೆ ತಂಡಗಳಿಗೆ ಬೇಡಿಕೆಯಂತೂ ಕುಗ್ಗಿಲ್ಲ.



ಗುಂಡನಿಗೆ ಶಾಕ್!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ನವಮಿ ಟಿ.ವಿ.
ಚನ್ನಗಿರಿ



ಗನಶ್ರೀ ಬಿ.ಎಸ್.
ಬೆಂಗಳೂರು



ಅನಿಕೇತ ಅ.ಪೂಜಾರಿ
ಬಳ್ಳಾರಿ



ಚಿರಂತನ್ ಆರ್.
ದಾವಣಗೆರೆ



ಅನ್ವಿಕಾ ಎನ್.ಜೆ.
ಪಿರಿಯಾಪಟ್ಟಣ



ಮಾನ್ವಿ ವಿ.ಟಿ.
ದಾವಣಗೆರೆ

ಅದಲು ಬದಲು ಕಂಚಿ ಕದಲು

ಇಲ್ಲಿರುವ ಪದಗಳ ಅಕ್ಷರಗಳನ್ನೇ ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಿ

1	MEAN	NAME
2	TEAM	
3	DEAR	
4	SALE	
5	RATE	

6	MEAL	
7	LATE	
8	BALE	
9	DRAW	
10	RAIN	

2ರ ಮಗ್ಗಿ ಹಾಡು

ಎರಡ ಒಂದಲೆ ಎರಡು
ಊಟಕೆ ನೀನು ಹೊರಡು
ಎರಡ ಎರಡಲೆ ನಾಕು
ಬೇಕು ಮೈಸೂರ ಪಾಕು
ಎರಡ ಮೂರಲೆ ಆರು
ಕುಡಿಯಲು ಬೇಕು ಖೀರು
ಎರಡ ನಾಕಲೆ ಎಂಟು
ಹಪ್ಪಳ ಸಂಡಿಗೆ ಉಂಟು
ಎರಡ ಐದಲೆ ಹತ್ತು
ಸವಿ ಸವಿ ತುತ್ತು
ಎರಡ ಆರಲೆ ಹನ್ನೆರಡು
ಉಂಡಿ ಬೇಕು ಇನ್ನೆರಡು
ಎರಡ ಏಳಲೆ ಹದಿನಾಲ್ಕು
ಜಿಲೇಬಿ ಹಾಕು ಇನ್ನಾಲ್ಕು
ಎರಡ ಎಂಟಲೆ ಹದಿನಾರು
ಅನ್ನಕೆ ಬೇಕು ಸಾರು
ಎರಡ ಒಂಬತ್ತಲೆ ಹದಿನೆಂಟು
ಸಾಕು ಸಾಕು ಕರದಂಟು
ಎರಡ ಹತ್ತಲೆ ಇಪ್ಪತ್ತು
ಹೆಚ್ಚಿಗೆ ತಿಂದರೆ ಕುಪ್ಪತ್ತು

ಗಣಿತದಲ್ಲಿ ಗರ್ದಿಗಮ್ಮತ್ತು

ನಿನ್ನ ವಯಸ್ಸು ಹೇಳು ಚಮತ್ಕಾರ–ಗುಣಕಾರ

–259 ಸಂಖ್ಯೆ ಬರೆದುಕೊಂಡು ಅದಕ್ಕೆ ನಿನ್ನ ವಯಸ್ಸಿನ ಸಂಖ್ಯೆಯಿಂದ ಗುಣಿಸಿದರೆ ಬರುವ ಗುಣಲಬ್ಧಕ್ಕೆ ಮ್ಯಾಜಿಕ್ ಸಂಖ್ಯೆ 39ರಿಂದ ಗುಣಿಸಿದರೆ ಉತ್ತರದಲ್ಲಿ ನಿನ್ನ ವಯಸ್ಸಿನ ಸಂಖ್ಯೆಗಳೇ ಬರುತ್ತವೆ.

259x69
=17871
x39
= 696969

ಸೂಚನೆ–ವಯಸ್ಸು 10ರೊಳಗೆ ಇದ್ದರೆ ಆ ಸಂಖ್ಯೆಯ ಹಿಂದೆ ಒಂದು 0 ಹಚ್ಚಿಕೊಳ್ಳಬೇಕು.

ಕೊಂಚ ತಂತ್ರ

ಸಸ್ಯದ ಭಾಗಗಳನ್ನು ಈ ಸೂತ್ರದ ಮೂಲಕ ಸುಲಭವಾಗಿ ನೆನಪಿಡಬಹುದು.

ಸೂತ್ರ: ಬೀಎ ಕಾಕಾ ಬೇರೆ ಹೂ

ಬೀ = ಬೀಜ
ಎ = ಎಲೆ
ಕಾ = ಕಾಯಿ
ಕಾ = ಕಾಂಡ
ಬೇ = ಬೇರು
ರೆ = ರೆಂಬೆ
ಹೂ = ಹೂವು



ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಮಾಲ | ಸರ | ಹರಿ
ಗಮ | ರಸಿ | ಧಮ

ಅಕ್ಷರ ಪಟ್ಟಿ: ಲ ಕೇ ವೆ ಕ ಅ ಕ / ಸ ಹ ನಿ ನ ಣೆ ನಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಹಣ್ಣಿನ ಹೆಸರು...: 1.ಕಲ್ಲಂಗಡಿ 2.ಮೋಸಂಬಿ 3.ದಾಳಿಂಬೆ 4.ಪಪ್ಪಾಯ 5.ಅಂಜೂರ

ಜಾಣಪದ ಆಟ: 1. ಅಭಿಮಾನ 2.ಅಭಿಪ್ರಾಯ 3.ಅಭಿರುಚಿ 4.ಅಭಿಲಾಷೆ 5.ಅಭಿನಯ 6.ಅಭಿನವ 7.ಅಭಿಜಾತ 8.ಅಭಿಮನ್ಯು 9.ಅಭಿನೇತ್ರಿ 10.ಅಭಿಷೇಕ 11.ಅಭಿಯಾನ 12.ಅಭಿವೃದ್ಧಿ

ಪದಬೆಸುಗೆ: 1. ಕುಸುರಿಸು 2.ಕೇವಲಯ 3.ತೆಂಕಣಜ 4.ಸಗಣಿತ 5.ನಕಲಿಸು 6.ಅಸಲಿಗೆ

ಗಣಿತದಲ್ಲಿ ಗರ್ದಿಗಮ್ಮತ್ತು:

- 9 ಕೆ.ಜಿ. ಕಲ್ಲು = 3 ಕೆ.ಜಿ. ಕಲ್ಲು + 6 ಕೆ.ಜಿ. ಬೆಲ್ಲ = **6** ಕೆ.ಜಿ. ಬೆಲ್ಲ
- 9 ಕೆ.ಜಿ. ಕಲ್ಲು + 1 ಕೆ.ಜಿ. ಕಲ್ಲು = 3 ಕೆ.ಜಿ. ಕಲ್ಲು + 7 ಕೆ.ಜಿ. ಬೆಲ್ಲ = **7** ಕೆ.ಜಿ. ಬೆಲ್ಲ
- 9 ಕೆ.ಜಿ. ಕಲ್ಲು = 1 ಕೆ.ಜಿ. ಕಲ್ಲು + 8 ಕೆ.ಜಿ. ಬೆಲ್ಲ = **8** ಕೆ.ಜಿ. ಬೆಲ್ಲ
- 9 ಕೆ.ಜಿ. ಕಲ್ಲು = **9** ಕೆ.ಜಿ. ಬೆಲ್ಲ
- 9 ಕೆ.ಜಿ. ಕಲ್ಲು + 1 ಕೆ.ಜಿ. ಕಲ್ಲು = **10** ಕೆ.ಜಿ. ಬೆಲ್ಲ